ವಿಶ್ವವಾಣಿ
ವಿಶ್ವಾಸವೇ ವಿಶ್ವ

ಐಸಿಸಿ ಟೆಸ್ಟ್ ರ‍್ಯಾಂಕಿಂಗ್: ಅಗ್ರ 10ರಲ್ಲಿ ಗಿಲ್

ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಕ್ರಿಕೆಟ್ ಸರಣಿಯಲ್ಲಿ ಅಮೋಘ ಬ್ಯಾಟಿಂಗ್ ಪ್ರದರ್ಶನ ತೋರುತ್ತಿರುವ ಭಾರತ ತಂಡದ ನಾಯಕ ಶುಭಮನ್ ಗಿಲ್, ದೀರ್ಘ ಮಾದರಿಯ ಬ್ಯಾಟರ್‌ಗಳ ರ‍್ಯಾಂಕಿಂಗ್ ಪಟ್ಟಿಯಲ್ಲಿ ಇದೇ ಮೊದಲ ಬಾರಿಗೆ ಅಗ್ರ ಹತ್ತರಲ್ಲಿ ಸ್ಥಾನ ಪಡೆದಿದ್ದಾರೆ. ಈ ಸರಣಿಗೂ ಮುನ್ನ 23ನೇ ಸ್ಥಾನದಲ್ಲಿದ್ದ ಗಿಲ್, ಮೊದಲ ಪಂದ್ಯದಲ್ಲಿ ಶತಕ ಸಿಡಿಸುವ ಮೂಲಕ 20ನೇ ಸ್ಥಾನಕ್ಕೆ ಜಿಗಿದಿದ್ದರು. ಇದೀಗ 15 ಸ್ಥಾನ ಮೇಲೇರಿ 6ರಲ್ಲಿ ಕಾಣಿಸಿಕೊಂಡಿದ್ದಾರೆ. ಅವರ ಖಾತೆಯಲ್ಲಿ ಒಟ್ಟು 807 ಪಾಯಿಂಟ್‌ಗಳಿವೆ.

ಸೊಂಪಾದ ಪುಟಗಳು

ಮೂರು ವರ್ಷಗಳ ಹಿಂದೆ ಇಲ್ಲಿ ಒಂದು ಮರ್ಡರ್ ಆಗಿತ್ತಂತೆ!

ನೂರೆಂಟು ವಿಶ್ವ
ವಿಶ್ವೇಶ್ವರ ಭಟ್ 6

ಬಹಿಷ್ಕೃತರ ಸಂತತನ ಮತ್ತು ಸಂತಸ

ಕಾಡುದಾರಿ
ಹರೀಶ್ ಕೇರ 7

ದಾರಿದೀಪೋಕ್ತಿ

ನಾವು ಯಾವ ಒಳ್ಳೆಯ ಆಹಾರವನ್ನು ಸೇವಿಸುತ್ತೇವೋ ಅದೊಂದೇ ಆರೋಗ್ಯ ವರ್ಧನೆಗೆ ಕಾರಣವಲ್ಲ. ನಾವು ಏನನ್ನು ಯೋಚಿಸುತ್ತೇವೆ ಮತ್ತು ಮಾತಾಡುತ್ತೇವೆ ಎಂಬುದೂ ಒಳ್ಳೆಯ ಆರೋಗ್ಯದ ಲಕ್ಷಣಗಳೇ. ಹೀಗಾಗಿ ಯಾವತ್ತೂ ಒಳ್ಳೆಯ, ಸಕಾರಾತ್ಮಕ ಯೋಚನೆಗಳನ್ನು ಮಾಡೋಣ.

ವಕ್ರತುಂಡೋಕ್ತಿ

ಡಯಟ್ ಮಾಡುತ್ತಿರುವ ಸ್ನೇಹಿತನ ಮುಂದೆ ಇಡೀ ಪಿಜ್ಜಾವನ್ನು ಒಬ್ಬನೇ ತಿನ್ನುವುದಕ್ಕೆ ಅತ್ಯಂತ ಸಂತೃಪ್ತಿ ಎನ್ನಬಹುದು.

ಒಂದೇ ಕುಟುಂಬದ ಮೂವರ ಆತ್ಮಹತ್ಯೆ

ಬೆಳಗಾವಿ: ಇಲ್ಲಿನ ಶಹಾಪುರದ ಜೋಷಿ ಮಾಳ ಪ್ರದೇಶದಲ್ಲಿ ಬುಧವಾರ ಒಂದೇ ಕುಟುಂಬದ ಮೂವರು ವಿಷ ಕುಡಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇನ್ನೊಬ್ಬ ಮಹಿಳೆಯನ್ನು ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಮಂಗಳಾ ಕುರಡೇಕರ್ (70), ಇವರ ಪುತ್ರ ಸಂತೋಷ ಕುರಡೇಕರ್ (44), ಪುತ್ರಿ ಸುವರ್ಣ ಕುರಡೇಕರ್ (42) ಮೃತಪಟ್ಟವರು. ಇನ್ನೊಬ್ಬ ಪುತ್ರಿ ಸುನಂದಾ ಕುರಡೇಕರ್ (20) ಅವರೂ ವಿಷ ಸೇವಿಸಿದ್ದು ಅವರ ಸ್ಥಿತಿ ಚಿಂತಾಜನಕವಾಗಿದೆ ಎಂದು ಆಸ್ಪತ್ರೆ ಮೂಲಗಳು ತಿಳಿಸಿವೆ. ಮೂವರು ಮಕ್ಕಳ ಮದುವೆ ಆಗಿರಲಿಲ್ಲ. ಹೀಗಾಗಿ, ತಾಯಿ ಜತೆಗೇ ಎಲ್ಲರೂ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು. ಬುಧವಾರ ಬೆಳಗ್ಗೆ ವಿಷ ಸೇವಿಸಿರಬಹುದು ಎಂದು ಪೊಲೀಸರು ಅಂದಾಜಿಸಿದ್ದಾರೆ. ಮೃತದೇಹಗಳ ಬಳಿ ಮರಾಠಿಯಲ್ಲಿ ಬರೆದ ಡೆತ್ ನೋಟ್ ಕೂಡ ಪತ್ತೆಯಾಗಿದೆ. ವಿಷಯ ಗೊತ್ತಾಗುತ್ತಿದ್ದಂತೆ ಪೊಲೀಸ್ ಕಮಿಷನರ್ ಭೂಷಣ್ ಬೊರಸೆ ಮತ್ತು ಡಿಸಿಪಿ ರೋಹನ್ ಜಗದೀಶ್ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಶಹಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ಸುರ್ಜೇವಾಲ, ವೇಣುಗೋಪಾಲ್ ಜತೆ ಸಿಎಂ, ಡಿಸಿಎಂ ಸಭೆ
ವೇಣುಗೋಪಾಲ್, ಸಿಎಂ ಪ್ರತ್ಯೇಕ ಸಭೆ ನಡೆಸುವ ಸಾಧ್ಯತೆ

ದಿಲ್ಲಿಯಲ್ಲಿ ಹೈ ಸಭೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯ ಕಾಂಗ್ರೆಸ್‌ನಲ್ಲಿನ ಹಲವಾರು ಗೊಂದಲ, ರಾಜ್ಯ ಉಸ್ತುವಾರಿ ರಣದೀಪ್ ಸುರ್ಜೇವಾಲ ಅವರ ಪ್ರತ್ಯೇಕ ಸಭೆಗೆ ಹಲವು ಆಕ್ಷೇಪದ ಹೊರತಾಗಿ ಗುರುವಾರ ದೆಹಲಿಯಲ್ಲಿ ಪಕ್ಷದ ಹೈಕಮಾಂಡ್ ಜತೆ ಸಭೆ ನಡೆಯಲಿರುವುದು ಭಾರಿ ಕುತೂಹಲಕ್ಕೆ ಕಾರಣವಾಗಿದೆ.

ದೆಹಲಿ ಪ್ರವಾಸದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಗುರುವಾರ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಹಾಗೂ ಕೆ.ಸಿ.ವೇಣುಗೋಪಾಲ್ ಅವರೊಂದಿಗೆ ಸಭೆ ನಡೆಸಲಿದ್ದಾರೆ. ಈ ವೇಳೆ ರಾಜ್ಯ ಕಾಂಗ್ರೆಸ್‌ನ ಹಲವು ಗೊಂದಲಗಳಿಗೆ 'ಪರಿಹಾರ' ಕಂಡುಕೊಳ್ಳುವ ಪ್ರಯತ್ನ ಮಾಡಲಿದ್ದಾರೆ ಎಂದು ತಿಳಿದುಬಂದಿದೆ.

ಸಿದ್ದರಾಮಯ್ಯ ಅವರು ಕೆ.ಸಿ.ವೇಣುಗೋಪಾಲ್ ಅವರೊಂದಿಗೆ ಪ್ರತ್ಯೇಕ ಸಭೆ ನಡೆಸಲಿದ್ದು, ಈ ಸಭೆಯಲ್ಲಿ ರಣದೀಪ್ ಸಿಂಗ್ ಸುರ್ಜೇವಾಲ ಅವರ ಪ್ರತ್ಯೇಕ ಸಭೆಗೆ ಸಂಬಂಧಿಸಿದಂತೆ ಚರ್ಚೆ ಮಾಡುವ ಸಾಧ್ಯತೆಯಿದೆ. ಇದರೊಂದಿಗೆ ವಿಧಾನ ಪರಿಷತ್‌ನ ನಾಲ್ಕು ಸ್ಥಾನಕ್ಕೆ ಯಾರನ್ನು ನೇಮಿಸಬೇಕು ಎನ್ನುವ ಬಗ್ಗೆ ಚರ್ಚಿಸಲಿದ್ದಾರೆ ಎನ್ನಲಾಗಿದೆ. ಇನ್ನು ರಾಹುಲ್ ಗಾಂಧಿ ಅವರ ಭೇಟಿಗೂ ಅವಕಾಶ ಕೇಳಿರುವ ಸಿದ್ದರಾಮಯ್ಯ ಅವರು, ರಾಹುಲ್ ಗಾಂಧಿ ಸಮಯ ಸಿಕ್ಕರೆ ರಾಜಕೀಯ ಚಿತ್ರಣ ನೀಡುವ ಸಾಧ್ಯತೆಯಿದೆ ಎನ್ನಲಾಗಿದೆ. ಇನ್ನು ಶಾಸಕರೊಂದಿಗಿನ ಎರಡನೇ ಹಂತದ ಸಭೆಯ ಬಳಿಕ ದೆಹಲಿಗೆ ವಾಪಸಾಗಿರುವ ರಣದೀಪ್ ಸಿಂಗ್ ಸುರ್ಜೇವಾಲ ಅವರು, ಶಾಸಕರೊಂದಿಗಿನ ಸಭೆಯಲ್ಲಿನ ದೂರು-ದುಮ್ಮಾನ, ಸಚಿವರ ಕಾರ್ಯವೈಖರಿ, ವಿಧಾನ ಪರಿಷತ್ ನೇಮಕ ಹಾಗೂ ನಿಗಮ ಮಂಡಳಿ ಅಧ್ಯಕ್ಷ, ಉಪಾಧ್ಯಕ್ಷರ ನೇಮಕಕ್ಕೆ ಸಂಬಂಧಿಸಿದಂತೆ ವಿವಿಧ ವಿಷಯಗಳ ಬಗ್ಗೆ ಚರ್ಚಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ನಾಯಕರಿಂದ ಪ್ರತ್ಯೇಕ ಭೇಟಿ: ಪಾಟ್ನಾಕ್ಕೆ ತೆರಳಿದ್ದ ರಾಹುಲ್ ಗಾಂಧಿ ಅವರು ಬುಧವಾರ ತಡರಾತ್ರಿ ದೆಹಲಿಗೆ ವಾಪಸಾಗುವ ಸಾಧ್ಯತೆಯಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ರಾಹುಲ್ ಗಾಂಧಿ ಅವರನ್ನು ಪ್ರತ್ಯೇಕ ಭೇಟಿಗೆ ಅವಕಾಶ ಕೇಳಿದ್ದಾರೆ.

→ 4

ರಾಹುಲ್ ಗಾಂಧಿ ಅವರನ್ನು ಭೇಟಿಯಾಗಲು ಸಮಯ ಕೇಳಿದ್ದು, ಸಾಧ್ಯವಾದರೆ ಭೇಟಿಯಾಗುವುದಾಗಿ ತಿಳಿಸಿದ್ದಾರೆ. ಆದರೆ ಗುರುವಾರ ರಣದೀಪ್ ಸಿಂಗ್ ಸುರ್ಜೇವಾಲ ಅವರು ದೆಹಲಿಗೆ ಆಗಮಿಸಲಿದ್ದು, ಅವರೊಂದಿಗೆ ವಿಧಾನ ಪರಿಷತ್ ಸದಸ್ಯರು ಹಾಗೂ ನಿಗಮ ಮಂಡಳಿಗಳಿಗೆ ಅಧ್ಯಕ್ಷರ ನೇಮಕ ಬಗ್ಗೆ ಚರ್ಚಿಸಲಾಗುವುದು. ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ಭೇಟಿಗೆ ಸಮಯವನ್ನು ಕೋರಲಾಗಿದ್ದು, ಗುರುವಾರ ಭೇಟಿಯಾಗುವ ಸಾಧ್ಯತೆಯಿದೆ.
-**ಸಿದ್ದರಾಮಯ್ಯ**, ಮುಖ್ಯಮಂತ್ರಿ

ದೆಹಲಿ ಭೇಟಿಯ ಹಿಂದೆ ರಾಜಕೀಯ ಕಾರಣಕ್ಕಿಂತ ರಾಜ್ಯದ ಅಭಿವೃದ್ಧಿ ವಿಷಯಗಳ ಬಗ್ಗೆ ಚರ್ಚಿಸಲು ಬಂದಿದ್ದೇವೆ. ನಾಯಕರ ಸಮಯ ಕೇಳಿದ್ದು, ಸಿಕ್ಕರೆ ಭೇಟಿಯಾಗುವೆ. ವಿಧಾನ ಪರಿಷತ್‌ನ ನಾಲ್ಕು ನಾಮನಿರ್ದೇಶನ ಸ್ಥಾನಗಳಿಗೆ ಸಂಬಂಧಿಸಿದಂತೆ ವಿಧಾನಸಭಾ ಅಧಿವೇಶನದ ಮುಂಚಿತವಾಗಿ ಅಂತಿಮವಾಗಲಿದೆ.
-**ಡಿ.ಕೆ.ಶಿವಕುಮಾರ್** ಉಪಮುಖ್ಯಮಂತ್ರಿ

ವೇಣುಗೋಪಾಲ್ ಜತೆ ಯಾವ್ಯಾವ ವಿಷಯ ಚರ್ಚೆ?

- ಖಾಲಿಯಾಗಿರುವ ನಾಲ್ಕು ವಿಧಾನ ಪರಿಷತ್ ನಾಮನಿರ್ದೇಶನಕ್ಕೆ ಹೆಸರುಗಳನ್ನು ಅಂತಿಮಗೊಳಿಸಿ
- ನಿಗಮ ಮಂಡಳಿ ಅಧ್ಯಕ್ಷ, ಉಪಾಧ್ಯಕ್ಷರು ಹಾಗೂ ಸದಸ್ಯರ ನೇಮಕಕ್ಕೆ ಅನುಮತಿ ನೀಡಬೇಕು
- ಪಕ್ಷದಲ್ಲಿ ಪದೇ ಪದೆ ಕೇಳಿಬರುವ ಭಿನ್ನರಾಗಕ್ಕೆ ಶಾಶ್ವತ ಬ್ರೇಕ್ ಹಾಕಬೇಕು
- ಶಾಸಕರೊಂದಿಗಿನ ಪ್ರತ್ಯೇಕ ಸಭೆಗೆ ಸಂಬಂಧಿಸಿದಂತೆ ಕೆಲ ಸಚಿವರ ಅಪಸ್ವರದ ಬಗ್ಗೆ ಮಾಹಿತಿ

ಮೈಸೂರು ದಸರಾದಲ್ಲಿ ಈ ವರ್ಷವೂ ವೈಮಾನಿಕ ಸಮೀಕ್ಷೆ

ರಾಜ್ಯದಲ್ಲೇ ಡಿಫೆನ್ಸ್ ಕಾರಿಡಾರ್‌ಗೆ ಮನವಿ

ಬೆಂಗಳೂರು: ದೆಹಲಿ ಪ್ರವಾಸದಲ್ಲಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಬಾರಿಯ ನಾಡಹಬ್ಬ ದಸರಾ ಸಮಯದಲ್ಲಿ ವೈಮಾನಿಕ ಪ್ರದರ್ಶನಕ್ಕೆ ಅವಕಾಶ ನೀಡುವಂತೆ ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರಿಗೆ ಮನವಿ ಸಲ್ಲಿಸಿದ್ದಾರೆ.

ಐತಿಹಾಸಿಕ ಹಾಗೂ ಅಂತಾರಾಷ್ಟ್ರೀಯ ಮನ್ನಣೆ ಗಳಿಸಿರುವ ನಾಡಹಬ್ಬ ದಸರಾವನ್ನು ಈ ಬಾರಿ ಅದ್ದೂರಿಯಾಗಿ ಆಚರಿಸಲು ತೀರ್ಮಾನಿಸಿದ್ದು, ಈ ವೇಳೆ ವಾಯುಸೇನೆಯಿಂದ ವೈಮಾನಿಕ ಸಮೀಕ್ಷೆ ನಡೆಸುವ ಮೂಲಕ ಉತ್ಸವಕ್ಕೆ ಮತ್ತಷ್ಟು ಮೆರಗು ನೀಡಲು ಸರಕಾರ ತೀರ್ಮಾನಿಸಿದೆ. ಆದ್ದರಿಂದ ಕೇಂದ್ರ ರಕ್ಷಣಾ ಇಲಾಖೆ ವಾಯು ಸೇನೆಗೆ ಈ ಸಂಬಂಧ ಸೂಚನೆ ನೀಡಬೇಕು ಎಂದು ಮನವಿ ಸಲ್ಲಿಸಿದ್ದಾರೆ. ಇದಕ್ಕೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ.

ಇನ್ನು ರಕ್ಷಣಾ ಕ್ಷೇತ್ರದ ಹಬ್ ಎನಿಸಿರುವ ಬೆಂಗಳೂರು ದೇಶದ ರಕ್ಷಣಾ ಹಾಗೂ ವೈಮಾನಿಕ ಕ್ಷೇತ್ರದ ಶೇ.75ರಷ್ಟು ಪಾಲು ಹೊಂದಿದೆ. ಆದರೆ ಕೇಂದ್ರ ಸರಕಾರ ಉದ್ದೇಶಿಸಿರುವ ಡಿಫೆನ್ಸ್ ಕಾರಿಡಾರ್ ಅನ್ನು ತಮಿಳುನಾಡು ಹಾಗೂ ಉತ್ತರ ಪ್ರದೇಶಕ್ಕೆ ನೀಡಿದೆ. ಈಗ ಬೆಂಗಳೂರಿನಲ್ಲಿಯೂ ಡಿಫೆನ್ಸ್ ಕಾರಿಡಾರ್‌ಗೆ ಅವಕಾಶ ನೀಡಬೇಕು ಎಂದು ಮನವಿ ಸಲ್ಲಿಸಲಾಗಿದೆ. ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರನ್ನು ಭೇಟಿ ಯಾದ ನಿಯೋಗದಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್, ಇಂಧನ ಸಚಿವ ಕೆ.ಜೆ.ಜಾರ್ಜ್, ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್, ಸರಕಾರದ ದೆಹಲಿ ಪ್ರತಿನಿಧಿ ಟಿ.ಬಿ. ಜಯಚಂದ್ರ ಇದ್ದರು.

→ 4

ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರನ್ನು ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಭೇಟಿಯಾಗಿ ಸನ್ಮಾನಿಸಿದರು.

ಎರಡು ಡಿಫೆನ್ಸ್ ಕಾರಿಡಾರ್‌ಗೆ ಮನವಿ

ಬೆಂಗಳೂರು ಗ್ರಾಮಾಂತರ-ಕೋಲಾರ-ಚಿಕ್ಕಬಳ್ಳಾಪುರ ಮತ್ತು ಹುಬ್ಬಳ್ಳಿ ಧಾರವಾಡ-ಬೆಳಗಾವಿ-ವಿಜಯಪುರ ಜಿಲ್ಲೆಗಳಿಗೆ ಕೇಂದ್ರ ಸರಕಾರವು ಎರಡು ಪ್ರತ್ಯೇಕ ಡಿಫೆನ್ಸ್ ಕಾರಿಡಾರ್ ಮಂಜೂರು ಮಾಡಬೇಕೆಂದು ಕೋರಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರಕಾರದ ನಿಯೋಗವು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರಿಗೆ ಬುಧವಾರ ಇಲ್ಲಿ ಮನವಿ ಸಲ್ಲಿಸಿದೆ. ಕೇಂದ್ರ ಸರಕಾರವು 2018ರಲ್ಲಿ ಉತ್ತರಪ್ರದೇಶ ಮತ್ತು ತಮಿಳುನಾಡಿಗೆ ಡಿಫೆನ್ಸ್ ಕಾರಿಡಾರ್ ಮಂಜೂರು ಮಾಡಿದೆ. ಆದರೆ, ದೇಶದ ರಕ್ಷಣಾ ಮತ್ತು ವೈಮಾಂತರಿಕ್ಷ ವಲಯದಲ್ಲಿ ಕರ್ನಾಟಕವು ಶೇ.75ರಷ್ಟು ಪಾಲು ಹೊಂದಿದ್ದು, ಜಾಗತಿಕವಾಗಿ ಮೂರನೇ ಅತ್ಯುತ್ತಮ ಕಾರ್ಯಪರಿಸರ ಹೊಂದಿರುವ ಹೆಗ್ಗಳಿಕೆ ಸಂಪಾದಿಸಿದೆ. ಹೀಗಾಗಿ, ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕಗಳಿಗೆ ಒಂದೊಂದು ಡಿಫೆನ್ಸ್ ಕಾರಿಡಾರ್ ಮಂಜೂರು ಮಾಡಿದರೆ, ಇದು ಮೇಕ್ ಇನ್ ಇಂಡಿಯಾ ಉಪಕ್ರಮಕ್ಕೂ ಬಲ ತುಂಬುತ್ತದೆ ಎಂದು ಸಿದ್ದರಾಮಯ್ಯ ಮನದಟ್ಟು ಮಾಡಿಕೊಟ್ಟಿದ್ದಾರೆ. ಈ ಸಂದರ್ಭದಲ್ಲಿ ಸಚಿವ ಪಾಟೀಲ ಅವರು ಕೂಡ ಪೂರಕ ಮಾಹಿತಿ ಒದಗಿಸಿದರು. ದೇವನಹಳ್ಳಿಯಲ್ಲಿ 2 ಸಾವಿರ ಎಕರೆ ವಿಸ್ತಾರದ ಹೈಟೆಕ್ ರಕ್ಷಣಾ ಮತ್ತು ವೈಮಾಂತರಿಕ್ಷ ಪಾರ್ಕ್ ಇದೆ. ದೇಶದ ಶೇಕಡ 25ರಷ್ಟು ತಯಾರಿಕೆ ನಡೆಯುತ್ತಿದೆ. ಆದ್ದರಿಂದ ಕರ್ನಾಟಕದಲ್ಲಿ ಎರಡು ಡಿಫೆನ್ಸ್ ಕಾರಿಡಾರ್‌ಗಳಿಗೆ ಅನುಮತಿ ನೀಡಬೇಕು ಎಂದು ಮನವಿ ಮಾಡಲಾಗಿದೆ.

ಆರೆಸ್ಸೆಸ್ ನಾಯಕರ ಮನವೊಲಿಕೆಗೆ ಬಗ್ಗದ ಭಿನ್ನರು

ಸಂಘದ ಸಂಧಾನವೂ ವಿಫಲ

- ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನ ಆಯ್ಕೆ ಗೊಂದಲ ದಿನದಿಂದ ದಿನಕ್ಕೆ ತೀವ್ರ
- ಬಿಜೆಪಿ ರಾಷ್ಟ್ರಾಧ್ಯಕ್ಷರ ಆಯ್ಕೆ ಪ್ರಕ್ರಿಯೆಯಲ್ಲಿ ವರಿಷ್ಠರು ಬ್ಯುಸಿ
- ರಾಷ್ಟ್ರಾಧ್ಯಕ್ಷರ ಆಯ್ಕೆ ಅಧಿಕೃತವಾದ ಬಳಿಕ ರಾಜ್ಯದ ಕಡೆಗೆ ಗಮನ

ಬೆಂಗಳೂರು: ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನದ ಆಯ್ಕೆ ನಿಶ್ಚಿತತೆ ಮುಂದುವರಿದಿರುವ ನಡುವೆಯೇ ಪಕ್ಷದ ನಾಯಕರಿಗೆ ಸಂಘ ಪರಿವಾರ ಬುದ್ಧಿವಾದ ಹೇಳಿದ್ದರೂ ಅಸಹನೆ ಇನ್ನೂ ಹಾಗೆ ಮುಂದುವರಿದಿದ್ದು ಭಿನ್ನರಾಗ ಹೆಚ್ಚುತ್ತಾ ಬಿ.ವೈ.ವಿಜಯೇಂದ್ರ ಮುಂದುವರಿಯುತ್ತಾರೋ ಅಥವಾ ಬೇರೆಯವರ ಆಯ್ಕೆ ನಡೆಯಲಿದೆಯೇ ಎಂಬ ಚರ್ಚೆಗಳು ಈಗಲೂ ಚಾಲ್ತಿಯಲ್ಲಿವೆ.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವಿರುದ್ಧ ತೊಡೆ ತಟ್ಟಿರುವ ಬಂಡಾಯ ನಾಯಕರು ಅಧ್ಯಕ್ಷ ಸ್ಥಾನಕ್ಕೆ ಅಭ್ಯರ್ಥಿ ಬದಲಾಗಬೇಕು ಎಂದು ಮೇಲ್ಮಟ್ಟದಲ್ಲಿ ಒತ್ತಾಯ ತರುತ್ತಲೇ ಇದೆ. ಮಾಜಿ ಸಂಸದ ಜಿ.ಎಂ.ಸಿದ್ದೇಶ್ವರ ಅವರ ಹುಟ್ಟುಹಬ್ಬ ನಿಮಿತ್ತ ದಾವಣಗೆರೆಯಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಭಿನ್ನರ ಗೌಪ್ಯ ಸಭೆ ನಡೆದಿದೆಯಲ್ಲದೆ, ಮಾಜಿ ಸಿಎಂ ಯಡಿಯೂರಪ್ಪ ಬಿಜೆಪಿಯಿಂದ ಹೊರಹೋಗಿ ಒಳ ಬಂದಿರುವ ಬಗ್ಗೆಯೂ ಅಲ್ಲಲ್ಲಿ ಅಸಹನೆ ವ್ಯಕ್ತವಾಗಿದೆ. ಚುನಾವಣೆ ನಡೆದರೆ ವಿಜಯೇಂದ್ರ ವಿರುದ್ಧ ತಮ್ಮ ಬಣದಿಂದ ಅಭ್ಯರ್ಥಿ ಕಣಕ್ಕಿಳಿಸಬೇಕು. ಈ ಬಾರಿ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಸಲೇಬೇಕು ಎಂದು ಭಿನ್ನ ಬಣ ಇಂದಿಗೂ ಪ್ರತಿಪಾದಿಸುತ್ತಲೇ ಇದೆ. ಈ ಮಧ್ಯೆ ಜಿಲ್ಲಾ ಘಟಕಕ್ಕೆ ಅಧ್ಯಕ್ಷರ ಆಯ್ಕೆ ಬಹುತೇಕ ಮುಗಿದಿದ್ದು, ಇಷ್ಟೊತ್ತಿಗಾಗಲೇ ಅಧ್ಯಕ್ಷರ ಆಯ್ಕೆ ಘೋಷಣೆಯಾಗಬೇಕಿತ್ತು. ಹೀಗಿದ್ದರೂ ತಡವಾಗುತ್ತಿರುವ ಕಾರಣಗಳು ಹಲವಾರಿದ್ದು ಕೇಂದ್ರದ ವರಿಷ್ಠರು ರಾಜ್ಯ ಘಟಕದ ಬಗ್ಗೆ ಇನ್ನೂ ಮೀನಮೇಷ ಎಣಿಸುತ್ತಿದೆ. ಈ ನಡುವೆ ಆರ್. ಅಶೋಕ ದೆಹಲಿ ಯಾತ್ರೆ ಮುಗಿಸಿ ಬಂದರೂ ಯಾವುದೇ ಪ್ರಯೋಜನವಾಗಿಲ್ಲ. ಇದರ ನಡುವೆಯೇ ಮಾಜಿ ಸಿಎಂ ಒಬ್ಬರು ಅಧ್ಯಕ್ಷ ಸ್ಥಾನದ ಆಕಾಂಕ್ಷಿಯಾಗಿದ್ದಾರೆ.

→ 4

ಸೇತುವೆ ಕುಸಿತ: 10 ಬಲಿ

ವಡೋದರಾ: ರಾಜ್ಯದ ವಡೋದರಾ ಜಿಲ್ಲೆಯ ಮುಜಪುರ ಬಳಿ ಮಹಿಸಾಗರ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿದ್ದ ದೊಡ್ಡ ಗಾತ್ರದ ಸೇತುವೆ ಮಧ್ಯ ಭಾಗದಲ್ಲಿ ಕಾಂಕ್ರೀಟ್ ಕಿತ್ತುಬಂದು, ಕಬ್ಬಿಣದ ಸಲಾಕೆಗಳು ತುಂಡಾಗಿ ಶಿಥಿಲವಾಗಿದ್ದ ಬೃಹತ್ ಸ್ಲ್ಯಾಬ್ ಬುಧವಾರ ಬೆಳಗ್ಗೆ ಕುಸಿದುಬಿದ್ದಿದೆ. ಚಾಲಕರಿಗೆ ಸೇತುವೆ ಕುಸಿದಿರುವುದು ಕಾಣಿಸದೇ ವಾಹನವನ್ನು ವೇಗವಾಗಿಯೇ ಚಲಾಯಿಸಿಕೊಂಡು ಬಂದಿದ್ದರಿಂದ 4 ವಾಹನಗಳು ಒಂದಾದ ಮೇಲೊಂದರಂತೆ ಆಳವಾದ ನದಿಗೆ ಬಿದ್ದು ಜಖಂಗೊಂಡಿವೆ. ಪರಿಣಾಮ 10 ಮಂದಿ ಜೀವ ಕಳೆದುಕೊಂಡಿದ್ದಾರೆ. ಎರಡು ಟ್ರಕ್‌ಗಳು, ಒಂದು ಪಿಕಪ್ ವ್ಯಾನ್ ಮತ್ತು ಮತ್ತೊಂದು 4 ಚಕ್ರದ ವಾಹನ ನದಿಗೆ ಬಿದ್ದಿವೆ. ಸಮೀಪದ ಗ್ರಾಮದ ಜನತೆ ಓಡೋಡಿ ಬಂದು ಐವರನ್ನು ರಕ್ಷಿಸಿದ್ದಾರೆ.

ಇನ್ನಷ್ಟು ಮುಡಾ ನಿವೇಶನ ಜಪ್ತಿ

ಬೆಂಗಳೂರು: ಮೈಸೂರು ಅಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನ ಹಂಚಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ 2002ರ ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ ಜಾರಿನಿರ್ದೇಶನಾಲಯ(ಇ.ಡಿ)ಮತ್ತಷ್ಟು ನಿವೇಶನಗಳನ್ನು ತಾತ್ಕಾಲಿಕವಾಗಿ ಮುಟ್ಟುಗೋಲು ಹಾಕಿಕೊಂಡಿದೆ. ಇ.ಡಿ ಬಿಡುಗಡೆ ಮಾಡಿದ ಮೂರನೇ ಪಟ್ಟಿ ಪ್ರಕಾರ ಒಬ್ಬನೇ ವ್ಯಕ್ತಿಗೆ ಅಕ್ರಮವಾಗಿ 30ರಿಂದ 40 ನಿವೇಶನಗಳನ್ನು ಕೊಟ್ಟಿರುವುದು ಪತ್ತೆಯಾಗಿದೆ. ಮೈಸೂರಿನ ಹೆಸರಾಂತ ಚರ್ಚ್ ಕ್ಯಾಥೆಡ್ರಲ್ ಪರೀಷ್ ಸೊಸೈಟಿಯೊಂದಕ್ಕೆ ನೀಡಿದ್ದ 40 ನಿವೇಶನಗಳನ್ನು ಮುಟ್ಟುಗೋಲು ಹಾಕಲಾಗಿದೆ. ತನಿಖೆ ವೇಳೆ ನಗದು, ಬ್ಯಾಂಕ್ ವರ್ಗಾವಣೆ, ಚರ/ಸ್ಥಿರ ಆಸ್ತಿಗಳ ರೂಪದಲ್ಲಿ ಅಕ್ರಮ ಹಂಚಿಕೆ ಮಾಡಲು ಲಂಚ ಪಡೆದಿರುವ ಬಗ್ಗೆ ಸಾಕ್ಷ್ಯಗಳನ್ನು ಸಂಗ್ರಹಿಸಲಾಗಿದೆ ಎಂದು ಇ.ಡಿ ಹೇಳಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಹಿಂದೆಯೂ ರಿಯಲ್ 300 ಕೋಟಿ ರು. ಮೌಲ್ಯದ ಸ್ಥಿರಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿತ್ತು.

14 ರವರೆಗೆ ಕಸ್ಟಡಿಗೆ ನೀಡಿದ ವಿಶೇಷ ಕೋರ್ಟ್ ಆದೇಶ
ತನಿಖೆ ತೀವ್ರ, ಪ್ರಮುಖ ಆರೋಪಿ ಜುನೈದ್‌ಗೆ ಶೋಧ

ಮೂವರು ಶಂಕಿತ ಉಗ್ರರು ಆರು ದಿನ ಎನ್‌ಐಎ ಕಸ್ಟಡಿಗೆ

ಬೆಂಗಳೂರು: ಎನ್‌ಐಎ ಅಧಿಕಾರಿಗಳು ಬೆಂಗಳೂರು ಹಾಗೂ ಕೋಲಾರದಲ್ಲಿ ದಾಳಿ ನಡೆಸಿ, ಉಗ್ರರಿಗೆ ನೆರವು ನೀಡಿದ ಆರೋಪದಲ್ಲಿ ಮೂವರು ಶಂಕಿತ ಉಗ್ರರನ್ನು ಬಂಧಿಸಿದ್ದಾರೆ.

ಇದೀಗ ಕೋರ್ಟ್, ಸಹ ಬಂಧಿತ ಮನೋವೈದ್ಯ ನಾಗರಾಜ್, ಚಾಂದ್ ಪಾಷಾ ಹಾಗೂ ಅನೀಸ್ ಫಾತೀಮಾಳನ್ನು 6 ದಿನಗಳ ಕಾಲ ಎನ್‌ಐಎ ಕಸ್ಟಡಿಗೆ ನೀಡಿ ಆದೇಶ ಹೊರಡಿಸಿದೆ. ಜುಲೈ 14ರವರೆಗೆ ಕಸ್ಟಡಿಗೆ ನೀಡಿ ಸಿಟಿ ಸಿವಿಲ್ ಕೋರ್ಟ್ ಆವರಣದಲ್ಲಿರುವ ಎನ್‌ಐಎ ವಿಶೇಷ ಕೋರ್ಟ್ ಆದೇಶಿಸಿದ್ದು, ಪ್ರಕರಣ ಸಂಬಂಧ ಎನ್‌ಐಎ ಅಧಿಕಾರಿಗಳು ತನಿಖೆ ಇನ್ನಷ್ಟು ತೀವ್ರಗೊಳಿಸಲಿದ್ದಾರೆ. ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿನ ಮನೋವೈದ್ಯ ನಾಗರಾಜ್, ಎಎಸ್‌ಐ ಚಾಂದ್ ಪಾಷಾ ಮತ್ತು ಶಂಕಿತ ಉಗ್ರನ ತಾಯಿ ಫಾತೀಮಾಳನ್ನು ಎನ್‌ಐಎ ಅಧಿಕಾರಿಗಳು ಬಂಧಿಸಿದ್ದರು. ಇವರೆಲ್ಲರೂ ದಕ್ಷಿಣ ಭಾರತದ ಹಲವು ಸ್ಫೋಟಗಳ ಮಾಸ್ಟರ್ ಮೈಂಡ್ ನಾಸೀರ್ ಜತೆ ಸಂಪರ್ಕ ಹೊಂದಿದ್ದರು ಎಂದು ಸುಳಿವು ಸಿಕ್ಕಿದ್ದು, ಈ ಸಂಬಂಧ ಎನ್‌ಐಎ, ಕೋರ್ಟ್ ಅನುಮತಿ ಮೇರೆಗೆ ವಶಕ್ಕೆ ಪಡೆದುಕೊಂಡು ಹೆಚ್ಚಿನ ತನಿಖೆ ನಡೆಸಲಿದ್ದಾರೆ.

ಉಗ್ರ ನಾಸೀರ್ ಕೊಲೆ ಪ್ರಕರಣದಲ್ಲಿ ಶಾಮೀಲಾಗಿದ್ದ ಯುವಕರ ತಂಡ ಕಟ್ಟಿದ್ದ. ಜುನೈದ್, ಮೊಹಮ್ಮದ್ ಹರ್ಷದ್ ಖಾನ್, ಸುಹೈಲ್, ಫೈಜಲ್, ಜಾಹಿದ್ ತಬ್ರೇಜ್, ಮುದಾಸಿರ್ ಇರುವ ತಂಡ ರೆಡಿ ಮಾಡಿದ್ದ. ಈ ತಂಡ ಗ್ರೆನೇಡ್, ಪಿಸ್ತೂಲ್, ಸ್ಫೋಟಕ ವಸ್ತುಗಳ ಸಮೇತ ಬೆಂಗಳೂರಿನ ಆರ್.ಟಿ.ನಗರ, ಹೆಬ್ಬಾಳದಲ್ಲಿ ಸಿಕ್ಕಿಬಿದ್ದಿತ್ತು. ಇದೀಗ ಪ್ರಮುಖ ಆರೋಪಿ ಜುನೈದ್‌ಗಾಗಿ ಎನ್‌ಐಎ ಹುಡುಕಾಟ ನಡೆಸುತ್ತಿದೆ. ಈ ವಿಚಾರ ಸಂಬಂಧ ದಾಳಿ ನಡೆಸಿದಾಗ ಡಾ. ನಾಗರಾಜ್, ಚಂದ್ ಪಾಷಾ ಹಾಗೂ ಅನೀಸ್ ಫಾತೀಮಾ ಸಿಕ್ಕಿಬಿದ್ದಿದ್ದಾರೆ.

ಚಾ.ನಗರದಲ್ಲಿ 10 ವರ್ಷದ ಶಾಲಾ ಬಾಲಕ ಬಲಿ

ಹೃದಯ ತಪಾಸಣೆಗೆ ಆಸ್ಪತ್ರೆಗಳಿಗೆ ದಾಂಗುಡಿ

ಬೆಂಗಳೂರು: ರಾಜ್ಯದಲ್ಲಿ ಹೃದಯಸ್ತಂಭನದಿಂದ ಸಾಲುಸಾಲು ಸಾವುಗಳು ಸಂಭವಿಸುತ್ತಿರುವ ಹಿನ್ನೆಲೆಯಲ್ಲಿ ಬೆಂಗಳೂರು, ಮೈಸೂರು ಮತ್ತು ಕಲಬುರಗಿಯಲ್ಲಿರುವ ಜಯದೇವ ಹೃದ್ರೋಗ ಆಸ್ಪತ್ರೆಗೆ ಹೃದಯ ತಪಾಸಣೆಗಾಗಿ ಜನರು ದಾಂಗುಡಿ ಇಡುತ್ತಿದ್ದಾರೆ.

ಬೆಂಗಳೂರಿನ ಜಯದೇವದಲ್ಲಿ ಸಾಮಾನ್ಯ ದಿನಗಳಿಗಿಂತ ಇತ್ತೀಚಿನ ದಿನಗಳಲ್ಲಿ ಪ್ರತಿ ದಿನವೂ ಶೇ.20ರಷ್ಟು ಹೆಚ್ಚಿನವರು ಹೃದಯ ತಪಾಸಣೆ ಮಾಡಿಸಿಕೊಂಡಿದ್ದಾರೆ. ಪ್ರತಿದಿನ ರೋಗಿಗಳು ಸೇರಿ ಸಾಮಾನ್ಯವಾಗಿ 1200-1300 ಆಸ್ಪತ್ರೆಗೆ ಬಂದು ತಪಾಸಣೆ ಮಾಡಿಸಿಕೊಳ್ಳುತ್ತಾರೆ. ಆದರೆ ಇತ್ತೀಚೆಗೆ ಸುಮಾರು 1700 ಜನ ಹೃದಯ ತಪಾಸಣೆ ಮಾಡಿಸಿಕೊಂಡಿದ್ದಾರೆ. ಇನ್ನು ಮೈಸೂರಿನ ಮೈಸೂರಿನ ಜಯದೇವ ಹೃದ್ರೋಗ ಆಸ್ಪತ್ರೆಗೆ ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರ ಜಿಲ್ಲೆಗಳಿಂದ ನೂರಾರು ಮಂದಿ ಆಗಮಿಸುತ್ತಿದ್ದು, ಬೆಳಗ್ಗೆಯಿಂದಲೇ ಆಸ್ಪತ್ರೆಯ ಒಪಿಡಿ ಫುಲ್ ರಷ್ ಆಗಿತ್ತು. ಆಸ್ಪತ್ರೆ ಆವರಣದಲ್ಲಿ ಜನ ಹೆಚ್ಚಾದ ಹಿನ್ನೆಲೆಯಲ್ಲಿ ಜನರನ್ನು ನಿಯಂತ್ರಣ ಮಾಡಲಾಗದೇ ಆಸ್ಪತ್ರೆಯ ಸಿಬ್ಬಂದಿ ಬ್ಯಾರಿಕೇಡ್ ಸಿಸ್ಟಮ್ ಮಾಡಿದ್ದರು. ಸರತಿ ಸಾಲಲ್ಲಿ ನಿಂತಿರುವ ರೋಗಿಗಳಲ್ಲಿ ಯುವಕ, ಯುವತಿಯರ ಸಂಖ್ಯೆ ಹೆಚ್ಚಾಗಿತ್ತು. ಪ್ರತಿನಿತ್ಯ 500 ರಷ್ಟು ಬರುತ್ತಿದ್ದ ರೋಗಿಗಳ ಸಂಖ್ಯೆ ದಿಢೀರ್ 1500 ಅಧಿಕವಾಗಿದೆ. ಇವರಲ್ಲಿ ಮೊದಲ ಬಾರಿ ಬಂದಿರುವವರ ಸಂಖ್ಯೆಯೇ ಹೆಚ್ಚಿದೆ.

ಇನ್ನು ಕಲಬುರಗಿಯ ಜಯದೇವ ಹೃದ್ರೋಗ ವಿಜ್ಞಾನಗಳ ಸಂಸ್ಥೆಗೆ 6 ತಿಂಗಳಲ್ಲೇ ರೋಗಿಗಳ ಸಂಖ್ಯೆ ಹೆಚ್ಚಿದೆ. ಓಪಿಡಿಗೆ 600 ಮಂದಿ ಭೇಟಿ ನೀಡಿದ್ದರು. ಸಾಮಾನ್ಯವಾಗಿ 300ರಿಂದ 500 ಮಂದಿ ಭೇಟಿ ನೀಡುತ್ತಿದ್ದರು. ಶೇ.25ರಷ್ಟು ಭೀತಿಯಿಂದ ಬಂದಿದ್ದಾರೆ ಎಂದು ವೈದ್ಯರು ತಿಳಿಸಿದ್ದಾರೆ.

ರಾಜ್ಯಾದ್ಯಂತ ಒಂದೇ ದಿನ ಐವರು ಬಲಿ

ರಾಜ್ಯದಲ್ಲಿ ಹೃದಯಾಘಾತದ ಸಾವಿನ ಸರಣಿ ಮುಂದುವರಿದಿದೆ. ಬುಧವಾರ ಒಂದೇ ರಾಜ್ಯದ ವಿವಿಧೆಡೆ ಐವರು ಮೃತಪಟ್ಟಿದ್ದಾರೆ. ದಾವಣಗೆರೆ ನಗರದ ಜಯನಗರದ ರೇಖಾ ಮುರ್ಗೇಶ್ ಅವರ ಪುತ್ರ ಅಕ್ಷಯ್ (22), ಧಾರವಾಡದ ಪುರೋಹಿತ ನಗರದಲ್ಲಿರುವ ಪ್ರಭಾಕರ ಕುಸುಗೂರ ಅವರ ಮಗಳು ಜೀವಿತಾ ಕುಸುಗೂರ (26), ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ಪಟ್ಟಣದ ಕುರಬಗೇರಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿ, ದೊಡ್ಡಹುಂಡಿ ಗ್ರಾಮದ ನಾಗರಾಜು-ನಾಗರತ್ನ ಅವರ ಪುತ್ರ ಮನೋಜ್ ಕುಮಾರ್ (10), ರಾಮನಗರ ಜಿಲ್ಲೆಯ ಗೊಲ್ಲರದೊಡ್ಡಿ ಗ್ರಾಮದ ಗಿರೀಶ್ (25) ಮತ್ತು ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲೂಕಿನ ಚಂದನಕೇರಾ ಗ್ರಾಮದ ಮೋಹಸಿನ್ ಒಶಾ ಪಟೇಲ್ (22) ಎಂಬುವವರು ಹೃದಯಾಘಾತದಿಂದ ಸಾವನ್ನಪ್ಪಿದ್ದಾರೆ.

ಸಮಾಚಾರ ಸಣ್ಣದಲ್ಲ

ಐಶ್ವರ್ಯ ಪ್ರಕರಣ ಸಿನಿ ರಂಗಕ್ಕೂ ತಳಕು

ಬೆಂಗಳೂರು: ಡಿ.ಕೆ.ಸುರೇಶ್ ಹೆಸರಿನಲ್ಲಿ ಕೋಟ್ಯಂತರ ರು. ವಂಚನೆ ಮಾಡಿದ ಐಶ್ವರ್ಯ ಗೌಡ ಪ್ರಕರಣ ಸಂಬಂಧ ಮತ್ತೊಂದು ಸ್ಫೋಟಕ ಮಾಹಿತಿ ಹೊರಬಿದ್ದಿದೆ. ಡಿ.ಕೆ.ಸುರೇಶ್ ಹಾಗೂ ಡಿ.ಕೆ.ಶಿವಕುಮಾರ್ ಅವರು ನನ್ನ ಅಣ್ಣಂದಿರು, ನಾನು ಅವರ ತಂಗಿ ಅಂತಾ ಹೇಳಿಕೊಂಡು ವಂಚನೆ ಮಾಡಿರುವ ಐಶ್ವರ್ಯ ಗೌಡ ಪ್ರಕರಣ ಫಿಲ್ಮ್ ಚೇಂಬರ್ ಮೆಟ್ಟಿಲೇರಿದೆ. ತನಿಖೆ ವೇಳೆ ಬಂಗಾರಿ ಗೌಡ ಸಿನಿಮಾ ನಿರ್ಮಾಣ ಮಾಡುವುದಕ್ಕೆ ತಯಾರಿ ನಡೆಸಿದ್ದಳು ಎನ್ನುವ ಮಾಹಿತಿ ಹೊರಬಿದ್ದಿದೆ. ಐಶ್ವರ್ಯ ಗೌಡ, ಎಸ್ ಎಲ್‌ವಿ ಪ್ರೊಡಕ್ಷನ್ಸ್ ಎನ್ನುವ ಸಂಸ್ಥೆ ನೊಂದಾಯಿಸಿ ಆ ಮೂಲಕ ಸಿನಿಮಾ ನಿರ್ಮಾಣ ಮಾಡಲು ಪ್ಲ್ಯಾನ್ ಮಾಡಿದ್ದಳು ಎಂಬ ವಿಚಾರ ಬಯಲಾಗಿದೆ. ಈ ಬಗ್ಗೆ ಸ್ಪಷ್ಟನೆ ನೀಡಲು ಫಿಲ್ಮ್ ಚೇಂಬರ್‌ಗೆ ಸಿಐಡಿ ಡಿವೈಎಸ್‌ಪಿ ಅಂಜುಮಾಲ ನಾಯಕ ಪತ್ರ ಬರೆದಿದ್ದಾರೆ. ಇನ್ನು ಈ ವಿಚಾರವಾಗಿ ವಾಣಿಜ್ಯ ಮಂಡಳಿಯಿಂದಲೂ ಪ್ರತಿಕ್ರಿಯೆ ಸಿಕ್ಕಿದ್ದು, ಈ ಹೆಸರಿನಲ್ಲಿ ಯಾವ ಪ್ರೊಡಕ್ಷನ್ ರಿಜಿಸ್ಟರ್ ಆಗಿಲ್ಲ ಎಂದು ಸ್ಪಷ್ಟನೆ ನೀಡಿದ್ದಾರೆ.

ವಿರಾಮ
ಪ್ರತಿ ಭಾನುವಾರ

ಫನ್‌ತರಂಗ
- ರಘುಪತಿ ಶೃಂಗೇರಿ -

ರಾಜ್ಯಾದ್ಯಂತ ಬಿಡುಗಡೆಯಾದ ಚಲನಚಿತ್ರ 'ಕಪಟ ನಾಟಕ ಸೂತ್ರಧಾರಿ'

ಇವ್ರು ಏನು ಅಂತ ಇಡೀ ರಾಜ್ಯಕ್ಕೇ ಗೊತ್ತು...
ಇವರ ಮನೆ ಮೇಲೇನೂ
ಈ ಪೋಸ್ಟರ್ ಬೇಕಾಗಿರ್ಲಿಲ್ಲ...!!

ಅಧಿಕ ಬಡ್ಡಿ ಆಮಿಷವೊಡ್ಡಿ ಹಣ ಪಡೆದು ಕೇರಳ ದಂಪತಿ ಪರಾರಿ | ರಾಮಮೂರ್ತಿನಗರ ಠಾಣೆಯಲ್ಲಿ ಪ್ರಕರಣ ದಾಖಲು

ಕೋಟ್ಯಂತರ ರು.ಚಿಟ್‌ಫಂಡ್ ವಂಚನೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಚಿಟ್‌ಫಂಡ್ ಮತ್ತು ಫೈನಾನ್ಸ್ ವ್ಯವಹಾರದ ಸೋಗಿನಲ್ಲಿ ಜನರಿಗೆ ಹೆಚ್ಚಿನ ಬಡ್ಡಿಯ ಆಮಿಷವೊಡ್ಡಿ ಕೋಟ್ಯಂತರ ರುಪಾಯಿ ವಂಚಿಸಿ ಕೇರಳ ಮೂಲದ ದಂಪತಿ ಪರಾರಿಯಾಗಿದ್ದು, ಆರೋಪಿಗಳ ವಿರುದ್ಧ ರಾಮಮೂರ್ತಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಎ ಆ್ಯಂಡ್ ಎ ಚಿಟ್ ಫಂಡ್ ಮತ್ತು ಫೈನಾನ್ಸ್ ಹೆಸರಿನಲ್ಲಿ ಕೇರಳ ಮೂಲದ ದಂಪತಿ ಅಧಿಕ ಬಡ್ಡಿ ಆಸೆ ತೋರಿಸಿ ಹಲವರಿಂದ ಕೋಟ್ಯಂತರ ರುಪಾಯಿ ಪಡೆದು ವಂಚಿಸಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖವಾಗಿದೆ. ರಾಮಮೂರ್ತಿನಗರದ ಪಿ.ಟಿ.ಸ್ಯಾವಿಯೋ ಎಂಬುವವರು ನೀಡಿದ ದೂರಿನ ಮೇರೆಗೆ ರಾಮಮೂರ್ತಿನಗರ 8ನೇ ಮುಖ್ಯರಸ್ತೆಯ ಎ ಆ್ಯಂಡ್ ಎ ಚಿಟ್ ಫಂಡ್ ಮತ್ತು ಫೈನಾನ್ಸ್ ಸಂಸ್ಥೆಯ ಮಾಲೀಕರಾದ ಎ.ವಿ.ಟಾಮಿ ಮತ್ತು ಆತನ ಪತ್ನಿ ಶಿನಿ ಟಾಮಿ ವಿರುದ್ಧ ಚಿಟ್ ಫಂಡ್ ಕಾಯಿದೆ, ಬಿಎನ್‌ಎಸ್ ವಿವಿಧ ಕಲಂಗಳ ಅಡಿ ಎಫ್‌ಐಆರ್ ದಾಖಲಿಸಿ ತನಿಖೆ ಕೈಗೊಳ್ಳಲಾಗಿದೆ. ವರ್ಷಕ್ಕೆ ಶೇ. 15 ರಿಂದ ಶೇ. 20ರಷ್ಟು ಬಡ್ಡಿಯ ಆಸೆ ತೋರಿಸಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಒಬ್ಬರೇ 70 ಲಕ್ಷ ರು. ಪಾವತಿ: ಕೇರಳ ಮೂಲದ ಎ.ವಿ.ಟಾಮಿ ಮತ್ತು ಶಿನಿ ಟಾಮಿ 2005ನೇ ಸಾಲಿನಿಂದ ಬೆಂಗಳೂರಿನ ರಾಮಮೂರ್ತಿನಗರದಲ್ಲಿ ಎ ಆ್ಯಂಡ್ ಎ ಚಿಟ್ ಫಂಡ್ ಮತ್ತು ಫೈನಾನ್ಸ್ ಸಂಸ್ಥೆ ನಡೆಸುತ್ತಿದ್ದರು. ಅಧಿಕ ಬಡ್ಡಿ ಆಸೆ ತೋರಿಸಿ ಹಲವರಿಂದ ಠೇವಣಿ ಮತ್ತು ಚೀಟಿ ರೂಪದಲ್ಲಿ ಹಣ ಸಂಗ್ರಹಿಸಿ ಸಂಸ್ಥೆ ನಡೆಸುತ್ತಿದ್ದರು. ದೂರುದಾರರಾದ ಪಿ.ಟಿ.ಸ್ಯಾವಿಯೋ ಈವರೆಗೆ 70 ಲಕ್ಷ ರುಪಾಯಿ ಕಟ್ಟಿದ್ದು, ಇದೇ ರೀತಿ ಹಲವರು ಕೋಟ್ಯಂತರ ರುಪಾಯಿ ಸಂಸ್ಥೆಗೆ ಪಾವತಿಸಿದ್ದಾರೆ.



ಚಿಟ್‌ಫಂಡ್ ಹೆಸರಲ್ಲಿ ವಂಚಿಸಿದ ದಂಪತಿ.

- ಚಿಟ್‌ಫಂಡ್ ನಡೆಸುತ್ತಿದ್ದ ಎ.ವಿ.ಟಾಮಿ, ಪತ್ನಿ ಶಿನಿ ಟಾಮಿ
- ಶೇ. 15ರಿಂದ 20ರಷ್ಟು ಬಡ್ಡಿ ಆಸೆ ತೋರಿಸಿ ಕೋಟಿಗಟ್ಟಲೇ ವಂಚನೆ
- ಕಡಿಮೆ ಬೆಲೆಗೆ ವಾಸವಿದ್ದ ಫ್ಲ್ಯಾಟ್ ಮಾರಾಟ ಮಾಡಿ ದಂಪತಿ ನಾಪತ್ತೆ

ಕಚೇರಿ ಬಂದ್ ಮಾಡಿ ಪರಾರಿ: ಸಂಸ್ಥೆಯ ಕಚೇರಿಗೆ ಹೋಗಿ ಗಮನಿಸಿದಾಗ ಕಚೇರಿ ಬಂದ್ ಆಗಿರುವುದು ಗಮನಕ್ಕೆ ಬಂದಿತು. ಅಕ್ಕಪಕ್ಕದವರನ್ನು ವಿಚಾರಿಸಿದಾಗ ಟಾಮಿ ದಂಪತಿ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಇಬ್ಬರ ಮೊಬೈಲ್‌ಗಳಿಗೆ ಕರೆ ಮಾಡಿದರೆ, ಸ್ವಿಚ್ಡ್ ಆಫ್ ಬರುತ್ತಿದೆ. ಅಧಿಕ ಬಡ್ಡಿ ಆಸೆ ತೋರಿಸಿ ತನ್ನನ್ನು ಸೇರಿದಂತೆ ಹಲವರಿಂದ ಠೇವಣಿ ಹಾಗೂ ಚೀಟಿ ರೂಪದಲ್ಲಿ ಕೋಟ್ಯಂತರ ರೂಪಾಯಿ ಪಡೆದು ವಂಚಿಸಿ ಪರಾರಿಯಾಗಿರುವ ಟಾಮಿ ದಂಪತಿ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ದೂರಿನಲ್ಲಿ ದೂರುದಾರರು ಮನವಿ ಮಾಡಿದ್ದಾರೆ. ದೂರಿನನ್ವಯ ರಾಮಮೂರ್ತಿನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತಲೆಮರೆಸಿಕೊಂಡಿರುವ ಆರೋಪಿಗಳ ಬಂಧನಕ್ಕೆ ಶೋಧ ಕಾರ್ಯ ಮುಂದುವರಿದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಫ್ಲ್ಯಾಟ್ ಮಾರಾಟ ಮಾಡಿ ನಾಪತ್ತೆ

ಕಳೆದ 25 ವರ್ಷಗಳಿಂದ ಬೆಂಗಳೂರಿನಲ್ಲಿ ವಾಸಿಸುತ್ತಿದ್ದ ದಂಪತಿ ಕೆ.ಆರ್.ಪುರ ಬಳಿಯ ಭಟ್ಟರಹಳ್ಳಿಯಲ್ಲಿ 1 ಕೋಟಿ ರು. ಮೌಲ್ಯದ ಫ್ಲ್ಯಾಟ್ ಖರೀದಿಸಿದ್ದರು. ಫ್ಲಾಟ್ ಸೇರಿದಂತೆ ತಮ್ಮ ಚರ ಮತ್ತು ಸ್ಥಿರಾಸ್ತಿಗಳನ್ನು ಮಾರಾಟ ಮಾಡಿ ನಾಪತ್ತೆಯಾಗಿದ್ದಾರೆ. ಎಲ್ಲಾ ಪೀಠೋಪಕರಣಗಳೊಂದಿಗೆ ಒಂದು ಕೋಟಿ ರುಪಾಯಿಗಿಂತ ಕಡಿಮೆ ಬೆಲೆಗೆ ಮಾರಾಟ ಮಾಡಿದ್ದರು. ಅಲ್ಲದೇ, ತಮ್ಮ ಕಾರುಗಳನ್ನು ಸಹ ಮಾರಾಟ ಮಾಡಿರುವುದು ಗೊತ್ತಾಗಿದೆ. ಪೊಲೀಸರು ಸಿಸಿಟಿವಿಗಳನ್ನು ವೀಕ್ಷಿಸಿದಾಗ ಜುಲೈ 3 ರಂದು ಸೂಟ್‌ಕೇಸ್‌ಗಳೊಂದಿಗೆ ಹೊರಟು ಹೋಗುತ್ತಿರುವುದನ್ನು ಕಂಡು ಬಂದಿದೆ. ಆರೋಪಿಗಳು ಪರಾರಿಯಾಗುವ ಮುನ್ನ ಬ್ಯಾಂಕ್ ಖಾತೆಗಳಿಂದ ಹಣವನ್ನು ಡ್ರಾ ಮಾಡಿಕೊಂಡಿದ್ದಾರೆ. ದಂಪತಿಯ ಮಗಳು ಬೆಂಗಳೂರಿನಲ್ಲಿ ವಾಸಿಸುತ್ತಿದ್ದರೆ, ಒಬ್ಬ ಮಗ ಗೋವಾದಲ್ಲಿ ಮತ್ತು ಇನ್ನೊಬ್ಬ ಮಗ ಕೆನಡಾದಲ್ಲಿ ವಾಸಿಸುತ್ತಿದ್ದಾರೆ. ಮಗಳು ಕೂಡ ಸಂಪರ್ಕಕ್ಕೆ ಸಿಗುತ್ತಿಲ್ಲ ಎಂದು ತಿಳಿಸಿದ್ದಾರೆ.

ಸಿಎಂ, ಡಿಸಿಎಂ, ಎಂ.ಬಿ.ಪಾಟೀಲ್ ಹೆಸರೇಳಿ ಗಾಳ ಹಾಕುತ್ತಿದ್ದ ಮಹಿಳೆ

ಕೋಟಿ ರು. ಹಣ ವಂಚನೆ: ಬಂಧನ



ಬೆಂಗಳೂರು: ಕಿಟ್ಟಿ ಪಾರ್ಟಿಯಲ್ಲಿ ಪರಿಚಯವಾದ ಸ್ನೇಹಿತೆಯರಿಗೆ ಕೋಟ್ಯಂತರ ರುಪಾಯಿ ವಂಚನೆ ಮಾಡಿದ್ದ ಮಹಿಳೆ ಸಿಕ್ಕಿಬಿದ್ದಿದ್ದಾಳೆ. ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಹೆಸರು ಹೇಳಿಕೊಂಡು ಗಾಳ ಹಾಕುತ್ತಿದ್ದ ಸವಿತಾ ಎನ್ನುವ ಮಹಿಳೆಯನ್ನು ಬೆಂಗಳೂರಿನ ಬಸವೇಶ್ವರ ನಗರ ಪೊಲೀಸರು ಬಂಧಿಸಿದ್ದಾರೆ. ಕಿಟ್ಟಿ ಪಾರ್ಟಿಯಲ್ಲಿ ನೆಪದಲ್ಲಿ ಶ್ರೀಮಂತ ಮಹಿಳೆಯರನ್ನೇ ಟಾರ್ಗೆಟ್ ಮಾಡುತ್ತಿದ್ದ ಸವಿತಾ, ಈವರೆಗೆ 20ಕ್ಕೂ ಹೆಚ್ಚು ಮಹಿಳೆಯರಿಗೆ ಬರೋಬ್ಬರಿ 30 ಕೋಟಿ ರೂಪಾಯಿಗೂ ಅಧಿಕ ಹಣ ವಂಚನೆ ಮಾಡಿದ್ದಾಳೆ ಎಂದು ತಿಳಿದುಬಂದಿದ್ದು, ಈ ಸಂಬಂಧ ಪೊಲೀಸರು ತನಿಖೆ ನಡೆಸಿದ್ದಾರೆ.

ಕಿಟ್ಟಿ ಪಾರ್ಟಿ ಹೆಸರಲ್ಲಿ ಶ್ರೀಮಂತ ಮಹಿಳೆಯರನ್ನು ಪರಿಚಯ ಮಾಡಿಕೊಂಡಿದ್ದ ಸವಿತಾ ತನಗೆ ಹಲವು ರಾಜಕಾರಣಿಗಳು ಗೊತ್ತೆಂದು ಹೇಳಿಕೊಳ್ಳುತ್ತಿದ್ದಳು. ಸಿಎಂ, ಡಿಸಿಎಂ, ಸಚಿವ ಎಂ.ಬಿ.ಪಾಟೀಲ್ ಹೆಸರೇಳಿ ಗಾಳ ಹಾಕುತ್ತಿದ್ದಳು. ಬಳಿಕ ಅವರನ್ನ ಪುಸಲಾಯಿಸಿ ಹೂಡಿಕೆ ನೆಪದಲ್ಲಿ ಹಣ ಪಡೆದು ವಂಚಿಸುತ್ತಿದ್ದಳು. ಅಮೆರಿಕದಿಂದ ಕಡಿಮೆ ಬೆಲೆಗೆ ಚಿನ್ನ ತರಿಸಿಕೊಡುವುದಾಗಿ ಒಬ್ಬರಿಂದ ತಲಾ 50 ಲಕ್ಷದಿಂದ ಎರಡೂವರೆ ಕೋಟಿ ಹಣ ಪಡೆದು ವಾಪಸ್ ಹಣ ನೀಡದೇ ವಂಚಿಸಿದ್ದಾಳೆ. ಈ ಸಂಬಂಧ ಈ ಹಿಂದೆ ಗೋವಿಂದರಾಜನಗರ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ ಬಂಧನವಾಗಿ ಬಳಿಕ ಜಾಮೀನಿನ ಮೇಲೆ ಆಚೆ ಬಂದಿದ್ದಳು. ಬಳಿಕ ಸವಿತಾ ಮತ್ತದೇ ತನ್ನ ಹಳೇ ಚಾಳಿಯನ್ನೇ ಮುಂದುವರೆಸಿದ್ದು, ಬಸವೇಶ್ವರ ನಗರ ಪೊಲೀಸರ ಅತಿಥಿಯಾಗಿದ್ದಾಳೆ.

ಕರ್ನಾಟಕ ಸರಕಾರ ಮತ್ತು ಜರ್ಮನಿಯ ಬರ್ಲಿನ್ ರಾಜ್ಯದ ನಡುವೆ ನಡೆದ ಸಭೆಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಭಾಗವಹಿಸಿ, ಆರ್ಥಿಕ ವ್ಯವಹಾರಗಳ ಜಂಟಿ ಉದ್ದೇಶ ಘೋಷಣೆಗೆ ಸಹಿ ಹಾಕಿದರು. ಬರ್ಲಿನ್ ಇಂಧನ ಮತ್ತು ಸಾರ್ವಜನಿಕ ಉದ್ಯಮಗಳ ಮೇಯರ್ ಫ್ರಾನ್ಜಿಸ್ಕಾ ಜೆಫೆ ಉಪಸ್ಥಿತರಿದ್ದರು.

ಎಂಎಲ್‌ಸಿ ರವಿಕುಮಾರ್‌ಗೆ ಜಾಮೀನು

ಬೆಂಗಳೂರು: ರಾಜ್ಯ ಸರಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ವಿರುದ್ಧ ಅವಹೇಳನಕಾರಿ ಹೇಳಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಜೆಪಿ ಎಂಎಲ್‌ಸಿ ರವಿಕುಮಾರ್‌ಗೆ ಜಾಮೀನು ಸಿಕ್ಕಿದೆ. ವಿಧಾನಸೌಧದ ಆವರಣದಲ್ಲಿ ಪ್ರತಿಭಟನೆ ವೇಳೆ ಸಿಎಸ್‌ಗೆ ಅವಹೇಳನಕಾರಿ ಹೇಳಿಕೆ ನೀಡಿದ್ದಾರೆಂದು ಆರೋಪಿಸಿ ರವಿಕುಮಾರ್ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು. ಬಳಿಕ ರವಿಕುಮಾರ್ ಸಲ್ಲಿಸಿದ್ದ ಜಾಮೀನು ಅರ್ಜಿ ವಿಚಾರಣೆ ನಡೆಸಿದ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ಕೋರ್ಟ್, ನಿರೀಕ್ಷಣಾ ಜಾಮೀನು ನೀಡಿ ಆದೇಶಿಸಿದೆ. 1 ಲಕ್ಷ ಬಾಂಡ್, ಒಬ್ಬರು ಶ್ಯೂರಿಟಿ ಒದಗಿಸಲು ಸೂಚನೆ ನೀಡಿದೆ. ಹಾಗೇ ತನಿಖೆಗೆ ಸಹಕರಿಸಬೇಕು, ಸಾಕ್ಷ್ಯಾಧಾರ ನಾಶಪಡಿಸದಂತೆ ರವಿಕುಮಾರ್ ಷರತ್ತು ಹಾಕಿದೆ.

ಸೈಯದ್ ಅಸ್ಗರ್, ಗೋವಿಂದಯ್ಯ ನಿವಾಸದಲ್ಲಿದ್ದ ದಾಖಲೆಗಳ ಜಪ್ತಿ

ಬೆಂಗಳೂರು: ಅಕ್ರಮವಾಗಿ ಸೈಟ್ ಮಾರಾಟ ಮಾಡಿ ಸರಕಾರದ ಬೊಕ್ಕಸಕ್ಕೆ ನಷ್ಟ ಉಂಟುಮಾಡಿರುವ ಆರೋಪದ ಮೇಲೆ ದೂರಿನ ಹಿನ್ನೆಲೆಯಲ್ಲಿ ಕರ್ನಾಟಕ ಗೃಹ ಮಂಡಳಿ (ಕೆಎಚ್‌ಬಿ) ಸಹಾಯಕ ಕಾರ್ಯ ನಿರ್ವಾಹಕ ಎಂಜಿನಿಯರ್ ಸೇರಿದಂತೆ ಇಬ್ಬರಿಗೆ ಸಂಬಂಧಿಸಿದ ಸ್ಥಳಗಳಲ್ಲಿ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ಕೆಎಚ್‌ಬಿಯ ಯಲಹಂಕ ನ್ಯೂಟೌನ್ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಸೈಯದ್ ಅಸ್ಗರ್, ಗೋವಿಂದಯ್ಯ ಎಂಬವರಿಗೆ ಸಂಬಂಧಿಸಿದ ಸ್ಥಳಗಳಲ್ಲಿ ಅಧಿಕಾರಿಗಳು ಪರಿಶೀಲನೆ ಕೈಗೊಂಡಿದ್ದಾರೆ. ಆರೋಪಿತರಿಗೆ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ನೀಡಲಾಗುವುದು ಎಂದು ಲೋಕಾಯುಕ್ತ ಅಧಿಕಾರಿಗಳು ತಿಳಿಸಿದ್ದಾರೆ. ಯಲಹಂಕ ನ್ಯೂಟೌನ್‌ನ ಸೈಟ್ ನಂಬರ್ 271ಎ ಸೆಕ್ಟರ್‌ಗೆ ಸಂಬಂಧಿಸಿದಂತೆ ಎಂಜಿನಿಯರ್ ಸೈಯದ್ ಅಸ್ಗರ್ ನಕಲಿ ದಾಖಲಾತಿಗಳನ್ನು ಸೃಷ್ಟಿಸಿ ಖಾಸಗಿ ವ್ಯಕ್ತಿಗಳಿಗೆ ಮಾರಾಟ ಮಾಡಿದ್ದಾರೆ. ಇದರಿಂದಾಗಿ ಸರಕಾರದ ಬೊಕ್ಕಸಕ್ಕೆ ಸುಮಾರು 10 ಕೋಟಿ ರು. ನಷ್ಟವಾಗಿದೆ ಎಂದು ಆರೋಪಿಸಿ ಕೆ. ಎಸ್. ಚಂದ್ರಶೇಖರ ಆಜಾದ್ ಎಂಬವರು ಲೋಕಾಯುಕ್ತದಲ್ಲಿ ದೂರು ದಾಖಲಿಸಿದ್ದರು.

ಮೂವರ ವಿರುದ್ಧ ಪ್ರಕರಣ ದಾಖಲು

ಈ ಸಂಬಂಧ ಸೈಯದ್ ಅಸ್ಗರ್, ಗೋವಿಂದಯ್ಯ ಹಾಗೂ ಸತೀಶ್ ಹರಿಣಿ ಎಂಬವರ ವಿರುದ್ಧ ಪ್ರಕರಣ ದಾಖಲಿಸಿಕೊಂಡ ಲೋಕಾಯುಕ್ತ ಅಧಿಕಾರಿಗಳು ಬುಧವಾರ ಯಲಹಂಕ ನ್ಯೂಟೌನ್‌ನ ಕೆಎಚ್‌ಬಿ ಕಚೇರಿ, ಆರ್.ಟಿ.ನಗರದಲ್ಲಿರುವ ಸೈಯದ್ ಅಸ್ಗರ್ ನಿವಾಸ ಹಾಗೂ ಗೋವಿಂದಯ್ಯ ನಿವಾಸದಲ್ಲಿ ಪರಿಶೀಲನೆ ನಡೆಸಿ ದಾಖಲೆಗಳನ್ನು ವಶಕ್ಕೆ ಪಡೆದಿದ್ದಾರೆ. ಈ ಬಗ್ಗೆ ಲೋಕಾಯುಕ್ತ ಅಧಿಕಾರಿಗಳು ಪ್ರಕಟಣೆಯಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ.

40 ಕೋಟಿ ರು.ತೆರಿಗೆ ವಂಚನೆ ಆರೋಪಿ ಬಂಧನ

ಬೆಂಗಳೂರು: ನಕಲಿ ಬಿಲ್ ಟ್ರೇಡರ್‌ಗಳ ವಿರುದ್ಧ ಕಾರ್ಯಾಚರಣೆ ನಡೆಸಿದ ಕರ್ನಾಟಕ ವಾಣಿಜ್ಯ ತೆರಿಗೆಗಳ ಇಲಾಖೆಯು ಸುಮಾರು 40 ಕೋಟಿ ರು. ತೆರಿಗೆ ವಂಚನೆ ಮಾಡಿದ್ದ ಆಸಾಮಿಯನ್ನು ಬುಧವಾರ ಬಂಧಿಸಿದೆ.

ಬೆಂಗಳೂರಿನ ದಕ್ಷಿಣ ವಲಯ(ಜಾರಿ) ಹಾಗೂ ಜಾಗೃತಿ ವಿಭಾಗಗಳ ಅಧಿಕಾರಿಗಳ ತಂಡವು ಪೊಲೀಸರ ಸಹಯೋಗದೊಂದಿಗೆ ರಾಜಸ್ಥಾನದ ಜಲೋರ್ ಜಿಲ್ಲೆಯ ನಿವಾಸಿ ಕೈಲಾಶ್ ವಿಷ್ಣೋಯ್ ಎಂಬಾತನನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿದೆ. ಅರ್ಹವಲ್ಲದ ಗುಜರಿ ವಸ್ತುಗಳನ್ನು ಅಸಲಿ ಟ್ರೇಡರ್‌ಗಳಿಂದ ಖರೀದಿಸಿ ಮಾರಾಟ ಮಾಡಲಾಗುತ್ತಿದೆ ಎಂದು ಸರಕಾರಕ್ಕೆ ತೋರಿಸಿ ಕೋಟ್ಯಂತರ ರೂಪಾಯಿ ವಂಚನೆ ಮಾಡುತ್ತಿರುವುದು ವಿಚಾರಣೆ ವೇಳೆ ತಿಳಿದುಬಂದಿದೆ.

ಆರೋಪಿ ಕೈಲಾಶ್ ವಿಷ್ಣೋಯ್ ಎಂಬ ವ್ಯಕ್ತಿಯು ನಕಲಿ ಆಧಾರ್ ಕಾರ್ಡ್‌ಗಳನ್ನು ಬಳಸಿ ಬ್ಯಾಂಕ್ ಖಾತೆಗಳನ್ನು ತೆರೆದು, ಜಿಎಸ್‌ಟಿ ನೋಂದಣಿಗಳನ್ನು ಪಡೆದುಕೊಂಡಿದ್ದಾನೆ. ಇವುಗಳನ್ನು ಉಪಯೋಗಿಸಿ ನೂರಾರು ಕೋಟಿ ರುಪಾಯಿ ಮೊತ್ತದ ತೆರಿಗೆ ಇನ್‌ವಾಯ್ಸ್ ಗಳನ್ನು ನೀಡಿರುವುದು ಗೊತ್ತಾಗಿದೆ. ಮೆಟಲ್ ಸ್ಕ್ರ್ಯಾಪ್ ಸರಕುಗಳ ರಹಸ್ಯ ಸಾಗಾಣಿಕೆಗೆ ಸಹಕರಿಸಿ, ಆ ಮೂಲಕ ನಕಲಿ ಹೂಡುವಳಿ ತೆರಿಗೆಯನ್ನು ಕ್ಲೇಮು ಮಾಡಲು ಕರ್ನಾಟಕ ಮತ್ತು ಇತರೆ ರಾಜ್ಯಗಳ ವರ್ತಕರೊಂದಿಗೆ ಅಕ್ರಮವಾಗಿ ಕೈಜೋಡಿಸಿದ್ದ. ವಾಣಿಜ್ಯ ತೆರಿಗೆಗಳ ಇಲಾಖೆಯ ಅಧಿಕಾರಿಗಳು ತನಿಖೆ ಮುಂದುವರೆಸಿದ್ದು, ಪ್ರಕರಣವನ್ನು ಎಲ್ಲಾ ಆಯಾಮಗಳಿಂದ ವಿಶ್ಲೇಷಿಸಲಾಗುತ್ತಿದೆ. ಆರೋಪಿಯು 300 ಕೋಟಿ ರುಪಾಯಿಗಿಂತ ಹೆಚ್ಚಿನ ವ್ಯವಹಾರ ನಡೆಸಿರುವುದು ಗೊತ್ತಾಗಿದೆ.

ಬ್ಯಾಂಕ್ ಆಫ್ ಬರೋಡ
बैंक ऑफ़ बड़ौदा
Bank of Baroda

ಒತ್ತಡದ ಸ್ವತ್ತುಗಳ ನಿರ್ವಹಣೆ ಲಂಬ ಬ್ಯಾಂಕ್ ಆಫ್ ಬರೋಡಾ, ಬರೋಡಾ ಕಾರ್ಪೊರೇಟ್ ಕೇಂದ್ರ ಸಿ–26, ಜಿ–ಬ್ಲಾಕ್, ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್, ಬಾಂದ್ರಾ ಪೂರ್ವ, ಮುಂಬೈ–400051
ಇಮೇಲ್: wfd.bcc@bankofbaroda.co.in

BOB:SAMV:117:1435 Dated: 07.07.2025

ಉದ್ದೇಶಪೂರ್ವಕ ಸುಸ್ತಿದಾರರ ವರ್ಗೀಕರಣ:
ಪರಿಶೀಲನಾ ಸಮಿತಿಯ ಮುಂದೆ ವಯಕ್ತಿಕವಾಗಿ ಹಾಜರಾಗಲು ಅವಕಾಶ.

ದಯವಿಟ್ಟು ದಿನಾಂಕ 03.02.2025 ರಂದು ನಿಮಗೆ ಕಳುಹಿಸಲಾದ ಶೋಕಾಸ್ ನೋಟಿಸ್ ಅನ್ನು ಉಲ್ಲೇಖಿಸಿ. ಅಲ್ಲದೆ, ಉದ್ದೇಶಪೂರ್ವಕ ಸುಸ್ತಿದಾರರ ಗುರುತಿನ ಸಮಿತಿಯು ನಿಮ್ಮನ್ನು ಉದ್ದೇಶಪೂರ್ವಕ ಸುಸ್ತಿದಾರ ಎಂದು ವರ್ಗೀಕರಿಸಲು ಪರಿಶೀಲನಾ ಸಮಿತಿಗೆ ಶಿಫಾರಸು ಮಾಡಿದೆ ಮತ್ತು ದಿನಾಂಕ 17.05.2025 ರ ಪತ್ರದ ಮೂಲಕ ನಿಮಗೆ ಅದನ್ನು ತಿಳಿಸಲಾಗಿದೆ. ಈಗ ನೀವು 18.07.2025 ರಂದು ವೈಯಕ್ತಿಕ ವಿಚಾರಣೆಗಾಗಿ ಪರಿಶೀಲನಾ ಸಮಿತಿಯ ಮುಂದೆ ಹಾಜರಾಗಲು ಅವಕಾಶವನ್ನು ಪಡೆದುಕೊಳ್ಳಲು ಸೂಚಿಸಲಾಗಿದೆ. ದಯವಿಟ್ಟು ದಿನಾಂಕ 14.07.2025 ರ ಒಳಗೆ ಇಮೇಲ್ ಅಥವಾ ಪತ್ರದ ಮೂಲಕ ನಿಮ್ಮ ಹಾಜರಾತಿಯನ್ನು ದೃಢೀಕರಿಸಿ. ಒಂದು ವೇಳೆ ನೀವು ಹಾಜರಾಗದೆ ಇದ್ದಲ್ಲಿ, ಪರಿಶೀಲನಾ ಸಮಿತಿಯು ನಿಮ್ಮನ್ನು ಉದ್ದೇಶಪೂರ್ವಕ ಸುಸ್ತಿದಾರ ಎಂದು ವರ್ಗೀಕರಿಸುವ ವಿವೇಚನೆಯನ್ನು ಹೊಂದಿರುತ್ತದೆ. ಸ್ಥಳ ಮತ್ತು ದಿನಾಂಕದ ವಿವರಗಳು ಕೆಳಕಂಡಂತಿವೆ.

ಕ್ರ ಸಂ	ಖಾತೆಯ ಹೆಸರು	ವ್ಯಕ್ತಿಯ ಹೆಸರು	ದಿನಾಂಕ, ಸಮಯ, ಸ್ಥಳ ಮತ್ತು ವಿಚಾರಣೆಯ ವಿಧಾನ
1.	ಮೆ// ಐ–ಲೈಫ್ ಸ್ಟೈಲ್ ಅಂಡ್ ಟೆಕ್ಸ್ ಟೈಲ್ ಪ್ರೈ ಲಿಮಿಟೆಡ್	ಶ್ರೀ ತರುಣ್ ಜೈನ್	ವಿಚಾರಣೆಯ ದಿನಾಂಕ : 18.07.2025 ಸಮಯ : ಮಧ್ಯಾಹ್ನ 12.00 ಗಂಟೆ (15 ನಿಮಿಷ ಮೊದಲು ಹಾಜರಾಗಬೇಕು) ಸ್ಥಳ : ಬ್ಯಾಂಕ್ ಆಫ್ ಬರೋಡ, ಪ್ರಾದೇಶಿಕ ಕಚೇರಿ, ಬೆಂಗಳೂರು ಸೆಂಟ್ರಲ್, ವಿಜಯ ಟವರ್, ಎಂ.ಜಿ ರಸ್ತೆ, ಟ್ರಿನಿಟಿ ವೃತ್ತ, ಬೆಂಗಳೂರು ವಿಧಾನ : ವಿಡಿಯೋ ಕಾನ್ಫರೆನ್ಸ್
2.		ಶ್ರೀಮತಿ ಶಿವಾನಿ ಜೈನ್	

ಸಹಿ/– ಮಹಾ ಪ್ರಭಂದಕರು

ಇನ್ನೋವಾಗ್ರೋ ಫುಡ್ಸ್ ಎಲ್‌ಎಲ್‌ಪಿ
ನೊಂದಾಯಿತ ಕಚೇರಿ : 5 5ನೇ ಕ್ರಾಸ್, ನವ್ಯ ನಗರ ಜಕ್ಕೂರು ಬೆಂಗಳೂರು–560064
ಮಾರಾಟಕ್ಕಾಗಿ ಬಿಡ್ ಆಹ್ವಾನದ ಸೂಚನೆ
("ಎಲ್ಲಿ ಏನಿದೆಯೋ ಹಾಗೆ", "ಯಾವುದು ಇದೆಯೋ ಹಾಗೆ", "ಯಾವುದು ಇದೆಯೋ ಹಾಗೆ" ಮತ್ತು "ಯಾವುದೇ ಅವಲಂಬನೆ ಇಲ್ಲದೆ")
ಬಿಡ್ ಸಲ್ಲಿಸಲು ಕೊನೆಯ ದಿನಾಂಕ : 31ನೇ ಜುಲೈ 2025

ಇನ್ನೋವಾಗ್ರೋ ಫುಡ್ಸ್ ಎಲ್‌ಎಲ್‌ಪಿ, ಸರ್ವೆ ನಂ. 44/2, ಲಗುಮೇನ್‌ಹಳ್ಳಿ ಗ್ರಾಮ, ತೂಬ್‌ಗೆರೆ ಹೋಬಳಿ, ದೊಡ್ಡಬಳ್ಳಾಪುರ ತಾಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿ "ಎಲ್ಲಿ ಏನಿದೆಯೋ ಹಾಗೆ", "ಯಾವುದು ಇದೆಯೋ ಹಾಗೆ", "ಏನು ಇದೆಯೋ ಹಾಗೆ" ಮತ್ತು "ಯಾವುದೇ ಅವಲಂಬನೆ ಇಲ್ಲದೆ" ತನ್ನ ಕಟ್ಟಡ (ಎಂಎಸ್ ರಚನೆ ಜೊತೆಗೆ ಇನ್ಸುಲೇಟೆಡ್ ಶೀಟ್‌ಗಳು) ಮತ್ತು ಘಟಕ ಮತ್ತು ಯಂತ್ರೋಪಕರಣಗಳ ಮಾರಾಟಕ್ಕಾಗಿ ಬಿಡ್‌ಗಳನ್ನು ಆಹ್ವಾನಿಸಿದೆ.
ಮಾರಾಟವನ್ನು ಮಾರಾಟ ಪ್ರಕ್ರಿಯೆ ನಡೆಸುವ ಪ್ರಾಧಿಕಾರಿಯ ನಿರ್ದೇಶನ ಮತ್ತು ನಿಯಂತ್ರಣದ ಅನುಸಾರ ನಡೆಸಲಾಗುವುದು.
ಮಾರಾಟದ ವ್ಯಾಪ್ತಿ:
ಕಾರ್ಖಾನೆ ಆವರಣದ ಮಾರಾಟದ ಬಿಡ್ಡಿಂಗ್ "ಎಲ್ಲಿ ಏನಿದೆಯೋ ಹಾಗೆ", "ಯಾವುದು ಇದೆಯೋ ಹಾಗೆ", "ಏನು ಇದೆಯೋ ಹಾಗೆ" ಮತ್ತು "ಯಾವುದೇ ಅವಲಂಬನೆ ಇಲ್ಲದೆ" ನಡೆಯಲಿದೆ. ಹರಾಜಿಗೆ ಲಭ್ಯವಿರುವ ವಸ್ತುಗಳು ಸೇರಿವೆ ಆದೆ ಇವುಗಳಿಗೆ ಸೀಮಿತವಾಗಿಲ್ಲ
* ಕಟ್ಟಡ (ಎಂಎಸ್ ರಚನೆ ಜೊತೆಗೆ ಇನ್ಸುಲೇಟೆಡ್ ಶೀಟ್‌ಗಳು)
* ಮೆಟಲ್ ಸ್ಕ್ರ್ಯಾಪ್
* ಯಂತ್ರೋಪಕರಣಗಳ ಭಾಗಗಳು
* ಎಲೆಕ್ಟ್ರಿಕಲ್ ಬಿಡಿಭಾಗಗಳು
ಗಮನಿಸಿ: ಯಶಸ್ವಿ ಬಿಡ್ದಾರರು ಎಲ್ಲಾ ಕಸವನ್ನು ತೆರವುಗೊಳಿಸಿ, ಅನುಮೋದಿತ ಕಸದ ಅಂಗಳದಲ್ಲಿ / ಅಥವಾ ಅಗತ್ಯವಿರುವ ಯಾವುದೇ ಸ್ಥಳದಲ್ಲಿ ಬಿಡ್‌ದಾರರ ಜವಾಬ್ದಾರಿಯ ಮೇರೆಗೆ ವಿಲೇವಾರಿ ಮಾಡಬೇಕು. ಇದಕ್ಕೆ ಸಂಬಂಧಿಸಿದ ಯಾವುದೇ ಅನುಮೋದನೆಗಳು, ಅನುಸರಣೆಗಳು ಇತ್ಯಾದಿಗಳು ಯಶಸ್ವಿ ಬಿಡ್‌ದಾರರ ಸಂಪೂರ್ಣ ಜವಾಬ್ದಾರಿಯಾಗಿರುತ್ತದೆ.
ಪರಿಶೀಲನೆ :
ನಿರೀಕ್ಷಿತ ಖರೀದಿದಾರರು ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕದ ಮೊದಲು ಸೈಟ್ ಅನ್ನು ಪರಿಶೀಲಿಸಲು ಪ್ರೋತ್ಸಾಹಿಸಲಾಗುತ್ತದೆ. ಅಲ್ಲದೆ, ಸ್ಥಳದಲ್ಲಿ ಇರುವ ವಸ್ತುಗಳು/ಸಾಮಗ್ರಿಗಳ ತಾತ್ಕಾಲಿಕ ಪಟ್ಟಿಯನ್ನು ವಿನಂತಿಯ ಮೇರೆಗೆ ಸಂಭಾವ್ಯ ಖರೀದಿದಾರರೊಂದಿಗೆ ಹಂಚಿಕೊಳ್ಳಬಹುದು.
ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕದ ಮೊದಲು ಕೆಳಗೆ ಸಹಿ ಮಾಡಿದವರನ್ನು ಸಂಪರ್ಕಿಸುವ ಮೂಲಕ ಭೌತಿಕ ತಪಾಸಣೆಯನ್ನು ಏರ್ಪಡಿಸಬಹುದು.
ನಿಯಮಗಳು ಮತ್ತು ಷರತ್ತುಗಳು:
1. ಎಲ್ಲಾ ಆಸಕ್ತ ಪಾರ್ಟಿಗಳು ಜುಲೈ 31, 2025 ರೊಳಗೆ ಕೆಳಗೆ ನೀಡಿರುವ ಸಂಪರ್ಕ ಮಾಹಿತಿಯಲ್ಲಿ ಒದಗಿಸಲಾದ ಇಮೇಲ್ ಮೂಲಕ ತಮ್ಮ ಬಿಡ್ ಅನ್ನು ಸಲ್ಲಿಸಬೇಕು.
2. ಬಿಡ್‌ಗಳನ್ನು ಸೀಲ್ ಮಾಡಿ ವಿಳಾಸ: 58, 3ನೇ ಕ್ರಾಸ್ ವಿನಾಯಕನಗರ, ಹೆಬ್ಬಾಳ, ಬೆಂಗಳೂರು 560024 ಇಲ್ಲಿಗೆ ಸಲ್ಲಿಸಬೇಕು.
3. ಇಮೇಲ್: innovagrofoods@hotmail.com ಜುಲೈ 31, 2025 ರೊಳಗೆ.
4. ಬಿಡ್ಡಿಂಗ್ ಪ್ರಕ್ರಿಯೆ ಮುಗಿದ 7 ದಿನಗಳ ಒಳಗೆ ಪೂರ್ಣ ಪಾವತಿಯನ್ನು ಮಾಡಬೇಕು.
5. ಗೆದ್ದಿರುವ ಬಿಡ್‌ದಾರರು ಖರೀದಿಸಿದ ವಸ್ತುಗಳನ್ನು 15 ದಿನಗಳ ಒಳಗೆ ತೆಗೆದುಕೊಂಡು ಹೋಗುವ ಜವಾಬ್ದಾರಿಯನ್ನು ಹೊಂದಿರುತ್ತಾರೆ.
6. ಎಲ್ಲಾ ವಸ್ತುಗಳನ್ನು "ಎಲ್ಲಿ ಏನಿದೆಯೋ ಹಾಗೆ", "ಯಾವುದು ಇದೆಯೋ ಹಾಗೆ", "ಏನು ಇದೆಯೋ ಹಾಗೆ" ಮತ್ತು "ಯಾವುದೇ ಅವಲಂಬನೆ ಇಲ್ಲದೆ" ಎಂಬ ಆಧಾರದ ಮೇಲೆ ಮಾರಾಟ ಮಾಡಲಾಗುತ್ತದೆ. ಅತೃಪ್ತಿಕರವೆಂದು ಪರಿಗಣಿಸಲಾದ ಯಾವುದೇ ಬಿಡ್ ಅನ್ನು ತಿರಸ್ಕರಿಸುವ ಹಕ್ಕನ್ನು ಇನ್ನೋವಾಗ್ರೋ ಫುಡ್ಸ್ ಎಲ್‌ಎಲ್‌ಪಿ ಕಾಯ್ದಿರಿಸಿದೆ.
ಹೆಚ್ಚಿನ ವಿಚಾರಣೆ ಮತ್ತು ನೋಂದಣಿಗಾಗಿ, ದಯವಿಟ್ಟು ಸಂಪರ್ಕಿಸಿ:
ಶ್ರೀಮತಿ ರಮ್ಯ
ಮೊಬೈಲ್ : 9353167589
ಇ–ಮೇಲ್ : innovagrofoods@hotmail.com
ದಿನಾಂಕ: 09.07.2025
ಸ್ಥಳ : ಬೆಂಗಳೂರು
ಸಹಿ/–
ಪಾಲುದಾರ/ಇನ್ನೋವಾಗ್ರೋ ಫುಡ್ಸ್ ಎಲ್‌ಎಲ್‌ಪಿ

ದೊಡ್ಡನಾಗಮಂಗಲದಲ್ಲಿ ಕೃತ್ಯ | ಮೂವರು ಆರೋಪಿಗಳ ಬಂಧನ

ಮಹಿಳೆ ಮೇಲೆ ಗ್ಯಾಂಗ್‌ರೇಪ್, ಹಣ ಸುಲಿಗೆ

ಬೆಂಗಳೂರು: ನಗರದಲ್ಲಿ ಮಹಿಳೆ ಮೇಲೆ ಸಾಮೂಹಿಕ ಅತ್ಯಾಚಾರವೆಸಗಿ ಬಳಿಕ ಹಣ ಸುಲಿಗೆ ಮಾಡಿದ್ದಲ್ಲದೆ ಮನೆಯಲ್ಲಿದ್ದ ಪಿಠೋಪಕರಣಗಳನ್ನು ದೋಚಿ ಪರಾರಿಯಾಗಿರುವ ಘಟನೆ ತಡವಾಗಿ ಬೆಳಕಿಗೆ ಬಂದಿದೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡ ಪರಪ್ಪನ ಅಗ್ರಹಾರ ಠಾಣೆ ಪೊಲೀಸರು ಮೂವರು ಆರೋಪಿಗಳನ್ನು ಬಂಧಿಸಿ ಹೆಚ್ಚಿನ ವಿಚಾರಣೆಗೊಳಪಡಿಸಿದ್ದಾರೆ.

35 ವರ್ಷದ ಮಹಿಳೆ ನೀಡಿದ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ರಘು, ಕೆಂಚೇಗೌಡ ಹಾಗೂ ಮಾದೇಶ್ ಎಂಬುವರನ್ನು ಬಂಧಿಸಿದ್ದಾರೆ. ಬಂಧಿತರೆಲ್ಲರೂ ಹೆಬ್ಬಗೋಡಿ ಸುತ್ತಮುತ್ತಲಿನ ನಿವಾಸಿಗಳಾಗಿದ್ದಾರೆ. ದೊಡ್ಡನಾಗಮಂಗಲದ ಲೇಔಟ್‌ನಲ್ಲಿರುವ ಮನೆಯೊಂದರಲ್ಲಿ ಜುಲೈ 7ರಂದು ಸಂಜೆ ಈ ಕೃತ್ಯ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

20 ಸಾವಿರ ಹಣ ಸುಲಿಗೆ: ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿರುವ ಸಂತ್ರಸ್ತೆ, ನಗರದ ನಿವಾಸಿಯಾಗಿದ್ದಾರೆ. ಜುಲೈ 7ರಂದು ಆಕೆ ತನ್ನ ಸ್ನೇಹಿತನ ಮನೆಯಲ್ಲಿರುವಾಗ ಆರೋಪಿಗಳು ಎಂಟ್ರಿ ಕೊಟ್ಟಿದ್ದಾರೆ. ಪೊಲೀಸರಿಗೆ ದೂರು ನೀಡುವುದಾಗಿ ಮಹಿಳೆ ಮತ್ತು ಆಕೆಯ ಸ್ನೇಹಿತನನ್ನು ಬೆದರಿಸಿ ಮಹಿಳೆ ಮೇಲೆ ಸಾಮೂಹಿಕ ಅತ್ಯಾಚಾರವೆಸಗಿದ್ದಾರೆ. ಈ ದುಷ್ಕೃತ್ಯದ ಬಳಿಕ ಅವರಿಂದ 20 ಸಾವಿರ ಹಣ ಸುಲಿಗೆ ಮಾಡಿ ಬೆಟ್ಟಿಂಗ್ ಆ್ಯಪ್ ವ್ಯಾಲೆಟ್‌ವೊಂದಕ್ಕೆ ಹಣ ಹಾಕಿಸಿಕೊಂಡಿದ್ದಾರೆ. ಅಲ್ಲದೆ, ಮನೆಯಲ್ಲಿದ್ದ ಫ್ರಿಡ್ಜ್ ಹಾಗೂ ವಾಷಿಂಗ್ ಮಷಿನ್, ಎರಡು ಮೊಬೈಲ್ ಸೇರಿದಂತೆ ಮನೆಯಲ್ಲಿದ್ದ ಪೀಠೋಪಕರಣ ದೋಚಿದ್ದಾರೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

- ಆರೋಪಿ ರಘು, ಕೆಂಚೇಗೌಡ, ಮಾದೇಶ್ ಬಂಧನ
- ಫ್ರಿಡ್ಜ್, ವಾಷಿಂಗ್ ಮಷಿನ್, 2 ಮೊಬೈಲ್ ದೋಚಿ ಪರಾರಿ
- ಸಿಸಿಟಿವಿ ಸಾಕ್ಷ್ಯಾಧಾರ ಕಲೆಹಾಕುತ್ತಿರುವ ಪೊಲೀಸರು

ಹಿಂಬಾಲಿಸಿ ಮನೆಗೆ ನುಗ್ಗಿದ ಕಿಡಿಗೇಡಿಗಳು

ಸಂತ್ರಸ್ತೆಯು ಸ್ನೇಹಿತನ ಮನೆಗೆ ಹೋಗುವಾಗ ಮೂವರು ಆರೋಪಿಗಳು ದ್ವಿಚಕ್ರ ವಾಹನದಲ್ಲಿ ಹಿಂಬಾಲಿಸಿದ್ದಾರೆ. ಬಳಿಕ ಸ್ನೇಹಿತನ ಮನೆಗೆ ಹೋಗಿ ಮಹಿಳೆಯನ್ನು ಬೆದರಿಸಿ ಈ ಕೃತ್ಯ ಎಸಗಿದ್ದಾರೆ. ಘಟನೆ ಸಂಬಂಧ ಪ್ರಕರಣ ದಾಖಲಿಸಿಕೊಂಡ ಪೊಲೀಸರು ಸಿಸಿಟಿವಿ ದೃಶ್ಯ ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ. ಆರೋಪಿಗಳ ವಿರುದ್ಧ ಈ ಹಿಂದೆ ಅಪರಾಧ ಪ್ರಕರಣಗಳು ದಾಖಲಾಗಿವೆಯಾ ಎಂಬುದರ ಬಗ್ಗೆ ಪರಿಶೀಲಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಹೆಬ್ಬಾಳ ವಿಧಾನಸಭಾ ಕ್ಷೇತ್ರದ ಎಲ್ಲ ಸರಕಾರಿ ಶಾಲೆಯ ವಿದ್ಯಾರ್ಥಿಗಳಿಗೆ ಮಂಗಳವಾರ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಒಂದು ಲಕ್ಷಕ್ಕೂ ಅಧಿಕ ಉಚಿತ ನೋಟ್ ಪುಸ್ತಕ ವಿತರಣೆ ಮಾಡಿದರು. ಈ ಸಂದರ್ಭದಲ್ಲಿ ಬಿಬಿಎಂಪಿ ಅಧಿಕಾರಿಗಳು, ಯುವ ಕಾಂಗ್ರೆಸ್ ಮುಖಂಡ ಸಂಜಯ್, ಸ್ಥಳೀಯ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಉಪಸ್ಥಿತರಿದ್ದರು.

ಮಾನ್ಯ ಗೌರವಾನ್ವಿತ 2ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕನಕಪುರ
ಸಿ.ಮಿಸ್.ನಂ. 288/2025
ಅರ್ಜಿದಾರರು: 1. ಶ್ರೀಮತಿ ಗೌರಮ್ಮ ಕೋಂ ಲೇ ವೈರಮುಡಿ ವಯಸ್ಸು 53 ವರ್ಷ, 2. ಶ್ರೀ ಶಶಿಕುಮಾರ್ ಬಿನ್ ಲೇ ವೈರಮುಡಿ ವಯಸ್ಸು 30 ವರ್ಷ, 3. ಶ್ರೀ ಕಿರಣ್ ಬಿನ್ ಲೇ ವೈರಮುಡಿ ವಯಸ್ಸು 26 ವರ್ಷ, ವಾಸ: ಸೋಮದ್ಯಾಪನಹಳ್ಳಿ ಗ್ರಾಮ ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ
ವಿರುದ್ಧ
ಎದುರುದಾರರು: 1. ಜನನ ಮತ್ತು ಮರಣ ನೋಂದಾಣಾಧಿಕಾರಿ, ತಹಶಿಲ್ದಾರರು, ಕನಕಪುರ ತಾಲ್ಲೂಕು ರಾಮನಗರ ಜಿಲ್ಲೆ 2. ಗ್ರಾಮ ಲೆಕ್ಕಾಧಿಕಾರಿ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ
ಪತ್ರಿಕಾ ಪ್ರಕಟಣೆ
ಅರ್ಜಿದಾರರು ಮಾನ್ಯ ಘನ ನ್ಯಾಯಾಲಯದಲ್ಲಿ ಸದರಿ ಪ್ರಕರಣವನ್ನು ಸಲ್ಲಿಸುವುದರ ಮೂಲಕ ತಮ್ಮ 1ನೇ ಮತ್ತು 3ನೇ ಅರ್ಜಿದಾರರ ಗಂಡ ಮತ್ತು 2 ಮತ್ತು 3ನೇ ಅರ್ಜಿದಾರರ ತಂದೆಯವಾರಾದ ಶ್ರೀ ಲೇ. ವೈರಮುಡಿ ಬಿನ್ ಲೇ. ದಾಸಯ್ಯ ರವರು ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕಸಬಾ ಹೋಬಳಿ, ಹೆಚ್.ಕೊತ್ತನೂರು ಅಂಚೆ, ಸೋಮದ್ಯಾಪನಹಳ್ಳಿ ಗ್ರಾಮದ ಮೂಲ ನಿವಾಸಿಯಾಗಿದ್ದು, ಇವರು ದಿನಾಂಕ: 15–03–2010 ರಂದು ಮೇಲ್ಕಂಡ ಸೋಮದ್ಯಾಪನಹಳ್ಳಿ ಗ್ರಾಮದಲ್ಲಿ ಮರಣ ಹೊಂದಿರುತ್ತಾರೆ. ಸದರಿಯವರಿಗೆ ಸಂಬಂದಿಸಿದ ಮರಣ ಪ್ರಮಾಣ ಪತ್ರವನ್ನು ಪಡೆಯುವ ಉದ್ದೇಶಕ್ಕಾಗಿ ಸದರಿ ಪ್ರಕರಣವನ್ನು ಮಾನ್ಯ ಘನ ನ್ಯಾಯಾಲದಲ್ಲಿ ಅರ್ಜಿದಾರರು ಅರ್ಜಿಯನ್ನು ಸಲ್ಲಿಸಿಕೊಂಡಿರುತ್ತಾರೆ. ಸದರಿ ಪ್ರಕರಣವನ್ನು ದಿನಾಂಕ 07/08/2025 ರಂದು ಗೊತ್ತು ಪಡಿಸಿದ್ದು ಆ ದಿನದಂದು ಸದರಿ ಪ್ರಕರಣಕ್ಕೆ ಸಂಬದಿಸಿದಂತೆ ಯಾರದಾದರು ತಕಾರಾರು ಇದ್ದಲ್ಲಿ ಯಾವುದೇ ಪಕ್ಷಗಾರರು ತಾವಾಗಲ್ಲಿ ಅಥವಾ ತಮ್ಮ ಪರ ವಕೀಲರಾದಲ್ಲಿ ನ್ಯಾಯಾಲಯವು ನಿಗದಿ ಪಡಿಸಿರುವ ಆ ದಿನ ಬೆಳ್ಳಿಗೆ 11 ಗಂಟೆಗೆ ಹಾಜರಾಗಿ ತಮ್ಮ ಪರ ತಕಾರಾರು ಸಲ್ಲಿಸಬಹುದಾಗಿರುತ್ತದೆ, ಒಂದು ವೇಳೆ ಯಾರು ತಕರಾರು ಸಲ್ಲಿಸಿಲ್ಲದ ಪಕ್ಷದಲ್ಲಿ ನ್ಯಾಯಾಲಯವು ಯಾರದೂ ತಕರಾರು ಇಲ್ಲವೆಂದು ಆದೇಶ ಹೊರಡಿಸುತ್ತದೆ. ಎಂದು ತಿಳಿಯುವುದು. ದಿನಾಂಕ: ಜುಲೈ 07, 2025ರಂದು ನನ್ನ ಸ್ವಹಸ್ತಕ್ಷರ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.
ಶಿರಸ್ತೆದಾರರು,
2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಯೋಗೇಶ್.ಪಿ
ವಕೀಲರು
ಸ್ಥಳ : ಕನಕಪುರ

ಕೇಂದ್ರದ ಮಲತಾಯಿ ಧೋರಣೆಯಿಂದ ರಾಜ್ಯಕ್ಕೆ ಅನ್ಯಾಯ: ಶರತ್ ಬಚ್ಚೇಗೌಡ

ಅಮೆರಿಕ ಪ್ರವಾಸದಿಂದ ರಾಜ್ಯಕ್ಕೆ 5500 ಕೋಟಿ ಬಂಡವಾಳ

ಬೆಂಗಳೂರು: ಅಮೆರಿಕದ 3 ಪ್ರಮುಖ ನಗರಗಳಾದ ಬೋಸ್ಟನ್, ನ್ಯೂಯಾರ್ಕ್ ಮತ್ತು ಸ್ಯಾನ್‌ಫ್ರಾನ್ಸಿಸ್ಕೊ ಪ್ರವಾಸದಿಂದ ರಾಜ್ಯಕ್ಕೆ 5500 ಕೋಟಿ ರು. ಬಂಡವಾಳ ಹೂಡಿಕೆ ಬಂದಿದೆ ಎಂದು ಕಿಯೋನಿಕ್ಸ್ ಅಧ್ಯಕ್ಷ ಶರತ್ ಬಚ್ಚೇಗೌಡ ಹೇಳಿದರು.

ವಿಧಾನಸೌಧದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರಕಾರದ ನಿಯೋಗವು ಅಮೆರಿಕದ ಬೋಸ್ಟನ್, ನ್ಯೂಯಾರ್ಕ್ ಮತ್ತು ಸ್ಯಾನ್‌ಫ್ರಾನ್ಸಿಸ್ಕೊ ನಗರಗಳಲ್ಲಿ ಬಹುರಾಷ್ಟ್ರೀಯ ಕಂಪನಿಗಳಿಂದ ಸ್ಟಾರ್ಟ್‌ಅಪ್‌ಗಳವರೆಗೆ – ಹಿರಿಯ ಉದ್ದಿಮೆ ಸಿಇಒಗಳೊಂದಿಗೆ ಮುಖಾಮುಖಿ ಸಭೆಗಳು, ಶೈಕ್ಷಣಿಕ ಭೇಟಿಗಳು, ತಾತ್ಕಾಲಿಕ ಉದ್ಯಮ ಕಾರ್ಯಕ್ರಮಗಳು ಮತ್ತು ಗುಪ್ತ ಉನ್ನತ ಮಟ್ಟದ ಅಧಿಕಾರಿಗಳೊಂದಿಗಿನ ದುಂಡುಮೇಜಿನ ಸಭೆಗಳು ಸೇರಿದಂತೆ ಪ್ರಮುಖ ಉದ್ಯಮ ವಲಯಗಳಲ್ಲಿ 120ಕ್ಕೂ ಹೆಚ್ಚು ಕಂಪನಿಗಳೊಂದಿಗೆ ಸಮಾಲೋಚನೆ ನಡೆಸಲಾಗಿದೆ. ಈ ರೋಡ್ ಶೋ ಅಂದಾಜು 5,500 ಕೋಟಿ ರು. ಹೂಡಿಕೆ ಸೆಳೆಯುವ ನಿರೀಕ್ಷೆ ಮೂಡಿಸಿದೆ. ಪ್ರತಿಭೆಗಳ ನೇಮಕಾತಿ, ಮೂಲಸೌಕರ್ಯ ವೆಚ್ಚ, ಆರ್‌ಡಿ ಹೂಡಿಕೆಗಳು ಮತ್ತು ಸಹಭಾಗಿತ್ವದ ಯೋಜನೆಗಳ ರೂಪದಲ್ಲಿ ಸುಮಾರು 7,200 ಜನರಿಗೆ ಉದ್ಯೋಗ ಸೃಷ್ಟಿ ಹಾಗೂ ಮತ್ತಷ್ಟು ಹೆಚ್ಚುವರಿ ಹೂಡಿಕೆಗಳನ್ನು ನಿರೀಕ್ಷಿಸಲಾಗಿದೆ. ರೋಡ್ ಶೋ ವೇಳೆ ಕಂಪನಿಗಳೊಂದಿಗೆ ತಿಳುವಳಿಕೆ ಪತ್ರ ಮತ್ತು ಉದ್ದೇಶ ಪತ್ರಕ್ಕೆ ಸಹಿ ಹಾಕಲಾಯಿತು ಎಂದು ಹೇಳಿದರು.

ಸಚಿವ ಪ್ರಿಯಾಂಕ್ ಖರ್ಗೆ ಮಾತನಾಡಿ, ಅಮೆರಿಕದಲ್ಲಿ ಇರುವ ಎಸ್ ಸ್ಯಾನ್‌ಫ್ರಾನ್ಸಿಸ್ಕೊ ಕಾರ್ಯಕ್ರಮದಲ್ಲಿ ಸ್ಯಾನ್‌ಫ್ರಾನ್ಸಿಸ್ಕೊ ವ್ಯಾಪ್ತಿಯ ಕಂಪನಿಗಳ ಗುಂಪು ಮಾಡಿ ಆ ನಗರಕ್ಕೆ ಬರುವ ಸಮಸ್ಯೆಗಳಿಗೆ ಸಲಹೆ ಮತ್ತು ಪರಿಹಾರ ನೀಡುತ್ತವೆ. ಇದೇ ರೀತಿ ಬೆಂಗಳೂರಿನಲ್ಲಿ ಎಸ್ ಬೆಂಗಳೂರು ವಿಶೇಷ ಯೋಜನೆ ಮಾಡುವ ಬಗ್ಗೆ ಚರ್ಚೆ ಆಗಿದೆ. ಬೆಂಗಳೂರಿನಲ್ಲಿರುವ ಹಲವಾರು ಕಂಪನಿಗಳ ಸಹಭಾಗಿತ್ವದಲ್ಲಿ ಬೆಂಗಳೂರು ಸಮಸ್ಯೆಗಳ ಪಟ್ಟಿ ಮಾಡಿ ಅದಕ್ಕೆ ಪರಿಹಾರ ಹುಡುಕುವ ಕೆಲಸ ಶುರು ಮಾಡಲಾಗಿದೆ. ಇದಕ್ಕೆ ಎಸ್ ಬೆಂಗಳೂರು ಕಾರ್ಯಕ್ರಮ ಎಂದು ಹೆಸರಿಡಲಾಗಿದೆ. ಪರಿಹಾರಗಳು ಸರಿಯಾದರೆ ಸರಕಾರವೇ ಇದಕ್ಕೆ ಸಹಕಾರ ಕೊಡಲಾಗುತ್ತದೆ. ದೊಡ್ಡ ಪ್ರಮಾಣದಲ್ಲಿ ನಾಗರೀಕರು, ತಜ್ಞರು ಸೇರಿ ಸಮಸ್ಯೆಗೆ ಪರಿಹಾರ ಕೊಡುವ ಕೆಲಸ ಇದಾಗಲಿದೆ. ಆದಷ್ಟು ಬೇಗ ಈ ಕಾರ್ಯಕ್ರಮ ಅನುಷ್ಠಾನ ಮಾಡುತ್ತೇವೆ ಎಂದು ತಿಳಿಸಿದರು.

ವಿಧಾನಸೌಧದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಕಿಯೋನಿಕ್ಸ್ ಅಧ್ಯಕ್ಷ ಶರತ್ ಬಚ್ಚೇಗೌಡ ಮಾತನಾಡಿದರು. ಈ ವೇಳೆ ಸಚಿವ ಪ್ರಿಯಾಂಕ್ ಖರ್ಗೆ ಇದ್ದರು.

> ರಾಜ್ಯಕ್ಕೆ ಕಳೆದ ವರ್ಷ 30 ಸಾವಿರ ಕೋಟಿ ರು. ಬಂಡವಾಳ ತಂದಿದ್ದೆವು. ಇದರಲ್ಲಿ ಈಗಾಗಲೇ 23 ಸಾವಿರ ಕೋಟಿ ರು. ಬಂಡವಾಳ ಬಂದಿದೆ. ಈ ಬಾರಿ ಸುಮಾರು 7100 ಕೋಟಿ ಬಂಡವಾಳ ಹೂಡಿಕೆ ಒಪ್ಪಂದ ಆಗಿದೆ. 9700 ಉದ್ಯೋಗಗಳು ಸೃಷ್ಟಿಯಾಗಲಿವೆ. ಕೇಂದ್ರ ಸರಕಾರವು ಅಮೆರಿಕ ಪ್ರವಾಸಕ್ಕೆ ಅನುಮತಿ ಕೊಡಲು ನಿರಾಕರಿಸಿದ್ದರಿಂದ ಸ್ವಲ್ಪ ಹಿನ್ನಡೆ ಆಗಿದೆ.
> –ಪ್ರಿಯಾಂಕ್ ಖರ್ಗೆ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾ ಸಚಿವ

ಅನುಮತಿ ನಕಾರ ತಗ್ಗಿದ ಹೂಡಿಕೆ

ಪ್ರಿಯಾಂಕ್ ಖರ್ಗೆ ಅವರಿಗೆ ಅಮೆರಿಕ ಭೇಟಿಗೆ ಅನುಮತಿಯನ್ನು ಕೇಂದ್ರ ಕೊಟ್ಟರಲಿಲ್ಲ. ಇದರಿಂದ ಕೆಲವು ಸಭೆಗಳು ಆಗಲಿಲ್ಲ. ಕೇಂದ್ರ ಸರಕಾರದ ಮಲತಾಯಿ ಧೋರಣೆಯಿಂದ ರಾಜ್ಯಕ್ಕೆ ಅನ್ಯಾಯ ಆಗಿದೆ. ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಅನುಮತಿ ಕೊಡದೇ ಹೋಗಿದ್ದಕ್ಕೆ ರಾಜ್ಯದ ಬಂಡವಾಳ ಹೂಡಿಕೆಗೆ ಸಮಸ್ಯೆ ಆಯಿತು. ಕೇಂದ್ರ ಸರಕಾರದ ಧೋರಣೆಯಿಂದ ರಾಜ್ಯಕ್ಕೆ ಅನ್ಯಾಯ ಆಗಿದೆ ಎಂದು ಶರತ್ ಬಚ್ಚೇಗೌಡ ಆರೋಪಿಸಿದರು.

ಜಿಲ್ಲಾವಾರು ಅಪಹರಣಕ್ಕೊಳಗಾದ, ಕಾಣೆಯಾದ ಮಕ್ಕಳ ಬಗ್ಗೆ ಪರಿಶೀಲನೆ

ಮಕ್ಕಳ ಅಪಹರಣ, ನಾಪತ್ತೆ ಪ್ರಕರಣ ಪತ್ತೆಗೆ ಎಸ್‌ಟಿಎಫ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದಲ್ಲಿ ಮಕ್ಕಳ ಅಪಹರಣ, ನಾಪತ್ತೆ ಮತ್ತು ಪತ್ತೆಯಾಗದೇ ಉಳಿದಿರುವ ಪ್ರಕರಣಗಳನ್ನು ಸಮರ್ಥವಾಗಿ ನಿಭಾಯಿಸಿ, ಮಕ್ಕಳ ಹಕ್ಕುಗಳು ಉಲ್ಲಂಘನೆಯಾಗದಂತೆ ನಿಗಾ ವಹಿಸಲು ರಾಜ್ಯ ಸರಕಾರ ವಿಶೇಷ ಕಾರ್ಯಪಡೆ ರಚಿಸಲು ನಿರ್ಧರಿಸಿದೆ.

ಕಳೆದ ಜೂ.20 ರಂದು ವಿಧಾನ ಮಂಡಲದಲ್ಲಿ ನಡೆದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿ ಸಭೆಯಲ್ಲಿ ಮಕ್ಕಳ ನಾಪತ್ತೆ ಪ್ರಕರಣ, ನಾಪತ್ತೆಗೆ ಕಾರಣಗಳು ಹಾಗೂ ಪತ್ತೆಯಾಗದೆ ಬಾಕಿಯಿರುವ ಪ್ರಕರಣಗಳ ಕುರಿತು ಗಂಭೀರ ಚರ್ಚೆ ನಡೆದಿದ್ದು, ನಾಪತ್ತೆಯಾದ ಮಕ್ಕಳ ಪತ್ತೆಗೆ ಹೆಚ್ಚು ಆದ್ಯತೆ ನೀಡುವಂತೆ ಸೂಚಿಸಲಾಗಿತ್ತು. ಆ ಹಿನ್ನೆಲೆಯಲ್ಲಿ ಜೂ. 24 ರಂದು ವಿವಿಧ ಇಲಾಖೆಗಳೊಂದಿಗೆ ಪರಿಶೀಲನೆ ನಡೆಸಿದ್ದು, ಜಿಲ್ಲಾವಾರು ಇತ್ಯರ್ಥವಾಗದೆ ಬಾಕಿ ಉಳಿದಿರುವ ಪ್ರಕರಣಗಳನ್ನು ಅವಲೋಕಿಸಲಾಗಿದೆ. ಮಕ್ಕಳ ನಾಪತ್ತೆಗೆ ಸಂಬಂಧಿಸಿದಂತೆ ಪ್ರತಿ ತಿಂಗಳು ಕಾನೂನು ಸೇವಾ ಪ್ರಾಧಿಕಾರಕ್ಕೆ ಮಾಹಿತಿ ಒದಗಿಸುವ ನಿಟ್ಟಿನಲ್ಲಿ ಜಿಲ್ಲಾ ಮಟ್ಟದ ಕಾರ್ಯಪಡೆಗಳನ್ನು ರಚಿಸಲಾಗಿದೆ.

ಜಿಲ್ಲಾವಾರು ಅಪಹರಣಕ್ಕೊಳಗಾದ ಮತ್ತು ಕಾಣೆಯಾದ ಮಕ್ಕಳ ಬಗ್ಗೆ ದಾಖಲಾಗಿರುವ ದೂರುಗಳನ್ನು ಈ ಕಾರ್ಯಪಡೆ ಪರಿಶೀಲಿಸಲಿದೆ. ಕಾರ್ಯಪಡೆಗೆ ಬೆಂಗಳೂರು ನಗರ ಜಿಲ್ಲೆಯ ಪೊಲೀಸ್ ಆಯುಕ್ತರ ವ್ಯಾಪ್ತಿಯಲ್ಲಿ ಎಸಿಪಿ ಹಾಗೂ ಉಳಿದ ಎಲ್ಲಾ ಜಿಲ್ಲೆಗಳಲ್ಲಿ ಎಸ್‌ಪಿ ಹಾಗೂ ಪೊಲೀಸ್ ಆಯುಕ್ತರು ಅಧ್ಯಕ್ಷರಾಗಿರುತ್ತಾರೆ. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ, ಅಪರ ಜಿಲ್ಲಾಧಿಕಾರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕರು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಪ ನಿರ್ದೇಶಕರು, ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷರು, ಜಿಲ್ಲಾ ಬಾಲ ನ್ಯಾಯ ಮಂಡಳಿಯ ಒಬ್ಬರು ಸದಸ್ಯರಾಗಿ ಕಾರ್ಯ ನಿರ್ವಹಿಸಲಿದ್ದಾರೆ. ಮಕ್ಕಳ ವಿಶೇಷ ಪೊಲೀಸ್ ಘಟಕದ ಮುಖ್ಯಸ್ಥರು, ಮಾನವ ಕಳ್ಳ ಸಾಗಾಣಿಕೆ ವಿರೋಧಿ ಘಟಕ, ಪ್ಯಾರಾ ಲೀಗಲ್ ವಾಲಂಟಿಯರ್ಸ್, ಮಕ್ಕಳ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಎರಡು ಸ್ವಯಂ ಸೇವಾ ಸಂಸ್ಥೆಗಳು ಸದಸ್ಯತ್ವ ಹೊಂದಿರುತ್ತವೆ. ಜಿಲ್ಲಾ ಮಕ್ಕಳ ರಕ್ಷಣಾಧಿ ಕಾರಿಯು ಸದಸ್ಯ ಕಾರ್ಯದರ್ಶಿ ಆಗಿರಲಿದ್ದಾರೆ ಎಂದು ಸರಕಾರದ ಪ್ರಕಟಣೆ ತಿಳಿಸಿದೆ.

ಕಾರ್ಯಪಡೆಯ ಜವಾಬ್ದಾರಿಗಳೇನು ?

- ಕಾರ್ಯಪಡೆಯು ಪ್ರತಿ ತಿಂಗಳು ಸಭೆ ಕರೆದು ಜಿಲ್ಲೆಯಲ್ಲಿ ದಾಖಲಾದ ಮಕ್ಕಳ ಅಪಹರಣ, ಕಾಣೆಯಾದ ಮಕ್ಕಳ ದೂರುಗಳ ಕುರಿತಂತೆ ಪ್ರಗತಿ ಪರಿಶೀಲನಾ ಸಭೆ ನಡೆಸಬೇಕು.
- ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಅದೇ ತಿಂಗಳ ಅಂತ್ಯದೊಳಗೆ ಮಕ್ಕಳ ರಕ್ಷಣಾ ನಿರ್ದೇಶನಾಲಯಕ್ಕೆ ಕಡ್ಡಾಯವಾಗಿ ವರದಿ ಸಲ್ಲಿಸಬೇಕು.
- ಕಾಣೆಯಾದ ಮಕ್ಕಳ ಪೋಷಕರನ್ನು ಸಭೆಗೆ ಕರೆದು ದೂರಿಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿ ಪಡೆದು ಮಗುವಿನ ಪತ್ತೆಗೆ ಕ್ರಮ ವಹಿಸುವುದು ಹಾಗೂ ಪೋಷಕರಿಗೆ ಆಪ್ತ ಸಮಾಲೋಚನೆ ಮೂಲಕ ನೈತಿಕ ಬೆಂಬಲ ಮತ್ತು ಮಾನಸಿಕ ಧೈರ್ಯ ತುಂಬಬೇಕು.
- ಜಿಲ್ಲೆಯಲ್ಲಿ ಹಲವು ವರ್ಷಗಳಿಂದ ಪತ್ತೆ ಹಚ್ಚಲು ಸಾಧ್ಯವಾಗದ ಪ್ರಕರಣಗಳ ಕುರಿತು ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಜಿಲ್ಲಾ ಮಟ್ಟದಲ್ಲಿ ವಿಶೇಷ ಆಂದೋಲನ ಆಯೋಜಿಸಿ, ಅನುಪಾಲನೆ ಮಾಡಬೇಕು.
- ಅಪಹರಣ ಮತ್ತು ಕಾಣೆಯಾದ ಮಕ್ಕಳ ಕಳ್ಳ ಸಾಗಾಣಿಕೆ ಕುರಿತಂತೆ ಸ್ವಸಹಾಯ ಗುಂಪುಗಳು, ಸಮುದಾಯಗಳನ್ನು ಒಳಗೊಂಡಂತೆ ಅರಿವು ಕಾರ್ಯಕ್ರಮ ಮತ್ತು ಚಟುವಟಿಕೆ ಹಮ್ಮಿಕೊಳ್ಳುವುದು.
- ಅಪಹರಣದ ಹಿನ್ನೆಲೆಗಳ ವಿಶ್ಲೇಷಣೆ, ಮಕ್ಕಳ ಮೇಲಾಗುವ ಪರಿಣಾಮಗಳ ಕುರಿತು ಅಧ್ಯಯನ ಮತ್ತು ಮೌಲ್ಯಮಾಪನ ನಡೆಸಿ ಸರಕಾರಕ್ಕೆ ವರದಿ ಸಲ್ಲಿಸಬೇಕು.

ಸುರ್ಜೇವಾಲ ಭೇಟಿಯಾದ ನಿಶಾ ಯೋಗೇಶ್ವರ

ಬೆಂಗಳೂರು: ಕಾಂಗ್ರೆಸ್ ಶಾಸಕ ಸಿ.ಪಿ. ಯೋಗೇಶ್ವರ ಅವರ ವಿರುದ್ಧ ಅವರ ಪುತ್ರಿ ನಿಶಾ ಯೋಗೇಶ್ವರ ಹಾಗೂ ಮಾಜಿ ಪತ್ನಿ ಮಂಜುಳಾ ಅವರು ಭೇಟಿ ಮಾಡಿ ಮಾತುಕತೆ ನಡೆಸಿರುವುದು ಭಾರಿ ಕುತೂಹಲಕ್ಕೆ ಕಾರಣವಾಗಿದೆ. ಬುಧವಾರ ಕೆಪಿಸಿಸಿ ಕಚೇರಿಗೆ ಆಗಮಿಸಿದ ನಿಶಾ ಹಾಗೂ ಅವರ ತಾಯಿ ಮಂಜುಳಾ ಅವರು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರ ಜತೆ ಮಾತುಕತೆ ನಡೆಸಿ ಮಾಹಿತಿಯನ್ನು ನೀಡಿದರು. ಬಳಿಕ ಮಾಧ್ಯಮಗಳ ಜತೆ ಮಾತನಾಡಿದ ನಿಶಾ ಯೋಗೇಶ್ವರ, ಸಮಯ ಬಂದಾಗ ನ್ಯಾಯ ಸಿಗುತ್ತದೆ. ಅನ್ಯಾಯವನ್ನು ಎಷ್ಟು ಅಂತಾ ಸಹಿಸೋದು ಎಂದು ಆಕ್ರೋಶ ವ್ಯಕ್ತಪಡಿಸಿದರು. ಸುರ್ಜೇವಾಲ ಅವರಿಗೆ ಮಾಹಿತಿ ನೀಡಿದ್ದೇವೆ. ಈ ವಿಚಾರವಾಗಿ ನಾನು ಮಾತನಾಡುತ್ತೇನೆ ಎಂಬ ಭರವಸೆಯನ್ನು ನೀಡಿದ್ದಾರೆ ಎಂದು ತಿಳಿಸಿದ್ದಾರೆ.





ಇಂದು ಗುರುಪೂರ್ಣಿಮೆ

ಬೆಂಗಳೂರು: ಜೆಪಿ ನಗರದ ಶ್ರೀ ಸತ್ಯಗಣಪತಿ ಶಿರಡಿ ಸಾಯಿ ಟ್ರಸ್ಟ್‌ನ ವತಿಯಿಂದ ಶಿರಡಿ ಸಾಯಿ ಬಾಬಾ ಮಂದಿರದಲ್ಲಿ ಗುರುಪೂರ್ಣಿಮೆ ಹಿನ್ನೆಲೆ ಜು.10ರಿಂದ ಗುರುಪೂರ್ಣಿಮೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಗುರುಪೂರ್ಣಿಮೆ ಹಿನ್ನೆಲೆ ಶಿರಡಿ ಸಾಯಿ ಬಾಬಾರ ಮೂರ್ತಿಯನ್ನು ಹೂವು, ಹಣ್ಣುಗಳಿಂದ ಅಲಂಕರಿಸಲಾಗಿದ್ದು, ದೇವಾಲಯಕ್ಕೆ ಝುಗಮಗಿಸುವ ವಿದ್ಯುತ್ ದೀಪಾಲಂಕಾರ ಮಾಡಲಾಗಿದೆ. ಅಭಿಷೇಕ, ಅಲಂಕಾರ, ಶ್ರೀಸಾಯಿ ಮಂತ್ರಹೋಮ, ಸುಬ್ರಮಣ್ಯ ಹೋಮ, ದತ್ತಾತ್ರೆಯ ಹೋಮ, ವಿಶೇಷ ಪೂಜಾ ಕೈಂಕರ್ಯಗಳನ್ನು ಹಮ್ಮಿಕೊಳ್ಳಲಾಗಿದೆ. ಶ್ರೀಸತ್ಯ ಗಣಪತಿ ಶಿರಡಿ ಸಾಯಿ ಟ್ರಸ್ಟ್ ನ ಟ್ರಸ್ಟಿ ಸಿ.ಆರ್. ರಾಮ್ ಮೋಹನ್ ರಾಜ್ ಮಾತನಾಡಿ, ಹಿಂದಿನ ವರ್ಷಗಳಿಗಿಂತ ಈ ಬಾರಿ ವಿಭಿನ್ನ ಮತ್ತು ವಿಶೇಷವಾಗಿ ಗುರುಪೂರ್ಣಿಮೆ ಆಚರಿಸಲಾಗುತ್ತಿದೆ. ಇಡೀ ದಿನ ಭಕ್ತಾದಿಗಳಿಗೆ ವಿಶೇಷ ಪೂಜೆ ಜತೆಗೆ ಪ್ರಸಾದ ವಿತರಣೆ ಇರಲಿದೆ. ಪ್ರತಿಯೊಬ್ಬರಿಗೂ ದರ್ಶನಕ್ಕೆ ಸೂಕ್ತ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದರು.

ವಿಜಯ ಕುಮಾರ್ ನೂತನ ಗೌರವ ಕೋಶಾಧ್ಯಕ್ಷ ಆಯ್ಕೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ ನೂತನ ಗೌರವ ಕೋಶಾಧ್ಯಕ್ಷರಾಗಿ ಮಾಜಿ ಕೆನರಾ ಬ್ಯಾಂಕ್‌ನ ಡಿವಿಜನಲ್ ಮ್ಯಾನೇಜರ್ ಡಿ.ಆರ್.ವಿಜಯ ಕುಮಾರ್ ಬುಧವಾರ ಕಸಾಪ ಕೇಂದ್ರ ಕಚೇರಿಯಲ್ಲಿ ಅಧಿಕಾರ ಸ್ವೀಕರಿಸಿದರು.

ಹಣಕಾಸು, ಆಡಳಿತ ಕ್ಷೇತ್ರದಲ್ಲಿ ಅಪಾರ ಅನುಭವ ಹೊಂದಿರುವ ವಿಜಯ್ ಕುಮಾರ್ ಬ್ಯಾಂಕಿಂಗ್ ಕ್ಷೇತ್ರದಲ್ಲಿ ವಿವಿಧ ಆರ್ಥಿಕ ಮತ್ತು ಆಡಳಿತಾತ್ಮಕ ಜವಾಬ್ದಾರಿಗಳಲ್ಲಿ 38 ವರ್ಷಗಳ ಸಾರ್ಥಕ ಸೇವೆ ಸಲ್ಲಿಸಿದ್ದಾರೆ. ಕನ್ನಡ ಭಾಷೆ ಮತ್ತು ಸಾಹಿತ್ಯದ ಕುರಿತು ಅಪಾರ ಒಲವು ಹೊಂದಿರುವ ಅವರು ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಸಕ್ರಿಯರಾಗಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತಿನ ನಿಬಂಧನೆ 9(3)ರಲ್ಲಿ ಮಾನ್ಯ ಅಧ್ಯಕ್ಷರಿಗೆ ದತ್ತವಾದ ಅಧಿಕಾರದನ್ವಯ ವಿಜಯ್ ಕುಮಾರ್ ಅವರನ್ನು ಕಸಾಪ ಅಧ್ಯಕ್ಷ ನಾಡೋಜ ಡಾ.ಮಹೇಶ್ ಜೋಶಿ ನಾಮ ನಿರ್ದೇಶನ ಮಾಡಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ನೂತನ ಗೌರವ ಕೋಶಾಧ್ಯಕ್ಷರಾಗಿ ಡಿ.ಆರ್.ವಿಜಯ ಕುಮಾರ್ ಕಸಾಪ ಕೇಂದ್ರ ಕಚೇರಿಯಲ್ಲಿ ಅಧಿಕಾರ ಸ್ವೀಕರಿಸಿದರು.

ಜು.11ರಂದು ಆರ್‌ಆರ್ ನಗರದಲ್ಲಿ ಒತ್ತುವರಿ ತೆರವು

ಬೆಂಗಳೂರು: ಪಾದಚಾರಿ ಮಾರ್ಗಗಳಲ್ಲಿ ಅಡೆತಡೆಗಳಿಲ್ಲದೆ ಸಂಚಾರವನ್ನು ಕಲ್ಪಿಸುವ ಸಲುವಾಗಿ ಬಿಬಿಎಂಪಿಯಿಂದ ಜುಲೈ 11ರಂದು ಆರ್‌ಆರ್ ನಗರದ ಪಾದಚಾರಿ ಮಾರ್ಗ ಒತ್ತುವರಿ ತೆರವು ಕಾರ್ಯ ಕೈಗೊಳ್ಳಲಾಗುವುದು ಎಂದು ವಲಯ ಆಯುಕ್ತ ಸತೀಶ್ ಬಿ.ಸಿ ತಿಳಿಸಿದರು.

ನಗರದಲ್ಲಿ ಬಿಬಿಎಂಪಿ ವತಿಯಿಂದ ಪಾದಚಾರಿ ಮಾರ್ಗ ಒತ್ತುವರಿ ತೆರವು ಕಾರ್ಯಾಚರಣೆಯನ್ನು ಕೈಗೊಳ್ಳಲಿದ್ದು, ಮುಖ್ಯ ಆಯುಕ್ತರ ನಿರ್ದೇಶನದಂತೆ ಪ್ರತಿ ತಿಂಗಳ 1ನೇ ಮತ್ತು 3ನೇ ಶನಿವಾರ ಹಾಗೂ 2ನೇ ಮತ್ತು 4ನೇ ಶುಕ್ರವಾರದಂದು ಪಾದಚಾರಿ ಮಾರ್ಗ ಒತ್ತುವರಿ ತೆರವು ಕಾರ್ಯಾಚರಣೆಯನ್ನು ನಿರಂತರವಾಗಿ ಹಮ್ಮಿಕೊಳ್ಳಲಾಗಿದೆ. ಇದರ ಮುಂದುವರೆದ ಭಾಗವಾಗಿ ಇದೇ ಜುಲೈ 11ರಂದು ಆರ್‌ಆರ್ ನಗರದಲ್ಲಿ ಜುಲೈ.11ರಂದು ಪಾದಚಾರಿ ಮಾರ್ಗ ಅನಧಿಕೃತ ಒತ್ತುವರಿ ಯನ್ನು ತೆರವುಗೊಳಿಸಲು ಕ್ರಮ ವಹಿಸಲಾಗುವುದು ಎಂದು ಹೇಳಿದರು.

ಆರ್‌ಆರ್ ನಗರ ವಲಯ ವ್ಯಾಪ್ತಿಗೆ ಒಳಪಡುವ ವಿವಿಧ ಪ್ರದೇಶಗಳಲ್ಲಿ ಒತ್ತುವರಿ ಮಾಡಿರುವ ಅಂಗಡಿ ಮುಂಗಟ್ಟುಗಳು, ಬೀದಿ ಬದಿ ವ್ಯಾಪಾರಿಗಳು ಹಾಗೂ ಇನ್ನಿತರ ಅನಧಿಕೃತ ಪಾದಚಾರಿ ಮಾರ್ಗ ಒತ್ತುವರಿದಾರರು ಅತಿಕ್ರಮಿಸಿರುವ ಪಾದಚಾರಿ ಮಾರ್ಗವನ್ನು ಸ್ವಯಂ ಪ್ರೇರಿತರಾಗಿ ತೆರವುಗೊಳಿಸಲಾಗುವುದು. ಪಾದಚಾರಿ ಮಾರ್ಗ ಒತ್ತುವರಿಯನ್ನು ಸ್ವಯಂ ಪ್ರೇರಿತರಾಗಿ ತೆರವುಗೊಳಿಸದಿದ್ದಲ್ಲಿ ಬಿಬಿಎಂಪಿ ವತಿಯಿಂದ ಒತ್ತುವರಿ ತೆರವುಗೊಳಿಸಿ ಸಂಬಂಧಪಟ್ಟವರ ಮೇಲೆ ನಿಯಮಾನುಸಾರ ಕ್ರಮ ತೆಗೆದುಕೊಳ್ಳಲಾಗುವುದು ಎಂದರು.

ಒತ್ತುವರಿ ತೆರವು ಕಾರ್ಯಾಚರಣೆ ಕೈಗೊಳ್ಳಲಿರುವ ಸ್ಥಳಗಳು

- ಆರ್‌ಆರ್ ನಗರ ವಿಭಾಗದ ವಾರ್ಡ್ ಸಂಖ್ಯೆ-160 ರ ಬಿಇಎಂಎಲ್ ಕಾಂಪ್ಲೆಕ್ಸ್ (ಮಂದಾರ ರೆಸ್ಟೋರೆಂಟ್) ನಿಂದ ಬಿಎಂಟಿಸಿ ಬಸ್ ಡಿಪೋವರೆಗಿನ ಮುಖ್ಯರಸ್ತೆ
- ಕೆಂಗೇರಿ ವಿಭಾಗದ ವಾರ್ಡ್ ಸಂಖ್ಯೆ-130ರ ದೀಪಾ ಕಾಂಪ್ಲೆಕ್ಸ್ ನಿಂದ ಮುದ್ದಿನಪಾಳ್ಯ ವೃತ್ತದವರೆಗಿನ ಮುಖ್ಯರಸ್ತೆ.

ಕತ್ತು ಹಿಸುಕಿ ಹೆಂಡತಿಯ ಕೊಲೆ: ಬಂಧನ

ಬೆಂಗಳೂರು: ಪತ್ನಿ ಶಾಪಿಂಗ್‌ಗೆ ಹೋಗಿ ಬಂದಿದ್ದಕ್ಕೆ ತಗಾದೆ ತೆಗೆದು ಕತ್ತು ಹಿಸುಕಿ ಹತ್ಯೆಗೈದಿದ್ದ ಪತಿಯನ್ನು ಬೊಮ್ಮನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ಹರೀಶ್ ಬಂಧಿತ ಆರೋಪಿ. ಪದ್ಮಜಾ (29) ಕೊಲೆಯಾದವರು. ಮರುದಿನ ಆಸ್ಪತ್ರೆಯಿಂದ ಬಂದ ಮಾಹಿತಿ ಆಧರಿಸಿ ಪೊಲೀಸರು ತನಿಖೆ ನಡೆಸಿದ್ದರು. ಕೋಲಾರದ ಶ್ರೀನಿವಾಸಪುರ ಮೂಲದ ದಂಪತಿ ಇಬ್ಬರು ಮಕ್ಕಳೊಂದಿಗೆ ಬೊಮ್ಮನಹಳ್ಳಿಯಲ್ಲಿ ನೆಲೆಸಿದ್ದರು. ಹರೀಶ್ ಸಿವಿಲ್ ಎಂಜಿನಿಯರಿಂಗ್ ಪದವೀಧರನಾಗಿದ್ದ. ಉದ್ಯೋಗವಿಲ್ಲದ ಹರೀಶ್ ಪಾನಮತ್ತನಾಗಿ ಬಂದು ಪತ್ನಿಯೊಂದಿಗೆ ಜಗಳವಾಡುತ್ತಿದ್ದ. ಜು. 6ರಂದು ಶಾಪಿಂಗ್ ಹೋಗಿ ಬಂದ ಪತ್ನಿಯೊಂದಿಗೆ ಜಗಳವಾಡಿದ್ದಾನೆ. ಈ ವೇಳೆ ಇಬ್ಬರ ನಡುವಿನ ವಾಗ್ವಾದ ವಿಕೋಪಕ್ಕೆ ತಿರುಗಿ, ಹರೀಶ್ ಪತ್ನಿಯನ್ನು ಬೀಳಿಸಿ ಕತ್ತು ಹಿಸುಕಿ ಹತ್ಯೆಗೈದಿದ್ದಾನೆ ಎಂದು ತಿಳಿದು ಬಂದಿದೆ.

ಪತ್ನಿ ಜತೆ ಅನೈತಿಕ ಸಂಬಂಧದ ಹಿನ್ನೆಲೆ ಆಪ್ತ ಸ್ನೇಹಿತನ ಹತ್ಯೆ

ಬೆಂಗಳೂರಿಂದ ಊರಿಗೆ ಗೆಳೆಯನ ಕರೆತಂದು ಕೊಲೆ

ಕಲಬುರಗಿ: ತನ್ನ ಪತ್ನಿಯ ಜತೆಗೆ ಅನೈತಿಕ ಸಂಬಂಧ ಹೊಂದಿದ್ದಾನೆ ಎಂದು ಪ್ರಾಣಕ್ಕೆ ಪ್ರಾಣ ಕೊಡುವ ಆಪ್ತ ಸ್ನೇಹಿತನನ್ನೇ ಬರ್ಬರವಾಗಿ ಹತ್ಯೆ ಮಾಡಿದ ಘಟನೆ ಜಿಲ್ಲೆಯ ಕಮಲಾಪುರ ತಾಲೂಕಿನ ಮುರಡಿ ಗ್ರಾಮದಲ್ಲಿ ನಡೆದಿದೆ.

ಹೋಳಕುಂದಾ ಗ್ರಾಮ ಅಂಬರೀಶ ಗೌವನಹಳ್ಳಿ (26) ಎಂಬಾತನ ಕೊಲೆ ಮಾಡಲಾಗಿದೆ. ಅಜಯ ದಣ್ಣೂರ ಕೊಲೆ ಆರೋಪಿ. ಅಂಬರೀಶ ಹಾಗೂ ಅಜಯ ದಣ್ಣೂರ ಇಬ್ಬರು ಕಳೆದ 15 ವರ್ಷಗಳಿಂದ ಸ್ನೇಹಿತರಾಗಿದ್ದರು. ಆದರೆ, ಅಜಯ್ ಪತ್ನಿ ಜತೆಗೆ ಅಂಬರೀಶ್ ಅನೈತಿಕ ಸಂಬಂಧ ಇಟ್ಟುಕೊಂಡಿದ್ದು ತಿಳಿದು ಕಲಬುರಗಿಯಿಂದ ಬೆಂಗಳೂರಿಗೆ ಹೋಗಿ ಅಂಬರೀಶ್‌ನನ್ನು ಜತೆಗೆ ಮುರಡಿ ಗ್ರಾಮಕ್ಕೆ ಕರೆದುಕೊಂಡು ಬಂದು ವೈಯರ್‌ನಿಂದ ಕುತ್ತಿಗೆಗೆ ಬಿಗಿದು ಕೊಲೆ ಮಾಡಿದ್ದಾನೆ. ನನ್ನ ಜತೆಗೆ ಹೆಂಡತಿ ಇರುವಂತೆ ಹೇಳು ಬಾ ಎಂದು ಅಂಬರೀಷ್‌ನನ್ನು ಅಜಯ್ ನಂಬಿಸಿ, ಕಲಬುರಗಿಗೆ ಕರೆತಂದಿದ್ದಾನೆ. ಬಳಿಕ ತನ್ನ ಇತರೆ ಗೆಳೆಯರ ಸಹಕಾರದಿಂದ ವೈಯರ್‌ನಿಂದ ಕತ್ತು ಬಿಗಿದು ಕೊಲೆ ಮಾಡಿದ್ದಾನೆ. ನಂತರ ಅಜಯ್ ಪೊಲೀಸರಿಗೆ ಕರೆ ಮಾಡಿ ಕೊಲೆ ಮಾಡಿರುವ ವಿಚಾರವನ್ನು ತಿಳಿಸಿದ್ದಾನೆ. ಈ ಕುರಿತು ನರೋಣಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಸ್ಥಳಕ್ಕೆ ಎಸ್‌ಪಿ ಅಡ್ಡೂರು ಶ್ರೀನಿವಾಸಲು, ಹೆಚ್ಚುವರಿ ಎಸ್‌ಪಿ ಮಹೇಶ ಮೇಘಣ್ಣನವರ, ಡಿವೈಎಸ್‌ಪಿ ಬಸವೇಶ್ವರ ಹೀರಾ, ಸಿಪಿಐ ಪ್ರಕಾಶ ಯಾತನೂರ, ಪಿಎಸ್‌ಐ ಸಿದ್ಧರಾಮ ನಿಂಬರ್ಗಿ ಸ್ಥಳಕ್ಕೆ ಭೇಟಿ ನೀಡಿ ಘಟನೆ ಪರಿಶೀಲಿಸಿದ್ದಾರೆ.

ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್, ಡಿಸಿಆರ್‌ಇ ರವರ ಕಛೇರಿ
ನಂ. 1, ತಾಂತ್ರಿಕ ಶಿಕ್ಷಣ ಭವನ, ಮೊದಲನೇ ಮಹಡಿ, ಅರಮನೆ ರಸ್ತೆ, ಬೆಂಗಳೂರು–560001. ದೂರವಾಣಿ ಸಂಖ್ಯೆ : 080: 22268723, 22260827,
ಇ–ಮೇಲ್: dcrebangalore@gmail.com, digpcre@ksp.gov.in, aodcrehq@ksp.gov.in

ಟೆಂಡರ್ ಸಂಖ್ಯೆ : KSP/2025-26/OW/WORK-INDENT13 ದಿನಾಂಕ: 08.07.2025

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಡಿಸಿಆರ್‌ಇ., ಬೆಂಗಳೂರು ರವರಿಂದ ರಾಜ್ಯಾದ್ಯಂತ ಡಿಸಿಆರ್‌ಇ ಘಟಕಕ್ಕೆ ಅವಶ್ಯವಿರುವ ಪಿಠೋಪಕರಣಗಳನ್ನು ಖರೀದಿಸಲು ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಅಂದಾಜು ಮೌಲ್ಯ ಒಟ್ಟು 45.00 ಲಕ್ಷ ರೂ.ಗಳು, ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 09.07.2025 ರಿಂದ 15.07.2025**. ಇತರೆ ಮಾಹಿತಿ ಹಾಗೂ ಹೆಚ್ಚಿನ ವಿವರಗಳಿಗಾಗಿ https://kppp/karnataka.gov.in ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/–
ಆಡಳಿತಾಧಿಕಾರಿ
ಡಿಸಿಆರ್‌ಇ, ಬೆಂಗಳೂರು
ವಾಸಾಸಂಇ/ವಾ.ಪ್ರ/1720/ಎಸ್‌ಎಸ್‌ಸಿ/2025–26

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ತುಮಕೂರು.
ದೂರವಾಣಿ:0816–2281105 Email:eemitmk@gmail.com
ಐ.ಎಫ್.ಟಿ ಸಂಖ್ಯೆ.05/2025–26 KW-4, (ದ್ವಿ ಲಕೋಟೆ) ದಿನಾಂಕ: 04.07.2025

ಅಲ್ಪಾವಧಿ ಟೆಂಡರ್ ಪ್ರಕಟಣೆ ದಿನಾಂಕ: 04.07.2025

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ತುಮಕೂರು ವ್ಯಾಪ್ತಿಯಲ್ಲಿ 2025–26ನೇ ಸಾಲಿನ ಲೆಕ್ಕ ಶೀರ್ಷಿಕೆ: PMKSY-HKKP-SMI ಮತ್ತು 4702–ಅಣೆಕಟ್ಟು ಮತ್ತು ಪಿಕಪ್– ಪ್ರಧಾನ ಕಾಮಗಾರಿಗಳು ಅಡಿಯಲ್ಲಿ ಅನುಮೋದನೆಯಾಗಿರುವ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕೆ.ಪಿ.ಪಿ ಪೋರ್ಟಲ್ ಅಡಿಯಲ್ಲಿ ಐಟಂವಾರು ಟೆಂಡರುಗಳನ್ನು ಈ ಕಛೇರಿ ಟೆಂಡರು ಪ್ರಕಟಣೆ ಸಂಖ್ಯೆ: 05/2025–26, ದಿ: 04–07–2025 ರಂದು ಆಹ್ವಾನಿಸಲಾಗಿದೆ. ಟೆಂಡರು ಪ್ರಕ್ರಿಯೆ ದಿನಾಂಕ ಮತ್ತು ವಿವರಗಳನ್ನು ಟೆಂಡರ್‌ನ ನಿಗಧಿತ ನಮೂನೆಯಲ್ಲಿ ವೆಬ್‌ಸೈಟ್ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಅವಶ್ಯಕ ಮಾಹಿತಿಗಳೊಂದಿಗೆ, ಅರ್ಜಿ ಶುಲ್ಕ ಹಾಗೂ ಇ.ಎಂ.ಡಿ.ಯೊಂದಿಗೆ ಅಪ್‌ಲೋಡ್ ಮಾಡಬಹುದಾಗಿದೆ.

ಟೆಂಡರು ಪ್ರಕ್ರಿಯೆಯ ದಿನಾಂಕಗಳು ಈ ಕೆಳಕಂಡಂತಿವೆ:
1. ಟೆಂಡರ್ ಪ್ರಕಟಣೆಯನ್ನು ದಿನಾಂಕ: 04–07–2025 ರಂದು ಕೆ.ಪಿ.ಪಿ ಪೋರ್ಟಲ್‌ನಲ್ಲಿ ಪ್ರಕಟಿಸಲಾಗುವುದು. 2. ಅವಶ್ಯ ಟೆಂಡರ್ ಮಾಹಿತಿ/ಸ್ಪಷ್ಟೀಕರಣವನ್ನು (ಪ್ರಿ ಬಿಡ್) ಪಡೆಯಲು ದಿನಾಂಕ: 11–07–2025 ಬೆಳ್ಳಗ್ಗೆ 11.30 ಗಂಟೆಯವರೆಗೆ ಸ್ವೀಕರಿಸಲಾಗುವುದು. 3. ಗುತ್ತಿಗೆದಾರರಿಂದ ಟೆಂಡರ್‌ನ್ನು ಕೆ.ಪಿ.ಪಿ ಪೋರ್ಟಲ್‌ನ ಮೂಲಕ ದಿನಾಂಕ: 19–07–2025 ಸಾಯಂಕಾಲ 5.00 ಗಂಟೆಯವರೆಗೆ ಸ್ವೀಕರಿಸಲಾಗುವುದು. 4. ತಾಂತ್ರಿಕ ಬಿಡ್ಡನ್ನು ದಿನಾಂಕ: 21–07–2025 ಸಾಯಂಕಾಲ 5.05 ಗಂಟೆಗೆ ತೆರೆಯಲಾಗುವುದು. 5. ಆರ್ಥಿಕ ಬಿಡ್ಡನ್ನು ದಿನಾಂಕ: 22–07–2025 ಸಾಯಂಕಾಲ 5.10 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಅಥವಾ ಮೇಲೆ ತಿಳಿಸಿದ ವೆಬ್ ಸೈಟ್ ಮೂಲಕ ಪಡೆಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಸಣ್ಣ ನೀರಾವರಿ ಮತ್ತು ಅಂ.ಅ ವಿಭಾಗ, ತುಮಕೂರು.
DIPR/TUM/186/KSMCA/2025-26

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮೈಸೂರು
ದೂ: 0821–2443347, ಇ–ಮೇಲ್: eemidmysore@yahoo.co.in
ಸಂಖ್ಯೆ: 10/2025–26 ದಿನಾಂಕ: 09.07.2025

ಟೆಂಡರ್ ಅಧಿಸೂಚನೆ ಪ್ರಕಟಣೆ

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ನಜರ್‌ಬಾದ್, ಮೈಸೂರು–570010 ರವರು ಕೆ.ಡಬ್ಲ್ಯು–1 ಮತ್ತು 2ರ ರೀತ್ಯ ಒಟ್ಟು 32 ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದ್ದು, ಇವುಗಳಲ್ಲಿ ಕನಿಷ್ಠ ಮೊತ್ತ **ರೂ 0.98 ಲಕ್ಷಗಳು,** ಮತ್ತು ಗರಿಷ್ಟ ಮೊತ್ತ **ರೂ 25.00 ಲಕ್ಷಗಳು,** ಇ.ಎಂ.ಡಿ ಕನಿಷ್ಠ **ರೂ. 0.025 ಲಕ್ಷಗಳು** ಮತ್ತು ಗರಿಷ್ಠ **ರೂ 0.50** ಲಕ್ಷಗಳಾಗಿರುತ್ತದೆ,
ಈ ಕಾಮಗಾರಿಗಳಿಗೆ ಐಟಂವಾರು ಅಲ್ಪಾವಧಿ ಟೆಂಡರನ್ನು "ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ನಲ್ಲಿನ ಷರತ್ತುಗಳಿಗನುಗುಣವಾಗಿ ಕರೆಯಲಾಗಿದ್ದು, ಕೆ.ಪಿ.ಪಿ. ಪೋರ್ಟಲ್‌ನಲ್ಲಿ" ಮೂಲಕ ನೋಂದಾಯಿತ ಗುತ್ತಿಗೆದಾರರಿಂದ ಬಿಡ್ಡನ್ನು ಆಹ್ವಾನಿಸಲಾಗಿದೆ. ಸದರಿ ಟೆಂಡರ್‌ಗೆ ಸಂಬಂಧಿಸಿದ ಮಾಹಿತಿಗಳು ಈ ಕೆಳಕಂಡಂತಿರುತ್ತವೆ.
ಟೆಂಡರ್‌ಗೆ ಸಂಬಂಧಿಸಿದ ಮಾಹಿತಿಗಳನ್ನು ಕಛೇರಿಯ ವೇಳೆಯಲ್ಲಿ ದಿನಾಂಕ **16–07–2025, ಸಂಜೆ 5.30**ರೊಳಗೆ ಪಡೆಯಬಹುದಾಗಿರುತ್ತದೆ. ಭರ್ತಿಮಾಡಿದ ಟೆಂಡರ್ ದಾಖಲೆಗಳು ಮತ್ತು ಬಿಡ್‌ನ್ನು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಸಲ್ಲಿಸಲು ಕಡೆಯ **ದಿನಾಂಕ : 17–7–2025 ಸಂಜೆ 5.30 ಗಂಟೆಗೆ.** ಬಿಡ್ ತೆರೆಯುವ **ದಿನಾಂಕ : 19–7–2025ರ ಬೆಳಿಗ್ಗೆ 11–00 ಗಂಟೆಯ ನಂತರ.** ಟೆಂಡರ್ ದಾಖಲಾತಿಗಳನ್ನು ವೆಬ್‌ಸೈಟ್ https://kppp.karnataka.gov.in ರಲ್ಲಿ ಡೌನ್ ಲೋಡ್ ಮಾಡಿಕೊಳ್ಳಬಹುದು ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು.
ವಿ.ಸೂ : ಸದರಿ ಕಾಮಗಾರಿಯ ಟೆಂಡರ್ ಅನ್ನು ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಹಾಗೂ ಯಾವುದೇ ಬಿಡ್‌ನ್ನು ತಿರಸ್ಕರಿಸುವ ಹಕ್ಕನ್ನು ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮೈಸೂರು ಇವರಿಗೆ ಕಾಯ್ದಿರಿಸಲಾಗಿದೆ. ಹಾಗೂ ಈ ಪ್ರಕಟಣೆಗೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿಗಳನ್ನು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/–
ಕಾರ್ಯಪಾಲಕ ಇಂಜಿನಿಯರ್
ಸನೀ ಮತ್ತು ಅಂ.ಅ.ವಿಭಾಗ, ಮೈಸೂರು
DIPR/MYS/603/SA/2025-26

ಸಣ್ಣ ಬೇಡಿಕೆಗಳೂ ದೆಹಲಿ ನಾಯಕರ ಗಮನಕ್ಕೆ ಹೋಗೋದು ಸರಿಯಲ್ಲ | ಮುಂದೆ ಇದೇ ವಿಷಯ ಮುಂದಿಟ್ಟುಕೊಂಡು ದೂರು ನೀಡಿದರೆ ಕಷ್ಟ

ಸುರ್ಜೇವಾಲ ಸಭೆಗೆ ಹಿರಿಯ ಸಚಿವರ ಅಸಮಾಧಾನ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರು ನಡೆಸುತ್ತಿರುವ ಶಾಸಕರ ಸರಣಿ ಸಭೆಗೆ ಹಿರಿಯ ಸಚಿವರು, ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಪ್ರತಿಯೊಬ್ಬ ಶಾಸಕರ ಸಮಸ್ಯೆಗಳನ್ನು ಹೈಕಮಾಂಡ್ ಆಲಿಸಿ, ಬಗೆಹರಿಸುವುದಾದರೆ ನಮಗೆ 'ಬೆಲೆ' ಎಲ್ಲಿ ಉಳಿಯಲಿದೆ ಎಂದು ಪ್ರಶ್ನಿಸಿದ್ದಾರೆ.

ಶಾಸಕರೊಂದಿಗೆ ಎರಡನೇ ಹಂತದ ಸಭೆ ನಡೆಸುವ ಪ್ರಸ್ತಾಪದ ಸಮಯದಲ್ಲಿಯೇ ಅನೇಕರು ವಿರೋಧ ವ್ಯಕ್ತಪಡಿಸಿದ್ದರು. ಆದರೀಗ, ಮತ್ತೆ ಸಭೆ ನಡೆಸಿ ಶಾಸಕರ ಮುಂದೆಯೇ ಸಚಿವರನ್ನು ತರಾಟೆಗೆ ತೆಗೆದುಕೊಳ್ಳುತ್ತಿರುವುದು ಹಲವು ಸಚಿವರ ಆಕ್ಷೇಪಕ್ಕೆ ಕಾರಣವಾಗಿದ್ದು, ಈ ರೀತಿ ಎಲ್ಲವನ್ನೂ ಉಸ್ತುವಾರಿಗಳೇ ನಿಭಾಯಿಸುವುದಾದರೆ, ನಮ್ಮ ಬೆಲೆ ಎಲ್ಲಿ ಉಳಿಯಲಿದೆ? ಚಿಕ್ಕಚಿಕ್ಕ ಸಮಸ್ಯೆಗೂ ಉಸ್ತುವಾರಿಗಳು ಮಧ್ಯಪ್ರವೇಶಿಸುವುದು ಸರಿಯಲ್ಲ ಎನ್ನುವುದು ಹಲವರ ಅಭಿಪ್ರಾಯವಾಗಿದೆ.

ಶಾಸಕರ ಮುಂದೆಯೇ ಕರೆ!

ಬುಧವಾರದ ಸಭೆಯಲ್ಲಿ ಮಾಯಕೊಂಡ ಶಾಸಕ ಬಸಂತಪ್ಪ ಜತೆ ಚರ್ಚೆ ಸಂದರ್ಭದಲ್ಲಿ ಕೆಲವು ಸಚಿವರ ಸಹಕಾರ ತೋರುತ್ತಿಲ್ಲ ಎಂದು ಆರೋಪಿಸಿದ್ದಾರೆ. ಈ ವೇಳೆ ಒಂದಿಬ್ಬರ ಹೆಸರು ಪ್ರಸ್ತಾಪಿಸಿದ ಶಾಸಕ, ಸಚಿವರಿಂದ ಸರಿಯಾಗಿ ಸಹಕಾರ ಸಿಗುತ್ತಿಲ್ಲ. ಇದರ ಬಗ್ಗೆ ಗಮನಿಸಬೇಕು ಎಂದು ಆರೋಪಿಸಿದ್ದಾರೆ. ಅದಕ್ಕೆ ಕೂಡಲೇ ಸಚಿವರಿಗೆ ಸುರ್ಜೇವಾಲ ಕರೆ ಮಾಡಿ, ಪ್ರಶ್ನಿಸಿರುವುದು ಸಚಿವರಿಗೆ ಇರಸು ಮುರುಸು ಉಂಟಾಗಿದೆ. ಈ ರೀತಿ ಎಲ್ಲವನ್ನೂ ಉಸ್ತುವಾರಿಗಳು ಸೂಚಿಸುತ್ತಾ ಬಂದರೆ ನಾವೇನು ಮಾಡ ಬೇಕು? ಎಂದು ಬೇಸರ ಹೊರಹಾಕಿದ್ದಾರೆ. ಸುರ್ಜೇವಾಲ ಭೇಟಿ ಬಳಿಕ ಮಾತನಾಡಿದ ಶಾಸಕ ಬಸಂತಪ್ಪ, ಒನ್ ಟು ಒನ್ ಮಾತುಕತೆ ಸಂದರ್ಭದಲ್ಲಿ ಗ್ಯಾರಂಟಿ ಯೋಜನೆಗಳ ಬಗ್ಗೆ ಕೇಳಿದರು. ಅವರಿಗೆ ಮಾಹಿತಿ ಕೊಟ್ಟಿದ್ದೇನೆ. ಅಭಿವೃದ್ಧಿ ಕೆಲಸಗಳ ಬಗ್ಗೆ ಹೇಳಿದ್ದೇನೆ. ನಾನು ಸಚಿವ ಸ್ಥಾನದ ಆಕಾಂಕ್ಷಿ. ಯುವ ಶಾಸಕನಿದ್ದೇನೆ. ಕೊಡೋದು ಬಿಡೋದು ಹೈಗೆ ಬಿಟ್ಟದ್ದು ಎಂದರು.

- **ಶಾಸಕರ ಸರಣಿ ಸಭೆಗೆ ಹಿರಿಯ ಸಚಿವರು, ಅಸಮಾಧಾನ**
- **ಪ್ರತಿಯೊಬ್ಬ ಶಾಸಕರ ಸಮಸ್ಯೆಗಳು ಹೈಕಮಾಂಡ್ ಆಲಿಸಿದರೆ 'ಬೆಲೆ' ಎಲ್ಲಿ ಉಳಿಯಲಿದೆ?**
- **ಚಿಕ್ಕಚಿಕ್ಕ ಸಮಸ್ಯೆಗೂ ಉಸ್ತುವಾರಿಗಳು ಮಧ್ಯಪ್ರವೇಶಿಸುವುದು ಸರಿಯಲ್ಲ**

ಇನ್ನು ಶಾಸಕರಿಂದ ಗ್ಯಾರಂಟಿ ಯೋಜನೆ, ಸಂಘಟನೆಗೆ ಸಂಬಂಧಿಸಿದಂತೆ ಮಾಹಿತಿ ಪಡೆಯುವ ಜತೆಜತೆಗೆ ಸಚಿವ ರಿಪೋರ್ಟ್ ಕಾರ್ಡ್ ಅನ್ನು ಸುರ್ಜೇವಾಲ ಪಡೆಯುತ್ತಿದ್ದಾರೆ. ಆದರೆ ಈ ರೀತಿ ಮಾಹಿತಿ ಪಡೆಯುವ ಸಮಯದಲ್ಲಿ, ಕೆಲವರು ಗಂಭೀರ ಸಮಸ್ಯೆಗಳಿವೆ. ಈ ವಿಷಯದ ಬಗ್ಗೆ ದೂರುವುದಕ್ಕೆ ಸಚಿವರಿಗೆ ಅಭ್ಯಂತರವಿಲ್ಲ. ಆದರೆ ಊರಿನ ಶಾಲೆಯ ಅಭಿವೃದ್ಧಿ, ದೇವಸ್ಥಾನಕ್ಕೆ ದುಡ್ಡು, ಹೆಚ್ಚುವರಿ ಅಧಿಕಾರಿಗಳ ನೇಮಕ ಸೇರಿದಂತೆ ಸಣ್ಣ ಸಣ್ಣ ವಿಷಯಗಳನ್ನು ಸುರ್ಜೇವಾಲ ಬಳಿ ಪ್ರಸ್ತಾಪಿಸುವ ಅಗತ್ಯವಿಲ್ಲ. ರಾಜ್ಯ ಮಟ್ಟದಲ್ಲಿಯೇ ಬಗೆಹರಿಸಿಕೊಳ್ಳಬಹುದಾದ ಈ ವಿಷಯಗಳನ್ನು ಉಸ್ತುವಾರಿಗಳ ತನಕ ತೆಗೆದುಕೊಂಡುವ ಹೋಗುವ ಅಗತ್ಯವಿಲ್ಲ. ಒಂದು ವೇಳೆ ಶಾಸಕರು ಪ್ರಸ್ತಾಪಿಸಿದರೂ, ಅದನ್ನು ಸುರ್ಜೇವಾಲ ಅವರು ನಿಭಾಯಿಸುವ ಬದಲು ಶಾಸಕರ ಎದುರೇ ಸಚಿವರನ್ನು ಕ್ಲಾಸ್ ತೆಗೆದುಕೊಳ್ಳುವುದು ಸರಿಯಲ್ಲ ಎನ್ನುವ ಅಭಿಪ್ರಾಯವನ್ನು ಕೆಲ ಹಿರಿಯ ಸಚಿವರು ಆಪ್ತರ ಬಳಿ ಹೇಳಿಕೊಂಡಿದ್ದಾರೆ.

ನಾನು ನನ್ನ ಜೀವನದಲ್ಲಿ ಭ್ರಷ್ಟಾಚಾರ ಮಾಡಿಲ್ಲ

ಚರ್ಚಿಸಿ ಮುಂದಿನ ರಾಜಕೀಯ ನಿರ್ಧಾರ

ಮೈಸೂರು: ಚಾಮುಂಡೇಶ್ವರಿ ಕ್ಷೇತ್ರದ ಜನರ ಇಚ್ಛೆಯಂತೆ ನನ್ನ ಮುಂದಿನ ತೀರ್ಮಾನ ಮಾಡುತ್ತೇನೆ ಎಂದು ಶಾಸಕ ಜಿ.ಟಿ.ದೇವೇಗೌಡ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಹಿಂದಿನಿಂದಲೂ ನಾನು ದೊಡ್ಡ ನಾಯಕನ ಮುಂದೆ ಹೋರಾಟ ಮಾಡಿಕೊಂಡು ಗೆದ್ದು ಬಂದಿದ್ದೇನೆ. ಸಿದ್ದರಾಮಯ್ಯರಂತಹ ನಾಯಕರ ಮುಂದೆ ಗೆದ್ದಿದ್ದೇನೆ. ಅರ್ಧದಲ್ಲಿ ಜೆಡಿಎಸ್ ಬಿಟ್ಟು ಯಾವ ಪಕ್ಷಕ್ಕೂ ನಾನು ಹೋಗೋದಿಲ್ಲ, ನಾನು ನನ್ನ ಜೀವನದಲ್ಲಿ ಭ್ರಷ್ಟಾಚಾರ ಮಾಡಿಲ್ಲ, ಪಕ್ಷಾಂತರ ಮಾಡಿಲ್ಲ. ನನ್ನನ್ನು ಪಕ್ಷಾಂತರಿ ಎಂದು ಹೇಳುವ ತಾಕತ್ತು ಯಾರಿಗೂ ಇಲ್ಲ .ಮುಂದೆ ನನ್ನ ಕ್ಷೇತ್ರದ ಜನರು ಹೇಳಿದಂತೆ ನಿರ್ಧಾರ ಮಾಡುತ್ತೇನೆ ಎಂದರು. ನನಗೆ ವಿರೋಧ ಪಕ್ಷದ ಸ್ಥಾನ ಕೊಡಲಿಲ್ಲ ಎಂಬ ಬೇಸರವಿದೆ. ಹಿರಿಯನಾಗಿದ್ದರೂ ನನಗೆ ಅವಕಾಶ ಕೊಡಲಿಲ್ಲ. ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷನಾಗಿದ್ದರೂ ನನ್ನನ್ನು ಕಡೆಗಣಿಸಿದರು. ಸುರೇಶ್ ಬಾಬುಗೆ ಕುಮಾರಸ್ವಾಮಿ ಅಧಿಕಾರ ಕೊಟ್ಟರು. ಆ ಬಗ್ಗೆ ನನಗೆ ಅಸಮಾಧಾನ ವಿದೆ. ಸದ್ಯ ಜೆಡಿಎಸ್ ಶಾಸಕನಾಗಿ ಕೆಲಸ ಮಾಡುತ್ತಿದ್ದೇನೆ ಎಂದರು.

ನಾನು ಪಕ್ಷದ ಕಾರ್ಯಕ್ರಮದಿಂದ ದೂರವಿದ್ದೇನೆ. ನಾನು ದೇವೇಗೌಡರೊಟ್ಟಿಗೆ ಪಕ್ಷ ಕಟ್ಟಿದಾಗ ಈಗ ಬಂದವರೆಲ್ಲಾ ಎಲ್ಲಿದ್ದರೂ? ಬಾಯಿಗೆ ಬಂದಂತೆ ಮಾತನಾಡುತ್ತಿದ್ದಾರೆ. ಸದ್ಯಕ್ಕೆ ನನ್ನನ್ನು ಬಿಜೆಪಿ, ಕಾಂಗ್ರೆಸ್ ಅಥವಾ ಜೆಡಿಎಸ್ ನ ಯಾರೂ ಬ್ಬರೂ ಕರೆಯುತ್ತಿಲ್ಲ. ಶಾಸಕನಾಗಿ ಕ್ಷೇತ್ರದಲ್ಲಿ ಓಡಾಡುತ್ತಿದ್ದೇನೆ. ಮುಂದಿನ 3 ವರ್ಷವೂ ಜೆಡಿಎಸ್ ನಲ್ಲೇ ಮುಂದುವರೆಯುತ್ತೇನೆ. ಮುಂದಿನ ಬಾರಿ ಚುನಾವಣೆಗೂ ಸ್ಪರ್ಧೆ ಮಾಡುತ್ತೇನೆ.

-ಜಿ.ಟಿ.ದೇವೇಗೌಡ, ಶಾಸಕ

ಕೆಆರ್‌ಎಸ್ ಜಲಾಶಯದಿಂದ ವಿಸಿ ನಾಲೆಗೆ ನೀರು ಹರಿಸಲಾಗುತ್ತಿದೆ.

ಕೆಆರ್‌ಎಸ್‌ನಿಂದ ನಾಲೆಗಳಿಗೆ ನೀರು ಬಿಡುಗಡೆ

ಮಂಡ್ಯ: ಹಳೇ ಮೈಸೂರು ಭಾಗದ ಜೀವನಾಡಿ ಕೆಆರ್‌ಎಸ್ ಅಣೆಕಟ್ಟೆ ಜೂನ್ ತಿಂಗಳಲ್ಲಿಯೇ ಸಂಪೂರ್ಣ ಭರ್ತಿಯಾಗಿದ್ದರು ಸಹ ಮಂಡ್ಯ ರೈತರ ಬೆಳೆಗಳಿಗೆ ಕಾಲುವೆ ಮೂಲಕ ನೀರು ಹರಿಸಿರಲಿಲ್ಲ, ಅದ್ರೆ ರೈತರ ತೀವ್ರ ಹೋರಾಟದ ಎಚ್ಚರಿಕೆ ಬೆನ್ನಲ್ಲೇ ನಾಲೆಗಳಿಗೆ ನೀರು ಹರಿಸಲಾಗಿದೆ. ಕಾವೇರಿ ಜಲಾನಯನ ಪ್ರದೇಶದಲ್ಲಿ ಉತ್ತಮವಾಗಿ ಮಳೆ ಬಿದ್ದ ಪರಿಣಾಮ ಕನ್ನಂಬಾಡಿ ಕಟ್ಟೆ ಜೂನ್ ತಿಂಗಳಲ್ಲಿ ಸಂಪೂರ್ಣವಾಗಿ ಭರ್ತಿಯಾಗಿತ್ತು. ಆದರೆ ಮಂಡ್ಯ ಭಾಗದಲ್ಲಿ ಮುಂಗಾರು ಮಳೆ ಇದುವರೆಗೆ ಅಷ್ಟೇನು ಚುರುಕು ಪಡೆದುಕೊಂಡಿಲ್ಲ, ಇದರ ಪರಿಣಾಮ ಈ ಭಾಗದಲ್ಲಿ ಬೆಳೆದ ಬೆಳೆಗಳು ಒಣಗುತ್ತಿವೆ. ಇತ್ತ ಡ್ಯಾಂ ತುಂಬಿದ್ದರೂ ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ನಾಲೆಯ ಕಾಮಗಾರಿ ನೆಪ ಹೇಳಿ ನಾಲೆಗೆ ಬಿಟ್ಟಿರಲಿಲ್ಲ, ಇದೀಗ ರೈತ ಸಂಘಟನೆಗಳು ಉಗ್ರ ಹೋರಾಟದ ಎಚ್ಚರಿಕೆ ಕೊಟ್ಟ ಬಳಿಕ ಬುಧವಾರ ಬೆಳಗ್ಗೆ ವಿಸಿ ನಾಲೆಯ ಮೂಲಕ ನಾಲೆಗಳಿಗೆ ನೀರು ಹರಿಸಿದ್ದಾರೆ. ಸದ್ಯ ರೈತರ ಮೊಗದಲ್ಲಿ ಮಂದಹಾಸ ಮೂಡಿದೆ.

ದೇಶಕ್ಕೆ ಮೋದಿ, ರಾಜ್ಯಕ್ಕೆ ಕುಮಾರಣ್ಣ

ಚಿಕ್ಕಬಳ್ಳಾಪುರ: ದೇಶಕ್ಕೆ ನರೇಂದ್ರ ಮೋದಿ, ರಾಜ್ಯಕ್ಕೆ ಕುಮಾರಣ್ಣ ಅವರ ನಾಯಕತ್ವ ಎನ್ನುವ ಚರ್ಚೆ ನಾನು ಭೇಟಿ ನೀಡಿದ ಕಡೆಗಳಲ್ಲೆಲ್ಲ ಕೇಳಿ ಬರುತ್ತಿದೆ. ಇದು ಜೆಡಿಎಸ್ ಕಾರ್ಯಕರ್ತರ ಭಾವನೆಯಲ್ಲ. ರಾಜ್ಯದ ಎಲ್ಲ ಭಾಗಗಳಲ್ಲಿನ ಜನರ ಭಾವನೆ' ಎಂದು ಜೆಡಿಎಸ್ ಯುವ ಘಟಕದ ರಾಜ್ಯ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ತಿಳಿಸಿದರು. ನಗರದಲ್ಲಿ ಬುಧವಾರ ನಡೆದ ಜನರೊಂದಿಗೆ ಜನತಾದಳ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಜೆಡಿಎಸ್ ಹಳೆ ಮೈಸೂರು ಪ್ರಾಂತ್ಯಕ್ಕೆ ಸೀಮಿತವಾದ ಪಕ್ಷವಲ್ಲ. ನಮ್ಮ ಪಕ್ಷದ ಶಾಸಕರಲ್ಲಿ ಶೇ 40ರಿಂದ 50ರಷ್ಟು ಮಂದಿ ಕಲ್ಯಾಣ ಕರ್ನಾಟಕ ಮತ್ತು ಕಿತ್ತೂರು ಕರ್ನಾಟಕದ ಭಾಗಗಳಿಂದ ಆಯ್ಕೆ ಆಗುತ್ತಾರೆ. ಈ ಭಾಗಗಳಿಗೆ ನಾನು ನಿರಂತರವಾಗಿ ಭೇಟಿ ನೀಡುತ್ತೇನೆ ಎಂದು ಹೇಳಿದರು. ಬಿಜೆಪಿ, ಜೆಡಿಎಸ್ ಮೈತ್ರಿ ಶಾಶ್ವತವಾಗಿ ಮುಂದುವರಿಯುತ್ತದೆ. ಇದರಲ್ಲಿ ಯಾರಿಗೂ ಅನುಮಾನವೇ ಬೇಡ ಎಂದು ಹೇಳಿದರು.

ನಡುರಸ್ತೆಯಲ್ಲೇ ಎರಡು ಗುಂಪುಗಳ ಹೊಡೆದಾಟ

ಹುಬ್ಬಳ್ಳಿ: ಹಳೆ ದ್ವೇಷದ ಹಿನ್ನೆಲೆ 2 ಗ್ಯಾಂಗ್‌ಗಳ ನಡುವೆ ಮಾರಾಮಾರಿ ನಡೆದಿದೆ. ದೊಣ್ಣೆ, ಮಾರಕಾಸ್ತ್ರಗಳಿಂದ ಪರಸ್ಪರ ಹೊಡೆದಾಡಿಕೊಂಡಿದ್ದಾರೆ.

ಇಲ್ಲಿನ ಮಂಟೂರ ರಸ್ತೆಯಲ್ಲಿ ಗ್ಯಾಂಗ್ ವಾರ್ ನಡೆದಿದ್ದು, ಶ್ಯಾಮ್ ಜಾಧವ್ ಮತ್ತೆ ಎಮ್.ಡಿ.ದಾವೂದ್ ಬ್ರದರ್ಸ್ ನಡುವೆ ಗಲಾಟೆ ಆಗಿದೆ ಎನ್ನಲಾಗಿದೆ. ಗಂಗಾಧರ ನಗರದ ನಿವಾಸಿ ಶ್ಯಾಮ್ ಜಾಧವ್ ಮತ್ತು ಆತನ ಸಹಚರರು ಮಂಟೂರ ರಸ್ತೆಯ ಸ್ಮಶಾನಕ್ಕೆ ಶವಸಂಸ್ಕಾರಕ್ಕೆ ಹೋಗಿದ್ದರು. ಈ ವೇಳೆ ಎಮ್.ಡಿ.ದಾವೂದ್ ಸಹೋದರ ಜಿಲಾನಿ ನದಾಫ್ ಎಂಬಾತ ರಸ್ತೆಯಲ್ಲಿ ನಿಂತಿದ್ದ, ಆಗ ಶ್ಯಾಮ್ ಜಾಧವ್ ಸಹಚರರನ್ನು ಗುರಾಯಿಸಿ ನೋಡಿದ್ದಾನೆ ಎನ್ನಲಾಗಿದೆ. ಇದೇ ಕಾರಣಕ್ಕೆ ಜಾಧವ್ ಸಹಚರರು ಪ್ರಶ್ನೆ ಮಾಡಿದ್ದಾರೆ. ಮಾತಿಗೆ ಮಾತು ಬೆಳೆದು ಪರಿಸ್ಥಿತಿ ವಿಕೋಪಕ್ಕೆ ತಿರುಗಿ ಎರಡು ಗುಂಪಿನವರು ಪರಸ್ಪರ ತಲ್ವಾರ್, ಬಾಟಲಿ, ಹಾಗೂ ಕಬ್ಬಿಣದ ರಾಡ್‌ಗಳಿಂದ ಹೊಡೆದಾಡಿಕೊಂಡಿದ್ದಾರೆ. ಹಲವರಿಗೆ ಗಂಭೀರ ಗಾಯಗಳಾಗಿದ್ದು, ಕಿಮ್ಸ್‌ನಲ್ಲಿ ದಾಖಲು ಮಾಡಲಾಗಿದೆ. ಕಿಮ್ಸ್‌ಗೆ ಭೇಟಿ ನೀಡಿ ಹಿರಿಯ ಪೊಲೀಸ್ ಅಧಿಕಾರಿಗಳು ಮಾಹಿತಿ ಕಲೆಹಾಕಿದ್ದಾರೆ.

ದಿಲ್ಲಿಯಲ್ಲಿ ಹೈ ಸಭೆ

← ಮೊದಲಪುಟದಿಂದ

ಒಂದು ವೇಳೆ ಅವಕಾಶ ಸಿಕ್ಕರೆ, ಇಬ್ಬರೂ ನಾಯಕರು ತಮ್ಮ ತಮ್ಮ 'ಬೇಡಿಕೆ'ಯನ್ನು ಸಲ್ಲಿಸಲು ಸಿದ್ಧತೆ ನಡೆಸಿಕೊಂಡಿದ್ದಾರೆ.

ಸರಣಿ ಸಭೆಗೆ ಸಚಿವರ ಆಕ್ಷೇಪ: ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರು ನಡೆಸುತ್ತಿರುವ ಶಾಸಕರ ಸರಣಿ ಸಭೆಗೆ ಹಿರಿಯ ಸಚಿವರು, ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಪ್ರತಿಯೊಬ್ಬ ಶಾಸಕರ ಸಮಸ್ಯೆಗಳನ್ನು ಹೈಕಮಾಂಡ್ ಆಲಿಸಿ, ಬಗೆಹರಿಸುವುದಾದರೆ ನಮಗೆ 'ಬೆಲೆ' ಎಲ್ಲಿ ಉಳಿಯಲಿದೆ ಎಂದು ಪ್ರಶ್ನಿಸಿದ್ದಾರೆ. ಶಾಸಕರೊಂದಿಗೆ ಎರಡನೇ ಹಂತದ ಸಭೆ ನಡೆಸುವ ಪ್ರಸ್ತಾಪದ ಸಮಯದಲ್ಲಿಯೇ ಅನೇಕರು ವಿರೋಧ ವ್ಯಕ್ತಪಡಿಸಿದ್ದರು. ಆದರೀಗ, ಮತ್ತೆ ಸಭೆ ನಡೆಸಿ ಶಾಸಕರ ಮುಂದೆಯೇ ಸಚಿವರನ್ನು ತರಾಟೆಗೆ ತೆಗೆದುಕೊಳ್ಳುತ್ತಿರುವುದು ಹಲವು ಸಚಿವರ ಆಕ್ಷೇಪಕ್ಕೆ ಕಾರಣವಾಗಿದ್ದು, ಈ ರೀತಿ ಎಲ್ಲವನ್ನೂ ಉಸ್ತುವಾರಿಗಳೇ ನಿಭಾಯಿಸುವುದಾದರೆ, ನಮ್ಮ ಬೆಲೆ ಎಲ್ಲಿ ಉಳಿಯಲಿದೆ? ಚಿಕ್ಕಚಿಕ್ಕ ಸಮಸ್ಯೆಗೂ ಉಸ್ತುವಾರಿಗಳು ಮಧ್ಯಪ್ರವೇಶಿಸುವುದು ಸರಿಯಲ್ಲ ಎನ್ನುವುದು ಹಲವರ ಅಭಿಪ್ರಾಯವಾಗಿದೆ.

ಪ್ರಿಯಾಂಕಾ, ಡಿಕೆಶಿ ಭೇಟಿ

ಈ ನಡುವೆ ಸಿದ್ದರಾಮಯ್ಯ ಅವರಿಗಿಂತ ಒಂದು ದಿನ ಮೊದಲೇ ದೆಹಲಿಗೆ ತೆರಳಿದ್ದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು, ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ ಅವ ರನ್ನು ಭೇಟಿಯಾಗಲು ಪ್ರಯತ್ನಿಸಿದ್ದಾರೆ. ಆದರೆ ಸೋನಿಯಾ ಭೇಟಿಗೆ ಅವಕಾಶ ಸಿಗದಿದ್ದರೂ, ಪುತ್ರಿ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರನ್ನು ಭೇಟಿಯಾಗಿ ದ್ದಾರೆ ಎಂದು ಮೂಲಗಳು ತಿಳಿಸಿವೆ. ಈ ಭೇಟಿಯ ವೇಳೆ, ರಾಜ್ಯ ರಾಜಕೀಯ ಬೆಳವಣಿಗೆ, ಶಾಸಕರ ಅಸಮಾಧಾನ, ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಸೇರಿದಂತೆ ಹಲವು ವಿಷಯಗಳ ಬಗ್ಗೆ ಚರ್ಚಿಸಿದ್ದಾರೆ ಎನ್ನಲಾಗಿದೆ. ಈ ವೇಳೆ ಡಿ.ಕೆ.ಶಿವಕುಮಾರ್ ಅವರಿಗೆ ಸಮಸ್ಯೆಯಾಗದಂತೆ ಕ್ರಮವಹಿಸುವ ಭರವಸೆಯನ್ನು ಪ್ರಿಯಾಂಕಾ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸಂಘದ ಸಂಧಾನವೂ ವಿಫಲ

← ಮೊದಲಪುಟದಿಂದ

ಈ ನಡುವೆ ಆರ್.ಅಶೋಕ ದೆಹಲಿ ಯಾತ್ರೆ ಮುಗಿಸಿ ಬಂದರೂ ಯಾವುದೇ ಪ್ರಯೋಜನ ವಾಗಿಲ್ಲ. ಇದರ ನಡುವೆಯೇ ಮಾಜಿ ಸಿಎಂ ಅವರು ಕೂಡ ಅಧ್ಯಕ್ಷ ಸ್ಥಾನದ ಆಕಾಂಕ್ಷಿರುವುದು ಕೂಡ ಈಗ ಗುಟ್ಟಾಗಿ ಉಳಿದಿಲ್ಲ. ಕೇಂದ್ರ ಸಚಿವ ವಿ.ಸೋಮಣ್ಣ ಅವರು ರಾಜ್ಯಾಧ್ಯಕ್ಷ ಸ್ಥಾನದಲ್ಲಿ ಆಸಕ್ತಿ ಹೊಂದಿಲ್ಲ ಎಂಬ ಚರ್ಚೆಗಳಾಗುತ್ತಿವೆ. ಹೈಕಮಾಂಡ್ ಸೂಚನೆ ನೀಡಿದರೆ ಮಾತ್ರ ಅವರು ಈ ಜವಾಬ್ದಾರಿ ವಹಿಸಿಕೊಳ್ಳುವ ಸಾಧ್ಯತೆ ಇದೆ. ಆದರೆ ರಾಜ್ಯ ಬಿಜೆಪಿಯಲ್ಲಿ ನಡೆಯುತ್ತಿರುವ ಬೆಳವಣಿಗೆಗಳು ಅವರಿಗೆ ಪೂರಕ ಆಗಿದಿರುವುದು ರಾಜ್ಯಾಧ್ಯಕ್ಷ ಸ್ಥಾನದತ್ತ ಅವರು ಆಸಕ್ತಿ ತೋರಿಸುವ ಸಾಧ್ಯತೆ ಇಲ್ಲ ಎನ್ನುತ್ತಿವೆ ಪಕ್ಷದ ಮೂಲಗಳು. ಇನ್ನುಳಿದಂತೆ ಹಿಂದುಳಿದ ವರ್ಗಗಳ ನಾಯಕರ ಹೆಸರುಗಳು ಕೇಳಿ ಬಂದರೂ ಆ ಸ್ಥಾನದ ಹಣದ ತೂಕ ಚುನಾವಣೆಯಲ್ಲಿ ಹೊರಬಲ್ಲ ವ್ಯಕ್ತಿಗಳ ಕೊರತೆ ಸದ್ಯಕ್ಕೆ ಕಾಣುತ್ತಿದೆ. ಬಿಜೆಪಿ ವರಿಷ್ಠರು ಅಂತಿಮವಾಗಿ ಯಾರನ್ನು ಆಯ್ಕೆ ಮಾಡುತ್ತಾರೆ ಎಂಬುವುದು ಈಗಲೂ ಕುತೂಹಲಕ್ಕೆ ಕಾರಣ ವಾಗಿದೆ. ಈ ನಡುವೆ ಮಾಜಿ ಸಿಎಂ ಬಿ.ಎಸ್.ಯಡಿ ಯೂರಪ್ಪ ಅವರು ಸಕ್ರಿಯ ವಾಗಿದ್ದಾರೆ. ಪಕ್ಷದ ಕಚೇರಿಗೂ ನಿರಂತರವಾಗಿ ಭೇಟಿ ಕೊಡುತ್ತಿದ್ದಾರೆ ಎಂಬುವುದು ಗಮನಾರ್ಹ. ವಿಜಯೇಂದ್ರ ಅವರ ಪರ ಮತ್ತು ವಿರುದ್ಧ ವಾದ ಬಣ ರಾಜ್ಯದಲ್ಲಿ ತಮ್ಮದೇ ರೀತಿಯಲ್ಲಿ ಒತ್ತಡ ಸೃಷ್ಟಿ ಮಾಡುತ್ತಿವೆ. ವಿಜಯೇಂದ್ರ ನಾಯಕತ್ವವನ್ನು ಒಪ್ಪಲು ಅಸಾಧ್ಯ ಎಂದು ಅತೃಪ್ತರ ಬಣ ವಾದಿಸುತ್ತಲೇ ಇದೆ. ಇದಕ್ಕೆ ತಟಸ್ಥ ಬಣ ಪರೋಕ್ಷವಾಗಿ ಬೆಂಬಲ ನೀಡುತ್ತಿದೆ. ಆದರೆ ಇದೇ ಸಂದರ್ಭದಲ್ಲಿ ಯಡಿಯೂರಪ್ಪ ಅವರಿಗೆ ನಿಷ್ಠರಾಗಿ ರುವ ಬಣ ವಿಜಯೇಂದ್ರ ಅವರನ್ನೇ ಮುಂದು ವರಿಸಬೇಕು ಎಂದು ಆಗ್ರಹಿಸಿದೆ. ಹೀಗಾಗಿ ಆಂತರಿಕ ವಾಗಿ ಜಟಾಪಟಿ ಮುಂದುವರಿದಿದೆ. ರಾಷ್ಟ್ರೀಯ ನಾಯಕರು ಬಿಜೆಪಿ ರಾಷ್ಟ್ರಾಧ್ಯಕ್ಷರ ಆಯ್ಕೆ ಪ್ರಕ್ರಿಯೆ ಯಲ್ಲಿ ಬ್ಯುಸಿಯಾಗಿದ್ದಾರೆ. ರಾಷ್ಟ್ರಾಧ್ಯಕ್ಷರ ಆಯ್ಕೆ ಅಧಿಕೃತವಾದ ಬಳಿಕ ರಾಜ್ಯದ ಕಡೆಗೆ ಗಮನ ಹರಿಸುವ ಸಾಧ್ಯತೆ ಇದೆ. ಹೀಗಾಗಿ ರಾಜ್ಯ ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನ ಆಯ್ಕೆ ಗೊಂದಲ ದಿನದಿಂದ ದಿನಕ್ಕೆ ತೀವ್ರಗೊಳ್ಳುತ್ತಿದೆ.

ರಾಜ್ಯದಲ್ಲೇ ಡಿಫೆನ್ಸ್ ಕಾರಿಡಾರ್‌ಗೆ ಮನವಿ

← ಮೊದಲಪುಟದಿಂದ

ರಾಜ್ಯದ ಮನವಿಗೆ ಸಕಾರಾತ್ಮಕ ಸ್ಪಂದನೆ; ಸಿಎಂ: ಕೇಂದ್ರ ರಕ್ಷಣಾ ಸಚಿವರ ಬಳಿಕ ಸುದ್ದಿಗಾರ ರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಮೈಸೂರು ದಸರಾ ಉತ್ಸವದಲ್ಲಿ ವೈಮಾನಿಕ ಪ್ರದರ್ಶನ ಹಾಗೂ ಬೆಂಗಳೂರಿನಲ್ಲಿ ಡಿಫೆನ್ಸ್ ಕಾರಿಡಾರ್ ಸೇರಿದಂತೆ ಅಭಿವೃದ್ಧಿ ಕಾಮಗಾರಿಗಳಿಗೆ ರಕ್ಷಣಾ ಇಲಾಖೆಯ ಜಾಗ ನೀಡುವ ಸರಕಾರದ ಮನವಿಗಳಿಗೆ ಕೇಂದ್ರ ರಕ್ಷಣಾ ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿರುವು ದಾಗಿ ತಿಳಿಸಿದರು. ಉತ್ತರಪ್ರದೇಶ ಹಾಗೂ ತಮಿಳುನಾಡುಯ ಮಾದರಿಯಲ್ಲಿ ಕರ್ನಾಟಕದಲ್ಲಿಯೂ ರಕ್ಷಣಾ ಕಾರಿಡಾರ್ ಸ್ಥಾಪನೆ ಹಾಗೂ ಟನಲ್ ಯೋಜನೆ, ಬಳ್ಳಾರಿ ರಸ್ತೆಯಲ್ಲಿ ಲಿಂಕ್ ರೋಡ್ ಯೋಜನೆ, ಡಬಲ್ ಡೆಕ್ಕರ್ ಫ್ಲೈಓವರ್ ಯೋಜನೆಯ ನಿರ್ಮಾಣಕ್ಕೆ ಅವಶ್ಯವಿರುವ ಕೇಂದ್ರ ರಕ್ಷಣಾ ಇಲಾಖೆಗೆ ಸೇರಿದ ಜಾಗವನ್ನು ರಾಜ್ಯದ ಅಭಿವೃದ್ಧಿ ಯೋಜನೆಗಳಿಗೆ ನೀಡುವಂತೆ ಕೋರಿ ಮನವಿ ಸಲ್ಲಿಸಿರುವ ಬಗ್ಗೆ ವಿವರಿಸಿದರು.

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ ಕಲಬುರಗಿ
(ಜಿಲ್ಲಾ ನಗರಾಭಿವೃದ್ಧಿ ಕೋಶ)
ದೂರವಾಣಿ ಸಂಖ್ಯೆ: 08472–278604, ಇಮೇಲ್ ವಿಳಾಸ: ka.kalaburagi.dudc@gmail.com
ಸಂ:ಜಿನಕೋ/ಅಮೃತ ನಗರೋತ್ಥಾನ(ಮುನಿಸಿಪಾಲಿಟಿ)–4/ಶಹಾಬಾದ/78/2022–23 ದಿ: 08.07.2025

–: ಕಾಲ್–3 ಟೆಂಡರ್ ಅಧಿಸೂಚನೆ :–

ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ ಕಲಬುರಗಿ ಜಿಲ್ಲೆ, ಕಲಬುರಗಿರವರು ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ (ಹಂತ–4)ಯಡಿ ತೆಗೆದುಕೊಂಡ ಈ ಕೆಳಕಂಡ ವಿವಿಧ ಕಾಮಗಾರಿಗಳ ಸಮರ್ಪಕ ಅನುಷ್ಠಾನಕ್ಕಾಗಿ ಕೆ.ಟಿ.ಪಿ.ಪಿ. ಕಾಯ್ದೆ 1999 ನಿಯಮ 2000ರನ್ವಯ ಕೆ.ಪಿ.ಪಿ ಪೋರ್ಟಲ್ ಮುಖಾಂತರ 2 ಕವರ್ ಸಿಸ್ಟಮ್ ಕೆ.ಡಬ್ಲ್ಯೂ–4ರ ದಾಖಲಾತಿಯಂತೆ ಟೆಂಡರ್ ಆಹ್ವಾನಿಸಲಾಗಿದ್ದು, ಆಸಕ್ತಿಯುಳ್ಳ ಪ್ರಥಮ ದರ್ಜೆ ಗುತ್ತಿಗೆದಾರರು ಭಾಗವಹಿಸಬಹುದಾಗಿದ್ದು, ವಿವರ ಈ ಕೆಳಗಿನಂತಿದೆ.
1) ಕಾಮಗಾರಿಯ ವಿವರ : ಮುಖ್ಯ ಮಂತ್ರಿಗಳ ಅಮೃತ ನಗರೋತ್ಥಾನದಡಿ ಕಲಬುರಗಿ ಜಿಲ್ಲೆಯ ಶಹಬಾದ ಪಟ್ಟಣ ವ್ಯಾಪ್ತಿಯಲ್ಲಿ ನಗರಸಭೆ ಕಛೇರಿ ಮತ್ತು ಡಾ. ಬಿ.ಆರ್ ಅಂಬೇಡ್ಕರ್ ಸಮುದಾಯ ಭವನ ಭೋವಿ, ಮಾದಿಗ ಮತ್ತು ಲಂಬಾಣಿ ಸಮಾಜ, ಕೊರವ ಮತ್ತು ಪರಿಶಿಷ್ಠ ಜಾತಿ ಸಮುದಾಯದ ಸ್ಮಶಾನ, ಸಾರ್ವಜನಿಕ ಶೌಚಾಲಯ, ಹೈಟೆಕ್ ಗಾರ್ಡನ್ ಬಂಜಾರಾ ಸಮಾಜ ಕುಡಿಯುವ ನೀರಿನ ಘಟಕ ಹಾಗೂ ಬೀದಿದೀಪ ಅಳವಡಿಸುವ ಕಾಮಗಾರಿಗಳು TENDER NO:- DMA/2024-25/ OW/ WORK_INDENT 26512/CALL-3, 2) ನಿಗಧಿಪಡಿಸಿದ ಟೆಂಡರ್ ಮೊತ್ತ (ರೂ. ಲಕ್ಷಗಳಲ್ಲಿ) : **597.22,** 3) ಇ.ಎಂ.ಡಿ. ಮೊತ್ತ (ರೂ.ಲಕ್ಷಗಳಲ್ಲಿ) : 8.96, 4) ಗುತ್ತೇದಾರರ ದರ್ಜೆ : Eligible PWD Contractor, 5) ಕಾಲಾವಕಾಶ : ಕಾರ್ಯಾದೇಶ ನೀಡಿದ ನಂತರದ 12 ತಿಂಗಳು
ಗುತ್ತಿಗೆದಾರರು ಸದರಿ ಕಾಮಗಾರಿಯ ಕುರಿತು ಸಮಗ್ರ ಮಾಹಿತಿಯನ್ನು ದಿನಾಂಕ: 08.07.2025 ರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನ ಅಧಿಕೃತ ಅಂತರ್ಜಾಲ ತಾಣ https://kppp.karnataka.gov.in/ ರ ಮುಖಾಂತರ ಪಡೆದುಕೊಂಡು ಇ.ಎಂ.ಡಿ. ಮತ್ತು ಟೆಂಡರ್‌ಗಾಗಿ ತಗಲುವ ವೆಚ್ಚವನ್ನು ಸಹ ವಿದ್ಯುನ್ಮಾನ ರೀತಿಯಲ್ಲಿ ಭರಿಸತಕ್ಕದ್ದು. ಟೆಂಡರ್‌ಗಾಗಿ ನಿಗಧಿಪಡಿಸಲಾದ ದಿನಾಂಕಗಳ ವಿವರ ಕೆಳಗಿನಂತಿದೆ.
1) Pree Bid Meeting: **28.07.2025 at 11.30 AM**, 2) Last date & Time for Tender Queries/ Clarifications: **07.08.2025 upto 5.30 PM**, 3) Last Date of bid Submission: **08.08.2025 upto 5.30 PM**, 4) Date of Opening of Tenders (Technical Bids): **11.08.2025 at 11.00 AM**, 5) Date of Opening of Financial Bids: **18.08.2025 at 11.00 AM**
ಈ ಮೇಲ್ಕಂಡ ನಿಗಧಿತ ದಿನಾಂಕದಲ್ಲಿ ವ್ಯತ್ಯಾಸವಾದಲ್ಲಿ ಅದು ಕೇವಲ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಚುರಪಡಿಸಲಾಗುವುದು. ಯಾವುದೇ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಜಿಲ್ಲಾ ನಗರಾಭಿವೃದ್ಧಿ ಕೋಶ, ಕಲಬುರಗಿ.
ವಾ.ಸಾ.ಸಂ.ಇ/ಕಲಬುರಗಿ/279/ಕೆ.ಎಸ್.ಎಂ.ಸಿ.&ಎ/2025–26

ವಿಷ ಕುಡಿದು ಕುಟುಂಬದ ಮೂವರು ಆತ್ಮಹತ್ಯೆ

ಬೆಳಗಾವಿ: ಇಲ್ಲಿನ ಶಹಾಪುರದ ಜೋಶಿ ಮಾಳ ಪ್ರದೇಶದಲ್ಲಿ ಬುಧವಾರ ಒಂದೇ ಕುಟುಂಬದ ಮೂವರು ವಿಷ ಕುಡಿದು ಆತ್ಮಹತ್ಯೆ ಮಾಡಿಕೊಂಡಿದ್ದು, ಸ್ಥಳದಲ್ಲಿ ಡೆತ್‌ನೋಟ್ ಪತ್ತೆಯಾಗಿದೆ. ತನ್ನಿಂದ ಅರ್ಧ ಕೆ.ಜಿ ಚಿನ್ನ ಪಡೆದು ಮರಳಿ ಕೊಡದೇ ಚಿನ್ನದ ವ್ಯಾಪಾರಿ ಮೋಸ ಮಾಡಿದ್ದಾರೆ. ಇದರಿಂದ ಮನನೊಂದು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದಾಗಿ ಬರೆದಿದ್ದಾರೆ.

ಮಂಗಳಾ ಕುರಡೇಕರ್ (70) ಇವರ ಪುತ್ರ, ಸಂತೋಷ (44), ಪುತ್ರಿ ಸುವರ್ಣ (42) ಮೃತಪಟ್ಟವರು. ಇನ್ನೊಬ್ಬ ಪುತ್ರಿ, ಸುನಂದಾ (40) ಅವರೂ ವಿಷ ಸೇವಿಸಿದ್ದು, ಅವರ ಸ್ಥಿತಿ ಚಿಂತಾಜನಕವಾಗಿದೆ.

ಸಂತೋಷ ಅವರು ಚಿನ್ನದ ಚೀಟಿ ವ್ಯವಹಾರ ಮಾಡುತ್ತಿದ್ದರು. ಅದರಲ್ಲಿ ಉಂಟಾದ ಮೋಸವೇ ಸಾವಿಗೆ ಕಾರಣವಾಗಿರಬಹುದು ಎಂದು ಅಂದಾಜಿಸಲಾಗಿದೆ ಎಂದು ಸ್ಥಳ ಮಹಜರು ಮಾಡಿದ ಶಹಾಪುರ ಠಾಣೆ ಪೊಲೀಸರು ತಿಳಿಸಿದ್ದಾರೆ. ಬುಧವಾರ ಬೆಳಗ್ಗೆ 9ರ ಸುಮಾರಿಗೆ ವಿಷ ಸೇವಿಸಿದ್ದಾರೆ ಎನ್ನಲಾಗಿದೆ.

ಡೆತ್‌ನೋಟ್‌ನಲ್ಲೇನಿದೆ?

ಸಂತೋಷ ಅವರ ಜೇಬಿನಲ್ಲಿ ಮರಾಠಿಯಲ್ಲಿ ಬರೆದ ಡೆತ್‌ನೋಟ್ ಪತ್ತೆಯಾಗಿದೆ. ನಾನು ಬಹಳಷ್ಟು ಜನರ ಬಳಿ ಗೋಲ್ಡ್ ಚೀಟಿ ಮಾಡುತ್ತಿದ್ದೆ. ಹಲವರು ಹಣ ಹೂಡಿದ್ದರು. ವಡಗಾ ವಿಯ ಚಿನ್ನದ ವ್ಯಾಪಾರಿ ರಾಜು ಕುಡತರಕರ್ ಅವರಿಗೆ ಅರ್ಧ ಕೆ.ಜಿ (500 ಗ್ರಾಂ) ಚಿನ್ನ ಕೊಟ್ಟಿದ್ದೇನೆ. ಬೇರೆ ಬೇರೆ ರೀತಿಯ ಚಿನ್ನಾಭರಣ ಮಾಡಿ ಕೊಡುತ್ತೇನೆ ಅಂದಿದ್ದರು. ಮರಳಿ ಕೇಳಿದರೆ ರಾಜು ಹಾಗೂ ಅವರ ಪತ್ನಿ ನನ್ನ ಚಿನ್ನವನ್ನು ಕೊಡುತ್ತಿಲ್ಲ. ಜೀವ ಬೆದರಿಕೆ ಹಾಕುತ್ತಿದ್ದಾರೆ. ಅಲ್ಲದೇ, ಚಿನ್ನವನ್ನು ನಾನೇ ಎತ್ತಿ ಕೊಂಡು ಊರು ಬಿಟ್ಟು ಹೋಗಿದ್ದೇನೆ ಎಂದು ಸುಳ್ಳು ಸುದ್ದಿ ಹಬ್ಬಿಸಿದ್ದಾರೆ. ಇದರಿಂದ ಮನ ನೊಂದು ನಾವು ಸಾಮೂಹಿಕ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇವೆ ಎಂದು ಡೆತ್‌ನೋಟ್‌ನಲ್ಲಿ ಬರೆದಿದ್ದಾರೆ.

ವಿದ್ಯಾರ್ಥಿನಿಯರ ಸಾವು ಪ್ರಕರಣ: ಅಮಾನತು

ಚಿಕ್ಕಮಗಳೂರು: ಕೊಪ್ಪ ಪಟ್ಟಣದಲ್ಲಿನ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಮೃತಪಟ್ಟ ಇಬ್ಬರು ಬಾಲಕಿಯರ ಸಾವಿನ ಪ್ರಕರಣದ ಕುರಿತು ತನಿಖೆಗೆ ನಿವೃತ್ತ ನ್ಯಾಯಾಧೀಶೆ ಎಸ್. ಶೋಭಾ ಅವರನ್ನು ನೇಮಿಸಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ(ಕ್ರೈಸ್) ಆದೇಶಿಸಿದೆ. 2025ರ ಜೂನ್ 29ರಂದು ವಸತಿ ಶಾಲೆಯ ಸ್ನಾನದ ಮನೆಯಲ್ಲಿ 9ನೇ ತರಗತಿ ವಿದ್ಯಾರ್ಥಿನಿಯ ಶವ ನೇಣು ಬಿಗಿದ ಸ್ಥಿತಿಯಲ್ಲಿ ದೊರೆತಿತ್ತು. ಸಾವಿನ ಬಗ್ಗೆ ಅನುಮಾನ ವ್ಯಕ್ತಪಡಿಸಿದ್ದ ಪೋಷಕರು, ವಿವಿಧ ಸಂಘಟನೆಗಳ ಮುಖಂಡರು ಮತ್ತು ಸ್ಥಳೀಯರು ಕೊಪ್ಪದಲ್ಲಿ ಪ್ರತಿಭಟನೆ ನಡೆಸಿದ್ದರು. 2023ರ ಜುಲೈ 27ರಂದು ಇದೇ ಶಾಲೆಯ 9ನೇ ತರಗತಿಯ ಮತ್ತೊಬ್ಬ ವಿದ್ಯಾರ್ಥಿನಿಯ ಶವ ಕೂಡ ನೇಣು ಬಿಗಿದ ಸ್ಥಿತಿಯಲ್ಲಿ ದೊರೆತಿತ್ತು. ಎರಡೂ ಪ್ರಕರಣಗಳನ್ನು ತನಿಖೆ ನಡೆಸಲು ಆದೇಶಿಸಲಾಗಿದೆ. ಈ ಪ್ರಕರಣದಲ್ಲಿ ಕರ್ತವ್ಯ ಲೋಪ ಆರೋಪದಲ್ಲಿ ಪ್ರಾಂಶುಪಾಲೆ ರಜಿನಿ ಮತ್ತು ನಿಲಯ ಪಾಲಕ(ಪ್ರಭಾರ) ಸುಂದರ ನಾಯ್ಕ ಅವರನ್ನು ಅಮಾನತು ಮಾಡಿ ಮತ್ತೊಂದು ಆದೇಶವನ್ನು ಕಾಂತರಾಜು ಪಿ.ಸ್. ಹೊರಡಿಸಿದ್ದಾರೆ.

ಸಕ್ಕರೆ ಉದ್ಯಮದಲ್ಲಿ ಗಣನೀಯ ಸಾಧನೆ



ಸತತ ಎರಡು ವರ್ಷ ಪೂರ್ಣ ಪ್ರಮಾಣದ ಬಿಲ್ ಪಾವತಿಯಲ್ಲಿ ಕರ್ನಾಟಕ ದಾಖಲೆ

ಕಬ್ಬು ಬೆಳೆಗಾರರ ಜೀವನದಲ್ಲಿ ಸಿಹಿ ಹಂಚಿದ ಸರಕಾರ

ತೂಕದಲ್ಲಿನ ವಂಚನೆ ತಪ್ಪಿಸಲು ಡಿಜಿಟಲ್ ತೂಕದ ವ್ಯವಸ್ಥೆ | ಸಕ್ಕರೆ ಕ್ಷೇತ್ರದ ಸಂಶೋಧನೆಗೆ ಪ್ರತ್ಯೇಕ ಕೋರ್ಸ್‌ಗಳ ಆರಂಭ

ಪ್ರತ್ಯೇಕ ದಿನಾಂಕ ನಿಗದಿ

ರಾಜ್ಯದ ಸಕ್ಕರೆ ಉದ್ಯಮದ ಇತಿಹಾಸದಲ್ಲಿ ಮೊದಲ ಬಾರಿಗೆ 2023-24 ಮತ್ತು 2024-25 ಈ ಎರಡು ಹಂಗಾಮುಗಳಲ್ಲಿ ದಕ್ಷಿಣ ಮತ್ತು ಉತ್ತರ ಭಾಗದ ಸಕ್ಕರೆ ಕಾರ್ಖಾನೆಗಳಿಗೆ ಪ್ರತ್ಯೇಕವಾಗಿ ಕಬ್ಬು ಅರೆಯುವ ದಿನಾಂಕ ನಿಗದಿಪಡಿಸಿ ಜಾರಿಗೊಳಿಸಲಾಯಿತು. ಈ ಕ್ರಮದಿಂದ ಕಬ್ಬು ಮತ್ತು ಸಕ್ಕರೆ ಉತ್ಪಾದನೆ ಹಾಗೂ ಇಳುವರಿಯಲ್ಲಿ ಸುಧಾರಣೆಯಾಗಿ ರೈತರಿಗೆ ಮತ್ತು ಸಕ್ಕರೆ ಕಾರ್ಖಾನೆಗಳಿಗೆ ಅನುಕೂಲವಾಗಿದೆ.

ಸದ್ಯದಲ್ಲೇ ಹೊಸ ನೀತಿ

ರಾಜ್ಯದಲ್ಲಿ ಹೊಸ ಸಕ್ಕರೆ ಕಾರ್ಖಾನೆಗಳು, ಎಥನಾಲ್ ಘಟಕಗಳನ್ನು ಸ್ಥಾಪಿಸಲು ಹಾಗೂ ಹಾಲಿ ಕಾರ್ಯನಿರ್ವಹಿಸುತ್ತಿರುವ ಸಕ್ಕರೆ ಕಾರ್ಖಾನೆಗಳ ಸಾಮರ್ಥ್ಯ ವಿಸ್ತರಣೆಗೆ ಅನುಮತಿ ನೀಡುವ ಬಗ್ಗೆ ಹೊಸ ನೀತಿ ರೂಪಿಸುವ ಕುರಿತು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಸರಕಾರದ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಸಮಿತಿ ರಚನೆ ಮಾಡಲಾಗಿದೆ. ಈ ಸಮಿತಿ ಹಲವಾರು ಸಭೆ ನಡೆಸಿ ಚರ್ಚೆ ಮಾಡಿದ್ದು, ಹೊಸ ನೀತಿ ರೂಪಿಸುವ ಕಾರ್ಯ ಅಂತಿಮ ಹಂತಕ್ಕೆ ಬಂದಿದೆ.

ಅಗ್ನಿ ಹಾನಿಗೆ ಪರಿಹಾರ

ವಿದ್ಯುತ್ ಅವಘಡದಿಂದ ಕಬ್ಬಿನ ಬೆಳೆ ಬೆಂಕಿಗೆ ಆಹುತಿಯಾದರೆ ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆಯಿಂದ ಪರಿಹಾರ ನೀಡಲು ಇದೇ ಮೊದಲ ಬಾರಿಗೆ ನಿರ್ಧಾರ ತೆಗೆದುಕೊಳ್ಳಲಾಗಿದೆ. ಪ್ರತಿವರ್ಷ ಅಗ್ನಿ ಅವಘಡದಿಂದ ಕಬ್ಬಿನ ಬೆಳೆ ಸುಟ್ಟು ನಾಶವಾಗಿ ಬೆಳೆಗಾರರು ಸಂಕಷ್ಟಕ್ಕೀಡಾಗುತ್ತಿದ್ದಾರೆ. ಈ ರೀತಿ ನಷ್ಟ ಅನುಭವಿಸುವ ಕಬ್ಬು ಬೆಳೆಗಾರರಿಗೆ ನೆರವಾಗಲು ಪರಿಹಾರ ನೀಡುವ ನಿರ್ಧಾರ ಕೈಗೊಳ್ಳಲಾಗಿದೆ. ಈ ಕುರಿತು ಮಾರ್ಗಸೂಚಿ ರಚನೆ ಮಾಡಲಾಗುವುದು.

ತೂಕ ವಂಚನೆ: ಪರಿಹಾರ

ಕಬ್ಬಿನ ತೂಕದಲ್ಲಿ ಕೆಲವು ಸಕ್ಕರೆ ಕಾರ್ಖಾನೆಗಳು ವಂಚನೆ ಮಾಡುತ್ತಿವೆ ಎಂಬ ಆರೋಪವಿದೆ. ಹೀಗಾಗಿ ದಾಖಲೆ ಸಹಿತ ವಂಚನೆ ಪ್ರಕರಣಗಳನ್ನು ಬೆಳಕಿಗೆ ತಂದು ದೂರು ದಾಖಲು ಮಾಡುವ ರೈತರಿಗೆ ಎಸ್. ನಿಜಲಿಂಗಪ್ಪ ಸಕ್ಕರೆ ಕಂಪನಿಯಿಂದ ಐದು ಲಕ್ಷ ರು. ಬಹುಮಾನ ಘೋಷಣೆ ಮಾಡಲಾಗಿದೆ. ಅಷ್ಟೇ ಅಲ್ಲ, ತೂಕದಲ್ಲಿನ ವಂಚನೆ ಬೆಳಕಿಗೆ ತಂದು ದೂರು ದಾಖಲು ಮಾಡುವ ಬೆಳೆಗಾರರ ಕಬ್ಬನ್ನು ನುರಿಸುವ ಹೊಣೆಯನ್ನು ಸರಕಾರವೇ ವಹಿಸಿಕೊಳ್ಳಲಿದೆ.

ಪರಿಶೀಲನೆಗೆ ಸಮಿತಿ

ತೂಕ, ಇಳುವರಿ, ಕಟಾವು ಸಾಗಾಣಿಕೆ, ಕಬ್ಬಿನ ಬಿಲ್ಲಾವತಿ ಹಾಗೂ ಇನ್ನಿತರೆ ಸಕ್ಕರೆ ವಿಷಯಗಳಿಗೆ ಸಂಬಂಧಿಸಿದಂತೆ ದೂರು ಬಂದ ಕಾರ್ಖಾನೆಗಳಿಗೆ ಭೇಟಿ ನೀಡಿ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಲು ಕಬ್ಬು ನಿಯಂತ್ರಣ ಮಂಡಳಿಯ ರೈತ ಪ್ರತಿನಿಧಿಗಳನ್ನೊಳಗೊಂಡ ಹಾಗೂ ಬೆಳಗಾವಿಯ ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆಯ ತಾಂತ್ರಿಕ ಸಮಿತಿಗಳನ್ನು ರಚನೆ ಮಾಡಲು ನಿರ್ಧರಿಸಲಾಗಿದೆ.

ಕೇಂದ್ರದಿಂದ ಬೆಲೆ ನಿಗದಿ

ಕೇಂದ್ರ ಸರಕಾರ 2025-26ನೇ ಸಕ್ಕರೆ ಹಂಗಾಮಿಗೆ ನ್ಯಾಯಯುತ ಮತ್ತು ಲಾಭದಾಯಕ ಬೆಲೆ ನಿಗದಿಪಡಿಸಿದ್ದು, ಪ್ರತಿಶತ 10.25ರಷ್ಟು ಸಕ್ಕರೆ ಇಳುವರಿಗೆ ಪ್ರತಿ ಟನ್‌ಗೆ 3,400 ರು., ಪ್ರತಿಶತ 10.25ಕ್ಕೂ ಮೇಲ್ಪಟ್ಟ ಇಳುವರಿಗೆ ನಂತರದ ಪ್ರತಿಶತ 1ರಷ್ಟು ಇಳುವರಿಗೆ ಪ್ರತಿ ಮೆಟ್ರಿಕ್ ಟನ್‌ಗೆ 332 ರು., ಹೆಚ್ಚುವರಿ ಬೆಲೆ, ಪ್ರತಿಶತ 10.25ಕ್ಕಿಂತ ಕಡಿಮೆ ಹಾಗೂ ಪ್ರತಿಶತ 9.5ಕ್ಕೆ ಮೇಲ್ಪಟ್ಟ ಇಳುವರಿ ಹೊಂದಿರುವ ಸಕ್ಕರೆ ಕಾರ್ಖಾನೆಳಿಗೆ ಶೇ.1ರಷ್ಟು ಇಳುವರಿಗೆ ಪ್ರತಿ ಮೆಟ್ರಿಕ್ ಟನ್‌ಗೆ 332 ರು. ಸರಾಸರಿಯಂತೆ ಎಫ್‌ಆರ್‌ಪಿ ಕಡಿಮೆ ಮಾಡುವುದು. ಶೇ.9.50 ಅಥವಾ 9.50ಗಿಂದ ಕಡಿಮೆ ಇಳುವರಿ ಹೊಂದಿರುವ ಕಾರ್ಖಾನೆಗಳಿಗೆ ಪ್ರತಿ ಮೆಟ್ರಿಕ್ ಟನ್‌ಗೆ 3,151 ರು. ಎಫ್‌ಆರ್‌ಪಿ ನಿಗದಿಪಡಿಸಲಾಗಿದೆ.

ಆವರ್ತ ನಿಧಿ ಸ್ಥಾಪನೆ

ಸರಕಾರ ಸಕ್ಕರೆ ಕಾರ್ಖಾನೆ ಆಡಳಿತ ಮಂಡಳಿಗಳೊಂದಿಗೆ ಚರ್ಚೆ ಮಾಡಿ ನುರಿಸುವ ಪ್ರತಿ ಟನ್ ಕಬ್ಬಿಗೆ ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆ ಒಂದು ರು. ಶುಲ್ಕ ಸಂಗ್ರಹ ಮಾಡುತ್ತಿದೆ. 2023-24ನೇ ಸಾಲಿನಲ್ಲಿ 5.63 ಕೋಟಿ ರು. ಹಾಗೂ 2024-25ನೇ ಸಾಲಿನಲ್ಲಿ 5.21 ಕೋಟಿ ರು.ಗಳ ಶುಲ್ಕದ ಜತೆಗೆ ಈ ಎರಡೂ ವರ್ಷಗಳಲ್ಲಿ ಕ್ರಮವಾಗಿ 70 ಲಕ್ಷ ಮತ್ತು 80 ಲಕ್ಷ ಪರವಾನಗಿ ಶುಲ್ಕ ಸಂಗ್ರಹ ಮಾಡಲಾಗಿದೆ. ಈ ಹಣದಲ್ಲಿ ಎಸ್. ನಿಜಲಿಂಗಪ್ಪ ಸಂಸ್ಥೆ ಪ್ರತಿ ವರ್ಷ 50 ಲಕ್ಷ ರು. ಕಾಯ್ದಿರಿಸಿ ಆವರ್ತ ನಿಧಿ ಸ್ಥಾಪಿಸಲಾಗುವುದು. ಈ ಆವರ್ತ ನಿಧಿಯನ್ನು ಅಗ್ನಿ ಅವಘಡದಿಂದ ಸಂಭವಿಸುವ ಬೆಳೆ ಹಾನಿಗೆ ಗರಿಷ್ಠ ಐದು ಎಕರೆವರೆಗೆ ಪರಿಹಾರ ನೀಡುವ ನಿರ್ಧಾರ ಮಾಡಲಾಗಿದ್ದು, ಇನ್ನೂ ಮಾರ್ಗಸೂಚಿ ಅಂತಿಮಗೊಳಿಸಬೇಕಿದೆ.

ನೂತನ ಕೋರ್ಸ್‌ಗಳು

ಸಕ್ಕರೆ ಉದ್ಯಮದಲ್ಲಿ ಇನ್ನಷ್ಟು ತಾಂತ್ರಿಕ ಕೌಶಲ್ಯ ಪಡೆಯುವ ಹಾಗೂ ರಾಜ್ಯದ ಯುವಕರಿಗೆ ಈ ಬಗ್ಗೆ ಅರಿವು ಮೂಡಿಸುವ ಕಾರ್ಯವಾಗಬೇಕಿದೆ. ಸಕ್ಕರೆ ಕ್ಷೇತ್ರದಲ್ಲಿಯೂ ತಾಂತ್ರಿಕ ಕೌಶಲ್ಯ ಹೊಂದಿರುವ ತಂತ್ರಜ್ಞರಿಗೆ ಬಹಳ ಬೇಡಿಕೆ ಇದೆ. ಹೀಗಾಗಿ ವಿಟಿಯು ಸಹಯೋಗದಲ್ಲಿ ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆಯಿಂದ ಹೊಸದಾಗಿ ಆಲ್ಕೋಹಾಲ್ ಟೆಕ್ನಾಲಜಿ ಮತ್ತು ಶುಗರ್ ಟೆಕ್ನಾಲಜಿ ಕೋರ್ಸ್ ಆರಂಭಿಸಲು ತೀರ್ಮಾನಿಸಿ ಈ ಉದ್ದೇಶಕ್ಕೆ 5 ಕೋಟಿ ರು. ಮೀಸಲಿಡಲಾಗಿದೆ. ಕಾನ್ಪುರ ಮತ್ತು ಮಹಾರಾಷ್ಟ್ರ ಹೊರತುಪಡಿಸಿ ಬೇರೆ ರಾಜ್ಯಗಳಲ್ಲಿ ಈ ಕೋರ್ಸ್‌ಗಳಿಲ್ಲ. ನಿಜಲಿಂಗಪ್ಪ ಸಕ್ಕರೆ ಸಂಸ್ಥೆಯಿಂದ ಪದವಿ ಪಡೆದು ಬರುತ್ತಿದ್ದಂತೆಯೇ ಎಲ್ಲ ಪದವೀಧರರಿಗೂ ಉದ್ಯೋಗದ ಖಾತ್ರಿ ಇದೆ.

ಬೆಂಗಳೂರು: ಕರ್ನಾಟಕದ ಪ್ರಮುಖ ವಾಣಿಜ್ಯ ಬೆಳೆಯಾಗಿರುವ ಕಬ್ಬು ಬೆಳೆಯುವ ರೈತರ ಸಾಮಾನ್ಯ ಸಮಸ್ಯೆಯೆಂದರೆ, 'ಬಾಕಿ ಮೊತ್ತ'ದ ಆತಂಕವೇ ಸದಾ ಇರುತ್ತದೆ. ರಾಜ್ಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ರಾಜ್ಯ ಸರಕಾರ ಅಧಿಕಾರಕ್ಕೆ ಬಂದ ಬಳಿಕ ಕಬ್ಬು ಅಭಿವೃದ್ಧಿ, ಸಕ್ಕರೆ, ಜವಳಿ ಹಾಗೂ ಎಪಿಎಂಸಿ ಜವಾಬ್ದಾರಿ ವಹಿಸಿಕೊಂಡ ಬಳಿಕ ಕಬ್ಬು ಬೆಳೆಗಾರರ ಹಿತರಕ್ಷಣೆ ಹಾಗೂ ಸಕ್ಕರೆ ಉದ್ಯಮದ ಬೆಳವಣಿಗೆಗೆ ಕ್ರಾಂತಿಕಾರಿಕ ಹೆಜ್ಜೆಗಳನ್ನಿಡುವ ಮೂಲಕ ದಾಖಲೆಗಳನ್ನು ಸೃಷ್ಟಿಸಲಾಗಿದೆ.

ಪ್ರತಿವರ್ಷ ಕಬ್ಬು ಬೆಳೆಗಾರರು ಹಾಗೂ ಸಕ್ಕರೆ ಕಾರ್ಖಾನೆ ಮಾಲೀಕರ ನಡುವಿನ 'ಜಟಾಪಟಿ'ಗೆ ಕಾರಣವಾಗುವ ಬಾಕಿ ಮೊತ್ತದ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಶಿವಾನಂದ ಪಾಟೀಲರು ಮಹತ್ವದ ತೀರ್ಮಾನ್ನು ಕೈಗೊಂಡಿದ್ದರಿಂದ ಫಲವಾಗಿ ಕಳೆದ ಎರಡು ವರ್ಷದಿಂದ ರಾಜ್ಯದಲ್ಲಿ ಕಬ್ಬು ಬೆಳೆಗಾರರ ಬಾಕಿ ಮೊತ್ತದ ಸಮಸ್ಯೆ ಕಾಣಿಸಿಕೊಂಡಿಲ್ಲ. ಇದರಿಂದ ರೈತರೂ ಹಾಗೂ ಕಾರ್ಖಾನೆಗಳು ನೆಮ್ಮದಿಯ ನಿಟ್ಟುಸಿರುವ ಬಿಡುವಂತಾಗಿದೆ.

2022-23ನೇ ಸಾಲಿನಲ್ಲಿ ಒಟ್ಟು 603.55 ಲಕ್ಷ ಮೆಟ್ರಿಕ್ ಟನ್ ಕಬ್ಬು ನುರಿಸಿ 50.80 ಲಕ್ಷ ಮೆಟ್ರಿಕ್ ಟನ್ ಸಕ್ಕರೆ ಉತ್ಪಾದನೆ ಮಾಡಲಾಗಿದೆ. ಸಕ್ಕರೆ ಇಳುವರಿ ಪ್ರಮಾಣ 9.91ರಷ್ಟಿದೆ. ಈ ಹಂಗಾಮಿನಲ್ಲಿ ಕಬ್ಬು ಪೂರೈಕೆ ಮಾಡಿದ ರೈತರಿಗೆ ಸಕ್ಕರೆ ಕಾರ್ಖಾನೆಗಳು 19747.85 ಕೋಟಿ ರು. ಪಾವತಿಸಬೇಕಿದ್ದು 20138.93ಕೋಟಿ ಪಾವತಿ ಮಾಡಿವೆ. 2023-24ನೇ ಸಾಲಿನಲ್ಲಿ ಒಟ್ಟು 585.08 ಲಕ್ಷ ಮೆಟ್ರಿಕ್ ಟನ್ ಕಬ್ಬು ನುರಿಸಿ 52.96 ಲಕ್ಷ ಮೆಟ್ರಿಕ್ ಟನ್ ಸಕ್ಕರೆ ಉತ್ಪಾದನೆ ಮಾಡಲಾಗಿದೆ. ಸಕ್ಕರೆ ಇಳುವರಿ ಪ್ರಮಾಣ 9.04ರಷ್ಟಿದೆ. ಈ ಹಂಗಾಮಿನಲ್ಲಿ ಕಬ್ಬು ಪೂರೈಕೆ ಮಾಡಿದ ರೈತರಿಗೆ ಸಕ್ಕರೆ ಕಾರ್ಖಾನೆಗಳು 19,898.65 ಕೋಟಿ ರು. ಪಾವತಿಸಬೇಕಿದ್ದು 20,645.91ಕೋಟಿ ರು. ಪಾವತಿ ಮಾಡಿವೆ. ರಾಜ್ಯದಲ್ಲಿ ಇಳುವರಿ ಹೆಚ್ಚು ಬಂದಿರುವುದರಿಂದ ಎಫ್‌ಆರ್‌ಪಿ ದರಕ್ಕಿಂತ ಹೆಚ್ಚಿನ ಹಣವನ್ನು ರೈತರಿಗೆ ಪಾವತಿಸಲಾಗಿದೆ.

ಕಳೆದ ಎರಡು ವರ್ಷಗಳಿಂದ ಕಬ್ಬು ಬೆಳೆಗಾರರಿಗೆ ಪೂರ್ಣ ಪ್ರಮಾಣದಲ್ಲಿ ಹಣ ಪಾವತಿ ಮಾಡಿದ ಹೆಗ್ಗಳಿಕೆ ಕರ್ನಾಟಕದ್ದು. ಪ್ರತಿವರ್ಷವಿರುತ್ತಿದ್ದ ಬಾಕಿ ಹಣ ಪಾವತಿಯ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ವಿಚಾರದಲ್ಲಿ ಸಚಿವ ಶಿವಾನಂದ ಪಾಟೀಲ ಅವರ ಇಚ್ಛಾಶಕ್ತಿಯೇ ಕಾರಣ. 2022-23 ಮತ್ತು 2023-24ನೇ ಸಾಲಿನಲ್ಲಿ ಕಬ್ಬು ಪೂರೈಕೆ ಮಾಡಿದ ಬೆಳೆಗಾರರಿಗೆ ಸಕ್ಕರೆ ಕಾರ್ಖಾನೆಗಳು ಪೂರ್ಣ ಪ್ರಮಾಣದ ಬಿಲ್ ಪಾವತಿಸಿವೆ. ನೆರೆಯ ಮಹಾರಾಷ್ಟ್ರ ಮತ್ತು ಉತ್ತರ ಪ್ರದೇಶ ರಾಜ್ಯಗಳಲ್ಲಿನ ಸಕ್ಕರೆ ಕಾರ್ಖಾನೆಗಳು ಕಬ್ಬು ಪೂರೈಕೆ ಮಾಡಿದ ರೈತರಿಗೆ ಅತಿ ಹೆಚ್ಚು ಬಾಕಿ ಉಳಿಸಿಕೊಂಡಿವೆ.

ತೂಕದ ಯಂತ್ರಕ್ಕೆ ಡಿಜಿಟಲೀಕರಣ

ಇನ್ನು ತೂಕದಲ್ಲಿನ ವಂಚನೆಯ ಬಗ್ಗೆ ಹಲವು ವರ್ಷಗಳಿಂದ ತೂಕದಲ್ಲಿ ಸಮಸ್ಯೆ ಕಾಣುತ್ತಿತ್ತು. ವಂಚನೆ ಆರೋಪವನ್ನು ರಾಜ್ಯ ಸರಕಾರ ಗಂಭೀರವಾಗಿ ಪರಿಗಣಿಸಿ ಎಲ್ಲ ಸಕ್ಕರೆ ಕಾರ್ಖಾನೆಗಳಲ್ಲಿ ಡಿಜಿಟಲ್ ತೂಕದ ಯಂತ್ರ ಅಳವಡಿಸಿಕೊಳ್ಳಲು ಕ್ರಮ ಕೈಗೊಂಡಿದೆ. ಇನ್ನು ಕೇವಲ ಆರು ಕಾರ್ಖಾನೆಗಳಲ್ಲಿ ಮಾತ್ರ ಡಿಜಿಟಲ್ ತೂಕದ ಯಂತ್ರ ಅಳವಡಿಸುವುದು ಬಾಕಿ ಇದ್ದು, ಪ್ರಸಕ್ತ ಹಂಗಾಮು ಆರಂಭದೊಳಗೆ ಈ ಕಾರ್ಖಾನೆಗಳಲ್ಲೂ ಡಿಜಿಟಲ್ತೂಕದ ಯಂತ್ರಗಳ ಅಳವಡಿಕೆ ಕಡ್ಡಾಯ ಮಾಡಲಾಗಿದೆ.

ದೇಶದಲ್ಲಿಯೇ ಕರ್ನಾಟಕ 3ನೇ ಸ್ಥಾನ

- **ಕಬ್ಬು ಮತ್ತು ಸಕ್ಕರೆ ಉತ್ಪಾದನೆ ಎರಡರಲ್ಲೂ ದೇಶದಲ್ಲಿಯೇ ಕರ್ನಾಟಕ ಮೂರನೇ ಸ್ಥಾನದಲ್ಲಿದ್ದು, ಇದಕ್ಕೆ ರಾಜ್ಯ ಸರಕಾರದ ನೀತಿಗಳೇ ಕಾರಣ. 2024-25ನೇ ಹಂಗಾಮಿನಲ್ಲಿ 79 ಸಕ್ಕರೆ ಕಾರ್ಖಾನೆಗಳು ಕಾರ್ಯನಿರತವಾಗಿವೆ.**
- **ರಾಜ್ಯದ 79 ಸಕ್ಕರೆ ಕಾರ್ಖಾನೆಗಳು ಪ್ರತಿದಿನ 560850 ಟನ್ ಕಬ್ಬು ನುರಿಸುವ ಸಾಮರ್ಥ್ಯ ಹೊಂದಿವೆ. 71 ಕಾರ್ಖಾನೆಗಳು ಸಹ ವಿದ್ಯುತ್ ಘಟಕ ಹೊಂದಿದ್ದು, 2064.86 ಮೆಗಾ ವ್ಯಾಟ್ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಹೊಂದಿವೆ. 39 ಸಕ್ಕರೆ ಕಾರ್ಖಾನೆಗಳು ಸುಮಾರು 7855.00 ಕೆಎಲ್ಪಿಡಿ ಮದ್ಯಸಾರ/ ಎಥನಾಲ್ಉತ್ಪಾದನಾ ಸಾಮರ್ಥ್ಯದ ಮಧ್ಯಸಾರ ಘಟಕ ಹೊಂದಿವೆ.**
- **ರಾಜ್ಯದ ಸಕ್ಕರೆ ಕಾರ್ಖಾನೆಗಳು 2024-25ನೇ ಸಾಲಿನಲ್ಲಿ ಮೇ ಅಂತ್ಯಕ್ಕೆ 503.66 ಲಕ್ಷ ಮೆಟ್ರಿಕ್ ಟನ್ ಕಬ್ಬು ನುರಿಸಿ 41 ಲಕ್ಷ ಮೆಟ್ರಿಕ್ ಟನ್ ಸಕ್ಕರೆ ಉತ್ಪಾದನೆ ಮಾಡಿವೆ.**
- **2025ರ ಮೇ ಅಂತ್ಯಕ್ಕೆ 14 ಸಕ್ಕರೆ ಕಾರ್ಖಾನೆಗಳು ರೈತರಿಗೆ 123 ಕೋಟಿ ರು. ಪಾವತಿಸಬೇಕಿದೆ. ಈ 14 ಸಕ್ಕರೆ ಕಾರ್ಖಾನೆಗಳಲ್ಲಿ 6 ಸಕ್ಕರೆ ಕಾರ್ಖಾನೆಗಳು ಸಕ್ಕರೆ ಇಲಾಖೆ ಹೊರಡಿಸಿದ್ದ ಬಾಕಿ ವಸೂಲಾತಿ ದೃಢೀಕರಣ ಪತ್ರಕ್ಕೆ ಮಧ್ಯಂತರ ತಡೆಯಾಜ್ಞೆ ತಂದಿವೆ. ಈ ಮಧ್ಯಂತರ ತಡೆಯಾಜ್ಞೆ ತೆರವುಗೊಳಿಸಿ ಬಾಕಿ ಪಾವತಿಗೆ ಸರಕಾರ ಕ್ರಮ ಕೈಗೊಂಡಿದೆ.**
- **ನಷ್ಟದಲ್ಲಿರುವ ಎರಡು ಸಕ್ಕರೆ ಕಾರ್ಖಾನೆ ಪುನಶ್ಚೇತನಕ್ಕೆ ಗುತ್ತಿಗೆ ಆಧಾರದ ಮೇಲೆ ಖಾಸಗಿ ಕಂಪನಿಗಳಿಗೆ ನೀಡಲಾಗಿದೆ. ಬಾಗಲಕೋಟ ಜಿಲ್ಲೆಯ ರೈತರ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಮೆ. ಬೀಳಗಿ ಶುಗರ್ ಮಿಲ್ಸ್ ಲಿಮಿಟೆಡ್‌ಗೆ ಹಾಗೂ ಮೈಸೂರು ಜಿಲ್ಲೆಯ ಶ್ರೀರಾಮ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಮೆ. ನಿರಾಣಿ ಶುಗರ್ಸ್‌ಗೆ ಗುತ್ತಿಗೆ ನೀಡಲಾಗಿದೆ.**
- **ಪೆಟ್ರೋಲ್‌ನೊಂದಿಗೆ ಎಥನಾಲ್ ಮಿಶ್ರಣ ಕಾರ್ಯಕ್ರಮದ ಅಡಿಯಲ್ಲಿ ಘೋಷಿಸಲಾದ ಎಥನಾಲ್ ನೀತಿ 2019ರ ಪ್ರಕಾರ ಕೇಂದ್ರ ಸರಕಾರ 2022ರೊಳಗೆ 10ರಷ್ಟು ಮತ್ತು 2025ರೊಳಗೆ ಪ್ರತಿಶತ 20ರಷ್ಟು ಎಥನಾಲ್ ಅನ್ನು ಪೆಟ್ರೋಲ್‌ನೊಂದಿಗೆ ಮಿಶ್ರಣ ಮಾಡುವ ಗುರಿ ನಿಗದಿಪಡಿಸಿದೆ. ಪ್ರಸ್ತುತ ಕರ್ನಾಟಕದಲ್ಲಿ 39 ಸಕ್ಕರೆ ಕಾರ್ಖಾನೆಗಳು ಡಿಸ್ಟಿಲರಿ/ ಎಥನಾಲ್ ಘಟಕಗಳನ್ನು ಹೊಂದಿದ್ದು, ಪ್ರತಿದಿನದ ಸಾಮರ್ಥ್ಯ 7855 ಕೆಎಲ್‌ಡಿಪಿಗಳಾಗಿದೆ.**
- **ಕಬ್ಬು ಬೆಳೆಗಾರರ ಹಿತ ಗಮನದಲ್ಲಿಟ್ಟುಕೊಂಡು 2025-26ನೇ ಸಾಲಿನಲ್ಲಿ ಕಬ್ಬು ಕಟಾವು ಮತ್ತು ಸಾಗಾಣಿಕೆ ವೆಚ್ಚದ ಮಾರ್ಗಸೂಚಿಗಳನ್ನು ಕಬ್ಬು ನಿಯಂತ್ರಣ ಮಂಡಳಿ ಅನುಮೋದನೆ ಪಡೆದು ಪ್ರಕಟಿಸಲಾಗಿದೆ.**

ಸಕ್ಕರೆ ಉದ್ಯಮದ ಆವಿಷ್ಕಾರಕ್ಕೆ ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ ಕೊಡುಗೆ

ಸಕ್ಕರೆ ಉದ್ದಿಮೆ ಸುಧಾರಣೆ ಹಾಗೂ ಕಬ್ಬು ಬೆಳೆಯ ಉತ್ಪಾದನೆ ವೃದ್ಧಿಗೆ ಹೊಸ ಆವಿಷ್ಕಾರಗಳ ಅಗತ್ಯವಿದ್ದು, ಕಬ್ಬು ಬೆಳೆಗಾರರು ಮತ್ತು ಸಕ್ಕರೆ ಕಾರ್ಖಾನೆಗಳ ಹಿತದೃಷ್ಟಿಯಿಂದ ಬೆಳಗಾವಿಯಲ್ಲಿ ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆ ಆರಂಭಿಸಲಾಗಿದೆ. ಈ ಸಂಸ್ಥೆಯ ಮೂಲಕ ಕಬ್ಬಿನ ಹಾಗೂ ಸಕ್ಕರೆ ಮತ್ತು ಇದಕ್ಕೆ ಸಂಬಂಧಿಸಿದ ಇತರ ಉದ್ದಿಮೆಗಳ ಸಂಶೋಧನೆ, ಶೈಕ್ಷಣಿಕತೆ ಮತ್ತು ವಿಸ್ತರಣಾ ಚಟುವಟಿಕೆ ಉತ್ತೇಜಿಸುವುದು, ಅಥವಾ ಕೈಗೊಳ್ಳಲು ಸಹಾಯ ಮಾಡುವುದು.

ಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮಗಳು, ಸಂಶೋಧನೆ ಮತ್ತು ಇತರ ಚಟುವಟಿಕೆಗಳನ್ನು ಗಮನಿಸಿ ಭಾರತ ಸರಕಾರದ ವೈಜ್ಞಾನಿಕ ಮತ್ತು ತಾಂತ್ರಿಕ ಸಚಿವಾಲಯ ನಿಜಲಿಂಗಪ್ಪ ಸಕ್ಕರೆ ಸಂಸ್ಥೆಯನ್ನು ಒಂದು ವೈಜ್ಞಾನಿಕ ಕೈಗಾರಿಕಾ ಸಂಶೋಧನೆಯ ಸಂಸ್ಥೆ ಎಂದು ಮಾನ್ಯತೆ ನೀಡಿದೆ. ಸಂಸ್ಥೆ ಸತತ 4 ವರ್ಷಗಳಿಂದ ಕೊಯಿಮತ್ತೂರಿನಲ್ಲಿರುವ ಕಬ್ಬು ಸಂವರ್ಧನಾ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಂಡು ಹೊಸ ತಳಿಗಳ ಆಯ್ಕೆ ಮಾಡುತ್ತಿದೆ. ಸಿಓ8023 ಮತ್ತು ಸಿಓ 18024 ಹೊಸ ತಳಿಗಳು ಹೆಚ್ಚಿನ ಇಳುವರಿ ಸಕ್ಕರೆ ಅಂಶ ನೀಡುವ ತಳಿಗಳು ಎಂದು ಗುರುತಿಸಿ ಪ್ರಾಯೋಗಿಕವಾಗಿ ಅಭಿವೃದ್ಧಿಪಡಿಸಲಾಗುತ್ತಿದೆ.

ನೀರಿನ ಕೊರತೆ ತಡೆದುಕೊಳ್ಳುವ ಶಕ್ತಿಯ 30 ಹೊಸ ತಳಿಗಳನ್ನು ಕೊಯಿತ್ತೂರಿನಿಂದ ತಂದು ಅವುಗಳ ಪರೀಕ್ಷೆ ಮಾಡಲಾಗುತ್ತಿದೆ. ಈ ಪ್ರಯತ್ನಗಳ ಕಾರಣದಿಂದ ಇತರ ಕಬ್ಬು ಸಂಶೋಧನಾ ಕೇಂದ್ರಗಳಂತೆ ದೆಹಲಿಯ ಭಾರತೀಯ ಸಂಶೋಧನಾ ಕೃಷಿ ಅನುಸಂಧಾನ ಪರಿಷತ್ತು ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆಯನ್ನು ಕಬ್ಬು ಸಂಶೋಧನಾ ಕೇಂದ್ರ ಎಂದು ಪರಿಗಣಿಸಿದೆ. ಸತತವಾಗಿ ಕಬ್ಬಿನ ಅಧಿಕ ಇಳುವರಿ ಪಡೆಯಲು ರೋಗ ಹಾಗೂ ಕೀಟರಹಿತ ಬೀಜಗಳ ಅವಶ್ಯಕತೆ ಇದೆ. 2015ರಿಂದ ಸಂಸ್ಥೆಯಿಂದ ಕಬ್ಬು ಬೆಳೆಗಾರರಿಗೆ ಹಾಗೂ ಸಕ್ಕರೆ ಕಾರ್ಖಾನೆಗಳಿಗೆ ಅಂಗಾಂಶ ಕೃಷಿ ಸಸಿಗಳನ್ನು ನೀಡಲಾಗಿದೆ.

- ಸಕ್ಕರೆ ಗುಣಧರ್ಮ ಹಾಗೂ ಇತರ ಪದಾರ್ಥಗಳ ಗುಣಮಟ್ಟ ಪರೀಕ್ಷಿಸಲು 2015ರಲ್ಲಿ ಜೈವಿಕ ಶುದ್ಧೀಕರಣ ಪ್ರಯೋಗಾಲಯ ಸ್ಥಾಪನೆ ಮಾಡಿ ಅಗತ್ಯ ಉಪಕರಣಗಳನ್ನು ಒದಗಿಸಲಾಗಿದೆ. ಈ ಪ್ರಯೋಗಾಲಯದಿಂದ ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಸಕ್ಕರೆ ಗುಣಮಟ್ಟ, ಮೊಲ್ಯಾಸಿಸ್ ಹಾಗೂ ಉದ್ದಿಮೆಗೆ ಅವಶ್ಯವಿರುವ ಇತರ ಗುಣಧರ್ಮಗಳ ವಿಶ್ಲೇಷಣೆ ಮಾಡಲು ಸಾಧ್ಯವಿದೆ.
- ಹುಕ್ಕೇರಿ ತಾಲೂಕಿನ ಯರಗಟ್ಟಿ ಗ್ರಾಮದಲ್ಲಿ ಕಬ್ಬು ಸಂಶೋಧನೆ ಮತ್ತು ಅಭಿವೃದ್ಧಿಗೆ 50 ಎಕರೆ ಭೂಮಿ ಹಂಚಿಕೆ ಮಾಡಲಾಗಿದ್ದು, ಈ ಕೇಂದ್ರದಲ್ಲಿ ಈಗಾಗಲೇ ಹೊಸ ತಳಿಗಳ ಅಭಿವೃದ್ಧಿ, ಬೀಜೋತ್ಪಾದನೆ ಮತ್ತಿತರ ಚಟುವಟಿಕೆ ಪ್ರಾರಂಭಿಸಲಾಗಿದೆ.
- ಕಬ್ಬಿನಲ್ಲಿ ಸಾವಯವ ಕೃಷಿ ಅಳವಡಿಸಲು ಅಗತ್ಯ ಜೈವಿಕ ಪೀಡೆ ಮತ್ತು ಗೊಬ್ಬರ ಉತ್ಪಾದಿಸಿ ರೈತರಿಗೆ ವಿತರಣೆ ಮಾಡಲು ಬೆಂಗಳೂರಿನ ರಾಷ್ಟ್ರೀಯ ತೋಟಗಾರಿಕಾ ಸಂಶೋಧನಾ ಕೇಂದ್ರದಿಂದ ಪ್ರಯೋಗಾಲಯ ಪ್ರಾರಂಭಿಸಲಾಗಿದೆ.
- ರಾಜ್ಯದ ಸಕ್ಕರೆ ಉದ್ದಿಮೆ ಅವಶ್ಯಕತೆಗಾಗಿ ಕಾನ್ಪುರದ ರಾಷ್ಟ್ರೀಯ ಸಕ್ಕರೆ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಂಡು ಸಕ್ಕರೆ ತಾಂತ್ರಿಕತೆಯ ಬಗ್ಗೆ ವಿಚಾರ ಸಂಕಿರಣ ಮತ್ತು ಕಾರ್ಯಾಗಾರ ಆಯೋಜಿಸಲಾಗುತ್ತಿದೆ. ಸಕ್ಕರೆ ಕಾರ್ಖಾನೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ತಾಂತ್ರಿಕ ಪ್ರಾವೀಣ್ಯತೆ ಹೊಂದದ ಸಿಬ್ಬಂದಿಗೆ ತರಬೇತಿ ನೀಡವದೂ ಕೂಡ ಒಡಂಬಡಿಕೆಯ ಒಂದು ಭಾಗವಾಗಿದೆ.

ಮೈಶುಗರ್ ಪುನಶ್ಚೇತನ

ಮಂಡ್ಯದ ಮೈಶುಗರ್ (ಮೈಸೂರು ಸಕ್ಕರೆ ಕಂಪನಿ) ಪುನಶ್ಚೇತನಕ್ಕೆ ರಾಜ್ಯ ಸರಕಾರ 2023-24ನೇ ಸಾಲಿನ ಬಜೆಟ್‌ನಲ್ಲಿ 50 ಕೋಟಿ ರು. ದುಡಿಯುವ ಬಂಡವಾಳ ನೀಡಿತ್ತು. ಹೀಗಾಗಿ ಆ ಸಾಲಿನಲ್ಲಿ 2.41 ಲಕ್ಷ ಟನ್ ಕಬ್ಬು ನುರಿಸಲು ಸಾಧ್ಯವಾಯಿತು. ಕಬ್ಬು ಪೂರೈಕೆ ಮಾಡಿದ ರೈತರಿಗೆ ಎಫ್‌ಆರ್‌ಪಿ ದರದಂತೆ 70.46 ಕೋಟಿ ರು. ಪೂರ್ಣ ಪಾವತಿ ಮಾಡಲಾಗಿದೆ. 2024-25ನೇ ಸಾಲಿನಲ್ಲಿ 1.99 ಲಕ್ಷ ಟನ್ ಕಬ್ಬು ನುರಿಸಲಾಗಿದೆ. ಈ ಸಕ್ಕರೆ ಕಂಪನಿ 2000 ಇಸ್ವಿಯ ನಂತರ ಕುಂಟುತ್ತಾ ಸಾಗಿದ್ದು. 2001-2002ರಲ್ಲಿ ಸಹವಿದ್ಯುತ್ಘಟಕ ಸ್ಥಾಪನೆಗೆ 76 ಕೋಟಿ ವೆಚ್ಚದಲ್ಲಿ ಯೋಜನೆ ರೂಪಿಸಲಾಗಿತ್ತು. ಸಹ ವಿದ್ಯುತ್ ಘಟಕವನ್ನು ಪ್ರಾಯೋಗಿಕವಾಗಿ ಚಾಲನೆ ಮಾಡಿದರೂ ಉತ್ಪಾದನೆ ಆರಂಭಿಸಿರಲಿಲ್ಲ. ಚೆಸ್ಕಾಂನಿಂದ ವಿದ್ಯುತ್ ಪಡೆದು ಸಕ್ಕರೆ ಕಂಪನಿಯನ್ನು ನಿರ್ವಹಿಸಲಾಗುತಿತ್ತು. 2019ರಿಂದ 2022 ರವರೆಗೆ ಮೂರು ವರ್ಷಗಳಿಂದ ಸ್ಥಗಿತಗೊಂಡಿದ್ದ ಮೈಸೂರು ಸಕ್ಕರೆ ಕಂಪನಿಯನ್ನು ಪುನರಾರಂಭ ಮಾಡಿದ್ದುಅಷ್ಟೇ ಅಲ್ಲ, ಸಹ ವಿದ್ಯುತ್ಘಟಕವನ್ನೂ ಆರಂಭಿಸಲಾಯಿತು. ಸಹ ವಿದ್ಯುತ್ ಘಟಕ 2024ರಿಂದ ಆರಂಭವಾಗಿದ್ದು, ಸಕ್ಕರೆ ಕಂಪನಿಯ ಇತಿಹಾಸದಲ್ಲೇ ಕಬ್ಬು ನುರಿಸುವುದಕ್ಕಿಂತ ಮೊದಲು ಸಹವಿದ್ಯುತ್ಘಟಕ ಆರಂಭ ಮಾಡಿದ್ದು ಇದು ಮೈಲುಗಲ್ಲಾಗಿದೆ.

1.51 ಕೋಟಿ ಯೂನಿಟ್ ಉತ್ಪಾದನೆ: ಮೈಶುಗರ್ನ ಸಹವಿದ್ಯುತ್ ಘಟಕದಿಂದ 2024-25ರ ಸಾಲಿನಲ್ಲಿ 1.51 ಕೋಟಿ ಯೂನಿಟ್ವಿದ್ಯುತ್ ಉತ್ಪಾದಿಸಿ ಅದರಲ್ಲಿ 71 ಲಕ್ಷ ಯುನಿಟ್‌ಗಳನ್ನು ಕೆಪಿಟಿಸಿಎಲ್ ವಿದ್ಯುತ್ ಜಾಲಕ್ಕೆ ರಫ್ತು ಮಾಡಿ ಸುಮಾರು 4.35 ಕೋಟಿ ರು. ಆದಾಯ ಗಳಿಸಲಾಗಿದೆ. ರಫ್ತು ಹೊರತುಪಡಿಸಿದ ವಿದ್ಯುತ್ತನ್ನು ಸಕ್ಕರೆ ಕಾರ್ಖಾನೆಯ ಸ್ವಯಂ ಬಳಕೆಗೆ ವಿನಿಯೋಗ ಮಾಡಲಾಗಿದೆ.

ಮೈಶುಗರ್‌ನ ಗುರಿ

- **100-120** ಕೆಎಲ್‌ಪಿಡಿ ಸಾಮರ್ಥ್ಯದ ಎಥನಾಲ್ ಘಟಕ ಸ್ಥಾಪನೆ
- 2025-26ನೇ ಹಂಗಾಮಿನಲ್ಲಿ **2.5** ಲಕ್ಷ ಮೆಟ್ರಿಕ್ ಟನ್ ಕಬ್ಬು ನುರಿಸುವುದು
- ಸಕ್ಕರೆ ಇಳುವರಿ ಪ್ರಮಾಣವನ್ನು ಪ್ರತಿಶತ **8**ರಿಂದ **8.5**ಕ್ಕೆ ಹೆಚ್ಚಿಸುವುದು

ವಿಶ್ವವಾಣಿ

ಸಂಪಾದಕೀಯ

ಹೃದಯಾಘಾತ: ಆತಂಕ ಬೇಡ

ಇತ್ತೀಚಿನ ದಿನಗಳಲ್ಲಿ ಹೃದಯಾಘಾತದಿಂದ ಸಾವನ್ನಪ್ಪುವವರ ಸಂಖ್ಯೆ ಹೆಚ್ಚಳವಾಗಿದ್ದು, ರಾಜ್ಯದೆಲ್ಲೆಡೆ ಆತಂಕದ ವಾತಾವರಣ ಸೃಷ್ಟಿಯಾಗಿದೆ. ಮೊದಲೆಲ್ಲಾ ವಯಸ್ಕರರಿಗೆ ಮಾತ್ರ ಹೃದಯಾಘಾತವಾಗುತ್ತದೆ ಎನ್ನಲಾಗಿತ್ತು. ಆದರೆ ಇದೀಗ ಚಿಕ್ಕ ಮಕ್ಕಳು ಕೂಡ ಹೃದಯಾಘಾತಕ್ಕೆ ಬಲಿಯಾಗುತ್ತಿವೆ. ಈ ವರ್ಷದ ಆರಂಭದಲ್ಲಿ, ಚಾಮರಾಜನಗರ ಜಿಲ್ಲೆಯಲ್ಲಿ ಎಂಟು ವರ್ಷದ ಬಾಲಕಿಯೊಬ್ಬಳು ಹೃದಯ ಸ್ತಂಭನದಿಂದ ಸಾವಿಗೀಡಾಗಿದ್ದಳು. ಆ ಘಟನೆ ಮಾಸುವ ಮುನ್ನವೇ ಬುಧವಾರ ಗುಂಡ್ಲುಪೇಟೆಯಲ್ಲಿ 10 ವರ್ಷದ ಬಾಲಕನೊಬ್ಬ ಮೃತಪಟ್ಟಿದ್ದಾನೆ. ಇದರಿಂದ ಭೀತಿಗೊಳಗಾಗಿರುವ ಜನರು ಹೃದಯ ತಪಾಸಣೆಗಾಗಿ ಆಸ್ಪತ್ರೆಗಳಿಗೆ ಮುಗಿಬೀಳುತ್ತಿದ್ದಾರೆ. ಕೋವಿಡ್ ಲಸಿಕೆಯಿಂದ ಹೃದಯಾಘಾತ ಸಂಭವಿಸುತ್ತಿವೆ ಎಂಬುದು ಬಹುತೇಕರ ಗುಮಾನಿಯಾಗಿತ್ತು. ಆದರೆ ಸರಕಾರ ನೇಮಿಸಿದ್ದ ಸಮಿತಿಯು ಕೋವಿಡ್ ಲಸಿಕೆಗೂ ಹೃದಯಾಘಾತಕ್ಕೂ ಸಂಬಂಧವಿಲ್ಲವೆಂದು ತಿಳಿಸಿದ ಬಳಿಕ ಜೀವನಶೈಲಿಯಲ್ಲಿ ಆಗಿರುವ ಬದಲಾವಣೆಗಳಿಗೂ ಇರಬಹುದಾದ ಸಂಬಂಧದ ಬಗ್ಗೆ ವಿಶ್ಲೇಷಣೆಗಳೂ ನಡೆದಿವೆ. ಆಧುನಿಕ ಜೀವನ ಶೈಲಿ, ಅಸುರಕ್ಷಿತ ಆಹಾರ ಕ್ರಮ, ದೈನಂದಿನ ಜೀವನದಲ್ಲಿ ಮಾನಸಿಕ ಒತ್ತಡ ಹಾಗೂ ಅತಿಯಾದ ಮೊಬೈಲ್ ಫೋನ್ ಬಳಕೆಯಿಂದ ಇತ್ತೀಚಿನ ದಿನಗಳಲ್ಲಿ ಹೃದಯಾಘಾತದ ಪ್ರಕರಣಗಳು ಹೆಚ್ಚಾಗುತ್ತಿವೆ ಎಂದು ತಜ್ಞರು ಕೂಡ ಅಭಿಪ್ರಾಯಪಟ್ಟಿದ್ದಾರೆ. ಹೀಗಾಗಿ ಸಾರ್ವಜನಿಕರು ಆಸ್ಪತ್ರೆಗಳಿಗೆ ಧಾವಿಸುವುದಕ್ಕಿಂತ ಜೀವನಶೈಲಿಯನ್ನು ಬದಲಿಸಿಕೊಳ್ಳುವುದರತ್ತ ಗಮನ ಹರಿಸಬೇಕಾದ ಅಗತ್ಯವಿದೆ. ಅಸುರಕ್ಷಿತ ಆಹಾರ ಸೇವನೆ ತ್ಯಜಿಸಿ ಮನೆಯಲ್ಲಿ ತಯಾರಿಸಿದ ಆಹಾರ ಸೇವನೆ ಮಾಡುವುದು, ಪ್ರತಿ ದಿನ ಯೋಗ ಅಥವಾ ದೈಹಿಕ ವ್ಯಾಯಾಮದ ಚಟುವಟಿಕೆಗಳನ್ನು ರೂಢಿಸಿಕೊಳ್ಳುವುದು, ಮೊಬೈಲ್ ಫೋನ್ ಮಿತವಾಗಿ ಬಳಸುವುದನ್ನು ರೂಢಿಸಿಕೊಳ್ಳಬೇಕಿದೆ. ಪ್ರತಿ ಮೂರು ತಿಂಗಳಿಗೊಮ್ಮೆಯಾದರೂ, ಹೃದಯದ ಆರೋಗ್ಯ ಸಂಬಂಧಿ ರಕ್ತ ಪರೀಕ್ಷೆ ಮತ್ತು ಇತರೆ ಪರೀಕ್ಷೆಗಳನ್ನು ಮಾಡಿಸಿಕೊಳ್ಳಬೇಕಿದೆ. ಸಾರ್ವಜನಿಕರಿಗೆ ಇದರ ಬಗ್ಗೆ ಅರಿವು ಮೂಡಿಸುವ ಅಗತ್ಯವಿದೆ. ಸಾರ್ವಜನಿಕರು ಯಾವುದೇ ಗೊಂದಲಕ್ಕೆ ಒಳಗಾಗದೆ ಹೃದಯ ಸಂಬಂಧಿ ಕಾಯಿಲೆಗಳನ್ನು ಪ್ರಾರಂಭಿಕ ಹಂತದಲ್ಲಿ ಪತ್ತೆ ಹಚ್ಚಿ ಸೂಕ್ತ ಚಿಕಿತ್ಸೆ ಪಡೆಯುವುದು ಒಳ್ಳೆಯದು.

ಸೊಂಪಾದಕೀಯ

ಪಾರ್ಕಿಂಗ್ ಡಮ್

ನಮ್ಮ ರಾಜಧಾನಿ ಬೆಂಗಳೂರಿನಲ್ಲಿ ದೊಡ್ಡ ಸಮಸ್ಯೆಗಳು ಅಂದ್ರೆ ಟ್ರಾಫಿಕ್ ಜಾಮ್ ಮತ್ತು ಪಾರ್ಕಿಂಗ್ ಸಮಸ್ಯೆ. ಒಂದು ನಗರ ಬೆಳೆಯುತ್ತಿದ್ದಂತೆ ಜನರ ಕೈಯಲ್ಲಿ ದುಡ್ಡು ಓಡಾಡುತ್ತದೆ, ಹಾಗಾಗಿ ಜನ ಗಾಡಿಗಳಲ್ಲಿ ಓಡಾಡೋದು ಜಾಸ್ತಿ ಆಗುತ್ತೆ ಅನ್ನೋದು ಸಹಜ. ಆದರೆ, ಇದರಿಂದ ಟ್ರಾಫಿಕ್ ಜಾಮ್ ಮತ್ತು ಪಾರ್ಕಿಂಗ್ ಸಮಸ್ಯೆಯೂ ಬೆಳೆಯುತ್ತದೆ. ಟ್ರಾಫಿಕ್ ಜಾಮ್ ಸಮಸ್ಯೆಯನ್ನು ಹೋಗೋ ನಿಭಾಯಿಸಬಹುದು. ಆದರೆ ಹೊರಗೆ ಬೈಕ್ ಕಾರುಗಳನ್ನು ತೆಗೆದುಕೊಂಡು ಹೋದಾಗ ಕೆಲವೊಮ್ಮೆ ಪಾರ್ಕಿಂಗ್ ಮಾಡೋಕೇ ಎಷ್ಟೋ ಹೊತ್ತು ಸಮಯ ವೇಸ್ಟ್ ಮಾಡಬೇಕಾಗುತ್ತದೆ. ಹಾಗಾಗಿ ಈ ಪಾರ್ಕಿಂಗ್ ವಿಷ್ಯದಲ್ಲಿ ನಿಯಮಗಳನ್ನು ಬ್ರೇಕ್ ಮಾಡೋರು ತುಂಬಾ ಜನ. ಆದರೆ ಇದಕ್ಕೆಲ್ಲಾ ಬ್ರೇಕ್ ಹಾಕೋಕೆ ಪೊಲೀಸರು ಟ್ರಾಫಿಕ್ ನಿಯಮಗಳನ್ನು ಸ್ಟ್ರಿಕ್ಟ್ ಮಾಡುತ್ತಲೇ ಬಂದಿದ್ದಾರೆ. ಈಗ ಈ ಪಾರ್ಕಿಂಗ್ ನಿಯಮ ಮುರಿಯುವವರು ಈ ಸುದ್ದಿ ಕೇಳಿ ಮೂಗು ಮುರಿಯಬಹುದು ಅನ್ನೋ ವಿಷಯ ಇಲ್ಲಿದೆ. ಇನ್ನು ಮುಂದೆ, ಎಲ್ಲೆಂದರಲ್ಲಿ ಪಾರ್ಕ್ ಮಾಡೋದು, ಫುಟ್ ಪಾತ್ ಮೇಲೆ ಪಾರ್ಕ್ ಮಾಡೋದು, ಹೀಗೆ ಪಾರ್ಕಿಂಗ್ ನಿಯಮಗಳನ್ನು ಮುರಿಯೋ ಕೆಲಸ ಮಾಡಿದರೆ, ಜೈಲಿನಲ್ಲಿ ಮುದ್ದೆ ಮುರಿಯುವ ಪರಿಸ್ಥಿತಿ ಬಂದರೂ ಬರಬಹುದು. ಮೊದಲು ಮತ್ತು ಎರಡನೇ ಬಾರಿಗೆ ರೂಲ್ಸ್ ಬ್ರೇಕ್ ಮಾಡಿ ಪಾರ್ಕಿಂಗ್ ಮಾಡಿದರೆ ಎಂದಿನಂತೆ ಮುಚ್ಕೊಂಡು ಫೈನ್ ಕಟ್ಟಬೇಕು. ಆದರೆ ಮೂರನೇ ಬಾರಿ ರಿಪೀಟ್ ಆದ್ರೆ ಇನ್ನು ಮುಂದೆ ಹೀಗೆ ಮಾಡಲ್ಲ ಅಂತ ಮುಚ್ಚಳಿಕೆ ಬರೆದುಕೊಡಬೇಕಂತೆ. ಆದರೆ ಈ ಮುಚ್ಚಳಿಕೆಗೆ ಭಾರೀ ಮಹತ್ವ ಇದೆ. ಇದನ್ನು ಬರೆದುಕೊಟ್ಟ ನಂತರ ಮತ್ತೆ ನೀವು ಮಾಡಬಾರದ ಜಾಗದಲ್ಲಿ ಗಾಡಿ ಪಾರ್ಕಿಂಗ್ ಮಾಡಿ ಸಿಕ್ಕಿಬಿದ್ದರೆ, ಜೈಲಿನಲ್ಲಿ ಬಾಡಿ ಪಾರ್ಕಿಂಗ್ ಮಾಡಬೇಕಾಗುತ್ತದೆ. ಹೊಸ ನಿಯಮದ ಪ್ರಕಾರ ಮುಚ್ಚಳಿಕೆ ಬರೆದುಕೊಟ್ಟ ನಂತರವೂ ಮತ್ತೆ ತಪ್ಪು ಮಾಡಿದರೆ, 50 ಸಾವಿರದಿಂದ ಒಂದು ಲಕ್ಷ ರುಪಾಯಿವರೆಗಿನ ದಂಡ ವಿಧಿಸಲಾಗುತ್ತದೆ. ದಂಡ ಕಟ್ಟಲು ಆಗದಿದ್ದರೆ ತಟ್ಟೆ, ಲೋಟದೊಂದಿಗೆ ಜೈಲೂಟ ಗ್ಯಾರಂಟಿ. ಈಗಾಗಲೇ ಹಲವಾರು ಜನರ ಬಳಿ ಪೊಲೀಸರು ಈ ರೀತಿಯ ಮುಚ್ಚಳಿಕೆ ಬರೆಸಿಕೊಂಡಿದ್ದಾರಂತೆ. ಫುಟ್ ಪಾತ್ ಗಳ ಮೇಲೆ ನಿಮಯ ಮೀರಿ ಪಾರ್ಕ್ ಮಾಡುವವರಿಗಷ್ಟೇ ಅಲ್ಲದೆ, ಫುಟ್ ಪಾತ್ ಮೇಲೆ ವ್ಯಾಪಾರ ಮಾಡುವವರಿಗೂ ಈ ನಿಯಮ ಅನ್ವಯಿಸುತ್ತದೆ ಎನ್ನಲಾಗಿದೆ. ಆದರೆ ಬೇರೆ ಕಡೆ ಜಾಗ ಸಿಗದೆ, ಎಷ್ಟೋ ವರ್ಷಗಳಿಂದ ಫುಟ್ ಪಾತ್ ಮೇಲೆಯೇ ವ್ಯಾಪಾರ ಮಾಡಿ ಜೀವನ ಮಾಡುತ್ತಿರುವ ಬೀದಿ ಬದಿ ವ್ಯಾಪಾರಿಗಳು ಈ ನಿಯಮ ಕೇಳಿ, ಮೈ ಫುಟ್ ಅಂತ ಹಿಡಿ ಶಾಪ ಹಾಕುತ್ತಿದ್ದಾರಂತೆ.

ಸಂಪಾದಕರ ಸದ್ಯಶೋಧನೆ

ನೀರು, ದುಂಬಿ ಇತ್ಯಾದಿ

ಕನ್ನಡವೂ ಸೇರಿದಂತೆ ಎಲ್ಲಾ ಭಾಷೆಗಳಲ್ಲೂ ಒಂದೇ ಅರ್ಥ ಕೊಡುವ ಅನೇಕ ಪದಗಳಿರುವ ಬಗ್ಗೆ ಹೇಳಿ, ಸಾವು ಅಥವಾ ನಿಧನಕ್ಕೆ ಕನ್ನಡದಲ್ಲಿ ಕನಿಷ್ಠ ಒಂದು ಡಜನ್ ಗಿಂತ ಹೆಚ್ಚು ಪದಗಳಿರುವ ಕುರಿತು ಈ ಅಂಕಣದಲ್ಲಿ ಪ್ರಸ್ತಾಪಿಸಿದ್ದೆ. ಇದು ಕೇವಲ ಸಾವಿಗಷ್ಟೇ ಅಲ್ಲ, ಇನ್ನೂ ಅನೇಕ ಪದಗಳು ಈ ವಿಷಯದಲ್ಲಿ 'ಭಾಗ್ಯಶಾಲಿ'ಗಳೇ. ಉದಾಹರಣೆಗೆ ನೀರು. ಸಂಸ್ಕೃತದಲ್ಲಿ ನೀರಿಗೆ ಜಲಂ, ಉದಕಂ, ನೀರಂ, ಪುಷ್ಕರಂ, ಪಾನಿಯಂ, ವಾರಿ, ತೋಯಂ, ಆಪಃ, ಅಹಿ, ಅಂಕುರ, ಬುಬುರಂ, ಪಾಯಂ, ಕವನಂ, ಪೀವಾ, ಸವರಃ, ಸತೀಕಮ್, ತಾಮರಂ, ಕುವಲಮ್, ಸತೀನಂ, ಬಲಾಹಂ, ಸಲಂ, ಅಬ್ಜು, ಸಮುಂದ್, ಬಾರ್ಹಿಸ್, ನಳಿನ, ಸರ್ವ, ವರುಣ, ಉದ್ರ ಸೇರಿದಂತೆ 160 ಕ್ಕಿಂತ ಹೆಚ್ಚು ಪದಗಳಿವೆ. ಒಂದು ಪದಕ್ಕೆ ಸಮನಾದ ಹದಿನೈದು - ಇಪ್ಪತ್ತು ಪದಗಳಿರುವುದು ಸಾಮಾನ್ಯ. ನೀರಿನ ಬಗ್ಗೆ ಸಂಸ್ಕೃತದಲ್ಲಿ ಅಷ್ಟೊಂದು ಪದಗಳಿರುವುದು ನಿಜಕ್ಕೂ ಆಶ್ಚರ್ಯವೇ. ಬೇರೆ ಯಾವ ಭಾಷೆಯಲ್ಲೂ ಒಂದು ವಸ್ತುವನ್ನು ಬಣ್ಣಿಸಲು ಅಷ್ಟು ಪದಗಳನ್ನು ಕಾಣಲು ಸಾಧ್ಯವಿಲ್ಲ. ಅದು ಸಂಸ್ಕೃತದ ಹಿರಿಮೆ. ಭಾಷಾ ತಜ್ಞರ ಪ್ರಕಾರ, ಯಾವುದೇ ಭಾಷೆಯಲ್ಲಿ ಒಂದು ಪದವನ್ನು ಹೇಳಲು ಆರಕ್ಕಿಂತ ಹೆಚ್ಚು ಪದಗಳಿದ್ದರೆ, ಆ ಭಾಷೆ ಸಂಪದ್ಭರಿತವಾದ, ಜನಬಳಕೆಯ ಭಾಷೆ. ಸಂಸ್ಕೃತ ಯಾಕೆ ಪರಿಪೂರ್ಣ ಮತ್ತು ಸಂಪದ್ಭರಿತ ಭಾಷೆ ಎನ್ನಲು ಇದೊಂದೇ ನಿದರ್ಶನ ಸಾಕು. ಸಂಸ್ಕೃತದಲ್ಲಿ ಬಹುತೇಕ ಪದಗಳನ್ನು ಬಣ್ಣಿಸಲು ಐದಕ್ಕಿಂತ ಹೆಚ್ಚು ಪದಗಳಿವೆ. ಮತ್ತೇನೂ ಬೇಡ, ದುಂಬಿಯನ್ನು ಬಣ್ಣಿಸಲು ಸಂಸ್ಕೃತದಲ್ಲಿ ಎಷ್ಟು ಪದಗಳಿವೆ ನೋಡಿ. 'ಇಂದಿಂದಿರಶ್ಚಂಚರೀಕೋ ರೋಲಂಬೋ ಒಂಭರಶ್ವಸಃ' ಎಂಬ ಒಂದು ಸಂಸ್ಕೃತ ಶ್ಲೋಕದಲ್ಲಿ ದುಂಬಿಗೆ ಎಷ್ಟೆಲ್ಲಾ ಪದಗಳಿವೆ ಎಂಬುದನ್ನು ಗಮನಿಸಬಹುದು. ಇಂದಿಂದಿರ, ಚಂಚರೀಕ, ರೋಲಂಬ, ಬಂಭರ ... ಅಂದರೆ ದುಂಬಿ. ಇಷ್ಟೇ ಅಲ್ಲ, ದುಂಬಿಗೆ ಮಧುವ್ರತ, ಮಧುಪ, ಮಧುಕರ, ಅಲೀ, ದ್ವಿರೇಪ, ಭೃಂಗ, ಷಟ್ಪದ, ಭ್ರಮರ ಎಂಬ ಹೆಸರುಗಳೂ ಇವೆ. ಇದನ್ನು ಕನ್ನಡ ನಿಘಂಟು ತಜ್ಞರಾದ ಪ್ರೊ.ಜಿ.ವೆಂಕಟಸುಬ್ಬಯ್ಯ ತಮ್ಮ 'ಇಗೋ ಕನ್ನಡ' ಎಂಬ ಸಾಮಾಜಿಕ ಪದಕೋಶದಲ್ಲಿ ವಿವರಿಸಿದ್ದಾರೆ. ದುಂಬಿಯನ್ನು ಬಣ್ಣಿಸುವ ಈ ಪ್ರತಿಯೊಂದು ಪದಕ್ಕೂ ವ್ಯುತ್ಪತ್ತಿ ಬೇರೆಯದೇ ಇದೆ. ಇಂದಿಂದಿರ ಅಂದರೆ ಇಂದಿರೆಗೆ ಅರ್ಥಾತ್ ಲಕ್ಷ್ಮಿಗೆ ಪರಮ ಸಿರಿ, ಚಲಿಸುವುದರಿಂದ ಚಂಚರೀಕ, ಝೇಂಕಾರ ಶಬ್ದ ಮಾಡುವುದರಿಂದ ರೋಲಂಬ, ಅದೇ ಅರ್ಥಕ್ಕೆ ಮತ್ತೊಂದು ಹೆಸರು ಬಂಭರ. ಹೀಗೆ ಈ ಹನ್ನೆರಡು ಹೆಸರುಗಳನ್ನು ಕವಿಗಳು ವ್ಯಾಪಕವಾಗಿ ಬಳಸುತ್ತಾರೆ. ಇಷ್ಟೇ ಅಲ್ಲ, ದುಂಬಿಗೆ ನಾಲಗೆ ಸುತ್ತಿಕೊಳ್ಳುವ, ಹೇಳಲು ಕಷ್ಟವೆನಿಸುವ ಮತ್ತೊಂದು ಪದವಿದೆ. ಅದು ಚಂಚಚ್ಚಂಚರೀಕ. ಚಂಚತ್ ಅಂದರೆ ಹಾರಾಡುತ್ತಿರುವ, ಚಲಿಸುತ್ತಿರುವ ಎಂದು ಅರ್ಥ. ಆದ್ದರಿಂದ ಚಂಚಚ್ಚಂಚರೀಕ ಅಂದರೆ ಹಾರಾಡುವ ದುಂಬಿ ಎಂದರ್ಥ. 'ಕಾದಂಬರಿ' ಗ್ರಂಥದಲ್ಲಿ ಇದನ್ನು, 'ವನಲತಾಂದೋಳಿತಾಮೋದ ಸಂತರ್ಪಿತ ಚಂಚಚ್ಚಂಚರೀಕಂ' ಎಂದು ಬಣ್ಣಿಸಲಾಗಿದೆ. ಕಾಡು ಅಥವಾ ವನದಲ್ಲಿರುವ ಹೂ ಗಿಡ, ಬಳ್ಳಿಗಳ ಪರಿಮಳದಿಂದ ಸಂತೋಷಗೊಂಡ ದುಂಬಿಗಳು ಎಂದರ್ಥ. ಈ 'ಕಾದಂಬರಿ' ಗ್ರಂಥ ಸಂಸ್ಕೃತದ ಬಾಣಕವಿಯ ಗದ್ಯ ಗ್ರಂಥದ ಅನುವಾದವಾದ ಕನ್ನಡ ಚಂಪೂ ಕಾವ್ಯದಲ್ಲಿದೆ' ಎಂದು ಪ್ರೊ. ವೆಂಕಟಸುಬ್ಬಯ್ಯ ಅವರು ವಿವರಿಸಿದ್ದಾರೆ. ಇದು ಒಂದು ಭಾಷೆಯ ಗಟ್ಟಿತನ ಮತ್ತು ಶ್ರೀಮಂತಿಕೆಯ ಪ್ರದರ್ಶನ. ಇಂಗ್ಲೀಷಿನಲ್ಲಿ ದುಂಬಿಗೆ bumblebee ಎನ್ನುತ್ತಾರೆ. ಇದಕ್ಕೆ ಸಮನಾಗಿ, honeybee, queenbee, killerbee ಎಂಬ ಪದಗಳಿವೆ ಎಂದು ಪದಕೋಶದಲ್ಲಿ ಹೇಳಲಾಗಿದೆ. ಆದರೆ ದುಂಬಿಯೇ ಬೇರೆ, ಜೇನು ಹುಳುವೇ ಬೇರೆ. ಅದು ಆ ಪ್ರಬೇಧಕ್ಕೆ (bee) ಸೇರಿದ ಹುಳುವಾಗಿರಬಹುದು. ಆದರೆ ದುಂಬಿ ಮತ್ತು ಜೇನುಹುಳು ಒಂದೇ ಅಲ್ಲ, bee ಎಂದಿದ್ದ ಮಾತ್ರಕ್ಕೆ bumblebee ಮತ್ತು honeybee ಒಂದೇ ಆಗಲಾರದು.

ಇಲ್ಲಿ ಮೀನು ಮಾರುಕಟ್ಟೆ ಶಾಂತ, ಜನಜೀವನ ಪ್ರಶಾಂತ!

ನೂರೆಂಟು ವಿಶ್ವ
ವಿಶ್ವೇಶ್ವರ ಭಟ್
vbhat@me.com

ಪತ್ರಕರ್ತರಾದರೆ ಯಾವತ್ತೂ ಇದೊಂದು ಗೋಳು. ಬೆಳಗ್ಗೆ ಏಳುವ ಹೊತ್ತಿಗೆ ಪತ್ರಿಕೆ ಮನೆ ಮುಂದೆ ಬಿದ್ದಿರಬೇಕು. ಕೆಲವರಿಗೆ ಹಾಸಿಗೆಯಿಂದ ಏಳುತ್ತಿದ್ದಂತೆ, ಕಾಫಿ ಕುಡಿಯದಿದ್ದರೆ, ಸಿಗರೇಟ್ ಸೇದದಿದ್ದರೆ 'ಟಾಯ್ಲೆಟ್' ಬರುವುದಿಲ್ಲ. ಪತ್ರಕರ್ತರಿಗೆ ಎದ್ದ ತಕ್ಷಣ ಪತ್ರಿಕೆ ಓದದಿದ್ದರೆ ಹಾಗೇ ಆಗುತ್ತದೆ. ಇಡೀ ದಿನ ಪತ್ರಿಕೆ ಸಿಗದಿದ್ದರೆ, ಮೂಡ್ ಆಫ್. ಏನೋ ಕಳೆದುಕೊಂಡ ಅನುಭವ. ಇಡೀ ದಿನ ಸಿಡಸಿಡ. ಅದರಲ್ಲೂ ಕೋವಿಡ್ ನಂತರ ವಿಶ್ವದೆಲ್ಲೆಡೆ ಹೋಟೆಲುಗಳಲ್ಲಿ ರೂಮಿಗೆ ಪತ್ರಿಕೆ ಪೂರೈಸುವ ಪರಿಪಾಠವೇ ನಿಂತು ಹೋಗಿದೆ. ನಾನು ಯಾವುದೇ ಊರಿಗೆ ಹೋದರೂ, ಬೆಳಗ್ಗೆ ರೂಮಿಗೆ ಪತ್ರಿಕೆ ಹಾಕುವಂತೆ ಹೇಳುತ್ತೇನೆ. ಒಂದು ವೇಳೆ ಸಾಧ್ಯವಿಲ್ಲ ಅಂತ ಹೇಳಿದರೆ, ನನ್ನ ಬುಕಿಂಗ್ ರದ್ದು ಮಾಡುವುದಾಗಿ ಹುಸಿ ಕೋಪ ಪ್ರದರ್ಶಿಸುತ್ತೇನೆ. ಒಂದು ಪತ್ರಿಕೆಯನ್ನು ಪೂರೈಸಲು ಆಗದಿದ್ದರೆ ಹೇಗೆ ಎಂದು ಸಣ್ಣ ಮುನಿಸು ವ್ಯಕ್ತಪಡಿಸಿದ ಬಳಿಕ ಯಾರೂ ಇಲ್ಲ ಎಂದು ಹೇಳುವುದಿಲ್ಲ. ವಿದೇಶಗಳಲ್ಲಿ ಹೋಟೆಲ್ ರೂಮಿಗೆ ಪತ್ರಿಕೆ ಪೂರೈಸುವ ಸಂಪ್ರದಾಯ ನಿಂತು ಹೋಗಿದೆ. ಆದರೂ ಅಲ್ಲೂ ವರಾತ ಮಾಡಿದರೆ, ಕೋರಿಕೆಯನ್ನು ಈಡೇರಿಸುತ್ತಾರೆ.

ಎರಡು ತಿಂಗಳ ಹಿಂದೆ, ರಷ್ಯಾಕ್ಕೆ ಹೋದಾಗ ಹೋಟೆಲ್‌ನವರನ್ನು ಪರೀಕ್ಷಿಸಲೆಂದು ಪತ್ರಿಕೆಯನ್ನು ಕೇಳಿದಾಗ, 'ನಿಮಗೆ ರಷ್ಯನ್ ಭಾಷೆ ಬರುತ್ತಾ?' ಎಂದು ಸ್ವಾಗತಕಾರಿಣಿ ಕೇಳಿದಳು. 'ನನಗೆ ರಷ್ಯನ್ ಗೊತ್ತಿಲ್ಲ, ಆದರೂ ಬೆಳಗ್ಗೆ ಎದ್ದ ತಕ್ಷಣ ಪತ್ರಿಕೆಯನ್ನು ನೋಡಬೇಕು. ಇದನ್ನು ನಾನು ಕಳೆದ ನಾಲ್ಕೂವರೆ ದಶಕಗಳಿಂದ ರೂಢಿಸಿಕೊಂಡು ಬಂದ ಸಂಪ್ರದಾಯ' ಎಂದು ಹೇಳಿದ್ದೆ. ಪ್ರತಿದಿನ ನನ್ನ ರೂಮಿಗೆ 'ಪ್ರಾವ್ದಾ' ಮತ್ತು 'ಇಜ್ವೆಸ್ತಿಯಾ' ದೈನಿಕಗಳನ್ನು ಆಕೆ ತಪ್ಪದೇ ಕಳಿಸಿಕೊಟ್ಟಳು. ನನಗೆ ಆ ಭಾಷೆಯ ಗಂಧ ಗಾಳಿ ಗೊತ್ತಿಲ್ಲದಿದ್ದರೂ, ಬೆಳಗ್ಗೆ ಪತ್ರಿಕೆ ನೋಡುವುದರ ಸಮಾಧಾನ ಅದರಿಂದ ಸಿಕ್ಕಿತ್ತು. ಯಾವತ್ತೂ ಬೇರೆ ದೇಶಗಳ ಪತ್ರಿಕೆಗಳನ್ನು ನೋಡುವುದು ಪತ್ರಕರ್ತರಿಗೆ ನಿಜಕ್ಕೂ ಖುಷಿ ಕೊಡುವ ಸಂಗತಿಯೇ.

ಕೆಲ ವರ್ಷಗಳ ಹಿಂದೆ, ನಾನು ಮತ್ತು ಈಗಿನ 'ಕನ್ನಡ ಪ್ರಭ' ಸಂಪಾದಕ ಮಿತ್ರ ರವಿ ಹೆಗಡೆ ದಕ್ಷಿಣ ಆಫ್ರಿಕಾದ ಕೇಪ್ ಟೌನ್‌ನಲ್ಲಿದ್ದೆವು. ನಾವು ತಂಗಿದ್ದ 'ಬಿಗ್ ಡ್ಯಾಡಿ' ಎಂಬ ಹೋಟೆಲಿನಲ್ಲಿ ಸ್ಥಳೀಯ ಪತ್ರಿಕೆಯೊಂದಿತ್ತು. ಅಂದು ಆ ಪತ್ರಿಕೆಯ ಮುಖಪುಟ ವಿನ್ಯಾಸ ವಿಶೇಷವಾಗಿತ್ತು. ಯಾವ ಪತ್ರಿಕೆಯೂ ಆ ಪ್ರಯೋಗ ಮಾಡಿದ್ದನ್ನು ನಾನು ನೋಡಿರಲಿಲ್ಲ. ಊರಿಗೆ ಬಂದವನೇ ಆಗ ನಾನು ಸಂಪಾದಕನಾಗಿದ್ದ 'ಕನ್ನಡ ಪ್ರಭ'ದಲ್ಲಿ ಅದೇ ಪ್ರಯೋಗವನ್ನು ತುಸು ಮಾರ್ಪಾಡಿನೊಂದಿಗೆ ಅನುಷ್ಠಾನಗೊಳಿಸಿದ್ದೆ. ಅದನ್ನು ಮೊನ್ನೆ ಮೊನ್ನೆ ರವಿ ನನಗೆ ಜ್ಞಾಪಿಸಿದರು. ಆ ಪ್ರಯೋಗ ಓದುಗರಿಗೂ ಬಹಳ ಇಷ್ಟವಾಗಿತ್ತು. ಬೇರೆ ಊರಿನ, ದೇಶಗಳ ಪತ್ರಿಕೆಯನ್ನು ನೋಡುವ, ಓದುವ ಅವಕಾಶವನ್ನು ಎಂದೂ ತಪ್ಪಿಸಿಕೊಳ್ಳಬಾರದು.

ಮೊನ್ನೆ ಸೀಶೆಲ್ಸ್ ಎಂಬ ದ್ವೀಪ ರಾಷ್ಟ್ರಕ್ಕೆ ಬಂದ ಮೊದಲ ದಿನ, ವಿಮಾನ ನಿಲ್ದಾಣ ಸೇರಿದಂತೆ ಸುತ್ತೆಲ್ಲ ಕಣ್ಣು ಹಾಯಿಸಿದರೂ ಒಂದೇ ಒಂದು ಪತ್ರಿಕೆ ಕಣ್ಣಿಗೆ ಬೀಳಲಿಲ್ಲ. ನಂತರ ನಾನು ಉಳಿದುಕೊಂಡ ಪ್ರಾಲಿನ್ ಎಂಬ ಮತ್ತೊಂದು ದ್ವೀಪದ ಹೋಟೆಲಿನಲ್ಲೂ ಪತ್ರಿಕೆ ಕಾಣಿಸಲಿಲ್ಲ. ನಾನು ಹೋಟೆಲ್ ಸ್ವಾಗತಕಾರಿಣಿಗೆ ನನ್ನ ರೂಮಿನಿಂದ ಫೋನ್ ಮಾಡಿ, ಸೀಶೆಲ್ಸ್ ನಲ್ಲಿ ಜನಪ್ರಿಯವಾಗಿರುವ ಪತ್ರಿಕೆ ಯಾವುದು?' ಎಂದು ಕೇಳಿದೆ. ಅದಕ್ಕೆ ಆಕೆ, 'Seychelles Nation' ಎಂದಳು. ಆಕೆಗೆ ನನ್ನ ಪರಿಚಯ ಮತ್ತು ಪತ್ರಿಕೆ ಓದದಿದ್ದರೆ ನನಗಾಗುವ ಸಮಸ್ಯೆಯನ್ನು ವಿವರಿಸಿ, ಹೇಗಾದರೂ ಮಾಡಿ, ಮುಂದಿನ ಆರು ದಿನಗಳ ಕಾಲ ನನ್ನ ರೂಮಿಗೆ ದಯವಿಟ್ಟು ಪತ್ರಿಕೆ ಹಾಕಬೇಕು' ಎಂದು ಹೇಳಿದೆ. ಆಕೆ ನನ್ನ ಕೋರಿಕೆಯನ್ನು ತಕ್ಷಣ ನೆರವೇರಿಸಿದಳು.

ಆಗಲೇ ನನಗೆ ಸಮಾಧಾನ ಆಗಿದ್ದು. ನಂತರ ಪ್ರತಿದಿನ ಬೆಳಗಾಗುತ್ತಲೇ ರೂಮಿಗೆ ಪತ್ರಿಕೆ ಬರಲಾರಂಭಿಸಿತು. ನನ್ನ ರೂಮನ್ನು ಸ್ವೀಟ್ ರೂಮಿಗೆ ಅಪ್ಗ್ರೇಡ್ ಮಾಡಿದ್ದರೂ ನನಗೆ ಅಷ್ಟು ಖುಷಿ ಆಗುತ್ತಿರಲಿಲ್ಲವೇನೋ? ಅಂದು ಇಂಗ್ಲಿಷ್ ಪತ್ರಿಕೆಯಾಗಿದ್ದರಿಂದ, ನನಗೆ ಓದು ಸಲೀಸಾಯಿತು. ಅಷ್ಟೇ ಅಲ್ಲ, ಸೀಶೆಲ್ಸ್ ನ ಜನಜೀವನ, ಸಮಾಜ ಜೀವನ, ರಾಜಕೀಯ, ಕ್ರೈಂ.. ಮುಂತಾದ ಸುದ್ದಿಯಿಂದ ಆ ದೇಶವನ್ನು ಅರ್ಥ ಮಾಡಿಕೊಳ್ಳಲು ಸಹಾಯಕವಾಯಿತು.

'ಸೀಶೆಲ್ಸ್ ನೇಷನ್' ಪತ್ರಿಕೆ ಕಳೆದ 49 ವರ್ಷಗಳಿಂದ (1976 ರಲ್ಲಿ ಆರಂಭವಾಗಿದ್ದು) ಪ್ರಕಟವಾಗುತ್ತಿದೆ. ನ್ಯಾಷನಲ್ ಇನ್ಫೋರ್ಮೇಷನ್ ಸರ್ವಿಸಸ್ ಏಜೆನ್ಸಿ ಎಂಬ ಸರಕಾರಿ ಸಂಸ್ಥೆ ಈ ಪತ್ರಿಕೆಯ ಮಾಲೀಕತ್ವವನ್ನು ಹೊಂದಿದೆ. ಸೋಮವಾರದಿಂದ ಶನಿವಾರ ಪ್ರಕಟವಾಗುವ, ಈ ಪತ್ರಿಕೆ ಬ್ರಾಡ್ ಶೀಟೂ ಅಲ್ಲ, ಟ್ಯಾಬ್ಲಾಯಿಡ್ಡೂ ಅಲ್ಲ, ಅವೆರಡರ ಮಧ್ಯದ 'ಬರ್ಲಿನರ್' ಸೈಜಿನದು. (ಮೊದಮೊದಲಿಗೆ ಈ ಗಾತ್ರದ ಪತ್ರಿಕೆಗಳು ಜರ್ಮನಿಯಲ್ಲಿ ಜನಪ್ರಿಯವಾಗಿತ್ತು, ಈಗ ವಿಶ್ವದ ಹಲವೆಡೆ ಬಳಕೆಯಲ್ಲಿವೆ.) ಹಿಡಿದು ಓದಲು ಸಲೀಸು. ಕಾಗದವೂ ಉಳಿತಾಯ. 'ಪ್ರವಾಸಿ ಪ್ರಪಂಚ'ವನ್ನೂ ಇದೇ ಸೈಜಿನಲ್ಲಿ ಮಾಡಬೇಕೆಂದು ಆರಂಭದಲ್ಲಿ ಅಂದುಕೊಂಡಿದ್ದೆ. ಆದರೆ ಕಾಗದ ವೇಸ್ಟ್ ಆಗುತ್ತೆ ಮತ್ತು ಜಾಹೀರಾತಿನ ಗಾತ್ರ ನಮಗಾಗಿ ಪ್ರತ್ಯೇಕ ಮಾಡಬೇಕಾಗುತ್ತದೆ ಎಂಬ ಕಾರಣಕ್ಕೆ ಆ ನಿರ್ಧಾರ ಬಿಟ್ಟೆ, ಇರಲಿ.

'ಸೀಶೆಲ್ಸ್ ನೇಷನ್'' ಜತೆಗೆ ಇನ್ನೊಂದು ದಿನಪತ್ರಿಕೆಯಿದೆ. ಅದರ ಹೆಸರು Today in Seyshelles. ಮೊದಲನೆಯದು ಸರಕಾರದ ಮುಖವಾಣಿಯಾದರೆ, ಎರಡನೆಯದು ಖಾಸಗಿ ಒಡೆತನಕ್ಕೆ ಸೇರಿದ್ದು. ಕಳೆದ ಹದಿನಾಲ್ಕು ವರ್ಷಗಳ ಹಿಂದೆ ಆರಂಭವಾದ ಟುಡೇ ಇನ್ ಸೀಶೆಲ್ಸ್', ಸೀಶೆಲ್ಸ್ ನೇಷನ್' ಪತ್ರಿಕೆಗಿಂತ ವಾಸಿ. ಕಳೆದ ಐದು ದಿನಗಳಿಂದ ಈ ಎರಡೂ ಪತ್ರಿಕೆಗಳನ್ನು ಓದಿದ ಬಳಿಕ ನನಗೆ ಅನಿಸಿದ್ದೇನೆಂದರೆ, ಸೀಶೆಲ್ಸ್ ಸುಂದರ, ಆದರೆ ಅಲ್ಲಿನ ಪತ್ರಿಕೆ ಮಾತ್ರ ಶುದ್ಧ ನೀರಸ ಅಥವಾ ಬೋರಿಂಗ್. ಲಂಡನ್ ನ ಪ್ರತಿಷ್ಠಿತ 'ಸಂಡೇ ಟೈಮ್ಸ್' ಪತ್ರಿಕೆಯ ಲೆಜೆಂಡರಿ ಸಂಪಾದಕ ಹೆರಾಲ್ಡ್ ಇವಾನ್ ಹೇಳಿದ ಒಂದು ಮಾತು ನೆನಪಾಯಿತು – 'ಯಾವ ದೇಶ ನೈಸರ್ಗಿಕವಾಗಿ ಸುಂದರವಾಗಿರುವುದೋ, ಆ ದೇಶದ ಪತ್ರಿಕೆಗಳು ಮಾತ್ರ ನೀರಸ, ಬೋರು'. ಈ ಮಾತು ಸೀಶೆಲ್ಸ್ ಪತ್ರಿಕೆಗಳ ವಿಚಾರದಲ್ಲಂತೂ ನೂರಕ್ಕೆ ನೂರು ನಿಜ.

ಕಳೆದ ಐದು ದಿನಗಳ ಇಡೀ ಪತ್ರಿಕೆಯಲ್ಲಿ ರಾಜಕಾರಣಿಗಳ ಒಂದೇ ಒಂದು ಹೇಳಿಕೆಯಿಲ್ಲ, ಟೀಕೆಯಿಲ್ಲ, ಕರ್ಮಕಾಂಡ-ಹಗರಣಗಳಿಲ್ಲ, ರಾಜಕೀಯ ನಾಯಕರ ಆರೋಪ-ಪ್ರತ್ಯಾರೋಪಗಳಿಲ್ಲ. ಅಪಘಾತ, ಅಪರಾಧ ಇಲ್ಲವೇ ಇಲ್ಲ. ಹೋಗಲಿ ಜಾತಿಗಣತಿಯಾದರೂ ಇದೆಯಾ? ಊಹುಂ ಅದೂ ಇಲ್ಲ. ವಿದ್ಯುತ್ ತಂತಿ ಹರಿದು ಸಾರ್ವಜನಿಕರ ಮೇಲೆ ಬಿದ್ದು ಯಾರೂ ಸತ್ತಿಲ್ಲ. ಇಡೀ ಪತ್ರಿಕೆಯಲ್ಲಿ ಒಂದೇ ಒಂದು ಪ್ರತಿಭಟನೆ, ಖಂಡನೆ, ಆಗ್ರಹ, ಧರಣಿ, ಸತ್ಯಾಗ್ರಹ, ಮುಷ್ಕರ.. ಕೇಳಬೇಡಿ. ಇಡೀ ದೇಶದಲ್ಲಿ ಒಬ್ಬನೇ ಒಬ್ಬ ರನ್ಯಾ ರಾವ್ ಇಲ್ಲ. ಸಂವಿಧಾನ ಇದೆಯಾ ಇಲ್ಲವಾ ಗೊತ್ತಿಲ್ಲ, ಕಾರಣ ಯಾರೂ ಆ ಬಗ್ಗೆ ಮಾತಾಡುವುದಿಲ್ಲ. ಇಲ್ಲಿ ಯಾರೂ ಯಾರೊಂದಿಗೂ ಜಗಳವಾಡುವುದಿಲ್ಲ. ಹಲ್ಲೆ ಮಾಡುವುದಿಲ್ಲ, ಪ್ರಾಣ ಬೆದರಿಕೆಯೊಡ್ಡುವುದಿಲ್ಲ, ವನ್ಯಪ್ರಾಣಿಗಳಿಗೆ ಯಾರೂ ವಿಷ ಹಾಕಿ ಸಾಯಿಸುವುದಿಲ್ಲ. ಮರ ಕಡಿಯುವುದಿಲ್ಲ. ಮರಳು ಸಾಗಿಸುವುದಿಲ್ಲ. ಅಕ್ರಮ ಗಣಿಗಾರಿಕೆಯಂತೂ ಇಲ್ಲವೇ ಇಲ್ಲ, ಮುಖ್ಯಮಂತ್ರಿ ಬದಲಾವಣೆ, ಪಕ್ಷದ ಅಧ್ಯಕ್ಷರ ಬದಲಾವಣೆ ಮಾಡಲು ಲಾಬಿ ಮಾಡಬೇಕೆಂಬುದು ಇಲ್ಲಿನ ರಾಜಕಾರಣಿಗಳಿಗೆ ಗೊತ್ತಿಲ್ಲ. ಪತ್ರಿಕಾಗೋಷ್ಠಿ ಮಾಡಿ ಸುದ್ದಿ ಹೇಳಬೇಕು, ಸುದ್ದಿ ಮಾಡಬೇಕು ಎಂಬುದೂ ಗೊತ್ತಿದ್ದಂತಿಲ್ಲ.

ಅಷ್ಟೇ ಅಲ್ಲ, ಮಂತ್ರಿಗಳಿಗೆ ಭ್ರಷ್ಟಾಚಾರ ಮಾಡಿ ಹಣ ಮಾಡಬೇಕು ಎಂಬುದು ಸಹ ಗೊತ್ತಿಲ್ಲ. ಇಲ್ಲಿನ ಕಂಟ್ರಾಕ್ಟರುಗಳಿಗೆ ಪರ್ಸೆಂಟೇಜ್ ಲೆಕ್ಕಾಚಾರ ಗೊತ್ತಿಲ್ಲ, ಕಾರಣ ಎಲ್ಲ ಸೇತುವೆ, ಕಟ್ಟಡ, ರಸ್ತೆಗಳೆಲ್ಲ ಮಜಬೂತಾಗಿವೆ. ಇನ್ನು ಅತ್ಯಾಚಾರ, ಕೊಲೆ, ಸುಲಿಗೆ, ದರೋಡೆ, ಕಳ್ಳತನ ಹೋಗಲಿ, ಕನಿಷ್ಠ ಪಿಕ್ ಪಾಕೆಟ್, ಹುಡುಗಿಯರನ್ನು ಚುಡಾಯಿಸುವ ಘಟನೆಗಳೂ ಜರುಗುವುದಿಲ್ಲ. ಮೂರು ವರ್ಷಗಳಿಂದ ಹಿಂದೆ, ತಂದೆ ತನ್ನ ಮೂರು ವರ್ಷದ ಮಲಮಗಳನ್ನು ಕೊಂದಿದ್ದು ದೊಡ್ಡ ಸುದ್ದಿಯಾಗಿತ್ತಂತೆ. ಇಡೀ ದೇಶದಲ್ಲಿ ಕ್ರೈಂ ರೇಟ್ ಹೆಚ್ಚು-ಕಮ್ಮಿ ಸೊನ್ನೆ. ನಾನು ಐದು ದಿನಗಳಲ್ಲಿ ಎರಡು ಪೊಲೀಸ್ ಸ್ಟೇಷನ್ ಹಾಗೂ ಒಬ್ಬ ಪೊಲೀಸ್‌ನನ್ನು ನೋಡಿದೆ. ಟ್ರಾಫಿಕ್ ಪೊಲೀಸ್ ಕೂಡ ಎಲ್ಲೂ ಕಾಣಿಸುವುದಿಲ್ಲ. ಪರಸ್ಪರ ಉಜ್ಜಿಕೊಂಡ, ತರಚಿ ಗಾಯ ಮಾಡಿಕೊಂಡ ವಾಹನಗಳು ಕಾಣಲಿಲ್ಲ. ಒಂದೇ ಒಂದು ಹಾರ್ನ್ ಸದ್ದು ಕೇಳಲಿಲ್ಲ. ಒಂದೇ ಒಂದು ಕಸ, ಚಿಪ್ಸ್ ಪ್ಯಾಕೆಟ್, ಒಡೆದ ಬಿಯರ್ ಬಾಟಲಿ ಕಾಣಲಿಲ್ಲ. ಎಲ್ಲೂ ಗೌಜು-ಗದ್ದಲ ಇಲ್ಲ. ಮೀನು ಮಾರುಕಟ್ಟೆಯೂ ಶಾಂತ. ಜನಜೀವನವೂ ಪ್ರಶಾಂತ. ಜನ ತಮ್ಮ ಪಾಡಿಗೆ ತಾವು. ಹೀಗಿರುವಾಗ ಪತ್ರಿಕೆಗಳಿಗೆ ಸುದ್ದಿಯಾದರೂ ಯಾವುದು? ಅವುಗಳಿಗೆ ಕೆಲಸವಾದರೂ ಏನು? ನೊಣಗಳಿಗೆ ಕಬ್ಬಿಣದ ಅಂಗಡಿಯಲ್ಲಿ ಏನು ಕೆಲಸ?

ಹೀಗಾಗಿ ಇಲ್ಲಿನ ಪತ್ರಿಕೆಗಳು ಕೆಲಸಕ್ಕೆ ಬಾರದ ಸಂಗತಿಗಳನ್ನೇ ಮುಖಪುಟದ ಲೀಡ್ ಸುದ್ದಿಯನ್ನಾಗಿ ಮಾಡಿ ಪ್ರಕಟಿಸುತ್ತಿವೆ. ನಾನು ಸೀಶೆಲ್ಸ್ ಗೆ ಬಂದ ಮಾರನೇ ದಿನ, 'ಸೀಶೆಲ್ಸ್ ನೇಷನ್' ಪತ್ರಿಕೆ, 'ಆರ್ಟ್ ಗ್ಯಾಲರಿಯಲ್ಲಿ ಚಿತ್ರಕಲಾ ಪ್ರದರ್ಶನ ಆರಂಭ' ಎಂಬ ಸುದ್ದಿಯನ್ನು ಮುಖಪುಟದಲ್ಲಿ ಮುಖ್ಯ ಸುದ್ದಿಯಾಗಿ ಪ್ರಕಟಿಸಿತ್ತು. ಮರುದಿನ 'ಮಹಿಳೆಯರ ಹೊಸ ಡ್ರೆಸ್ ಮಾರುಕಟ್ಟೆಗೆ' ಎಂಬ ಸುದ್ದಿ ಮುಖಪುಟದ ಪ್ರಧಾನ ಜಾಗವನ್ನು ಅಲಂಕರಿಸಿತ್ತು. ಕಳೆದ ಒಂದು ವಾರದಲ್ಲಿ ಒಬ್ಬೇ ಒಬ್ಬ ರಾಜಕೀಯ ನಾಯಕನ ಹೇಳಿಕೆಯಾಗಲಿ, ಸಚಿವರ ಘೋಷಣೆಯಾಗಲಿ, ಮುಖಪುಟದಲ್ಲಿ ಕಾಣಲಿಲ್ಲ. ಒಂದು ವೇಳೆ ಈ ದೇಶದಲ್ಲಿ ನ್ಯೂಸ್ ಚಾನೆಲ್ ಆರಂಭಿಸುವ ಕೆಲಸವನ್ನು ನಮ್ಮ ಕನ್ನಡ ಚಾನೆಲ್‌ಗಳಿಗೆ ಕೊಟ್ಟರೆ, ಅವು ಒಂದೇ ವಾರದಲ್ಲಿ ಸುದ್ದಿಯ ಬರದಿಂದ ಉಪವಾಸ ಬಿದ್ದು ಬಾಗಿಲು ಹಾಕೋದು ಗ್ಯಾರಂಟಿ. ಇನ್ನು ಬ್ರೇಕಿಂಗ್ ನ್ಯೂಸ್ ಇಲ್ಲದ ನ್ಯೂಸ್ ಚಾನೆಲ್ ಗಳ ಸ್ಥಿತಿ-ಗತಿಯನ್ನು ಯೋಚಿಸುವುದಕ್ಕೂ ಆಗದು!

ಇನ್ನು ಪ್ರವಾಸೋದ್ಯಮಕ್ಕೆ ಸಂಬಂಧಿಸಿದ ಸಣ್ಣ ಸಣ್ಣ ಸಂಗತಿಗಳೂ ದಪ್ಪಕ್ಷರಗಳ ಮುಖಪುಟ ಸುದ್ದಿಯೇ. ಚೀನಾದ ಚೆಂಗ್ದುದಿಂದ ನೇರ ವಿಮಾನ ಆರಂಭವಾದರೆ, ಅದು ಲೀಡ್ ಸುದ್ದಿ. ಸೀಶೆಲ್ಸ್ ಪಾಸ್ ಪೋರ್ಟ್ ಹೊಂದಿದ್ದರೆ ನೂರಾ ಐವತ್ತಾರು ದೇಶಗಳಲ್ಲಿ ವೀಸಾ ಬೇಕಿಲ್ಲ ಎಂಬ ಸುದ್ದಿಗೆ ಮುಖಪುಟದಲ್ಲಿ ಎಂಟು ಕಾಲಂ ತೋರಣ. ಪ್ರವಾಸಿಗರ ಅನುಕೂಲಕ್ಕೆ ಹೊಸ ಟ್ರಾವೆಲ್ ಸೇವೆ ಆರಂಭ, ಯುರೋಪ್ ಪ್ರವಾಸಿಗರಿಗಾಗಿ ಹೊಸ ಟ್ರಾವೆಲ್ ಆಪ್ (App) ಬಿಡುಗಡೆ, ಪ್ರವಾಸಿಗರಿಗಾಗಿ ಹೊಸ ಮಳಿಗೆ ಉದ್ಘಾಟನೆ.. ಮುಂತಾದ ಸುದ್ದಿಗಳಿಗೆ ಮುಖಪುಟದಲ್ಲಿ ವಿಜೃಂಭಿಸುವ ರಾಜಯೋಗ. ನಾನು ಇಲ್ಲಿ ತನಕ ತೋರಿದ ಪತ್ರಿಕೋದ್ಯಮದ ಯಾವ ಪಟ್ಟುಗಳು, ವರಸೆಗಳು ಸೀಶೆಲ್ಸ್ ನಲ್ಲಿ ಕೆಲಸಕ್ಕೇ ಬರುವುದಿಲ್ಲ. ನಾವು ಕಲಿತಿದ್ದನ್ನು ಮತ್ತು ಇಷ್ಟು ದಿನ ಮಾಡಿದ್ದನ್ನು ಸಂಪೂರ್ಣ ಮರೆತು (Unlearn), ಪತ್ರಿಕೋದ್ಯಮದ ಹೊಸ ಪಾಠಗಳನ್ನು ಕಲಿತರೆ, ಪಟ್ಟುಗಳನ್ನು ಕರಗತ ಮಾಡಿಕೊಂಡರೆ, ಪತ್ರಕರ್ತನಾಗಿ ಇಲ್ಲಿ ಬದುಕಬಹುದೇನೋ? ಹಾಗೆಂದು 'ಪ್ರವಾಸಿ ಪ್ರಪಂಚ' ಪತ್ರಿಕೆಯನ್ನು ಸೀಶೆಲ್ಸ್ ನಲ್ಲಿ ಆರಂಭಿಸಿದರೆ ಅಥವಾ ಸೀಶೆಲ್ಸ್ ಆವೃತ್ತಿ ಶುರು ಮಾಡಿದರೆ, ಖಂಡಿತವಾಗಿಯೂ ಬಿಸಿಬಿಸಿ ಮಸಾಲೆ ದೋಸೆಯಂತೆ ಖರ್ಚಾಗುವುದರಲ್ಲಿ ಸಂದೇಹವೇ ಇಲ್ಲ! ಅಷ್ಟರಮಟ್ಟಿಗೆ ಇಲ್ಲಿ ಜೀವ ಉಳಿಸಿಕೊಳ್ಳಬಹುದು, ಜೀವನ ಸಾಗಿಸಬಹುದು ಅಂತ ಪ್ರಾಮಾಣಿಕವಾಗಿ ಅನಿಸಿದ್ದು ಸುಳ್ಳಲ್ಲ, ಇದು ಕಟು ವಾಸ್ತವ.

ಸೀಶೆಲ್ಸ್ ಅಧ್ಯಕ್ಷ ಇದ್ದಾರಲ್ಲ, ಅವರ ಹೆಸರು ವಾವೆಲ್ ರಾಮ್ಕಲವಾನ್. ಇವರ ಮುತ್ತಾತ ಬಿಹಾರ ಮೂಲದವರು. 2020ರಿಂದ ಇವರು ಅಧ್ಯಕ್ಷರು. ಅದಕ್ಕಿಂತ ಮುನ್ನ ಇವರು ಇಪ್ಪತ್ತು ವರ್ಷಗಳ ಕಾಲ ಆಂಗ್ಲಿಕನ್ ಚರ್ಚಿನಲ್ಲಿ ಪಾದ್ರಿ (ಪ್ರೀಸ್ಟ್) ಯಾಗಿ ಸೇವೆ ಸಲ್ಲಿಸಿದವರು. ಸುಮಾರು ಇಪ್ಪತ್ತೆರಡು ವರ್ಷಗಳ ಕಾಲ ಪ್ರತಿಪಕ್ಷ ನಾಯಕರಾಗಿ ಕೆಲಸ ಮಾಡಿ ಜನಾನುರಾಗಿಯಾದವರು. ಕಳೆದ ಐದು ವರ್ಷಗಳಿಂದ ಅವರ ಬಗ್ಗೆ ಭ್ರಷ್ಟಾಚಾರದ ಒಂದು ಅಪಸ್ವರವೂ ಕೇಳಿಬಂದಿಲ್ಲ, ಜಾಗತಿಕ ಭ್ರಷ್ಟಾಚಾರ ಸೂಚ್ಯಂಕದಲ್ಲಿ 180 ದೇಶಗಳ ಪೈಕಿ ಸೀಶೆಲ್ಸ್ ಗೆ ಹದಿನೆಂಟನೇ ಸ್ಥಾನ. (ಗೊತ್ತಿರಲಿ, ಭಾರತದ ಸ್ಥಾನ 96ನೆಯದು). ಎರಡು ದಶಕಗಳ ಕಾಲ ಪ್ರತಿಪಕ್ಷ ನಾಯಕರಾಗಿದ್ದ ಅವರು ತಮ್ಮ ರಾಜಕೀಯ ವಿರೋಧಿಗಳನ್ನು ಟೀಕಿಸುವುದಿಲ್ಲ. ಚುನಾವಣಾ ಸಂದರ್ಭದಲ್ಲೂ ತಮ್ಮ ಅರ್ಹತೆ, ಯೋಗ್ಯತೆ ನೋಡಿ ಮತ ನೀಡಿ ಅಂತ ಪ್ರಚಾರ ಮಾಡುತ್ತಾರೆ.

ಈ ಎಲ್ಲ ಪರಿಣಾಮ ಸೀಶೆಲ್ಸ್ ಪತ್ರಿಕೆಗಳ ಮೇಲಾಗಿದೆ. ಒಂದು ದೇಶ ಹೇಗಿದೆ ಎಂಬುದನ್ನು ಅರಿಯಲು ಎರಡು ಸಂಗತಿಗಳು ಸಾಕು. ಅಲ್ಲಿನ ಒಂದು ಲೋಟ ನೀರು ಕುಡಿದು, ಪ್ರಮುಖ ಪತ್ರಿಕೆಯೊಂದನ್ನು ಇಡಿಯಾಗಿ ಓದಿದರೆ ಸಾಕು. ಮತ್ತೇನೂ ಬೇಕಿಲ್ಲ, ಐದು ದಿನಗಳಲ್ಲಿ ಸೀಶೆಲ್ಸ್ ಎಂಥ ರಾಷ್ಟ್ರ ಎಂಬ ಚಿತ್ರಣ ಕಣ್ಣಿಗೆ ಕಟ್ಟಿತು!

ದೇಶವನ್ನು ಡ್ರಗ್ಸ್‌ನಲ್ಲಿ ಮುಳುಗಿಸಲು ಭಯಾನಕ ಷಡ್ಯಂತ್ರ

ಪಾಕಿಸ್ತಾನ, ಅಫ್ಘಾನಿಸ್ತಾನ, ಕೆನಡಾ ಮತ್ತು ಮ್ಯಾನ್ಮಾರ್‌ನಲ್ಲಿ ಬೇರು ಬಿಟ್ಟಿರುವ ಡ್ರಗ್ಸ್ ಮಾಫಿಯಾವನ್ನು ಮಟ್ಟಹಾಕುವುದೇ ಭಾರತಕ್ಕೆ ದೊಡ್ಡ ಸವಾಲು. ಶತ್ರು ದೇಶಗಳು ನಮ್ಮ ಯುವಕರನ್ನು ಡ್ರಗ್ಸ್‌ನ ದಾಸರಾಗುವಂತೆ ಮಾಡಲು ಇನ್ನಿಲ್ಲದ ಪ್ರಯತ್ನ ಮಾಡುತ್ತಿವೆ. ಈ ಮಾದಕ ದ್ರವ್ಯಗಳ ಡೀಲರ್‌ಗಳನ್ನು ಸಂಪೂರ್ಣ ನಿರ್ನಾಮ ಮಾಡದೆ ಬೇರೆ ದಾರಿಯೇ ಇಲ್ಲ.

ಸಂಗತ
ಡಾ.ವಿಜಯ್ ದರಡಾ
vveditoped@gmail.com

ಕೆನಡಾದ ವಿವಿಧ ಪ್ರದೇಶಗಳಲ್ಲಿ ಸಂಚರಿಸುವಾಗ ಈ ದೇಶ ಅದ್ಯಾವ ರೀತಿಯಲ್ಲಿ ಡ್ರಗ್ಸ್ ಮಾಫಿಯಾದ ಕಪಿಮುಷ್ಟಿಯಲ್ಲಿ ಸಿಲುಕಿದೆ ಎಂದು ಆಶ್ಚರ್ಯವಾಗುತ್ತಿದೆ! ಮರಿಜುವಾನಾ, ಕೊಕೇನ್, ಅಫೀಮಿನಿಂದ ಹಿಡಿದು ಹೆರಾಯಿನ್‌ವರೆಗೆ ನಾನಾ ರೀತಿಯ ಅಪಾಯಕಾರಿ ಮಾದಕ ವಸ್ತುಗಳು ಇಲ್ಲಿನ ಮಾರ್ಕೆಟ್‌ಗಳಲ್ಲಿ ಮುಕ್ತವಾಗಿ ಯಾರಿಗೆ ಬೇಕಾದರೂ ಸಿಗುತ್ತವೆ. ಅಂತಹ ಪ್ರದೇಶಗಳಲ್ಲಿ ಸುಮ್ಮನೆ ಒಂದು ಸುತ್ತು ನಡೆದುಕೊಂಡು ಹೋದರೂ ಸಾಕು, ನಿಮಗೆ ಮಾದಕ ಲೋಕದ ನಾನಾ ಮುಖಗಳು ಎದ್ದು ಕಾಣಿಸುತ್ತವೆ. ಡ್ರಗ್ಸ್ ಎಂಬುದು ಇಲ್ಲಿ ಎಷ್ಟು ಸಾಮಾನ್ಯ ಸಂಗತಿಯೆಂದರೆ, ನಿರಾಶ್ರಿತರನ್ನು ಕರೆದುಕೊಂಡು ಹೋಗಿ ಸರಕಾರದ ಆಶ್ರಯ ಮನೆಗಳಲ್ಲಿ ಇರಿಸಿದರೆ ಅಲ್ಲೂ ಅವರಿಗೆ ಬೇಕಾದ ರೀತಿಯ ಡ್ರಗ್ಸ್ ಬಹಳ ಸುಲಭವಾಗಿ ಸಿಗುತ್ತದೆ. ಪ್ರತಿಯೊಂದು ಮಾದಕ ವಸ್ತುವಿಗೂ ಇಲ್ಲಿ ಕೋಡ್ ವರ್ಡ್‌ಗಳಿವೆ. ಒಂದು ಮಾದಕ ದ್ರವ್ಯಕ್ಕೆ 'ಗ್ರಾಸ್' ಎಂದು ಹೆಸರಿಟ್ಟಿದ್ದರೆ, ಇನ್ನೊಂದಕ್ಕೆ 'ವೀಟ್' ಎಂದು ಕರೆಯುತ್ತಾರೆ. ಹೀಗೆ ಪ್ರತಿಯೊಂದು ಮಾದಕ ವಸ್ತುವಿಗೂ ಒಂದೊಂದು ಹೆಸರಿದೆ. ಇನ್ನು, ಯುರೋಪಿನ ಕೆಲ ನಗರಗಳಿಗೆ ಹೋದರೆ ಅಲ್ಲಿ ರಾಜಾರೋಷವಾಗಿ ಮೆನು ಕಾರ್ಡ್‌ನಲ್ಲೇ ಮಾದಕ ವಸ್ತುಗಳ ಹೆಸರು ಹಾಕಿ ಮಾರಾಟ ಮಾಡುತ್ತಾರೆ! ಅದನ್ನೆಲ್ಲ ನೋಡಿದಾಗ ನನಗೆ ದೇವಾನಂದ್ ಅವರ 'ಹರೇ ರಾಮಾ ಹರೇ ಕೃಷ್ಣ' ಸಿನಿಮಾದ 'ದಮ್ ಮಾರೋ ದಮ್' ಹಾಡು ನೆನಪಾಗುತ್ತದೆ.

ಕೆನಡಾ ಹಾಗೂ ಕೆಲ ಯುರೋಪಿಯನ್ ದೇಶಗಳ ಮಾದಕ ಲೋಕದ ಬಗ್ಗೆ ಯೋಚಿಸುತ್ತಿದ್ದಾಗ ನನಗೆ ನಮ್ಮದೇ ದೇಶದ ಮಾದಕ ವಸ್ತುಗಳ ಮಾಫಿಯಾದ ಬಗ್ಗೆ ಪತ್ರಿಕೆಯಲ್ಲಿ ಪ್ರಕಟವಾದ ಸುದ್ದಿಯೊಂದು ಇಂಟರ್ನೆಟ್ ಆವೃತ್ತಿಯಲ್ಲಿ ಕಣ್ಣಿಗೆ ಬಿತ್ತು. ಪಂಜಾಬ್ ಮತ್ತು ರಾಜಸ್ಥಾನದಲ್ಲಿ ಬಹಳ ದೊಡ್ಡ ಡ್ರಗ್ಸ್ ಜಾಲವೊಂದನ್ನು ಪೊಲೀಸರು ಮಟ್ಟಹಾಕಿ ಭಾರೀ ಪ್ರಮಾಣದ ಮಾದಕ ದ್ರವ್ಯಗಳನ್ನು ಜಪ್ತಿ ಮಾಡಿಕೊಂಡಿದ್ದರು. ಆ ಮಾದಕ ವಸ್ತುಗಳ ಜಾಲದ ಮುಖ್ಯಸ್ಥ ತನ್ವೀರ್ ಸಿಂಗ್ ಎಂದು ವರದಿಯಲ್ಲಿ ಬರೆದಿತ್ತು. ಅವನು ಪಾಕಿಸ್ತಾನದಿಂದ ಕಾರ್ಯಾಚರಣೆ ನಡೆಸುತ್ತಾನಂತೆ. ಇನ್ನೊಬ್ಬ ಕಿಂಗ್‌ಪಿನ್ ಹೆಸರು ಕೂಡ ವರದಿಯಲ್ಲಿತ್ತು. ಅವನು ಕೆನಡಾದ ಜೋಬನ್ ಕೆಲರ್. ಈ ಇಬ್ಬರು ಡ್ರಗ್ಸ್ ದೊರೆಗಳು ಸ್ಥಳೀಯ ಡೀಲರ್ ಗುರಸಾಹೇಬ್ ಸಿಂಗ್ ಎಂಬ ವ್ಯಕ್ತಿಯ ಮೂಲಕ ಭಾರತಕ್ಕೆ ಮಾದಕ ದ್ರವ್ಯಗಳನ್ನು ಕಳ್ಳಸಾಗಣೆ ಮಾಡಿ ಕಳುಹಿಸುತ್ತಿದ್ದಾರಂತೆ. ಮಜಾ ಏನೆಂದರೆ, ಗುರಸಾಹೇಬ್ ಸಿಂಗ್ ಪಂಜಾಬಿನ ಜೈಲಿನಲ್ಲಿದ್ದಾನೆ. ಅಲ್ಲಿಂದಲೇ ಅವನು ಮೊಬೈಲ್ ಫೋನ್ ಮೂಲಕ ಡ್ರಗ್ಸ್ ದಂಧೆ ನಡೆಸುತ್ತಿದ್ದಾನೆ. ತನ್ನ ಸಂಬಂಧಿ ಜಶನ್‌ಪ್ರೀತ್ ಸಿಂಗ್ ಮತ್ತು ಇನ್ನೊಬ್ಬ ಸಹಚರ ಗಗನ್‌ದೀಪ್ ಸಿಂಗ್ ಮೂಲಕ ಅವನ ವ್ಯವಹಾರಗಳು ನಡೆಯುತ್ತವೆಯಂತೆ. ಅದನ್ನು ಓದಿದಾಗ ಸಹಜವಾಗಿಯೇ ನನ್ನಲ್ಲೊಂದು ಪ್ರಶ್ನೆ ಮೂಡಿತು. ನಿಮಗೂ ಈ ಪ್ರಶ್ನೆ ಕಾಡಬಹುದು. ಗುರಸಾಹೇಬ್ ಸಿಂಗ್‌ಗೆ ಜೈಲಿನಲ್ಲಿ ಮೊಬೈಲ್ ಫೋನ್ ಹೇಗೆ ಸಿಗುತ್ತದೆ? ಜೈಲಿನಲ್ಲಿ ಮೊಬೈಲ್ ಬಳಸುವುದು ಕೈದಿಗಳಿಗೆ ನಿಷಿದ್ಧವಲ್ಲವೇ? ಅಂದರೆ, ಜೈಲಿನ ಸಿಬ್ಬಂದಿಯೇ ಇದರಲ್ಲಿ ಶಾಮೀಲಾಗಿ ಡ್ರಗ್ಸ್ ವ್ಯವಹಾರಕ್ಕೆ ನೆರವಾಗುತ್ತಿದ್ದಾರೆ! ಇಂತಹದ್ದೊಂದು ಹೊಂದಾಣಿಕೆಯಿಲ್ಲದೆ ಕೈದಿಯೊಬ್ಬ ಜೈಲಿನಲ್ಲಿ ಕುಳಿತು ಡ್ರಗ್ಸ್ ಮಾರಾಟದ ಜಾಲವನ್ನು ನಿಭಾಯಿಸುವುದು ಸಾಧ್ಯವೇ ಇಲ್ಲ. ಡ್ರಗ್ಸ್ ದಂಧೆಯಲ್ಲಿ ಎಷ್ಟೊಂದು ದುಡ್ಡಿದೆ ಅಂದರೆ, ಅದನ್ನು ನಡೆಸುವವರು ತಮ್ಮ ರಕ್ಷಣೆಗೋಸ್ಕರ ಸರಕಾರಿ ಅಧಿಕಾರಿಗಳಿಗೆ ಒಂದಷ್ಟು ಕೋಟಿ ಹಣ ನೀಡುವುದಕ್ಕೆ ಖಂಡಿತ ಹಿಂದೆ ಮುಂದೆ ಯೋಚಿಸುವುದಿಲ್ಲ.

ಈ ಹಿಂದೆಯೂ ನಾನು ಪದೇ ಪದೇ ಹೇಳಿದ್ದೇನೆ; ಡ್ರಗ್ಸ್ ದಂಧೆಯೆಂಬುದು ಭಾರತದ ವಿರುದ್ಧ ನಡೆಯುತ್ತಿರುವ ಅಂತಾರಾಷ್ಟ್ರೀಯ ಮಟ್ಟದ ಷಡ್ಯಂತ್ರ. ಡ್ರಗ್ಸ್ ದಂಧೆಗೂ ಭಯೋತ್ಪಾದನೆಗೂ ತುಂಬಾ ಹತ್ತಿರದ ನಂಟಿದೆ. ಭಾರತದ ಇತಿಹಾಸದಲ್ಲಿ ಆಗಿಹೋದ ಅತ್ಯಂತ ದೂರದೃಷ್ಟಿಯ ಚಿಂತಕ ಚಾಣಕ್ಯ ಈ ಬಗ್ಗೆ ಬಹಳ ಹಿಂದೆಯೇ ಎಚ್ಚರಿಕೆ ನೀಡಿದ್ದ. ಮಾದಕ ವಸ್ತುಗಳನ್ನು ಸೇವಿಸುವವರು ತಮ್ಮ ಭವಿಷ್ಯವನ್ನು ಮಾತ್ರ ಹಾಳು ಮಾಡಿಕೊಳ್ಳುವುದಿಲ್ಲ, ಅದರ ಜೊತೆಗೆ ಸಮಾಜದ ಭವಿಷ್ಯವನ್ನೂ ಹಾಳುಮಾಡುತ್ತಾರೆ ಎಂದು ಚಾಣಕ್ಯ ಹೇಳಿದ್ದ. ನಮ್ಮ ಶತ್ರುದೇಶಗಳು ಇಂತಹುದೇ ಅವಕಾಶಗಳಿಗಾಗಿ ಕಾಯುತ್ತವೆ. ಭಾರತದ ಯುವಕರು ಡ್ರಗ್ಸ್ ಸೇವಿಸಿ ಹಾಳಾಗಿಹೋಗಲಿ ಎಂದೇ ಅವು ಬಯಸುತ್ತವೆ. ಪ್ರತಿಭಾವಂತ ಯುವಕರು ಡ್ರಗ್‌ಗೆ ದಾಸರಾದರೆ ಅವರ ಭವಿಷ್ಯದ ಜೊತೆಗೆ ದೇಶದ ಭವಿಷ್ಯ ಕೂಡ ಹಾಳಾಗುತ್ತದೆ. ಆದ್ದರಿಂದಲೇ ಹತ್ತು ದಿಕ್ಕುಗಳಿಂದಲೂ ಭಾರತಕ್ಕೆ ಡ್ರಗ್ಸ್ ದೊಡ್ಡ ಪ್ರಮಾಣದಲ್ಲಿ ಹರಿದು ಬರುತ್ತಿದೆ. ಕಳೆದ ವರ್ಷ ದೆಹಲಿಯ ಮಹಿಪಾಲಪುರದಲ್ಲಿ 562 ಕೆ.ಜಿ. ಕೊಕೇನ್ ಹಾಗೂ 40 ಕೆ.ಜಿ. ಹೈಡ್ರೋಪೋನಿಕ್ ಮರಿಜುವಾನಾ ಜಪ್ತಿ ಮಾಡಿಕೊಳ್ಳಲಾಗಿತ್ತು. ದೆಹಲಿಯ ರಮೇಶ್ ನಗರದಲ್ಲಿ ನಡೆದ ಇನ್ನೊಂದು ದಾಳಿಯಲ್ಲಿ 208 ಕೆ.ಜಿ. ಕೊಕೇನ್ ಪತ್ತೆಯಾಗಿತ್ತು. ಆ ಪ್ರಕರಣದಲ್ಲಿ ರಾಜಕಾರಣಿಯೊಬ್ಬರ ಹೆಸರು ಕೇಳಿಬಂದಿದ್ದರಿಂದ ಅದು ದೊಡ್ಡ ಪ್ರಮಾಣದಲ್ಲಿ ಸುದ್ದಿಯಾಗಿತ್ತು. ಈ ನಡುವೆ ಗುಜರಾತಿನ ಅಂಕಲೇಶ್ವರದಲ್ಲಿ 7000 ಕೋಟಿ ರೂ. ಮೌಲ್ಯದ ಡ್ರಗ್ಸ್ ಸಿಕ್ಕಿತ್ತು. ಮಧ್ಯಪ್ರದೇಶದ ಝಾಬುವಾ ಎಂಬ ಗುಡ್ಡಗಾಡು ಪ್ರದೇಶದಲ್ಲಿ 168 ಕೋಟಿ ರೂ. ಮೌಲ್ಯದ ಡ್ರಗ್ಸ್ ಜಪ್ತಿಯಾಗಿತ್ತು. ಇನ್ನೂ ಸ್ವಲ್ಪ ಹಿಂದೆ ಹೋದರೆ, ಗುಜರಾತ್‌ನ ಮುಂದ್ರಾ ಬಂದರಿನಲ್ಲಿ 21,000 ಕೋಟಿ ರೂ. ಮೌಲ್ಯದ ಮಾದಕ ದ್ರವ್ಯವವನ್ನು 2021ರಲ್ಲಿ ಪೊಲೀಸರು ವಶಪಡಿಸಿಕೊಂಡಿದ್ದರು. ಹೀಗೆ ಮಾದಕ ದ್ರವ್ಯಗಳ ಜಪ್ತಿಯ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಆದರೆ ಇದೂ ಕೂಡ ಡ್ರಗ್ಸ್ ಎಂಬ ಮಹಾಸಾಗರದಲ್ಲಿನ ಸಣ್ಣ ಹನಿಯಷ್ಟೆ. ಜಾಗತಿಕ ಮಟ್ಟದಲ್ಲಿ ಡ್ರಗ್ಸ್ ಮಾಫಿಯಾ ಎಂಬುದು ಪರ್ಯಾಯ ಆರ್ಥಿಕತೆಯ ರೂಪದಲ್ಲಿ ಕೆಲಸ ಮಾಡುತ್ತಿದೆ. ಭಾರತದಲ್ಲಿ ನಡೆಯುವ ಡ್ರಗ್ಸ್ ವ್ಯವಹಾರವೇ ಪ್ರತಿ ವರ್ಷ ನೂರಾರು ಸಾವಿರ ಕೋಟಿ ರೂ.ಗಳಷ್ಟಿದೆ.

ಈ ಹಿಂದೆ ನಮ್ಮ ದೇಶದಲ್ಲಿ ಚಿತ್ರರಂಗದ ಒಂದಷ್ಟು ಮಜಾಕೋರರು ಹಾಗೂ 'ಕೆಟ್ಟ' ಮಕ್ಕಳು ಮಾತ್ರ ರೇವ್ ಪಾರ್ಟಿಗಳಲ್ಲಿ ಡ್ರಗ್ಸ್ ಸೇವಿಸುತ್ತಿದ್ದರು. ಆದರೆ ಈಗ ಡ್ರಗ್ಸ್ ಸರ್ವವ್ಯಾಪಿಯಾಗಿದೆ. ಎಲ್ಲೆಂದರಲ್ಲಿ ಡ್ರಗ್ಸ್ ಸಿಗುತ್ತಿದೆ. ಮೆಟ್ರೋ ನಗರಗಳಂತಹ ದೆಹಲಿ, ಮುಂಬೈ, ಕೊಲ್ಕತ್ತಾಗಳ ಜೊತೆಗೆ ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶಗಳಂತಹ ರಾಜ್ಯದ ಸಣ್ಣಪುಟ್ಟ ನಗರಗಳಲ್ಲೂ ಡ್ರಗ್ಸ್ ಸಿಗುತ್ತದೆ. ನಗರಗಳ ಮಾತು ಹಾಗಿರಲಿ, ಸಣ್ಣ ಪಟ್ಟಣಗಳು ಹಾಗೂ ಹಳ್ಳಿಗಳಲ್ಲೂ ಯುವಕರು ಡ್ರಗ್ಸ್‌ಗೆ ದಾಸರಾಗಿದ್ದಾರೆ. ಅದಕ್ಕಿಂತ ಹೆಚ್ಚು ಆತಂಕಕಾರಿ ಸಂಗತಿಯೆಂದರೆ ಈಗ ಡ್ರಗ್ಸ್ ಪೆಡ್ಲರ್‌ಗಳು

ಶಾಲೆಗೆ ಹೋಗುವ ಮಕ್ಕಳನ್ನೂ ಬಿಡುತ್ತಿಲ್ಲ. 7, 8ನೇ ಕ್ಲಾಸಿನ ಮಕ್ಕಳಿಗೂ ಡ್ರಗ್ಸ್ ಸೇವಿಸುವ ಚಟ ಹತ್ತಿಸುತ್ತಿದ್ದಾರೆ. ಈ ಮಕ್ಕಳು ಸ್ವತಃ ಡ್ರಗ್ಸ್ ಸೇವಿಸುವುದರ ಜೊತೆಗೆ ಡ್ರಗ್ಸ್ ಸಾಗಣೆಯ ಕೊಂಡಿಯಾಗಿಯೂ ಬಳಕೆಯಾಗುತ್ತಿದ್ದಾರೆ. ಒಮ್ಮೆ ಇವರು ಡ್ರಗ್ಸ್‌ಗೆ ದಾಸರಾದರೆ ಇವರನ್ನು ಬಳಸಿಕೊಂಡು ಬೇರೆ ಬೇರೆ ಅಪರಾಧ ಕೃತ್ಯಗಳನ್ನು ಮಾಡಿಸಬಹುದು. ಇವರು ಅಪ್ರಾಪ್ತರಾದ್ದರಿಂದ ಕಠಿಣ ಕಾನೂನು ಕ್ರಮ ತೆಗೆದುಕೊಳ್ಳಲು ಸಾಧ್ಯವಿಲ್ಲ. ಗೋವಾದಲ್ಲಿ ನಡೆಯುತ್ತಿರುವ ಸಂಘಟಿತ ಮಾದಕ ದ್ರವ್ಯ ವ್ಯಾಪಾರ ಈಗ ರಹಸ್ಯವಾಗಿ ಉಳಿದಿಲ್ಲ. ಅದರ ಬಗ್ಗೆ ಎಲ್ಲರಿಗೂ ಗೊತ್ತಿದೆ. ಈಶಾನ್ಯದ ರಾಜ್ಯಗಳು ಕೂಡ ಮಾದಕ ದ್ರವ್ಯದ ದಂಧೆಯಿಂದ ತೀವ್ರ ಶೋಷಣೆಗೆ ಒಳಗಾಗಿವೆ. ಪಂಜಾಬ್‌ನಲ್ಲಂತೂ ಪರಿಸ್ಥಿತಿ ಶೋಚನೀಯವಾಗಿದೆ. ಅಲ್ಲಿನ ಡ್ರಗ್ಸ್ ದಂಧೆಯ ಬಗ್ಗೆ ಉಡ್ತಾ ಪಂಜಾಬ್ ಎಂಬ ಸಿನಿಮಾ ಕೂಡ ಬಂದಿದೆ. ಈಗ ಜನ್ ಸುರಾಜ್ ಪಕ್ಷದ ಪ್ರಶಾಂತ್ ಕಿಶೋರ್ ಅವರು ಶೀಘ್ರದಲ್ಲೇ ಉಡ್ತಾ ಬಿಹಾರ್ ಎಂಬ ಸಿನಿಮಾ ಮಾಡಬೇಕಾದ ಸಂದರ್ಭ ಬಂದಿದೆ ಎಂದು ಹೇಳುತ್ತಿದ್ದಾರೆ.

ಹಾಗಿದ್ದರೆ ಭಾರತಕ್ಕೆ ಡ್ರಗ್ಸ್ ಹೇಗೆ ಮತ್ತು ಎಲ್ಲಿಂದ ಬರುತ್ತಿದೆ? ನಮ್ಮದೇ ದೇಶದ ಕೆಲ ಗುಡ್ಡಗಾಡು ಪ್ರದೇಶದಲ್ಲಿ ತಕ್ಕಮಟ್ಟಿಗೆ ಗಾಂಜಾ ಬೆಳೆಯುತ್ತಾರೆ. ಆದರೆ ಅಫೀಮು, ಕೊಕೇನ್ ಮತ್ತು ರಾಸಾಯನಿಕದಿಂದ ತಯಾರಿಸುವ ಡ್ರಗ್ಸ್ ಭಾರತಕ್ಕೆ ಬೇರೆ ದೇಶಗಳಿಂದಲೇ ಬರುತ್ತಿವೆ. ಅಫ್ಘಾನಿಸ್ತಾನ ಮತ್ತು ಪಾಕಿಸ್ತಾನದ ಗಡಿ ಪ್ರದೇಶಗಳಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಅಫೀಮು ಬೆಳೆದು, ಸಂಸ್ಕರಣೆ ಮಾಡಲಾಗುತ್ತದೆ. ಪಾಕಿಸ್ತಾನದ ಸ್ಮಗ್ಲರ್‌ಗಳು ಮತ್ತು ಭಯೋತ್ಪಾದಕ ಸಂಘಟನೆಗಳು ಆ ಮಾದಕ ದ್ರವ್ಯಗಳನ್ನು ರಾಜಸ್ಥಾನ, ಪಂಜಾಬ್ ಮತ್ತು ಗುಜರಾತ್ ಮೂಲಕ ಭಾರತಕ್ಕೆ ಕಳ್ಳಸಾಗಣೆ ಮಾಡುತ್ತಿವೆ. ಗಡಿ ಪ್ರದೇಶಗಳಲ್ಲಿ ಡ್ರಗ್ಸ್ ಕಳುಹಿಸಲು ಡ್ರೋನ್‌ಗಳನ್ನು ಬಳಸಲಾಗುತ್ತದೆ. ರಾಜಸ್ಥಾನ ಮತ್ತು ಪಂಜಾಬ್‌ಗೆ ಪಾಕಿಸ್ತಾನದಿಂದ ಹಾರಿ ಬರುವ ಡ್ರೋನ್‌ಗಳು ಡ್ರಗ್ಸ್ ಪ್ಯಾಕೆಟ್‌ಗಳನ್ನು ಎಸೆದು ಹೋಗುತ್ತವೆ. ನಮ್ಮ ಭದ್ರತಾ ಪಡೆಗಳು ಈ ಡ್ರೋನ್‌ಗಳನ್ನು ಪತ್ತೆಹಚ್ಚಿ ಹೊಡೆದುರುಳಿಸುತ್ತಿವೆ. ಆದರೂ ಅವರ ಕಣ್ಣುತಪ್ಪಿಸಿ ಒಂದಷ್ಟು ಡ್ರಗ್ಸ್ ಬಂದೇ ಬರುತ್ತವೆ. ಪಾಕಿಸ್ತಾನದಲ್ಲಿರುವ ಡ್ರಗ್ಸ್ ದಂಧೆಕೋರರು ಇದರಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ಕೆನಡಾದಲ್ಲಂತೂ ಹ್ಯಾಂಡ್ಲರ್‌ಗಳು ಬಹಳ ಮಜಬೂತಾದ ಜಾಲವನ್ನು ಸೃಷ್ಟಿಸಿಕೊಂಡಿದ್ದಾರೆ. ಅಲ್ಲಿಂದ ಪಂಜಾಬ್‌ಗೆ ಅತ್ಯಂತ ವ್ಯವಸ್ಥಿತವಾಗಿ ಡ್ರಗ್ಸ್ ಕಳ್ಳಸಾಗಣೆ ನಡೆಯುತ್ತಿದೆ. ಭಾರತಕ್ಕೆ ಡ್ರಗ್ಸ್ ಬರುವ ಇನ್ನೊಂದು ಪ್ರಮುಖ ಮಾರ್ಗವೆಂದರೆ ನೇಪಾಳದ ಗಡಿ. ಅದನ್ನು ಚೀನಾದ ಡ್ರಗ್ಸ್ ಮಾಫಿಯಾದವರು ನಿಯಂತ್ರಿಸುತ್ತಿದ್ದಾರೆ. ಮ್ಯಾನ್ಮಾರ್‌ನಲ್ಲೂ ಬಂಡುಕೋರ ಗುಂಪುಗಳು ಮಾದಕ ದ್ರವ್ಯ ಕಳ್ಳಸಾಗಣೆ ದಂಧೆಯಲ್ಲಿ ದೊಡ್ಡ ಪ್ರಮಾಣದಲ್ಲಿ ತೊಡಗಿಕೊಂಡಿವೆ.

ಗಡಿಯ ಆಚೆ ಮತ್ತು ಈಚೆ ಎರಡೂ ದೇಶಗಳಲ್ಲಿ ವಾಸಿಸುವ ಜನರು ಸಾಮಾನ್ಯವಾಗಿ ನೋಡಲು ಒಂದೇ ರೀತಿ ಇರುತ್ತಾರೆ. ಸ್ಮಗ್ಲರ್‌ಗಳು ಈ ಸಂಗತಿಯನ್ನೇ ಚೆನ್ನಾಗಿ ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಅಂತಹ ಜನರನ್ನು ಗುರುತಿಸುವುದು ಪೊಲೀಸರಿಗೂ ಕಷ್ಟ. ಹೀಗಾಗಿ ಡ್ರಗ್ಸ್ ಕಳ್ಳಸಾಗಣೆಯನ್ನು ತಡೆಯಬೇಕು ಅಂದರೆ ಅದಕ್ಕೆ ಅತ್ಯಂತ ಸಮರ್ಥವಾದ ಗುಪ್ತಚರ ವ್ಯವಸ್ಥೆ ಬೇಕಾಗುತ್ತದೆ. ಗುಪ್ತಚರ ಮಾಹಿತಿ ಪಡೆದು, ಸದಾ ಎಚ್ಚರಿಕೆಯಿಂದ ಗಡಿ ಕಾಯುವ ಯೋಧರಿದ್ದರೆ ಹಾಗೂ ಡ್ರಗ್ಸ್ ದಂಧೆಯ ಬಗ್ಗೆ ಸರ್ಕಾರಗಳು ಕೂಡ ಶೂನ್ಯ ಸಹಿಷ್ಣುತೆಯ ನೀತಿಯನ್ನು ಬೆಳೆಸಿಕೊಂಡರೆ ಆಗ ಮಾತ್ರ ಇದನ್ನು ಮಟ್ಟಹಾಕಬಹುದು. ಇಲ್ಲದಿದ್ದರೆ ಈ ದಂಧೆ ನಿಯಂತ್ರಿಸುವುದು ಅಸಾಧ್ಯ.

ಕಹಿಯಾದ ಸತ್ಯ ಏನೆಂದರೆ, ಭಾರತ ಇನ್ನೂ ಗಡಿ ಪ್ರದೇಶಗಳಲ್ಲಿ ಡ್ರಗ್ಸ್ ಕಳ್ಳಸಾಗಣೆ ನಡೆಯದಂತೆ ತಡೆಯುವ ಪರಿಣಾಮಕಾರಿ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲು ಸಾಧ್ಯವಾಗಿಲ್ಲ. ವ್ಯವಸ್ಥೆಯಲ್ಲೇ ಅನೇಕ ದೋಷಗಳಿವೆ. ಹೀಗಾಗಿ ಎಲ್ಲವನ್ನೂ ನಿಯಂತ್ರಿಸುವುದು ಕಷ್ಟ. ಸರ್ಕಾರದ ಅತ್ಯುನ್ನತ ಇಲಾಖೆಯ ಮುಖ್ಯಸ್ಥರಿಗೂ ಹೊಣೆಗಾರಿಕೆ ನಿಗದಿಪಡಿಸಿದರೆ ಏನಾದರೂ ಬದಲಾವಣೆ ಸಾಧ್ಯವಾದೀತು.

ನಾನು ಇಷ್ಟೆಲ್ಲಾ ಬರೆದ ಮೇಲೂ ಒಂದು ಪ್ರಮುಖವಾದ ಪ್ರಶ್ನೆ ಹಾಗೇ ಉಳಿಯುತ್ತದೆ: ನಮ್ಮ ಸಂಸತ್ ಸದಸ್ಯರು ಪಾರ್ಲಿಮೆಂಟ್‌ನಲ್ಲಿ ಇದರ ಬಗ್ಗೆ ಏನಾದರೂ ಚರ್ಚೆ ಮಾಡುತ್ತಾರಾ? ಡ್ರಗ್ಸ್ ಬಳಸಿ ಭಾರತವನ್ನು ನಿರ್ವೀರ್ಯಗೊಳಿಸಲು ಯತ್ನಿಸುತ್ತಿರುವ ವಿದೇಶಿ ಮಾಫಿಯಾವನ್ನು ಮಟ್ಟಹಾಕಲು ಏನಾದರೂ ಕ್ರಮ ಕೈಗೊಳ್ಳುತ್ತಾರಾ?

ಭಟ್ಟರ್ ಸ್ಕಾಚ್

- ಟಿ.ಕೆ.ಬಿಂಧು ಮಾಧವಾಚಾರ್ಯ, ತ್ಯಾಗರಾಜನಗರ
ಭಟ್ರೇ, ರಾಯರ ಮಠ ಮತ್ತು ಉತ್ತರಾದಿ ಮಠದ ನಡುವಿನ ವಿವಾದ ಬಗೆಹರಿಯುವ ನಂಬಿಕೆ ನಿಮಗಿದೆಯಾ?
– **ಸುಳ್ಳು ಸುಬ್ಬಣ್ಣ ಕಿವೀಲಿ ಕಮಲ ಮುಡ್ಕೊಂಡು ಸೋಬಾನೆ ಪದ ಹಾಡ್ತಿರೋದು ನೋಡಿದ್ರೆ, ಯಾಕೋ ಶಕುನ ನೆಟ್ಟಗೆ ಇದ್ದಂಗೆ ಕಾಣ್ತೊಲ್ಲ!**

- ವೀರೇಶ ಮತ್ತಣ್ಣನವರ, ಹುಬ್ಬಳ್ಳಿ
ಭಟ್ರೇ, ಈ ದೇಶದ ಅನ್ನ ತಿಂದು ಪಾಕಿಸ್ತಾನಕ್ಕೆ ಜೈ ಅಂತಾರಲ್ಲ?
– **ಅನ್ನ ತಿನ್ನಲಿ, ಸೆಗಣಿ ತಿನ್ನಲಿ, ಕುಟುಕುವುದು ಚೇಳಿನ ಧರ್ಮ!**

- ರೂಪಾ ಎಂ.,ಬೆಂಗಳೂರು
ಭಟ್ರೇ, ನನ್ನ ಗಂಡ ನನಗಿಂತ ಕುಳ್ಳಗಿದ್ದಾನಲ್ಲ?
– **ಸದಾ ಜತೆಯಲ್ಲಿ ಸ್ಟೂಲ್ ಇಟ್ಟುಕೊಂಡರಾಯಿತು!**

- ಬಸವರಾಜ ಕೆ.ವಿ., ತುಮಕೂರು
ಸಾರ್, ತಲೆಗೂದಲು ಬೆಳ್ಳಗಾಗುತ್ತಿರುವುದು ಚಿಂತೆಗೆ ಕಾರಣವಾಗಿದೆಯಲ್ಲ?
– **ಯಾರ ತಲೆಗೂದಲು ಎಂಬುದನ್ನು ಸ್ಪಷ್ಟಪಡಿಸಬಾರದೇ?!**

- ರಾಜು ಪವನ್, ಮೈಸೂರು
ಭಟ್ರೇ, ಮೊಯಿಲಿ ಅವರು ಮತ್ತೊಂದು ಬಾಂಬ್ ಹಾಕಿದ್ದಾರಂತೆ?
– **ಹೂಂ.. ಗದ್ಯ ಮಹಾಕಾವ್ಯ ಬಿಡುಗಡೆ ಮಾಡ್ತೇನೆ ಅಂತ ಹೇಳ್ತಿದ್ದಾರಂತೆ!**

- ವಿಶಾಲ ರಾಮಚಂದ್ರ, ಬೆಂಗಳೂರು
ಭಟ್ರೇ, ಮೊಯಿಲಿ ಕಾವ್ಯವನ್ನು ಭಾಷಣಗಳಲ್ಲಿ ಉಲ್ಲೇಖಿಸಬಹುದಾ?
– **ಉಲ್ಲೇಖಿಸಬಹುದು ಮತ್ತು ಕನ್ನಡಕ್ಕೆ ಭಾಷಾಂತರವನ್ನೂ ಮಾಡಬೇಕಾಗಬಹುದು !**

- ಶ್ರೀಧರ ಕೆ. ರೆಡ್ಡಿ, ಬಾಣಸವಾಡಿ
ಭಟ್ರೇ, ಆರ್.ಅಶೋಕ್ ವಿಪಕ್ಷ ನಾಯಕನಾಗಿ ಹೇಗೆ ಕೆಲಸ ನಿರ್ವಹಿಸುತ್ತಿದ್ದಾರೆ?
– **ತನ್ನನ್ನು ಯಾರೂ ಸೀರಿಯಸ್ ಆಗಿ ಪರಿಗಣಿಸ್ತಾ ಇಲ್ಲ ಎಂದು ಗೊಣಗುತ್ತಿದ್ದರಂತೆ!**

- ಭಾನುಮತಿ ವಿ. ತ್ಯಾಗರಾಜನಗರ
ಭಟ್ರೇ, ಕನ್ನಡದ ಸಾಹಿತಿಗಳಲ್ಲಿ ಹೋರಾಟದ ಮನೋಭಾವ ಕಮ್ಮಿಯಾಗುತ್ತಿದೆಯಲ್ಲ?
– **ಪ್ರಶಸ್ತಿ ಗಿಟ್ಟಿಸುವ ಹೋರಾಟದಲ್ಲಿ ಮಾತ್ರ ಸದಾ ಮುಂದು!**

- ಶೀರ್ನಕೋಡಿ ಬಾಬು, ಕಾರ್ಕಳ
ಭಟ್ರೇ, ಕಲ್ಲು ಬಂಗಾರವಾಗುವಂತಿದ್ದರೆ ಹೇಗಿರುತ್ತಿತ್ತು?
– **ಪ್ಲಾಸ್ಟರ್ ಆಫ್ ಪ್ಯಾರಿಸಿನಲ್ಲಿ ಮಾಡಿದ ನಿಮ್ಮೂರ ಪರಶುರಾಮ ವಿಗ್ರಹ ಬಂಗಾರದಂತೆ ಕಂಗೊಳಿಸುತ್ತಿತ್ತು!**

ಬಹಿಷ್ಕೃತರ ಸಂತತನ ಮತ್ತು ಸಂತಸ

ಕಾಡುದಾರಿ

ಹರೀಶ್ ಕೇರ

vveditoped@gmail.com

ಇದೇ ವರ್ಷ ಜನವರಿಯಲ್ಲಿ ಬೌದ್ಧ ಧರ್ಮ ಗುರು ದಲೈ ಲಾಮ ಕೊಡಗಿನ ಕುಶಾಲ ನಗರದ ಬಳಿ ಇರುವ ಬೈಲುಕುಪ್ಪೆಯ ಟಿಬೆಟಿಯನ್ನರ ಶಿಬಿರಕ್ಕೆ ಭೇಟಿ ಕೊಟ್ಟರು. ಅವರು ವರ್ಷಕ್ಕೋ ಎರಡು ವರ್ಷಕ್ಕೋ ಒಮ್ಮೆ ಹಾಗೆ ಭೇಟಿ ಕೊಡುವುದು ರೂಢಿ. ಈ ಬಾರಿ ಅವರು ಎಪ್ಪತ್ತು ದಾಟಿದ ವೃದ್ಧರನ್ನೆಲ್ಲ ಭೇಟಿ ಮಾಡಿದ್ದು ವಿಶೇಷ. ಬಹುಶಃ ಅವರೆಲ್ಲ ದಲೈ ಲಾಮ ಟಿಬೆಟ್ ತೊರೆದು ಭಾರತಕ್ಕೆ ಓಡಿ ಬಂದ ಕಾಲದಲ್ಲೇ ಇತ್ತ ಬಂದವರಿರಬೇಕು. ಲಾಮ ಇಲ್ಲಿಗೆ ಬಂದೇ 66 ವರ್ಷಗಳಾಗಿವೆ. 1959ರಲ್ಲಿ ಟಿಬೆಟನ್ನು ಚೀನಾ ಪೂರ್ಣವಾಗಿ ಆಕ್ರಮಿಸಿಕೊಂಡಾಗ ಅವರು ತಮ್ಮ ಕೆಲವೇ ಅನುಯಾಯಿಗಳ ಜೊತೆಗೆ ಭಾರತಕ್ಕೆ ಧಾವಿಸಿದರು. ಆಗಿನ ಪ್ರಧಾನಿ ನೆಹರೂ ಸರಕಾರ ಅವರಿಗೆಲ್ಲ ಆಶ್ರಯ ಕೊಟ್ಟಿತು. ಹಾಗೆ ಬಂದಾಗ, ಮುಂದೆ ಎಂದಾದರೂ ತಾಯ್ನಾಡಿಗೆ ಮರಳಿ ಹೋದೇವು ಎಂಬ ವಿಶ್ವಾಸ ಅವರಲ್ಲಿ ಇದ್ದಿರಬೇಕು. ಆದರೆ ಇಂದು ಆ ಯಾವ ಭರವಸೆಯೂ ಉಳಿದಿಲ್ಲ. ಹೀಗಾಗಿ ಆ ವೃದ್ಧರನ್ನು ಲಾಮ ಕರೆದು ತಲೆ ತಡವಿ ನಮಸ್ಕರಿಸಿ ಬೀಳ್ಕೊಟ್ಟ ನಂತರ ಅಲ್ಲಿ ಒಂದು ಕಣ್ಣೀರು ಮತ್ತು ವಿಷಾದ ಮಾತ್ರ ಉಳಿದಿರಬಹುದು. ಅದೇನೂ ವಸ್ತುಸ್ಥಿತಿಯನ್ನು ಬದಲಾಯಿಸಲಿಕ್ಕಿಲ್ಲ. ಆದರೆ, ನಾವೆಲ್ಲರೂ ಒಂದೇ ರೀತಿ ನೊಂದವರು ಎಂಬ ಒಂದು ಸಮಾಧಾನ ಇದರಿಂದ ಪ್ರಾಪ್ತಿಯಾಗುತ್ತದಲ್ಲ.

ಇದೇ ವಾರ ದಲೈ ಲಾಮ ಅವರಿಗೆ 90 ವರ್ಷ ತುಂಬಿತಂತೆ. 1935ರಲ್ಲಿ ಹುಟ್ಟಿದ ಅವರಿಗೆ ಭಾರತಕ್ಕೆ ಬರುವಾಗ 24 ವರ್ಷ. ನಿಮಗೆ ಗೊತ್ತೋ ಇಲ್ಲವೋ, ದಲೈ ಲಾಮ ಎಂಬುದು ಅವರ ಹೆಸರಲ್ಲ. ಅದು ಪದನಾಮ. ನಮ್ಮ ಜಗದ್ಗುರುಗಳು ಇದ್ದಂತೆ ಅವರು ಟಿಬೆಟಿಯನ್ನರ 14ನೇ ದಲೈ ಲಾಮ. ತೆಂಜಿನ್ ಗ್ಯಾತ್ಸೋ ಎಂಬುದು ಮೂಲ ಹೆಸರು. ಟಿಬೆಟಿಯನ್ ಬೌದ್ಧರು ಪುನರ್ಜನ್ಮವನ್ನು ನಂಬುತ್ತಾರೆ. ಸಾಮಾನ್ಯ ಹುಡುಗನೊಬ್ಬ ದಲೈ ಲಾಮ ಆಗಬೇಕಾದರೆ ಆತ ಪೂರ್ವಜನ್ಮದಲ್ಲಿ ಕೂಡ ಲಾಮ ಆಗಿದ್ದ ಎಂಬುದು ರುಜುವಾತಾಗಬೇಕು. ಇದನ್ನು ಪತ್ತೆ ಹಚ್ಚುವುದಕ್ಕೆ ಕಠಿಣವಾದ ಕೆಲವು ಸಂಪ್ರದಾಯಗಳಿವೆ. ಮರಣ ಹೊಂದಲಿರುವ ಲಾಮಾ, ತನ್ನ ಕೆಲಸ ಮುಂದುವರಿಸಬೇಕು ಎಂದಿದ್ದರೆ ಪುನರ್ಜನ್ಮ ಪಡೆಯುತ್ತಾನೆ. ಹಾಗೆ ಜನ್ಮ ಪಡೆದ ಮಗುವನ್ನು ಹುಡುಕಲಾಗುತ್ತದೆ. ಪರೀಕ್ಷೆಗಳ ಸರಣಿಯಲ್ಲಿ ಉತ್ತೀರ್ಣನಾದ ಮಗುವನ್ನು ಟುಲ್ಕು ಎಂದು ಗುರುತಿಸಲಾಗುತ್ತದೆ. ಮರಗಳು ಪಲ್ಲವಿಸುವುದು, ಭೂಮಿಯ ಕಂಪನಗಳು, ದಹನದ ಹೊಗೆ ಸಾಗುವ ದಿಕ್ಕು, ಮಗುವಿನ ಪೋಷಕರು ಕಾಣುವ ಶಕುನಗಳು, ಕನಸುಗಳು- ಇವೆಲ್ಲ ಸೂಚನೆಗಳಾಗುತ್ತವೆ. ಮತ್ತಷ್ಟು ಪರೀಕ್ಷೆಗಳಲ್ಲಿ ಮಗುವಿನ ವ್ಯಕ್ತಿತ್ವವನ್ನು ಹಿಂದಿನ ಲಾಮಾ ಜೊತೆಗೆ ಹೋಲಿಸಲಾಗುತ್ತದೆ. ಹಿಂದಿನ ಲಾಮಾನ ಯಾವುದಾದರೂ ಸ್ವತ್ತಿನ ಬಗ್ಗೆ ಮಗು ಆಸಕ್ತಿ ತೋರುವುದು, ಅವರ ಯಾವುದಾದರೂ ವರ್ತನೆಯನ್ನು ಕಾಣಿಸುವುದು, ಲಾಮಾನ ನಿಕಟ ಸಹಚರರನ್ನು ಗುರುತಿಸುವುದು ಅಥವಾ ನೆನಪಿಸಿಕೊಳ್ಳುವುದು- ಇವನ್ನೆಲ್ಲ ಸೂಕ್ಷ್ಮವಾಗಿ ಪರಿಶೀಲಿಸಲಾಗುತ್ತದೆ. ಈ ಎಲ್ಲದರ ಮೇಲೆ ಅಂತಿಮವಾಗಿ ಹೊಸ ಲಾಮಾನ ಆಯ್ಕೆ.

ಸದ್ಯದ ದಲೈ ಲಾಮಾರ ಪರಿಸ್ಥಿತಿ ವಿಲಕ್ಷಣವಾಗಿದೆ. ಇದುವರೆಗೂ ಹೊಸ ಲಾಮಾನ ಆಯ್ಕೆ ಟಿಬೆಟ್‌ನಲ್ಲಿಯೇ ನಡೆಯುತ್ತಿತ್ತು. ಆದರೆ ದಲೈ ಲಾಮಾ ಟಿಬೆಟ್‌ಗೆ ಹೋಗುವಂತಿಲ್ಲ ಹಾಗೂ ಅವರು ಸ್ಥಾಪಿಸಿರುವ ಬಹಿಷ್ಕೃತ ಟಿಬೆಟ್ ಸರ್ಕಾರ ಭಾರತದ ಧರ್ಮಶಾಲಾದಿಂದಲೇ ಕಾರ್ಯಾಚರಿಸುತ್ತಿದೆ. 90 ವರ್ಷ ತುಂಬಿದಾಗ 'ನಾನು 130 ವರ್ಷ ಬದುಕುತ್ತೇನೆ' ಎಂದು ಲಾಮಾ ಘೋಷಿಸಿದ್ದಾರೆ. 'ಈ ಸಲ ಹೊಸ ಲಾಮಾನ ಆಯ್ಕೆ ಟಿಬೆಟ್‌ಗೆ ಹೊರಗೆ ನಡೆಯಲಿದೆ' ಎಂದಿದ್ದಾರೆ. ಆದರೆ ಟಿಬೆಟನ್ನು ಸಂಪೂರ್ಣ ಸ್ವಾಧೀನಪಡಿಸಿಕೊಂಡು, ಟಿಬೆಟಿಯನ್ ಬೌದ್ಧ ಸಂಸ್ಕೃತಿಯ ನಾಶಕ್ಕೆ ಪಣತೊಟ್ಟಿರುವ ಚೀನಾ ಇದನ್ನು ಎಂದೂ ಒಪ್ಪಿಲ್ಲ. ತಾನೇ ಹೊಸ ಲಾಮನ ಆಯ್ಕೆ ಮಾಡುತ್ತೇನೆಂದಿದೆ. ಚೀನಾದ ರಾಜವಂಶ ಹಿಂದೆಂದೋ ಜಾರಿಗೆ ತಂದಿದ್ದ 'ಸುವರ್ಣ ಕರಂಡಕ' ಪದ್ಧತಿಯ ಮೂಲಕವೇ ಹೊಸ ಲಾಮಾ ಆಯ್ಕೆಯಾಗಬೇಕು ಎಂದಿದೆ. ಈ ಸುವರ್ಣ ಕರಂಡಕದ ಪದ್ಧತಿಯು ಪುನರ್ಜನ್ಮವನ್ನು ಒಪ್ಪಿ ನಡೆಸುವ ರೂಢಿ. ಪುನರ್ಜನ್ಮ ಎಂಬ ಪರಿಕಲ್ಪನೆಯಲ್ಲಿ ನಂಬಿಕೆಯಿಲ್ಲದ ಚೀನಾದ ಕಮ್ಯುನಿಸ್ಟರು ಇದಕ್ಕೆ ಮಾತ್ರ ಈ ರೂಢಿಯನ್ನು

ಬಳಸುತ್ತೇವೆನ್ನುವುದು ಪರಿಸ್ಥಿತಿಯ ವ್ಯಂಗ್ಯ.

'ದಲೈ ಲಾಮಾ ಎಂಬ ವ್ಯವಸ್ಥೆ ಮುಂದುವರಿಯಬೇಕೆ ಬೇಡವೇ ಎಂಬುದು ಟಿಬೆಟಿನ ಜನರಿಗೆ ಬಿಟ್ಟದ್ದು. ಅದು ಅಪ್ರಸ್ತುತ ಎಂದು ಅವರು ಭಾವಿಸಿದರೆ ಪದ್ಧತಿ ನಿಂತುಹೋಗುತ್ತದೆ. 15ನೇ ದಲೈ ಲಾಮಾ ಇರುವುದಿಲ್ಲ. ಆದರೆ ನಾನು ಇಂದು ಸತ್ತರೆ ಅವರು ಇನ್ನೊಬ್ಬ ದಲೈ ಲಾಮಾನನ್ನು ಬಯಸುತ್ತಾರೆ ಎಂದು ನಾನು ಭಾವಿಸುತ್ತೇನೆ. ಹಿಂದಿನ ಜನ್ಮದ ಕ್ರಿಯೆಯ ಉದ್ದೇಶವನ್ನು ಪೂರೈಸುವುದೇ ಪುನರ್ಜನ್ಮದ ಉದ್ದೇಶ. ನನ್ನ ಜೀವನ ಟಿಬೆಟ್‌ನ ಹೊರಗೆ ನಡೆದಿದೆ. ಆದ್ದರಿಂದ ತಾರ್ಕಿಕವಾಗಿ ನನ್ನ ಪುನರ್ಜನ್ಮ ಹೊರಗೇ ಕಂಡುಬರಲಿದೆ. ಆದರೆ ಮುಂದಿನ ಪ್ರಶ್ನೆ- ಚೀನಿಯರು ಇದನ್ನು ಸ್ವೀಕರಿಸುತ್ತಾರಾ? ಚೀನಾ ಸ್ವೀಕರಿಸುವುದಿಲ್ಲ. ಚೀನೀ ಸರ್ಕಾರ ಬೇರೆ ಪಂಚೆನ್ ಲಾಮಾನನ್ನು ಮಾಡಿದಂತೆ ಇನ್ನೊಬ್ಬ ದಲೈ ಲಾಮಾ ನೇಮಿಸುವ ಸಾಧ್ಯತೆಯಿದೆ. ಹಾಗೆ ಆದರೆ ಇಬ್ಬರು ದಲೈ ಲಾಮಾಗಳು ಇರುತ್ತಾರೆ- ಒಬ್ಬರು ಟಿಬೆಟಿಯನ್ನರ ಹೃದಯದ ದಲೈ ಲಾಮಾ. ಇನ್ನೊಬ್ಬರು ಚೀನಾದಿಂದ ನೇಮಕಗೊಂಡವರು' ಎಂದು ಲಾಮಾ ಇತ್ತೀಚೆಗೆ ಹೇಳಿದ್ದರು.

ದಲೈ ಲಾಮಾ ಅವರಿಗೆ ಭಾರತ ಆಶ್ರಯ ಕೊಟ್ಟಿದ್ದು ಸದಾ ಚೀನಾದ ಉರಿಗಣ್ಣಿಗೆ ಕಾರಣವಾಗಿರುವ ಸಂಗತಿ. ಇದೀಗ ಲಾಮಾರನ್ನು ಅಭಿನಂದಿಸಲು ಕೇಂದ್ರ ಸರಕಾರದ ಸಚಿವರು ಹೋಗಿರುವುದೂ ಅದರ ಸಿಟ್ಟಿಗೆ ಕಾರಣವಾಗಿದೆ. ಟಿಬೆಟ್‌ನ ಹೊರಗೆ ಹೊಸ ಲಾಮಾನ ಆಯ್ಕೆ ನಡೆಯಲಿದೆ ಎಂದರೆ ಭಾರತ, ನೇಪಾಳ ಅಥವಾ ಭೂತಾನ್‌ನಲ್ಲಿ ಆಗಬೇಕಷ್ಟೆ. 45ಕ್ಕೂ ಹೆಚ್ಚು ವಸಾಹತುಗಳಿರುವ ಭಾರತದಲ್ಲೇ ಅತ್ಯಧಿಕ ಟಿಬೆಟಿಯನ್ನರು, ಅಂದರೆ ಸುಮಾರು ಒಂದೂವರೆ ಲಕ್ಷ ಮಂದಿ ಇರುವುದು. ಅಂದರೆ ಭಾರತದಲ್ಲಿಯೇ ಹೊಸ ಲಾಮನ ಆಯ್ಕೆ ಮಾಡುವ ಸಾಧ್ಯತೆ ಅಧಿಕ. ಹಾಗೇನಾದರೂ ಆದರೆ ಚೀನಾ ಕೋಪದಿಂದ ಕುದ್ದುಹೋಗಲಿದೆ. ಇದರಿಂದ ಭಾರತದೊಂದಿಗೆ ಚೀನಾದ ಡಿಪ್ಲೊಮಸಿ ಇನ್ನಷ್ಟು ಹಳಸಬಹುದು. ಇದು ಕೇಂದ್ರ ಸರಕಾರದ ಚಿಂತೆಗೆ ಕಾರಣ. ಹೀಗಾಗಿ ಟಿಬೆಟಿಯನ್ನರೊಂದಿಗೆ ನೇರವಾಗಿ ಕಾಣಿಸಿಕೊಳ್ಳಬೇಡಿ ಎಂದು ತನ್ನ ಅಧಿಕಾರಿಗಳು, ಸಚಿವರಿಗೆ ಸರ್ಕಾರ ಪರೋಕ್ಷವಾಗಿ ತಿಳಿಸುತ್ತಾ ಇರುತ್ತದೆ. ಇದು ಭಾರತದಲ್ಲಿರುವ ಟಿಬೆಟಿಯನ್ನರು ನರ್ವಸ್ ಆಗುವುದಕ್ಕೂ ಕಾರಣವಾಗಿದೆ.

ಹಾಗೆ ನೋಡಿದರೆ ಟಿಬೆಟಿಯನ್ನರು ಅತ್ಯಂತ ಶಾಂತಿಯುತ ಸಮುದಾಯ. ಭಾರತದಲ್ಲಿರುವ ಅನ್ಯ ನಿರಾಶ್ರಿತ ವಲಸಿಗರಿಗೆ ಹೋಲಿಸಿದರೆ, ಟಿಬೆಟಿಯನ್ನರಷ್ಟು ಶಾಂತಿಪ್ರಿಯರು ಇನ್ನಾರೂ ಸಿಗಲಿಕ್ಕಿಲ್ಲ. ಬೈಲುಕುಪ್ಪೆಯ ಸುಮಾರು ಮೂರು ಸಾವಿರ ಎಕರೆಗಳಲ್ಲಿ ಹರಡಿಹೋಗಿರುವ ಇವರು ಸ್ಥಳೀಯ ಸಮುದಾಯದ ಜೊತೆಗೆ ಯಾವುದೇ ಗಲಾಟೆ ಗೊಂದಲಗಳಿಲ್ಲದೆ ಬೆರೆತುಹೋಗಿದ್ದಾರೆ. ತಮ್ಮ ಬೆಳೆ ತಾವೇ ಬೆಳೆದುಕೊಳ್ಳುತ್ತಾರೆ, ಸಣ್ಣಪುಟ್ಟ ಕೆಲಸಗಳಲ್ಲಿದ್ದಾರೆ. ಆದರೆ ಪೂರ್ತಿ ಸುಖವಾಗಿದ್ದಾರೆ ಎಂದೂ ಅಲ್ಲ. ಅವರು ಕಾನೂನಾತ್ಮಕವಾಗಿ ಭಾರತದ 'ಪೌರ'ರಲ್ಲ, ವಿದೇಶಿಗರು ಅಷ್ಟೇ. ಹೀಗಾಗಿ ಸರಕಾರಿ ನೌಕರಿಗಳು ಅವರಿಗೆ ಲಭ್ಯವಿಲ್ಲ. ಕೃಷಿ ಹಾಗೂ ಧಾರ್ಮಿಕತೆಯನ್ನು ನೆಚ್ಚಿರುವ ಅವರು ಪರಂಪರೆಯಿಂದ ಉದ್ಯಮಶೀಲರೂ ಅಲ್ಲ. ಹೀಗಾಗಿ, ಇಲ್ಲಿ ಹುಟ್ಟುತ್ತಿರುವ ಹೊಸ ಪೀಳಿಗೆಗಳು ಭಾರತದಾಚೆಗೆ ಮುಖ ಮಾಡುತ್ತಿವೆ. ಇಡೀ ಸಮುದಾಯಕ್ಕೆ ತಾವು ಎತ್ತ ಹೋಗುತ್ತಿದ್ದೇವೆ ಎಂಬುದು ಸ್ಪಷ್ಟವಿಲ್ಲ.

ದಲೈ ಲಾಮ ತಮ್ಮ ಸ್ಥಾನಕ್ಕೆ ಅನುಗುಣವಾದ ರೀತಿನೀತಿಗಳನ್ನು ಕಾಯ್ದುಕೊಂಡಿದ್ದಾರೆ. ಅವರನ್ನು 'ರಾಜಕೀಯ ಸಂತ' ಎಂದು ಹೇಳಬಹುದು. ಏಕಕಾಲಕ್ಕೆ ಟಿಬೆಟಿಯನ್ನರ ಧರ್ಮಗುರುವೂ, ರಾಜಕೀಯ ಮುಖಂಡನೂ ಆಗಿರಬೇಕಾದ ಪಾಡು ಅವರದು. ಸದಾ ಕಾಲ ಬೇರೊಂದು ದೇಶದ ಆಶ್ರಯದಲ್ಲಿರಬೇಕಾಗಿ ಬಂದಿರುವುದರಿಂದಲೋ ಏನೋ, ಅವರ ಮಾತುಗಳು ತುಂಬಾ ವಿನಯಶೀಲವಾಗಿರುತ್ತವೆ. ಒಂದು ಸಲ ಅವರು ತಮ್ಮನ್ನು 'ಭಾರತದ ಶಿಷ್ಯ' ಎಂದು ಕರೆದುಕೊಂಡಿದ್ದರು. 'ನಾನು ಹೊಸದೇನನ್ನೂ ಹೇಳುತ್ತಿಲ್ಲ, ಭಾರತ ಶತಮಾನಗಳಿಂದ ಪ್ರತಿಪಾದಿಸುತ್ತ ಬಂದಿರುವ ಕೆಲವು ತತ್ವಗಳನ್ನಷ್ಟೇ ನಾನು ಮರಳಿ ಹೇಳುತ್ತಿದ್ದೇನೆ. ಅವು ಅಹಿಂಸೆ, ಕರುಣೆ ಮತ್ತು ಸಹಬಾಳ್ವೆ. ಜಗತ್ತಿನ ಎಲ್ಲಿ ಹೋದರೂ ನಾನು ಇದನ್ನು ಭಾರತದಿಂದ ಕಲಿತದ್ದು ಎಂದು ಹೇಳುತ್ತೇನೆ' ಎನ್ನುವ ಲಾಮಾ, ಸದಾ ಎತ್ತಿ ಹಿಡಿಯುವ ಭಾರತದ ಎರಡು ಮಹಾನ್ ವ್ಯಕ್ತಿತ್ವಗಳೆಂದರೆ ಬುದ್ಧ ಮತ್ತು ಗಾಂಧಿ.

ಅವರ ಆತ್ಮಕತೆ 'ಫ್ರೀಡಂ ಇನ್ ಎಕ್ಸೈಲ್' ಹೀಗೆ ಶುರುವಾಗುತ್ತದೆ: 'ಟಿಬೆಟ್ ಸ್ವತಂತ್ರವಾಗಿ ಇದ್ದಾಗಿನ ದಿನಗಳನ್ನು ಹಿಂದಿರುಗಿ ನೋಡಿದರೆ, ಅವು ನನ್ನ ಜೀವನದ ಅತ್ಯುತ್ತಮ ದಿನಗಳೆಂದುಕೊಳ್ಳುತ್ತೇನೆ. ಇಂದೂ ನಾನು ಸಂತೋಷವಾಗಿದ್ದೇನೆ, ಇಲ್ಲವೆಂದಲ್ಲ. ಆದರೆ ಅಂದಿನ ಸ್ಥಿತಿಗತಿಗಳೇ ಬೇರೆ ಇದ್ದವು. ಹಳಹಳಿಕೆಯಲ್ಲಿ ಮುಳುಗುವುದರಿಂದ ಏನೂ ಲಾಭವಿಲ್ಲ ಎಂದು ನಾನು ಬಲ್ಲೆ. ಆದರೆ ಭೂತಕಾಲವನ್ನು ನೆನೆದುಕೊಂಡಾಗ ಆಗುವ ಬೇಸರವನ್ನು ತಪ್ಪಿಸಲಾರೆ. ನನ್ನ ಜನಗಳು ಅನುಭವಿಸಿದ ಭಯಾನಕ ಯಾತನೆ. ಹಳೆ ಟಿಬೆಟ್ ಪರಿಪೂರ್ಣವಾಗಿರಲಿಲ್ಲ ನಿಜ. ಆದರೂ ನಮ್ಮ ಬದುಕಿನ ರೀತಿ ಗಮನಾರ್ಹ, ಗೌರವಾರ್ಹವಾಗಿತ್ತು. ಎಂದೆಂದಿಗೂ ಕಳೆದುಹೋದ ಅವುಗಳಲ್ಲಿ ಕೆಲವನ್ನಾದರೂ ಉಳಿಸಿಕೊಳ್ಳುವುದು ಅಗತ್ಯವಾಗಿತ್ತು'.

ದುಃಖ, ಯಾತನೆಗಳಿವೆ ನಿಜ. ಆದರೆ ಬದುಕಿನ ಉದ್ದೇಶ ಸಂತಸದಿಂದ ಇರುವುದು. ಅಂದರೆ ಯಾವಾಗಲೂ ನಗುತ್ತಿರುವುದು, ಸಮಸ್ಯೆಗಳೇ ಇಲ್ಲದಿರುವುದು ಅಂತಲೂ ಅಲ್ಲ. ಶಾಂತ ಮನಸ್ಥಿತಿ, ಭಾವನೆಗಳ ಸಮನ್ವಯ, ವಾತ್ಸಲ್ಯಭರಿತ ಹೃದಯವನ್ನು ಬೆಳೆಸಿಕೊಳ್ಳುವುದು. ಅದೇನೂ ಅದೃಷ್ಟವಂತರಿಗೆ ಮಾತ್ರ ಸಾಧ್ಯವೆಂದಲ್ಲ, ಎಲ್ಲರೂ ಪರಿಶ್ರಮಪಟ್ಟರೆ ಅದನ್ನು ಬೆಳೆಸಿಕೊಳ್ಳಬಹುದು. ದಿನನಿತ್ಯ ವ್ಯಾಯಾಮ ಮಾಡಿ ದೇಹವನ್ನು ಸೊಗಸಾಗಿ ಇಟ್ಟುಕೊಳ್ಳುವಂತೆಯೇ ಮನೋನೆಮ್ಮದಿಯನ್ನೂ ಕೃಷಿ ಮಾಡಿಕೊಳ್ಳಬಹುದು. ಜಗತ್ತು ನಿರಂತರ ಸ್ಪರ್ಧೆ, ಸ್ವಾರ್ಥಗಳಿಂದ ತಳಮಳಿಸುತ್ತಿರುತ್ತದೆ. ನಾವೆಲ್ಲರೂ ಸಿಟ್ಟಾಗುತ್ತೇವೆ. ಆದರೆ ಸಿಟ್ಟಿನ ಮೂಲವನ್ನು ನೋಡಿ. ಥಟ್ಟನೆ ಪ್ರತಿಕ್ರಿಯಿಸುವುದಕ್ಕಿಂತಲೂ ಒಂದರೆಗಳಿಗೆ ನಿಂತು ಯೋಚಿಸಿ. ಎದುರಿನವನ ದೃಷ್ಟಿಕೋನ ಅವಲೋಕಿಸಿ. ಬಹುಶಃ ನಿಮ್ಮಂತೆಯೇ ಅವನೂ ಬಿಕ್ಕಟ್ಟಿನಲ್ಲಿರಬಹುದು. ತಾಳ್ಮೆಯೆಂಬುದು ದೌರ್ಬಲ್ಯವಲ್ಲ, ಅದು ಶಕ್ತಿ. ಆಧುನಿಕರಾದ ನೀವು ಕೆಲಸ, ಪರೀಕ್ಷೆ, ಆರೋಗ್ಯ, ಸಂಬಂಧ ಎಲ್ಲದರಲ್ಲೂ ಆತಂಕ ಅನುಭವಿಸುತ್ತಿದ್ದೀರಿ. ಭವಿಷ್ಯದ ಭಯ ನಿಮ್ಮ ನೆಮ್ಮದಿಯನ್ನು ಕಿತ್ತುಕೊಂಡಿದೆ. ಈ ಕ್ಷಣದಲ್ಲಿ ಬದುಕಿ. ನಿಮ್ಮನ್ನೂ ಇತರರನ್ನೂ ಪ್ರೀತಿಸಲು ಕಲಿಯಿರಿ- ಎಂದೆಲ್ಲ ಹೇಳುವ ದಲೈ ಲಾಮಾ ಮಾತುಗಳಲ್ಲಿ ಹೊಸ ಹೊಳಹುಗಳೇನೂ ಕಾಣಿಸಲಿಕ್ಕಿಲ್ಲ. ಆದರೆ ಒಂಬತ್ತು ದಶಕಗಳ ಬಹಿಷ್ಕೃತ ಬದುಕು ನೀಡಿದ ಅನುಭವದ ಹೊಳಪಂತೂ ಖಂಡಿತ ಇದೆ.

ಇಂದು ಗುರು ಪೌರ್ಣಮಿ

ವಿದ್ಯಾಶಂಕರ ಶರ್ಮ

ಭರವಸೆಯ ಬೆಳಕಿನೆಡೆಗೆ ದಾರಿ ತೋರುವ ಗುರು

ದಾರಿ ದುರ್ಗಮವಾದಾಗ ನಾವು ಸಹಾಯವನ್ನು ನಿರೀಕ್ಷಿಸುತ್ತೇವೆ. ಮುಂದಿನ ಹಾದಿ ಕತ್ತಲಿನಿಂದ ತುಂಬಿದ್ದರೆ ಕಂದೀಲು ಹಚ್ಚುತ್ತೇವೆ. ನಮಗೆ ದಾರಿ ತಪ್ಪಿತು ಅನಿಸಿದಾಗ, ಯಾರನ್ನಾದರೂ ಕೇಳಿ ಮುಂದುವರಿಯುತ್ತೇವೆ. ಇದು ನಮ್ಮ ಹೊರಗಿನ ಪಯಣದ ಕತೆಯಾಯಿತು. ಬದುಕಿನ ದಾರಿ ತಪ್ಪಿದಾಗ, ಗೊಂದಲಗಳು ನಮ್ಮನ್ನು ಸುತ್ತುವರಿದಾಗ ನಾವು ನಿತ್ರಾಣವಾಗುತ್ತೇವೆ. ಇಂದಿನ ಸಮಾಜದ ಪರಿಸ್ಥಿತಿ ಇದೇ ತೆರನಾಗಿದೆ. ಎತ್ತ ನೋಡಿದರೂ ಹಣದ ಅಮಲಿನ ಘಾಟು, ಅನ್ಯಾಯ ಅಕ್ರಮಗಳು ರಾಜಾರೋಷವಾಗಿ ನಡೆಯುತ್ತಿವೆ. ಅದನ್ನು ಕೇಳುವ ಧೈರ್ಯ ಯಾರಿಗೂ ಇಲ್ಲ, ಏಕೆಂದರೆ ಹಾಗೆ ಕೇಳಿದವರನ್ನು ಒಂದೋ ಸುಮ್ಮ ನಿರಲಾಗಿಸುತ್ತದೆ ಅಥವಾ ಅವರನ್ನು ಇಲ್ಲವಾಗಿಸುತ್ತಾರೆ. ನಿಜಕ್ಕೂ ಭಯ ಹುಟ್ಟಿಸುವ ವಾತಾವರಣ ನಿರ್ಮಾಣವಾಗಿದೆ. ಎಲ್ಲವನ್ನೂ, ಎಲ್ಲರನ್ನೂ ಹಣ, ಅಧಿಕಾರದ ಬಲದಲ್ಲಿ ಅಳೆಯಲಾಗುತ್ತಿದೆ. ಯುವ ಜನತೆ ದಿಕ್ಕು ತಪ್ಪಿದ ಹರಿಣಗಳಂತಾಗಿದ್ದಾರೆ.

ಇಂತಹ ಸಂದಿಗ್ಧ ಸನ್ನಿವೇಶದಲ್ಲಿ ನಮಗೆ ಭರವಸೆಯಾಗಿ ಇರುವುದು ಅಧ್ಯಾತ್ಮವೊಂದೇ. ಯಾಕೆ ಈ ಮಾತು ಹೇಳಬೇಕಾಗಿಯೆಂದರೆ, ಯಾವ ಲೌಕಿಕದ ಕೌಶಲ್ಯ, ಚತುರತೆಗಳು ಕೂಡ ನಮಗೆ ಸಹಾಯವಾಗಿ ಒದಗಿ ಬರುತ್ತಿಲ್ಲ. ಯಾವ ಮ್ಯಾನೆಜ್‌ಮೆಂಟ್ ಗುರುಗಳು ಕೂಡ ಜನರ ನೈತಿಕತೆಯ ಮಟ್ಟವನ್ನು ಸುಧಾರಿಸಲು ಸಮರ್ಥರಾಗುತ್ತಿಲ್ಲ, ಸಮಸ್ಯೆ ಏನೆಂದರೆ ನಾವು ನಮ್ಮ ಸಹಜ ಕಲಿಕೆಯನ್ನು ಮರೆತಿದ್ದೇವೆ. ಯಾವುದು ಒಂದು ಕಾಲದಲ್ಲಿ ನಮ್ಮ ಜೀವನದ ಕ್ರಮವಾಗಿತ್ತೋ ಅದು ನಮಗೆ ಒಂದು ಅಪರಿಚಿತ ವಸ್ತುವಿನಂತೆ ಗೋಚರಿಸುತ್ತಿದೆ. ಭಾರತದ ಅಧ್ಯಾತ್ಮ ತತ್ವವು ಅಂತಹ ಒಂದು ಭವ್ಯ ಪರಂಪರೆ ಹೊಂದಿದ ಜೀವನ ಕ್ರಮವು. ಬದುಕಿನ ಏರಿಳಿತಗಳು ಒಂದು ಸ್ವಾಭಾವಿಕ ಪ್ರಕ್ರಿಯೆ. ಉತ್ತಮ ಗುಣಗಳನ್ನು ನಮ್ಮ ವ್ಯಕ್ತಿತ್ವದ ಭಾಗವನ್ನಾಗಿ ಮಾಡಿಕೊಳ್ಳಬೇಕು. ಇರುವುದರಲ್ಲಿ ಸಂತೃಪ್ತಿಯನ್ನು ಕಾಣುವುದು, ದ್ವೇಷ, ಅಸೂಯೆ, ಅತಿ ಆಸೆ, ಮೋಸ, ವಂಚನೆಗಳಿಂದ ಮುಕ್ತವಾದ ಜೀವನ ಶೈಲಿ ಇವು ಭಾರತ ಸಂಸ್ಕೃತಿಯ ಲಕ್ಷಣಗಳು. ಇಂತಹ ಉದಾತ್ತ ಮೌಲ್ಯಗಳನ್ನು ಅಧ್ಯಾತ್ಮ ವಿದ್ಯೆಯು ನಮಗೆ ಕೊಡಮಾಡುವುದು.

ನೈತಿಕತೆಯಿಂದ ಬಹು ದೂರ, ಬಲು ವೇಗವಾಗಿ ಸಾಗುತ್ತಿರುವ ಮನು ಕುಲಕ್ಕೆ ಅಧ್ಯಾತ್ಮ ಗುರುವಿನ ಅವಶ್ಯಕತೆ ಹಿಂದೆಂದಿಗಿಂತಲೂ ಹೆಚ್ಚಾಗಿದೆ. ಕದಡಿದ ಕೊಳದ ನೀರು ತಳದಲ್ಲಿ ಇರುವ ಕೊಳೆಯಿಂದ ಕಲುಷಿತವಾದಂತಿರುವ ನಮ್ಮ ಮನ ಮನೆಗಳಿಗೆ ಗುರುವಿನ ಅಮೃತ ಹಸ್ತದ ಸ್ಪರ್ಶ ಬೇಕಿದೆ. ತಮ್ಮ ಜ್ಞಾನದ ತಿಳಿವನ್ನು ನಮಗೆ ನೀಡುತ್ತ ನಮ್ಮನ್ನು ಸನ್ಮಾರ್ಗದೆಡೆಗೆ ಕರೆದೊಯ್ಯುವ ಆಪದ್ಬಾಂಧವ ಗುರು. ತಾಯಿಯ ಮಮತೆ, ತಂದೆಯ ಕಾಳಜಿ ಇವೆರಡೂ ಮೇಳೈಸಿರುವ ಅಪರೂಪದ ವ್ಯಕ್ತಿ ಜ್ಞಾನಿಯಾದ ಗುರು. ಇಂದಿನ ಈ ಸಮಯದಲ್ಲಿ, ಅನೈತಿಕತೆಯ ಮುಸುಕು ಹಿರಿ ಕಿರಿಯರೆಂಬ ಭೇದವಿಲ್ಲದೆ ಎಲ್ಲರನ್ನೂ ಕವಿದಿದೆ. ಇಂದ್ರಿಯ ನಿಗ್ರಹ ಬಹು ಕಠಿಣ ಎನಿಸಿದೆ. ತಾಳ್ಮೆ ಎಂಬ ಶಬ್ದವನ್ನೇ ಜನರು ಮರೆತಂತಿದೆ. ವಿಪರೀತ ಹಿಂಸೆ, ಅವಮಾನವೀಯ ಕೃತ್ಯಗಳನ್ನು ಮಾಡುವುದರ ಜೊತೆಗೆ ಅದರ ಬಗ್ಗೆ ಪಶ್ಚಾತ್ತಾಪ ಪಡದಿರುವುದು ನೈತಿಕತೆಯ ಸಂಪೂರ್ಣ ಪತನ ಎನ್ನಲಡ್ಡಿಯಿಲ್ಲ. ಅಧ್ಯಾತ್ಮದ ಮೂಲ ಚಿಂತನೆಗಳಾದ- ಆತ್ಮ ತೃಪ್ತಿ, ಸುಖ ಮತ್ತು ಸಂತೋಷಕ್ಕಾಗಿ ಹೊರಗಡೆಯ ವಸ್ತು ವಿಷಯಗಳ ನಿರಾವಲಂಬನೆ, ಸೋಲು- ಗೆಲುವು, ಸುಖ-ದುಃಖ, ಲಾಭ-ನಷ್ಟ ಎಂಬ ದ್ವಂದ್ವಗಳನ್ನು ಸಮಭಾವದಿಂದ ಪರಿಗಣಿಸುವುದು ಮುಂತಾದವುಗಳು ನಮ್ಮನ್ನು ನೈತಿಕ ದಿವಾಳಿತನದಿಂದ ಹೊರಗೆ ತರಬಲ್ಲವು. ಈ ದಿಕ್ಕಿನಲ್ಲಿ ನಮ್ಮ ಪಯಣವು ಯಶಸ್ಸು ಕಾಣಬೇಕೆಂದರೆ ಜ್ಞಾನ ಶೀಲ ಗುರುವಿನ ಮಾರ್ಗದರ್ಶನ ಅತ್ಯಗತ್ಯ. ಗುರುವಿನ ಹಿತೋಪದೇಶ, ಸತ್ಸಂಗ, ಆಧ್ಯಾತ್ಮಿಕ ಗ್ರಂಥಗಳ ಸತತ ಅಭ್ಯಾಸದ ಮೂಲಕ ನಮ್ಮ ವ್ಯಕ್ತಿತ್ವವು ಶುದ್ಧಗೊಳ್ಳುತ್ತ ಸಾಗುವುದು. ಇದು ನಮ್ಮ ಶಿಕ್ಷಣದ ಭಾಗವೇ ಆದರೆ ನಮ್ಮ ಯುವಪೀಳಿಗೆಯ ದೃಷ್ಟಿಕೋನವು ಉನ್ನತ ಮೌಲ್ಯಗಳೆಡೆಗೆ, ಉದಾತ್ತ ಚಿಂತನೆಡೆಗಳಿಗೆ ಸರಿಯುವುದು ಖಚಿತ. ಗುರುಪೌರ್ಣಮಿಯ ಈ ಶುಭ ಸಂದರ್ಭದಲ್ಲಿ ನಮ್ಮ ಪರಂಪರೆಯ ಸಂತರನ್ನು ನೆನೆಸುತ್ತ, ಅವರಿಗೆ ನಮಿಸುತ್ತ, ನಮ್ಮ ಚಿತ್ತವನ್ನು ಅಧ್ಯಾತ್ಮ ಸಾಧನೆಯೆಡೆಗೆ ಹರಿಸೋಣ. ಒಂದು ಆರೋಗ್ಯಕರ, ನೀತಿಯುತ ಸಮಾಜದ ನಿರ್ಮಾಣಕ್ಕೆ ನಾಂದಿ ಹಾಡೋಣ.

ಹೋಟೇಲ್ ಉದ್ಯಮದ ಸವಾಲುಗಳು ಮತ್ತು ಭವಿಷ್ಯತ್ತು

ಸಬ್ಸಿಡಿ, ಮೂಲ ಬಂಡವಾಳ ಇಲ್ಲದೇ ಸ್ವಂತ ಪರಿಶ್ರಮ ಮಾತ್ರವೇ ನಂಬಿ ಹೋಟೇಲ್ ಕಟ್ಟಿದವರ ಕತೆಯಿದು. ದೇಶದ ಹೋಟೇಲ್ ಉದ್ಯಮಕ್ಕೆ ಕರಾವಳಿಗರು ಕೊಟ್ಟ ಕೊಡುಗೆಯನ್ನು ಇಂದಿನ ತಲೆಮಾರು ಮರೆತು, ಹೋಟೇಲ್ ಕ್ಷೇತ್ರದಿಂದ ವಿಮುಖವಾಗುತ್ತಿರುವುದು ಮಾತ್ರ ಉದ್ಯಮ ಪಾಲಿಗೆ ಆತಂಕಕಾರಿ ಬೆಳವಣಿಗೆ

ಗಂಟಾಘೋಷ

ಗುರುರಾಜ್ ಗಂಟಿಹೊಳೆ

vveditoped@gmail.com

ಕಾರ್ಯಕ್ರಮವೊಂದರಲ್ಲಿ ಸ್ವಾತಿ ಹೋಟೇಲ್ ಮಾಲಿಕರಾದ ಗೋಪಾಲಶೆಟ್ಟರು ಮಾತಿಗೆ ಸಿಕ್ಕರು. ಲೋಕಾರೂಢಿ ಮಾತನಾಡ್ತಾ, ಹೋಟೇಲ್ ಉದ್ಯಮಕ್ಕೆ ಪೂರಕವಾಗಿ, ರಾಷ್ಟ್ರಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ FHRAI (Federation of Hotel Restaurant Associations of India) ಭಾರತದಲ್ಲಿನ ಅತಿಥಿ ಸತ್ಕಾರ ಮತ್ತು ಹೋಟೇಲ್ ಉದ್ಯಮಕ್ಕೆ ಸಂಬಂಧಿತ ಸಭೆ, ಇದೇ ಸೆಪ್ಟೆಂಬರ್ 18ರಿಂದ 20ರವರೆಗೆ ಬೆಂಗಳೂರಿನ ಕಾನ್ರಾಡ್ ಹೋಟೇಲ್‌ನಲ್ಲಿ ನಡೆಯುತ್ತಿದ್ದು, ಕೇಂದ್ರ, ರಾಜ್ಯ ಪ್ರವಾಸೋದ್ಯಮ ಸಚಿವರು ಮತ್ತು ಮುಖ್ಯಮಂತ್ರಿಗಳು ಭಾಗವಹಿಸುವ ನಿರೀಕ್ಷೆಯಿದೆ ಎಂದರು.

ಹಿಂದೆ ನಮ್ಮ ಹಿರಿಯರು ಕೈಯಲ್ಲಿ ಬಿಡಿಗಾಸಿಲ್ಲದೆ ಹುಟ್ಟಿದ ಊರನ್ನು ತೊರೆದು, ನೆಲೆಸಿದ ಸ್ಥಳಕ್ಕೆ ಹೊಂದಿಕೊಂಡು ಬದುಕಿ, ಹೋಟೇಲ್ ಕಟ್ಟಿ ಉದ್ಯಮವನ್ನಾಗಿ ಬೆಳೆಸಿದರು. ಸ್ಥಳೀಯ ನೂರಾರು ಯುವಕರಿಗೆ ಕೆಲಸ ಕೊಟ್ಟರು. ಕೆಲವರನ್ನು ಸ್ವಂತ ಹೋಟೇಲ್ ಮಾಲೀಕರನ್ನಾಗಿ ಮಾಡಿದರು. ಉಡುಪಿಯನ್ನು ರಾಜ್ಯ, ದೇಶ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಕೊಂಡೊಯ್ದು ಹೆಸರುವಾಸಿಯಾದರು. ಕರಾವಳಿಯ ಖ್ಯಾತಿಯನ್ನು ವಿಶ್ವದೆಲ್ಲೆಡೆ ಎತ್ತಿ ಹಿಡಿದರು.ಇಂದಿನ ತಲೆಮಾರಿನವರು ಯಾಕೋ ಸ್ವಂತ ಹೋಟೇಲ್ ಮಾಡುವ ಸಾಹಸಕ್ಕೆ ಕೈಹಾಕದೆ, ಹೋಟೇಲ್ ಆಧಾರಿತ ಉದ್ಯೋಗ, ಬ್ಯುಜಿನೆಸ್ ಮ್ಯಾನೇಜ್‌ಮೆಂಟ್‌ನಂತಹ ವೃತ್ತಿಪರತೆ ಕಡೆಗೆ ವಾಲುತ್ತಿರುವ ಕುರಿತು ಆತಂಕ ವ್ಯಕ್ತಪಡಿಸಿದರು. ಇದು ನನ್ನನ್ನು ಯೋಚಿಸುವಂತೆ ಮಾಡಿತು.

ಅವರನ್ನು ಬೀಳ್ಕೊಟ್ಟ ಮೇಲೆ, ಯೋಚಿಸುವಂತೆ ಮಾಡಿದ ಅವರ ಮಾತು ಎಷ್ಟು ನಿಜವಲ್ಲವೇ ಎನಿಸಿತು. ನಮ್ಮ ಉಡುಪಿ ಹೋಟೇಲ್ ಹೆಸರಿಗೆ ಬಹುದೊಡ್ಡ ಇತಿಹಾಸವೇ ಇದೆ. ಕೈಯಲ್ಲಿ ಮೂಲ ಬಂಡವಾಳದಂತಹ ಯಾವೊಂದು ಹಣವಿಲ್ಲದೆ ಊರು ಬಿಟ್ಟು ಹೋಗಿ ಸ್ವಂತ ಪರಿಶ್ರಮ, ಆತ್ಮಬಲದ ಮೇಲೆ ನಂಬಿಕೆಯಿಟ್ಟು ಕಟ್ಟಿದ ಕ್ಷೇತ್ರ ಹೋಟೇಲ್ ಉದ್ಯಮ. ಎಲ್ಲಿದ್ದರೂ ಬದುಕಬಲ್ಲೆವು ಎಂಬ ಆತ್ಮಸ್ಥೈರ್ಯ ಅಂದಿನ ತಲೆಮಾರಿನವರಲ್ಲಿ ಎದ್ದುತೋರುತ್ತಿತ್ತು. ಹೋಟೇಲ್ ಎಂಬುದು ಊಟ, ಗ್ರಾಹಕ ಸೇವೆಯ ಜೊತೆಗೆ ಕರಾವಳಿಗರ ಸೂಕ್ಷ್ಮಸಂವೇದನೆಯ ಪ್ರತೀಕವೂ ಹೌದು ಎಂಬಂತೆ ಬದುಕಿ ತೋರಿದವರು. ಯಾವ ಊರಿಗೆ ಹೋಗಿ ನೆಲೆಸುವರೋ, ಅಲ್ಲಿಯೇ ಬೆರೆತು ಒಂದಾಗಿ ಬಿಡುವವರು. ಅದೇ ನಮ್ಮ ಊರು, ನಮ್ಮ ಜನರೇ ಇವರು ಎಂಬ ಭಾವದಿಂದ ಅನ್ನಲಕ್ಷ್ಮೀಯ ಸೇವೆಗೆ ನಿಂತವರು.

ಜಪಾನಿನ 38ನೇ ದೊರೆಯ ಮಗ ಫುಜಿವಾರಾ ಮಹಿಟೊ ಸ್ಥಾಪಿಸಿದ 'ನಿಷಿಯಾಮಾ' ಹೋಟೇಲ್ ಜಗತ್ತಿನ ಮೊಟ್ಟಮೊದಲ ಮತ್ತು ಅತ್ಯಂತ ಹಳೆಯ ಹೋಟೇಲ್ ಆಗಿದ್ದು, ಇದನ್ನು ಕ್ರಿ.ಶ. 705 ರಲ್ಲಿ ಸ್ಥಾಪಿಸಲಾಗಿತ್ತು. ನಂತರದಲ್ಲಿ, ಭಾರತದ 'ಸಿಲ್ಕ್ ರೂಟ್' ವ್ಯವಹಾರಕ್ಕೆ ಬೆಂಬಲವಾಗಿ ಹಲವು ಅತಿಥಿಗೃಹ, ತಂಗುದಾಣಗಳನ್ನು ನಿರ್ಮಿಸಲಾಗಿದ್ದ ಮಾಹಿತಿ ನಮಗೆ ತಿಳಿದು ಬರುತ್ತದೆ. ಆಧುನಿಕ ಭಾರತದ ಮೊದಲ ಹೋಟೇಲ್ ಅಂದಿನ ಕಲ್ಕತ್ತೆಯಲ್ಲಿ 1830ರಲ್ಲಿ ಸ್ಪೆನ್ಸ್‌ಭಿಸ್ ಹೋಟೇಲ್ ಸ್ಥಾಪಿಸಲಾಗಿತ್ತು. 1840ರಲ್ಲಿ ಗ್ರೇಟ್ ಈಸ್ಟರ್ನ್ ಹೋಟೇಲ್ ಆರಂಭಿಸಲಾಗಿದ್ದು, ಇಂದಿಗೂ ಕಾರ್ಯನಿರ್ವಹಿಸುತ್ತಿದೆ.

ಭಾರತದ ಪ್ರತಿಬಿಂಬವೆಂಬಂತೆ 1902ರಲ್ಲಿ ವಿಶ್ವದರ್ಜೆಯ, ಸಕಲ ಸೌಲಭ್ಯಯುಳ್ಳ ತಾಜ್ ಹೋಟೇಲ್ ಆರಂಭಿಸಿದ ಕೀರ್ತಿ ಜಮಶೆಡ್‌ಜಿ ಟಾಟಾ ಅವರಿಗೆ ಸಲ್ಲುತ್ತದೆ. ಟಾಟಾ ಸಂಸ್ಥೆಯ ಸ್ಥಾಪಕ ಜಮಶೆಡ್‌ಜಿ ಟಾಟಾ ಅಂದಿನ ಬಾಂಬೆಯಲ್ಲಿ ಸಮಾನ ಮನಸ್ಕರ ಜೊತೆ ಸೇರಿ IHCL (Indian Hotels Company Limited) ಸ್ಥಾಪಿಸುತ್ತಾರೆ, ಇದರ ಮರುವರ್ಷವೇ ತಾಜ್ ಹೋಟೇಲ್ ಪ್ರಾರಂಭವಾಗುತ್ತದೆ.

ಇದೆಲ್ಲ ರಾಷ್ಟ್ರಮಟ್ಟದ ವಿಚಾರವಾಗಿದ್ದರೆ, ಸ್ಥಳೀಯವಾಗಿ ಉಡುಪಿ, ಕುಂದಾಪುರ, ಮಂಗಳೂರು ಭಾಗದ ಉದ್ದಿಮೆದಾರರು ತಮ್ಮ ನಿರಂತರ ಪರಿಶ್ರಮದ ಮೂಲಕ ದಿನನಿತ್ಯ ದುಡಿದು ಬದುಕುವವರಿಗೆ, ವಿದ್ಯಾರ್ಥಿಗಳಿಗೆ, ಮಧ್ಯಮ ವರ್ಗದವರ ನಿತ್ಯ ಊಟೋಪಚಾರಕ್ಕೆ ಆಸರೆಯಾಗಿ ನೂರಾರು ಹೋಟೆಲುಗಳನ್ನು ಬೆಂಗಳೂರು, ಮೈಸೂರು ಸೇರಿದಂತೆ ರಾಜ್ಯದೆಲ್ಲೆಡೆ ತೆರೆದಿದ್ದಾರೆ. ಮಧ್ಯಮ ಮತ್ತು ಕೆಳವರ್ಗದ, ಕೂಲಿ ಮಾಡಿ ಅವತ್ತಿನ ಊಟ ಅವತ್ತೇ ಸಂಪಾದಿಸುವವರಿಗೂ ಸಹ ಕೈಗೆಟಕುವ ದರದಲ್ಲಿ ಸಿಗುವುದು ಕರಾವಳಿಗರ ಉಡುಪಿ ಹೋಟೆಲುಗಳು ಎಂಬುದರಲ್ಲಿ ಎರಡು ಮಾತಿಲ್ಲ!

ಕೋಟದವರಾದ ರಾಮ ಹೊಳ್ಳ ಎಂಬುವರು ಬಳೆಪೇಟೆ ಸರ್ಕಲ್‌ನಲ್ಲಿ 1902ರಲ್ಲಿ ಮೊಟ್ಟಮೊದಲ ಉಡುಪಿ ಹೋಟೇಲ್ ತೆರೆದವರು. ಸೋದರಳಿಯ ಹೆಚ್.ವಿ. ಜನಾರ್ದನಯ್ಯ ಮುಂದುವರೆಸಿಕೊಂಡು, ಬಳೆಪೇಟೆ ಮುಖ್ಯರಸ್ತೆಯಲ್ಲಿ 1926ರಲ್ಲಿ ಅಧಿಕೃತವಾಗಿ 'ಉಡುಪಿ ಶ್ರೀಕೃಷ್ಣಭವನ' ರೆಸ್ಟೋರೆಂಟ್ ತೆರೆದು ಪ್ರಸಿದ್ಧರಾದರು. ಪ್ರಸ್ತುತದಲ್ಲಿ ಸುಬ್ರಮಣ್ಯ ಅವರು ಹೋಟೇಲ್ ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ.

ಉಡುಪಿ ಹೋಟೆಲುಗಳು ಉತ್ತರ ಭಾರತದಲ್ಲಿ ಆರಂಭಗೊಂಡಿದ್ದರ ಹಿಂದೆ ಒಂದು ಸ್ವಾರಸ್ಯವಿದೆ. ಕೆ.ವೆಂಕಪ್ಪಯ್ಯ ಎಂಬುವರು ಉಡುಪಿಯಿಂದ 1911ರಲ್ಲಿ ಐದನೇ ಕಿಂಗ್ ಜಾರ್ಜ್‌ಗೆ ಏರ್ಪಡಿಸಿದ್ದ ದಿಲ್ಲಿ ದರ್ಬಾರ್ ನೋಡಲು ದಿಲ್ಲಿಗೆ ಹೋಗಿದ್ದರಂತೆ! ಊರಿಗೆ ಮರಳುವಾಗ ಬಾಂಬೆಯಲ್ಲಿ ಉಳಿದುಕೊಂಡಿದ್ದರು. ಕೂರ್ಗ್ (ಮಡಿಕೇರಿ)ನ ಸೈನಿಕರು ಹೊಟ್ಟೆನೋವು, ಆಮಶಂಕೆಯಿಂದ ನರಳಿದಾಡಿದ್ದನ್ನು ಕೇಳಿದಾಗ, ಇಲ್ಲಿನ ಆಹಾರವೇ ನಮಗೆ ಸರಿ ಹೊಂದುತ್ತಿಲ್ಲ, ನಮ್ಮ ಕಡೆಯ ಜನರು ಇದರಿಂದ ಬೇಸತ್ತು ಹೋಗಿದ್ದಾರೆ ಎಂದುದನ್ನು ಗಂಭೀರವಾಗಿ ತೆಗೆದುಕೊಂಡ ವೆಂಕಪ್ಪಯ್ಯನವರು ಆರಂಭಿಸಿದ ಉಡುಪಿ ರೆಸ್ಟೋರೆಂಟ್ ಇಂದಿಗೂ Catering revolution in North states ಎಂದೇ ಗುರುತಿಸಲಾಗುತ್ತಿದೆ.

1898ರಲ್ಲಿ ಉಡುಪಿಯ ಕಡಂದಲೆ ಎಂಬ ಹಳ್ಳಿಯಲ್ಲಿ ಜನಿಸಿದ ಕೃಷ್ಣರಾವ್, ಉದರ ನಿಮಿತ್ತ ಪುತ್ತಿಗೆ ಮಠದಲ್ಲಿ ಕೆಲಸಕ್ಕೆ ಸೇರಿ, ನಂತರ ಮದ್ರಾಸ್ ಗೆ ಪ್ರಯಾಣ ಬೆಳಸಿ, ಉಡುಪಿ ಹೋಟೇಲ್ ಕಟ್ಟುತ್ತಾರೆ. ಇಲ್ಲಿಂದ ಬೆಂಗಳೂರು, ಕೊಯಮತ್ತೂರು, ಸೇಲಂ, ಅಹಮದಾಬಾದ್, ಬಾಂಬೆ ಜೊತೆಗೆ ಲಂಡನ್, ನ್ಯೂಯಾರ್ಕ್, ಸಿಂಗಾಪುರದಲ್ಲೂ ಉದ್ಯಮ ಬೆಳೆಸುತ್ತಾರೆ. 1938ರಲ್ಲಿ 'ನ್ಯೂ ವುಡ್‌ಲ್ಯಾಂಡ್' ಹೋಟೇಲ್ ಕಟ್ಟಿ ಬೆಳೆಸಿದ್ದು ಮತ್ತು ನಾವೆಲ್ಲ ಬಾಯಿ ಚಪ್ಪರಿಸಿ ಇಂದು ತಿನ್ನುತ್ತಿರುವ 'ಮಸಾಲಾ ದೋಸೆ' ಪರಿಚಯಿಸಿದ್ದು ಸಹ ಇದೇ ಕಡಂದಲೆ ಕೃಷ್ಣರಾವ್ !

ಕೆ. ಸೀತಾರಾಂ, ಮಂಗಳೂರಿನಿಂದ ಅಣ್ಣನ ತಿಂಡಿ ಹೋಟೇಲ್ ವ್ಯಾಪಾರದಲ್ಲಿ ಸಹಾಯಕ್ಕೆಂದು 1921ರಲ್ಲಿ ಮೈಸೂರಿಗೆ ಬರುತ್ತಾರೆ. ಚೆನ್ನಾಗಿ ಓದಿಕೊಂಡಿದ್ದ ಸೀತಾರಾಂ, ದಕ್ಷತೆಯಿಂದ

ಜನಮೆಚ್ಚುಗೆ ಪಡೆಯುತ್ತ, ಹಲವು ವರ್ಷಗಳ ಕಾಲ ಶ್ರಮಪಟ್ಟು ಸಹೋದರರು ದೊಡ್ಡ ಹೋಟೇಲ್ ಆರಂಭಿಸುತ್ತಾರೆ. 'ಮಲ್ಲಿಗೆ ಇಡ್ಲಿ'ಯನ್ನು ಪರಿಚಯಿಸಿ, ಮೈಸೂರಿನ ಗ್ರಾಹಕರ ಮೆಚ್ಚುಗೆ ಗಳಿಸುತ್ತಾರೆ. 1930ರಿಂದ 1940ರ ಸಮಯದಲ್ಲಿ, ಉಡುಪಿ ಹೋಟೆಲುಗಳ ವ್ಯಾಪಾರ ವೃದ್ಧಿಗೊಂಡಿದ್ದರಿಂದ ಅಡುಗೆಯವ, ಕ್ಯಾಷಿಯರ್, ವೆಯಿಟರ್, ಕಿಚನ್ ಸಹಾಯಕ, ಪಾರ್ಸೆಲ್ ವಿಭಾಗ ಎಂದೆಲ್ಲ ಹುಟ್ಟಿಕೊಳ್ಳುತ್ತವೆ. ಸ್ವಂತ ಪರಿಶ್ರಮದ ಮೂಲಕ ಬೆಳೆಯುತ್ತ ಬಂದ ಇವರೆಲ್ಲ ಸಾಂಪ್ರದಾಯಿಕ ಶೈಲಿಯಲ್ಲಿ ತಮ್ಮ ಹೋಟೆಲ್‌ಗಳಿಗೆ ಹೆಸರಿಡುವುದರಲ್ಲಿ ಸಿದ್ಧಹಸ್ತರು. ಭವನ, ಸಾಗರ, ಉಪಾಹಾರ, ಉತ್ಸವ, ವೈಭವ, ಗ್ರ್ಯಾಂಡ್, ಕೈರುಚಿ, ಗಾರ್ಡೇನಿಯಾ, ಪ್ಯಾಲೇಸ್, ಪಾರ್ಕ್, ಕೆಫೆ ಎಂಬೆಲ್ಲ ಹೆಸರುಗಳ ಹಿಂದೆ ಕೃಷ್ಣ, ವಿಷ್ಣು, ಉಡುಪಿ ಎಂಬ ರುಚಿವತ್ತಾದ ಹೆಸರನ್ನು ಸೇರಿಸಲು ಮಾತ್ರ ಮರೆಯುವುದಿಲ್ಲ. ಇದು ಇವರ ಶಿಸ್ತು, ಬದ್ಧತೆ ಮತ್ತು ತಮ್ಮ ಊರಿನ ಮೇಲಿರುವ ಮಮತೆ!

ಉಡುಪಿ ಎಂಬುದು ಕೇವಲ ಹೋಟೇಲ್ ಮಾಡುವವರ ಊರಾಗಿರದೆ, ಒಂದು ಸ್ಥಳದ ಹೆಸರಾಗಿರದೆ, ಹಸಿದು ಬಂದ ಜನರಿಗೆ ಊಟ ಕೊಡುವ ಅನ್ನದಾನ ಕ್ಷೇತ್ರದ ಅನ್ವರ್ಥಕ ನಾಮವೇ ಎಂಬಂತಾಗಿದೆ. ನಾವೆಲ್ಲ ಹಣಕೊಟ್ಟು ಆಹಾರ ಕೊಳ್ಳಲು ಸಾಧ್ಯವಿಲ್ಲ. ಆ ಕ್ಷಣಕ್ಕೆ, ನಮಗೆ ಬೇಕಾದ ಆಹಾರವನ್ನು ಬಿಸಿಬಿಸಿಯಾಗಿ, ಸ್ವಲ್ಪವೂ ಲೋಪವಾಗದಂತೆ ಕೊಡುತ್ತಾರಲ್ಲ, ಈ ಒಂದು ಸೇವಾಭಾವಕ್ಕೆ ನಾವು ಬಿಲ್ ರೂಪದಲ್ಲಿ ನೀಡುತ್ತೇವೆ ಅಷ್ಟೆ ಎಂಬ ಹಿರಿಯರ ಮಾತು ನಿಜವೂ ಹೌದು!

'ನಾವೆಲ್ಲ ಅಡುಗೆಮನೆಗೆ ಅಡ್ಡಲಾಗಿರುವ ಕೌಂಟರ್ ಹೊರಭಾಗದಿಂದ ನೋಡುತ್ತ ನಮ್ಮದೇ ಅಭಿಪ್ರಾಯ ಹೊಂದಿರುತ್ತೇವೆ. ಇದೇ ಕೌಂಟರ್ ಒಳಗಿನ ವ್ಯವಸ್ಥೆ, ನೌಕರರು, ಆಹಾರ ಸಾಮಗ್ರಿ, ಪದಾರ್ಥಗಳ ಖರೀದಿ ಸೇರಿದಂತೆ ಇತರೆ ವಿಚಾರಕ್ಕೆ ಬಂದರೆ ಈ ಉದ್ಯಮದ ಒತ್ತಡ ಅಷ್ಟಿಷ್ಟಲ್ಲ ಸರ್' ಎಂದು ಒಂದು ಕ್ಷಣ ಗಂಭೀರಾಗುತ್ತಾರೆ ಹೋಟೇಲ್‌ವೊಂದರ ಉದ್ಯಮಿ!

ಮುಂದುವರೆದು, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಎಲ್ಲವೂ ಕ್ಷಣಮಾತ್ರದಲ್ಲಿ ನಮ್ಮ ಜನರಿಗೆ ಸಿಗಬೇಕು. ಇಂದಿನ ವೇಗದ ಬದುಕಿಗೆ ಹೊಂದಿಕೊಂಡಿರುವ ಗ್ರಾಹಕರಿಗೆ ತಕ್ಕಂತೆ ಸೇವಾವಲಯವು ಕೆಲಸಮಾಡದಿದ್ದರೆ, ಆ ಅವಕಾಶ ಕಣ್ಮುಂದೆಯೇ ಇನ್ನೊಬ್ಬರ ಪಾಲಾಗುತ್ತದೆ. ಆಹಾರ ತಿಂಡಿಗಳನ್ನು ಬಿಸಿಬಿಸಿಯಾಗಿ, ರುಚಿರುಚಿಯಾಗಿ ಮಾಡಿ ಕೂಡಲೇ ಗ್ರಾಹಕರಿಗೆ ಒದಗಿಸಬೇಕು. ಆದ್ದರಿಂದ ಈ ಹೋಟೇಲ್ ಉದ್ಯಮವು ಕಣ್ಣೆದುರಿಗೆ ಕಂಡಂತೆ ಘಮಘಮಿಸುವುದಿಲ್ಲ. ಬದಲಾಗಿ, ಮೆಣಸಿನ ಘಾಟಿನಂತೆ ಕಾಡುತ್ತಲೇ ಇರುತ್ತದೆ ಎಂದು ತಮ್ಮ ಕಷ್ಟವನ್ನು ಥೇಟು ಅಡುಗೆ ದಾಟಿಯಲ್ಲಿ ಹೇಳುತ್ತಾರೆ.

ದಿನಸಿಗಳ ಬೆಲೆ, ಅಡುಗೆ ಎಣ್ಣೆ, ಸಿಲಿಂಡರ್, ನಿತ್ಯಬೆಳೆದ ತರಕಾರಿಗಳ ಖರೀದಿ ಪ್ರಕ್ರಿಯೆ ಎಲ್ಲವೂ ದಿನದಿಂದ ದಿನಕ್ಕೆ ಏರುತ್ತಲೇ ಇರುತ್ತದೆ. ಇದೆಲ್ಲವನ್ನು ತೂಗಿಸಿಕೊಂಡು, ಅಡುಗೆ ಕೆಲಸ, ಸಹಾಯಕರಿಗೆ ಉಚಿತ ವಸತಿ ವ್ಯವಸ್ಥೆ, ಅವರ ಊಟ ಸಂಬಳ ನಿಭಾಯಿಸಿದ ಮೇಲೆ, ಉಳಿದಂತೆ ಕಟ್ಟಡದ ಬಾಡಿಗೆ, ವಿದ್ಯುತ್ ಬಿಲ್ ಇತ್ಯಾದಿಗಳನ್ನು ನಿಭಾಯಿಸಲು ದೊಡ್ಡ ಧೈರ್ಯಬೇಕೆನ್ನುತ್ತಾರೆ ಮತ್ತೊಂದು ಹೋಟೇಲ್‌ನ ಮಾಲೀಕರು. ಹತ್ತಾರು ಹೋಟೇಲ್ ಮಾಲೀಕರ ಅಭಿಪ್ರಾಯ ಗಮನಿಸಿದಾಗ, ಮೂಲಭೂತವಾಗಿ ಕಾಡುವ ನಿರಂತರ ಸಮಸ್ಯೆಗಳೆಂದರೆ, ಕೆಲಸದ ಹುಡುಗರದು. ಕೆಲಸ ಕೇಳಿಕೊಂಡು ಬರುತ್ತಾರೆ. ಮಾಡುತ್ತಿರುತ್ತಾರೆ. ಇನ್ನೊಂದೆಡೆ ಹೆಚ್ಚಿನ ಸಂಬಳ ದೊರೆತು ಅತ್ತ ಹೋಗುತ್ತಾರೆ, ಇದು ಸಹಜವೇ. ಆದರೆ, ನಿಶ್ಚಿತ ಕಾರ್ಮಿಕ ವ್ಯವಸ್ಥೆಯಿಲ್ಲ, ಬಂದವರು ಯಾವಾಗ ಕೆಲಸ'ಬಿಟ್ಟು ಹೋಗುತ್ತಾರೋ ಗೊತ್ತಿಲ್ಲ.

ಆಗಾಗ ಸರಕಾರದ ಹಲವು ಅನುಮತಿ ಪತ್ರಗಳನ್ನು ಪಡೆಯುವುದೂ ತ್ರಾಸದಾಯಕವಾಗಿದೆ. ಇವುಗಳನ್ನು ನಿರಂತರವಾಗಿ ನವೀಕರಿಸುವುದು ಇನ್ನೊಂದು ಸಮಸ್ಯೆ. ದಿಢೀರನೇ ಅಗತ್ಯ ವಸ್ತುಗಳ ಬೆಲೆಯೇರಿಕೆಯಿಂದಾಗಿ ನಷ್ಟಕ್ಕೀಡಾಗುವ ಸಂಭವ ಜಾಸ್ತಿ. ವ್ಯವಹಾರ ಸ್ಪರ್ಧೆಗೆ ಬಿದ್ದು, ಪಕ್ಕದಲ್ಲೇ ಎರಡೆರಡು ಹೋಟೇಲ್ ಮಾಡಿ, ನಷ್ಟಮಾಡಿಕೊಳ್ಳುವ Hotel Competition ಕುರಿತು ಹೋಟೇಲ್ ಸಂಘ ಗಮನಹರಿಸುವ ಅಗತ್ಯವಿದೆ. ಹೋಟೇಲ್ ಉದ್ಯಮಿಗಳ, ಹೂಡಿಕೆ ಮಾಡುವವರ ರಕ್ಷಣೆ ಕುರಿತು ಕೆಲ ಮಾನದಂಡಗಳನ್ನು ಸಂಬಂಧಿಸಿದವರು ಜಾರಿಗೆ ತಂದರೆ ಉತ್ತಮವೆನಿಸುತ್ತದೆ.

ಹೋಟೇಲ್ ಉದ್ಯಮಕ್ಕೆ ಸಂಬಂಧಿಸಿದಂತೆ, FHRAI ಕಾರ್ಯನಿರ್ವಹಿಸುತ್ತಿದ್ದು, 1955ರ ಏಪ್ರಿಲ್ 15ರಂದು ಸ್ಥಾಪಿತವಾಗಿ, ದೇಶದ 60 ಸಾವಿರಕ್ಕೂ ಹೆಚ್ಚು ಹೋಟೆಲ್ಸ್ ಮತ್ತು 5 ಲಕ್ಷಕ್ಕೂ ಅಧಿಕ ರೆಸ್ಟೋರೆಂಟ್‌ಗಳನ್ನು ಪ್ರತಿನಿಧಿಸುತ್ತಿದೆ. FHRAI ಕೂಟವು ಸರಕಾರ, ಉದ್ದಿಮೆ, ಅಂತಾರಾಷ್ಟ್ರೀಯ ಸಂಘಟನೆಗಳೊಂದಿಗೆ ನೇರಸಂಪರ್ಕ ಹೊಂದಿದ್ದು, ತರಬೇತಿ, ಸಮ್ಮೇಳನ, ಮತ್ತು capacity building ಕಾರ್ಯಗಳನ್ನು ನಿರಂತರವಾಗಿ ನಡೆಸುತ್ತದೆ. 2024-25ನೇ ಕಾರ್ಯಾವಧಿಯ ಅಧ್ಯಕ್ಷರಾಗಿ ಬೆಂಗಳೂರಿನ ಹೋಟೇಲ್ ಮೌರ್ಯದ ಎಂ.ಡಿ ಆಗಿರುವ ಕೆ. ಶ್ಯಾಮರಾಜು ಆಯ್ಕೆಯಾಗಿದ್ದರೆ, ಲಖನೌ , ಕೋಲ್ಕತಾ, ಮುಂಬೈ ಮೂಲದ ಉದ್ಯಮಿಗಳು ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ರಾಡಿಸನ್ ಬ್ಲೂ ಏಟ್ರಿಯಾದ ಡೈರೆಕ್ಟರ್ ಇಲ್ಲಿ ಗೌರವಕಾರ್ಯದರ್ಶಿಯಾಗಿದ್ದರೆ, ಓಬೆರಾಯ್ ಹೋಟೇಲ್ ಭಾಗಿದಾರ ಗರೀಶ್ ಓಬೆರಾಯ್ ಖಜಾಂಚಿಯಾಗಿದ್ದು, ಇಂತಹ ದಿಗ್ಗಜರ ನಡುವೆ ಹೋಟೇಲ್ ಉದ್ಯಮ ಒಂದು ಒಕ್ಕೂಟದಡಿಯಲ್ಲಿ ಬೆಳೆಯುತ್ತ ಬರುತ್ತಿದೆ. ಇದರಡಿಯಲ್ಲಿ ಎಚ್‌ಆರ್‌ಎಐ, ಎಚ್‌ಆರ್‌ಎಐ, ಖಐಎಚ್‌ಎ ನಂತಹ ಪ್ರಾದೇಶಿಕ ಘಟಕಗಳು ಕಾರ್ಯನಿರ್ವಹಿಸುತ್ತಿವೆ.

ಕರ್ನಾಟಕವು ತನ್ನ ಐತಿಹಾಸಿಕ ನಗರ ಕ್ಷೇತ್ರಗಳು, ಧಾರ್ಮಿಕ ಕ್ಷೇತ್ರಗಳು ಮತ್ತು ನೈಸರ್ಗಿಕ ಸ್ಥಳಗಳ ಮೂಲಕ ಪ್ರವಾಸಿಗರನ್ನು ಆಕರ್ಷಿಸುತ್ತಿದ್ದು, ನಗರಪ್ರದೇಶಗಳಲ್ಲಿ ಮಿಡ್ರೇಂಜ್ ಮತ್ತು ಬಜೆಟ್ ವಸತಿವ್ಯವಸ್ಥೆಗಳು ಪ್ರವಾಸಿಗರಿಗೆ ಅನುಕೂಲವಾಗಿ ಪರಿಣಮಿಸಿವೆ. ಇನ್ನುಳಿದಂತೆ ಹೋಮ್ಸ್ಟೇಗಳು, ಫಾಮ್ಸ್ಟೇಗಳು, ಗ್ರಾಮೀಣ ಆತಿಥ್ಯತೆ ಕಲ್ಪನೆಯೊಂದಿಗೆ ಪ್ರವಾಸಿಗರಿಗೆ ಸ್ಥಳೀಯ ಅನುಭೂತಿಯನ್ನೂ ನೀಡುತ್ತಿವೆ.

ಇಂತಹ ಸ್ಪರ್ಧಾತ್ಮಯುಗದಲ್ಲಿ ಇಂದಿನ ಯುವಕರು ಹೋಟೇಲ್ ಉದ್ಯಮ ತೊರೆದು, ಅನ್ಯಕ್ಷೇತ್ರದತ್ತ ಹೋಗುತ್ತಿರುವುದು ಹೋಟೇಲ್ ಉದ್ಯಮವು ಆತಂಕದಲ್ಲಿರುವಂತೆ ಮಾಡಿದೆ. ಹಿಂದಿನವರಂತೆ ಹೆಚ್ಚು ರಿಸ್ಕ್ ತೆಗೆದುಕೊಳ್ಳಲು ಇಂದಿನವರು ತಯಾರಿಲ್ಲ, ಕಾರ್ಮಿಕರನ್ನು ನಂಬಿ ಬದುಕುವ ಕ್ಷೇತ್ರವಾದ್ದರಿಂದ, ಅಷ್ಟೂ ಜವಾಬ್ದಾರಿ ಯಾರು ತೆಗೆದುಕೊಳ್ಳುತ್ತಾರೆ, ನನಗೆ ಬೇಕಾದಷ್ಟು ಸಂಬಳಕ್ಕೆ ನಾನು ಉದ್ಯೋಗ ಮಾಡುತ್ತಿದ್ದೇನಲ್ಲ ಎನ್ನುವ ಮನಸ್ಥಿತಿಗೆ ಬಂದಿರುವಂತೆ ಕಾಣುತ್ತಿದೆ. ಯುವಜನತೆ ಉದ್ದಿಮೆಯತ್ತ ಆಕರ್ಷಿಸಲು, ಇಂದಿನ ಆಧುನಿಕತೆಗೆ ತಕ್ಕಂತೆ ಉದ್ಯಮ ಕಟ್ಟಿ, ಪೋಷಿಸುವ ಕಾರ್ಯಕ್ಷಮತೆಯನ್ನು ಕಲಿಸುವ, ಬೆಂಬಲಿಸುವ ಅಗತ್ಯವಿದೆ.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:177

ಸಮಾಚಾರ ಸಣ್ಣದಲ್ಲ

ಭಾರತೀಯ ಸಾಬಿಹ್ ಖಾನ್ ಆ್ಯಪಲ್ ಸಿಒಒ

ನ್ಯೂಯಾರ್ಕ್: ಸ್ಮಾರ್ಟ್‌ಫೋನ್ ತಯಾರಿಕೆ ಕ್ಷೇತ್ರದ ದಿಗ್ಗಜ ಅಮೆರಿಕದ ಆ್ಯಪಲ್ ಕಂಪನಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹುದ್ದೆಗೆ ಭಾರತ ಮೂಲಕ ಸಾಬಿಹ್ ಖಾನ್ (58) ನೇಮಕಗೊಂಡಿದ್ದಾರೆ. ಖಾನ್ 30 ವರ್ಷಗಳಿಂದ ಆಪಲ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಪ್ರಸ್ತುತ ಕಾರ್ಯನಿರ್ವಹಣಾ ವಿಭಾಗದ ಹಿರಿಯ ಉಪಾಧ್ಯಕ್ಷರಾಗಿದ್ದಾರೆ. ಮಾಸಾಂತ್ಯಕ್ಕೆ ಸಿಒಒ ಜೆಫ್ ವಿಲಿಯಮ್ಸ್ ನಿವೃತ್ತಿ ಯಾಗಲಿದ್ದು, ಆ ಬಳಿಕ ಸಾಬಿಹ್ ಖಾನ್ ಅಧಿಕಾರ ವಹಿಸಿಕೊಳ್ಳಲಿದ್ದಾರೆ ಎಂದು ಆಪಲ್ ಕಂಪನಿ ಮೂಲಗಳು ತಿಳಿಸಿವೆ. ಸಾಬಿಹ್, 1966ರಲ್ಲಿ ಉತ್ತರ ಪ್ರದೇಶದ ಮೊರಾದಾಬಾದ್‌ನಲ್ಲಿ ಜನಿಸಿ, ಸಿಂಗಪುರದಲ್ಲಿ ಶಾಲಾ ಶಿಕ್ಷಣ ಪೂರೈಸಿದ್ದರು. ನಂತರ ಅಮೆರಿಕದಲ್ಲಿ ಮೆಕ್ಯಾನಿಕಲ್ ಎಂಜಿನಿಯರಿಂಗ್‌ನಲ್ಲಿ ಉನ್ನತ ಪದವಿ ಪಡೆದಿದ್ದಾರೆ.

ಡಾಲರ್ ವಿನಾಶಕ್ಕೆ ಬ್ರಿಕ್ಸ್ ರಚನೆ: ಟ್ರಂಪ್ ಕಿಡಿ

ವಾಷಿಂಗ್ಟನ್: ಅಮೆರಿಕಕ್ಕೆ ಹಾನಿ ಮಾಡಲೆಂದು ಮತ್ತು ಅಮೆರಿಕ ಡಾಲರ್ ನಾಶಪಡಿಸಲೆಂದೇ 'ಬ್ರಿಕ್ಸ್' ಒಕ್ಕೂಟ ಸ್ಥಾಪನೆ ಮಾಡಲಾಗಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕಿಡಿಕಾರಿದ್ದಾರೆ. ಅಮೆರಿಕ ಹಿತಕ್ಕೆ ಧಕ್ಕೆ ತರಲಿರುವ 'ಬ್ರಿಕ್ಸ್' ಒಕ್ಕೂಟದ ಸದಸ್ಯ ರಾಷ್ಟ್ರಗಳು ಅಮೆರಿಕದ ಮಾರುಕಟ್ಟೆಗೆ ರಫ್ತು ಮಾಡುವ ಸರಕುಗಳ ಮೇಲೆ ಹೆಚ್ಚುವರಿಯಾಗಿ ಶೇ.10ರಷ್ಟು ಸುಂಕ ಹೊರೆ ಹೊರಬೇಕಾಗುತ್ತದೆ ಎಂದು ಹೊಸದಾಗಿ ಬೆದರಿಕೆ ಹಾಕಿದ್ದಾರೆ. ಶ್ವೇತಭವನದಲ್ಲಿ 6ನೇ ಸಚಿವ ಸಂಪುಟ ಸಭೆ ಬಳಿಕ ಸುದ್ದಿಗೋಷ್ಠಿ ನಡೆಸಿದ ಟ್ರಂಪ್, ಅಮೆರಿಕನ್ನರಿಗೆ ನೋವು ಮಾಡಲು ಮತ್ತು ಡಾಲರ್ ಮೌಲ್ಯ ಕುಗ್ಗಿಸಲು 'ಬ್ರಿಕ್ಸ್' ದೇಶಗಳು ಹುನ್ನಾರ ನಡೆಸಿವೆ. ನಮ್ಮ ಜತೆ ಆಟವಾಡಲೆತ್ನಿಸಿದರೆ ನಾನೂ ಬೇರೆಯದೇ ಆಟ ಆಡುವೆ ಎಂದು ಎಚ್ಚರಿಕೆ ನೀಡಿದ್ದಾರೆ.

ಇದೇ 10ರಿಂದ 19ರ ನಡುವೆ ಆಯ್ಕೆ ಪ್ರಕ್ರಿಯೆ ಪೂರ್ಣ ಸಂಭವ | 45 ವರ್ಷಗಳಲ್ಲಿ ಹಲವು ಏರಿಳಿತ ಕಂಡಿರುವ ಕಮಲ ಪಕ್ಷ | 1980ರಲ್ಲಿ ಶೂನ್ಯದಿಂದ 2016ರಲ್ಲಿ 16 ರಾಜ್ಯಗಳಲ್ಲಿ ಸರಕಾರ | ಪ್ರಧಾನಿ ಮೋದಿ ವಿದೇಶದಿಂದ ವಾಪಸ್ ಬಳಿಕ ಆಯ್ಕೆ ಅಂತಿಮ

ಕಮಲ ಪಕ್ಷದ ಸಾರಥಿ ಆಯ್ಕೆಗೆ ದಿನಗಣನೆ

ದೆಹಲಿ: 1975-77ರ ಅವಧಿಯಲ್ಲಿ ಅಂದಿನ ಪ್ರಧಾನಿ ಇಂದಿರಾ ಗಾಂಧಿ ಜಾರಿಗೊಳಿಸಿದ್ದ ತುರ್ತು ಪರಿಸ್ಥಿತಿಯನ್ನು ವಿರೋಧಿಸಿ ಹೋರಾಟ ನಡೆಸಿದ ಹಲವಾರು ಜನನಾಯಕರು ಸೇರಿಕೊಂಡು ಜನತಾ ಪಕ್ಷ ಎಂಬ ರಾಜಕೀಯ ಪಕ್ಷವನ್ನು ಹುಟ್ಟು ಹಾಕಿದರು. ಅದೇ ಅವಧಿಯಲ್ಲಿ ಜನಸಂಘವಾಗಿ ರಾಜಕಾರಣದಲ್ಲಿದ್ದ ಪಕ್ಷವೇ ನಂತರದಲ್ಲಿ ಕೇಸರಿ ಮತ್ತು ಹಸಿರು ಬಣ್ಣದ ಪತಾಕೆ ಮತ್ತು ಕಮಲ ಚಿಹ್ನೆಯೊಂದಿಗೆ 'ಭಾರತೀಯ ಜನತಾ ಪಕ್ಷ'ವಾಗಿ ರೂಪಾಂತರಗೊಂಡಿತು. ಆಗ ಮೊದಲಿಗೆ ಅಧ್ಯಕ್ಷತೆ ವಹಿಸಿ 'ಭಾರತೀಯ ಜನತಾ ಪಕ್ಷ'ವನ್ನು ಮುನ್ನಡೆಸಿದವರು ಅಟಲ್ ಬಿಹಾರಿ ವಾಜಪೇಯಿ. ಆಗಿನಿಂದ ಈವರೆಗೆ(2025 ಜುಲೈ) ಬಿಜೆಪಿ 11 ಅಧ್ಯಕ್ಷರನ್ನು ಕಂಡಿದೆ. ಈಗ 12ನೇ ಅಧ್ಯಕ್ಷರ ನೇಮಕಕ್ಕಾಗಿ ಭಾರತೀಯ ಜನತಾ ಪಕ್ಷದ ಮುಂದಾಳುಗಳು, ಕಾರ್ಯಕರ್ತರು ಕಾತರದಿಂದ ಕಾಯುತ್ತಿದ್ದಾರೆ. ಸದ್ಯ ಕೆಲವು ಹೆಸರುಗಳು ಅರ್ಹರ ಅಂತಿಮ ಪಟ್ಟಿಗೆ ಸೇರಿಕೊಂಡಿವೆ. ಅವರಲ್ಲೊಬ್ಬರನ್ನು ಬಿಜೆಪಿಯ 12ನೇ ಅಧ್ಯಕ್ಷರಾಗಿ ಆಯ್ಕೆ ಮಾಡಬೇಕಿದೆ.

ಜುಲೈ 2ರಿಂದ 8 ದಿನಗಳ 5 ದೇಶಗಳಲ್ಲಿ ಪ್ರವಾಸ ಹಮ್ಮಿಕೊಂಡಿದ್ದ ಪ್ರಧಾನಿ ನರೇಂದ್ರ ಮೋದಿ ಅವರ ಬರುವಿಕೆಗಾಗಿಯೇ ಬಿಜೆಪಿ ಪಾಳಯ ಕಾಯುತ್ತಿದೆ. ಮೋದಿ ಅವರು ದೆಹಲಿಗೆ ಆಗಮಿಸಿದ ಬಳಿಕ ಅಂತಿಮ ಪಟ್ಟಿಯಲ್ಲಿನ ಹೆಸರುಗಳ ಬಗ್ಗೆ ಪಕ್ಷದ ಪ್ರಮುಖ ನಾಯಕರೆಲ್ಲರೂ ಮತ್ತೊಂದು ಸುತ್ತು ಚರ್ಚಿಸಿ ಅರ್ಹರೊಬ್ಬರನ್ನು ಆಯ್ಕೆ ಮಾಡಲಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಅತ್ಯಧಿಕ ಕಾರ್ಯಕರ್ತರು, ಸದಸ್ಯರನ್ನು ಹೊಂದಿರುವ ಭಾರತೀಯ ಜನತಾ ಪಕ್ಷ ವಿಶ್ವದಲ್ಲೇ ಅತಿದೊಡ್ಡ ರಾಜಕೀಯ ಪಕ್ಷ ಎನಿಸಿಕೊಂಡಿದೆ. ಪಕ್ಷದ ಆರಂಭದ ದೆಸೆಯಿಂದ ಈವರೆಗೆ, ಅದರೆ ಕಳೆದ 45 ವರ್ಷಗಳ ಅವಧಿಯಲ್ಲಿ ಅಧ್ಯಕ್ಷರಾಗಿದ್ದವರಲ್ಲಿ ಲಾಲ್ ಕೃಷ್ಣ ಅಡ್ವಾಣಿ ಅವರು ಒಟ್ಟು 10 ವರ್ಷಗಳ ಕಾಲ ಪಕ್ಷವನ್ನು ಮುನ್ನಡೆಸಿ ಸದೃಢಗೊಳಿಸಿದ್ದಾರೆ. ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಒಟ್ಟು 6 ವರ್ಷ, ಹಾಲಿ ರಕ್ಷಣಾ ಸಚಿವರಾಗಿರುವ ರಾಜನಾಥ್ ಸಿಂಗ್ ಅವರು 6 ವರ್ಷ, ಅಮಿತ್ ಶಾ 6 ವರ್ಷ, ಜೆ.ಪಿ.ನಡ್ಡಾ 5 ವರ್ಷ, ನಿತಿನ್ ಗಡ್ಕರಿ 3 ವರ್ಷ, ಮುರಳಿ ಮನೋಹರ ಜೋಷಿ, ಖುಶ್‌ಬಾಹು ಠಾಕ್ರೆ, ವೆಂಕಯ್ಯ ನಾಯ್ಡು ತಲಾ 2 ವರ್ಷ, ಬಂಗಾರು ಲಕ್ಷ್ಮಣ್, ಜನಾ ಕೃಷ್ಣಮೂರ್ತಿ ತಲಾ 1 ವರ್ಷ ಕಾಲ ಪಕ್ಷವನ್ನು ಮುನ್ನಡೆಸಿದ್ದಾರೆ.



ಬಿಜೆಪಿ ಏರಿಳಿತ

1980-86	ಶೂನ್ಯ
1986-90	3 ರಾಜ್ಯ
1991-94	4 ರಾಜ್ಯ
1995-97	3 ರಾಜ್ಯ
1998-99	5 ರಾಜ್ಯ
2000-02	6 ರಾಜ್ಯ
2003-04	7 ರಾಜ್ಯ
2005-09	8 ರಾಜ್ಯ
2010-13	7 ರಾಜ್ಯ
2013-14	5 ರಾಜ್ಯ
2015-16	10 ರಾಜ್ಯ
2016-17	14 ರಾಜ್ಯ
2017-18	16 ರಾಜ್ಯ
2018-19	13 ರಾಜ್ಯ
2020-23	12 ರಾಜ್ಯ
2023-24	14 ರಾಜ್ಯ

19ಕ್ಕೆ ಮುನ್ನ ಆಯ್ಕೆ ಪೂರ್ಣ

ಭಾರತೀಯ ಜನತಾ ಪಕ್ಷದ 12ನೇ ಅಧ್ಯಕ್ಷರಾಗಲು ಅರ್ಹರಾದವರ ಅಂತಿಮ ಪಟ್ಟಿಯಲ್ಲಿ ಐದಾರು ಪ್ರಮುಖರ ಹೆಸರುಗಳಿವೆ ಎಂದು ತಿಳಿದುಬಂದಿದೆ. ಐವರಲ್ಲೊಬ್ಬರನ್ನು ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡುವ ಪ್ರಕ್ರಿಯೆ ಜುಲೈ 10ರಿಂದ 19ರ ನಡುವೆ ಪೂರ್ಣಗೊಳ್ಳಲಿದೆ ಎಂದು ಹೇಳ ಲಾಗುತ್ತಿದೆ. ಏಕೆಂದರೆ, ಜು.21ರಿಂದ ಸಂಸತ್ತಿನ ಮುಂಗಾರು ಅಧಿವೇಶನ ಆರಂಭಗೊಳ್ಳಲಿದೆ. ಅದಕ್ಕೂ ಮುಂಚಿತವಾಗಿ ಯೇ ಪಕ್ಷದ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆ ಪೂರ್ಣಗೊಳಿಸ ಬೇಕು ಎಂಬುದು ಬಿಜೆಪಿ ವರಿಷ್ಠರ ಮಂಡಳಿಯ ಆಲೋಚನೆಯಾಗಿದೆ.

ಬಿಜೆಪಿ ಈವರೆಗಿನ 11 ಅಧ್ಯಕ್ಷರು

1980-86	ಅಟಲ್ ಬಿಹಾರಿ ವಾಜಪೇಯಿ
1986-90	ಲಾಲ್ ಕೃಷ್ಣ(ಎಲ್‌ಕೆ) ಅಡ್ವಾಣಿ
1991-93	ಮುರಳಿ ಮನೋಹರ ಜೋಷಿ
1993-98	ಎಲ್.ಕೆ.ಅಡ್ವಾಣಿ
1998-2000	ಖುಶ್‌ಬಾಹು ಠಾಕ್ರೆ
2000-01	ಬಂಗಾರು ಲಕ್ಷ್ಮಣ್
2001-02	ಜನಾ ಕೃಷ್ಣಮೂರ್ತಿ
2002-04	ವೆಂಕಯ್ಯ ನಾಯ್ಡು
2004-05	ಎಲ್‌ಕೆ ಅಡ್ವಾಣಿ
2005-09	ರಾಜನಾಥ್ ಸಿಂಗ್
2010-13	ನಿತಿನ್ ಗಡ್ಕರಿ
2013-14	ರಾಜನಾಥ ಸಿಂಗ್
2014-20	ಅಮಿತ್ ಶಾ
2020-25	ಜಗತ್ ಪ್ರಕಾಶ್ ನಡ್ಡಾ
2025 ಜುಲೈ-	?

ರಾಜ್ಯಗಳ ಸಾಂಸ್ಥಿಕ ಚುನಾವಣೆ

ಪಕ್ಷದ ರಾಷ್ಟ್ರೀಯ ಅಧ್ಯಕ್ಷರ ಆಯ್ಕೆಗೂ ಮುನ್ನ ಹಲವು ರಾಜ್ಯಗಳಲ್ಲಿ ಪಕ್ಷದ ಸಾಂಸ್ಥಿಕ ಚುನಾವಣೆಗಳನ್ನು ಕಳೆದ ಕೆಲವು ತಿಂಗಳುಗಳಿಂದ ನಡೆಸಿಕೊಂಡು ಬರಲಾಗಿದೆ. ಈವರೆಗೆ ಡಜನ್‌ಗೂ ಅಧಿಕ ರಾಜ್ಯ ಘಟಕಗಳಿಗೆ ಹೊಸ ಅಧ್ಯಕ್ಷರ ಆಯ್ಕೆ ಮಾಡಲಾಗಿದೆ. ಇತ್ತೀಚೆಗೆ ಹಿಮಾಚಲ ಪ್ರದೇಶ, ಮಧ್ಯಪ್ರದೇಶ, ಉತ್ತರಾಖಂಡ್, ಮಹಾರಾಷ್ಟ್ರ, ಆಂಧ್ರಪ್ರದೇಶ ಮೊದಲಾದ ರಾಜ್ಯಗಳಲ್ಲಿ ಸಾಂಸ್ಥಿಕ ಚುನಾವಣೆ ನಡೆಸಿ ಹೊಸ ಅಧ್ಯಕ್ಷರನ್ನು ನೇಮಿಸಲಾಗಿದೆ. ಬಿಹಾರ, ಸಿಕ್ಕಿಂ, ಗೋವಾ, ಅಸ್ಸಾಂ ಮತ್ತಿತರ ರಾಜ್ಯಗಳಲ್ಲಿ ಹೊಸ ಅಧ್ಯಕ್ಷರ ಆಯ್ಕೆ ಈ ಮೊದಲೇ ಆಗಿದೆ. ಉಳಿದಂತೆ ಅತಿದೊಡ್ಡ ರಾಜ್ಯ ಉತ್ತರ ಪ್ರದೇಶ ಸೇರಿದಂತೆ ಕೆಲವೇ ರಾಜ್ಯಗಳಲ್ಲಿ ಬಿಜೆಪಿ ಸಾಂಸ್ಥಿಕ ಚುನಾವಣೆ ನಡೆಯುವುದು ಬಾಕಿ ಇದೆ. ಸದ್ಯದಲ್ಲೇ ಪೂರ್ಣಗೊಳ್ಳುವ ನಿರೀಕ್ಷೆ ಇದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಅಂತಿಮ ಪಟ್ಟಿಯಲ್ಲಿ ಐದಾರು ಹೆಸರು!

ಸದ್ಯ ಬಿಜೆಪಿ ಅಧ್ಯಕ್ಷರಾಗುವ ಅರ್ಹರ ಅಂತಿಮ ಪಟ್ಟಿಯಲ್ಲಿ ಭೂಪೇಂದ್ರ ಯಾದವ್, ಧರ್ಮೇಂದ್ರ ಪ್ರಧಾನ್, ಪ್ರಹ್ಲಾದ ಜೋಷಿ, ನಿರ್ಮಲಾ ಸೀತಾರಾಮನ್, ವನತಿ ಶ್ರೀನಿವಾಸನ್ ಮತ್ತು ಬಿ.ಡಿ.ಶರ್ಮಾ ಹೆಸರು ಇರುವುದಾಗಿ ಮೂಲಗಳು ತಿಳಿಸಿವೆ. ಒಬಿಸಿ ಸಮುದಾಯಕ್ಕೆ ಸೇರಿದ ಭೂಪೇಂದ್ರ ಯಾದವ್ ಹೆಸರು ಮುಂಚೂಣಿಯಲ್ಲಿದೆ. ಏಕೆಂದರೆ, ಅವರು 2017ರಲ್ಲಿ ಉತ್ತರ ಪ್ರದೇಶ, 2020ರಲ್ಲಿ ಬಿಹಾರ, 2024ರಲ್ಲಿ ಮಹಾರಾಷ್ಟ್ರ ವಿಧಾನಸಭೆ ಚುನಾವಣೆಗಳಲ್ಲಿ ಬಿಜೆಪಿ ಉತ್ತಮ ಸಾಧನೆ ತೋರುವುದಕ್ಕೆ ಪ್ರಬಲ ಚುನಾವಣಾ ತಂತ್ರಗಾರಿಕೆ ನಡೆಸಿದ್ದರು ಎಂಬ ಸಕಾರಾತ್ಮಕ ಅಂಶ ಭೂಪೇಂದ್ರ ಅವರ ಪರವಾಗಿದೆ ಎಂದು ಮೂಲಗಳು ತಿಳಿಸಿವೆ. ಭೂಪೇಂದ್ರ ಯಾದವ್ ಪಕ್ಷದ ರಾಷ್ಟ್ರೀಯ ಅಧ್ಯ ಕ್ಷರಾಗಿ ಚುನಾಯಿತರಾದರೆ, ಯಾದವ ಸಮುದಾಯದ ಪ್ರಭಾವವಿರುವ ಬಿಹಾರದಲ್ಲಿನ ವಿಧಾನಸಭೆ ಚುನಾವಣೆ ಗೆಲ್ಲಲು ಅನುಕೂಲವಾಗಲಿದೆ ಎಂಬ ಅಂಶವೂ ರಾಷ್ಟ್ರೀಯ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆಯಲ್ಲಿ ಪ್ರಮುಖವಾಗಲಿದೆ ಎನ್ನ ಲಾಗಿದೆ. ಪ್ರಹ್ಲಾದ್ ಜೋಷಿ ಕರ್ನಾಟಕ, ನಿರ್ಮಲಾ ಸೀತಾರಾಮನ್ ತಮಿಳುನಾಡು ಮತ್ತು ಕರ್ನಾಟಕ(ಬೆಂಗಳೂರು ಸಂಸದೆ), ವನತಿ ಶ್ರೀನಿವಾಸನ್ ತಮಿಳುನಾಡು ರಾಜ್ಯಗಳನ್ನು ಪ್ರತಿನಿಧಿಸುತ್ತಾರೆ. ಇವರಲ್ಲೊಬ್ಬರು ಅಧ್ಯಕ್ಷ ಹುದ್ದೆ ಅಲಂಕರಿ ಸಿದರೆ ಪ್ರತಿಷ್ಠಿತ ಹುದ್ದೆ 21 ವರ್ಷಗಳ ನಂತರ ದಕ್ಷಿಣ ಭಾರತಕ್ಕೆ ಒಲಿದಂತಾಗಲಿದೆ. 2002-04ರಲ್ಲಿ ಆಂಧ್ರಪ್ರದೇಶದ ವೆಂಕಯ್ಯ ನಾಯ್ಡು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾಗಿದ್ದರು.

ರಾಜಕೀಯ ಬಿಟ್ಟರೆ ವೇದಾಧ್ಯಯನ

ದೆಹಲಿ: ಗುಜರಾತ್, ಮಧ್ಯಪ್ರದೇಶ, ರಾಜಸ್ಥಾನದ ಸಹಕಾರಿ ಕಾರ್ಮಿಕ ಮಹಿಳೆಯರ ಜತೆ 'ಸಹಕಾರದ ಮೂಲಕ ಸಮೃದ್ಧಿ' ವಿಚಾರವಾಗಿ ಸಂವಾದ ವೇಳೆ ಕೇಂದ್ರ ಗೃಹ ಸಚಿವ ಅಮಿತ್ ಶಾ, ರಾಜಕೀಯ ನಿವೃತ್ತಿ ನಂತರದ ಯೋಜನೆಗಳ ಬಗ್ಗೆ ಮಾತನಾಡಿದ್ದಾರೆ. ರಾಜಕೀಯ ನಿವೃತ್ತಿ ನಂತರ ಉಳಿದ ಜೀವನವನ್ನು ವೇದಗಳು, ಉಪನಿಷತ್ತುಗಳ ಅಧ್ಯಯನ ಮತ್ತು ನೈಸರ್ಗಿಕ ಕೃಷಿಗೆ ಮೀಸಲಿಡಲು ಬಯಸುತ್ತೇನೆ ಎಂದು ಬುಧವಾರ ಮಾಹಿತಿ ಹಂಚಿಕೊಂಡಿದ್ದಾರೆ. ನಿವೃತ್ತಿ ಜೀವನದಲ್ಲಿ ರಾಜಕೀಯದಿಂದ ಪೂರ್ಣ ದೂರವಾಗಿ ನೆಮ್ಮದಿಯ ವಿಶ್ರಾಂತ ಬದುಕು ಕಳೆಯಲು ಇಚ್ಛಿಸುವುದಾಗಿ ಪ್ರಧಾನಿ ನರೇಂದ್ರ ಮೋದಿಗೆ ಆಪ್ತರಾಗಿರುವ ಶಾ ಹೇಳಿದ್ದಾರೆ. ಅಮಿತ್ ಶಾ ಈ ಮೊದಲು ಬಹಳಷ್ಟು ಬಾರಿ ತಮ್ಮ ಪುಸ್ತಕ ಓದಿನ ಪ್ರೀತಿ ವ್ಯಕ್ತಪಡಿಸುತ್ತಿರುತ್ತಾರೆ. ತಮ್ಮ ಬಳಿ 8,000 ಪುಸ್ತಕಗಳಿವೆ. ಆದರೆ, ಅವನ್ನು ಓದಲು ಸಮಯವೇ ಆಗುತ್ತಿಲ್ಲ ಎಂದು ವಿಷಾದಿಸಿದ್ದರು. ಶಾಸ್ತ್ರೀಯ ಸಂಗೀತದ ಬಗೆಗಿನ ಒಲವನ್ನೂ ವ್ಯಕ್ತಪಡಿಸಿದ್ದರು.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ ಬಾಗಲಕೋಟ ಇವರ ಕಛೇರಿ.

ಸಂಖ್ಯೆ.ಲೋಇ:ಬಾವಿ:ಪಿಬಿ:ಕೆಡಬ್ಲು:2025-26/1122 ದಿನಾಂಕ:09-07-2025

-: ಟೆಂಡರ ಪ್ರಕಟಣೆ:-

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999-2000ರ ಪ್ರಕಾರ ಆ್ಯಕ್ಟ 2000ರ ನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ ಕೆ/ಡಬ್ಲೂ-4 ನಿಯಮದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಇ-ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಬಾಗಲಕೋಟ ವಿಭಾಗದ ಅಡಿಯಲ್ಲಿಯ ಈ ಕೆಳಕಾಣಿಸಿದ ಕಾಮಗಾರಿಯ ಟೆಂಡರ ಅಹ್ವಾನಿಸಲಾಗಿದೆ.

ವರ್ಕ ಇಂಡೆಂಟ್ ನಂ: ಸಾಮಾನ್ಯ: 20406/Call-3

ಈ ಕಾಮಗಾರಿಯ ಗರಿಷ್ಠ ಟೆಂಡರಗಿಟ್ಟ ಮೊತ್ತ ರೂ.300.00 ಲಕ್ಷಗಳಿಗೆ ಈ ಕೆಳಕಾಣಿಸಿದ ದಿನಾಂಕಗಳಂತೆ ಟೆಂಡರ ಅಹ್ವಾನಿಸಲಾಗಿದೆ.

1)ಫ್ರೀ ಬಿಡ್ ಮೀಟೀಂಗ್ ದಿನಾಂಕ:11-07-2025 ರಂದು ಬೆಳಿಗ್ಗೆ 11-30 ಘಂಟೆಯವರೆಗೆ, 2) ಟೆಂಡರ ಆಕ್ಷೇಪಣೆಗಾಗಿ ನಿಗಧಿ ಪಡಿಸಿದ ದಿನಾಂಕ:16-07-2025 ರಂದು ಸಂಜೆ 5-30 ಘಂಟೆಯವರೆಗೆ, 3)ಟೆಂಡರ ಸ್ವೀಕರಿಸುವ ದಿನಾಂಕ: 18-07-2025 ರಂದು ಸಂಜೆ 4-00 ಘಂಟೆಯವರೆಗೆ, 4)ತಾಂತ್ರಿಕ ಬಿಡ್ ತೆರೆಯುವ ದಿನಾಂಕ:19-07-2025 ರಂದು ಸಂಜೆ 4.30 ಘಂಟೆಯವರೆಗೆ, 5) ಆರ್ಥಿಕ ಬಿಡ್ ತೆರೆಯುವ ದಿನಾಂಕ:23-07-2025 ರಂದು ಸಂಜೆ 4.30 ಘಂಟೆಯವರೆಗೆ

ಸಹಿ/-ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ ಬಾಗಲಕೋಟೆ.

DIPR/BGK/RO-NO-161/KSMCA/2025-26

ಜಾಗ್ವಾರ್ ವಿಮಾನ ಪತನ, ಇಬ್ಬರೂ ಪೈಲಟ್ ಮೃತ್ಯು

ಜೈಪುರ: ರಾಜಸ್ಥಾನದ ಛುರು ಜಿಲ್ಲೆಯ ಬಳಿ ಭಾರತೀಯ ವಾಯುಪಡೆ ಯುದ್ಧ ವಿಮಾನ 'ಜಾಗ್ವಾರ್' ಬುಧವಾರ ಮಧ್ಯಾಹ್ನ ದಿಢೀರ್ ಪತನವಾಗಿದ್ದು, ಇಬ್ಬರು ಪೈಲಟ್‌ಗಳೂ ದುರ್ಮರಣಕ್ಕೀಡಾಗಿದ್ದಾರೆ. ಅಪಘಾತಕ್ಕೆ ಕಾರಣ ತಕ್ಷಣಕ್ಕೆ ತಿಳಿದು ಬಂದಿಲ್ಲ. ಕೃಷಿ ಪ್ರದೇಶದಲ್ಲಿ ವಿಮಾನ ಪತನವಾಗಿ ಹೊತ್ತಿಉರಿದಿದೆ. ವಿಮಾನದ ಬಹುತೇಕ ಭಾಗ ಸುಟ್ಟು ಹೋಗಿದ್ದು, ಅವಶೇಷಗಳಡಿ ಇಬ್ಬರೂ ಪೈಲಟ್‌ಗಳ ಮೃತದೇಹ ಪತ್ತೆಯಾಗಿದ್ದು, ಎರಡೂ ದೇಹಗಳು ಗುರುತು ಸಿಗಲಾರದಷ್ಟು ಸುಟ್ಟುಹೋಗಿವೆ. ವಿಮಾನ ಪತನ ಸ್ಥಳದಲ್ಲಿ ಬೆಂಕಿ ಮತ್ತು ಭಾರೀ ಹೊಗೆ ಹೊರಹೊಮ್ಮಿದ್ದನ್ನು ಕಂಡ ಗ್ರಾಮಸ್ಥರು ವಿಮಾನದಲ್ಲಿದ್ದವರನ್ನು ರಕ್ಷಿಸಲು ಸ್ಥಳಕ್ಕೆ ಓಡೋಡಿ ಬಂದಿದ್ದಾರೆ. ಆದರೆ, ವಿಮಾನ ಧಗಧಗನೆ ಉರಿಯುತ್ತಿದ್ದುದನ್ನು ಕಂಡು ದೂರವೇ ಉಳಿದು, ಸ್ಥಳೀಯ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ. ಆ ಬಳಿಕ ವಾಯುಪಡೆಯ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ವಿಮಾನ ಪತನಕ್ಕೆ ಕಾರಣ ತಿಳಿಯಲು ತನಿಖೆ ಆರಂಭಿಸಿದ್ದಾರೆ. 'ಪತನವಾಗಿರುವುದು ತರಬೇತಿ ವಿಮಾನ. ಅದರಲ್ಲಿ ಪೈಲಟ್ ಮತ್ತು ತರಬೇತಿ ಪೈಲಟ್ ಇದ್ದರು. ಇಬ್ಬರೂ ಸಾವಿಗೀಡಾಗಿದ್ದಾರೆ. ಬಯಲು ಪ್ರದೇಶದಲ್ಲಿ ವಿಮಾನ ಪತನವಾಗಿರುವುದರಿಂದ ನಾಗರಿಕರಿಗೆ ಯಾವು ದೇ ಹಾನಿ ಆಗಿಲ್ಲ' ಎಂದು ಐಎಎಫ್ ಅಧಿಕಾರಿಗಳು ಹೇಳಿ ದ್ದಾರೆ. ಕಳೆದ 5 ತಿಂಗಳಲ್ಲಿ ಮೂರನೇ ಜಾಗ್ವಾರ್ ವಿಮಾನ ಪತನವಾದಂತಾಗಿದೆ.

ಬಿಹಾರ ಚು. ಅಕ್ರಮಕ್ಕೆ ಅವಕಾಶವಿಲ್ಲ: ರಾಹುಲ್

ಪಟನಾ: ಮಹಾರಾಷ್ಟ್ರ ವಿಧಾನಸಭೆಗೆ 2024ರಲ್ಲಿ ನಡೆದ ಚುನಾವಣೆಯಲ್ಲಿ ಬಿಜೆಪಿಗೆ ಅನುಕೂಲವಾಗುವಂತೆ 'ಅಕ್ರಮ' ನಡೆಸಲಾಗಿದೆ. ವರ್ಷಾಂತ್ಯಕ್ಕೆ ನಡೆಯಲಿರುವ ಬಿಹಾರ ವಿಧಾನಸಭೆ ಚುನಾವಣೆಯಲ್ಲೂ ಅದೇ ಬಗೆಯಲ್ಲಿ ಅಕ್ರಮ ನಡೆಸುವುದಕ್ಕೆ ಕೇಂದ್ರದ ಎನ್‌ಡಿಎ ಸರಕಾರ ಬಯಸುತ್ತಿದೆ. ಆದರೆ, ಹಾಗೆ ಆಗುವುದಕ್ಕೆ 'ಇಂಡಿಯ' ಒಕ್ಕೂಟ ಬಿಡುವುದಿಲ್ಲ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಬುಧವಾರ ಗುಡುಗಿದ್ದಾರೆ.

ವಿಧಾನಸಭೆ ಚುನಾವಣೆ ಹಿನ್ನೆಲೆ ಬಿಹಾರದಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ನಡೆಸುತ್ತಿರುವುದನ್ನು ವಿರೋಧಿಸಿ ಪಟನಾದಲ್ಲಿರುವ ಚುನಾವಣಾ ಆಯೋಗದ ಕಚೇರಿಗೆ ಇಂಡಿಯ ಒಕ್ಕೂಟ ಪ್ರತಿಭಟನಾ ಮೆರವಣಿಗೆ ನಡೆಸಿದೆ. ಈ ಸಂದರ್ಭ ಮಾತನಾಡಿದ ರಾಹುಲ್, ಚುನಾವಣಾ ಆಯೋಗ ಸಂವಿಧಾನದನ್ವಯ ಕೆಲಸ ಮಾಡಬೇಕು. ಆದರೆ, ಬಿಜೆಪಿ ಸೂಚನೆಯಂತೆ ಕಾರ್ಯನಿರ್ವಹಿಸುತ್ತಿದೆ. ಈಗಿನ ಚುನಾವಣಾ ಆಯುಕ್ತರನ್ನು ಬಿಜೆಪಿ ನಾಮನಿರ್ದೇಶನ ಮಾಡಿದ್ದು, ಅವರು ಮತದಾರರ ಪಟ್ಟಿ ಪರಿಷ್ಕರಣೆ ನಡೆಸಿ ಹಲವರ ಮತದಾನದ ಹಕ್ಕು ಕಸಿಯಲೆತ್ನಿಸಿದ್ದಾರೆ. ಚುನಾವಣೆ ಹೈಜಾಕ್ ಮಾಡುವ ಹುನ್ನಾರ ನಡೆಸಿದ್ದಾರೆ. ಚುನಾವಣಾ ಆಯೋಗ ಮತದಾರರ, ವಿಶೇಷವಾಗಿ ಯುವಜನರ ಹಕ್ಕು ಕಸಿದುಕೊಳ್ಳುವುದಕ್ಕೆ ಯತ್ನಿಸಿದರೆ ಅದಕ್ಕೆ ಇಂಡಿ ಒಕ್ಕೂಟ ಅವಕಾಶ ನೀಡುವುದಿಲ್ಲ ಎಂದು ಭಾವಾವೇಶದಿಂದ ನುಡಿದರು.

ಆರ್‌ಜೆಡಿ ಪಕ್ಷದ ನಾಯಕ ತೇಜಸ್ವಿ ಯಾದವ್, ಸಿಪಿಐ(ಎಂಎಲ್) ಲಿಬರೇಶನ್ ಪ್ರಧಾನ ಕಾರ್ಯದರ್ಶಿ ದೀಪಂಕರ್ ಭಟ್ಟಾಚಾರ್ಯ, ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ.ರಾಜಾ ಮತ್ತಿತರ ನಾಯಕರು ಜತೆಗಿದ್ದರು. ಇದೇ ವೇಳೆ, ರಾಜ್ಯ ಬಂದ್‌ಗೆ ಮಹಾಘಟಬಂಧನ ಕರೆ ನೀಡಿದ್ದು, ಬಿಹಾರದ ಕೆಲವೆಡೆ ರಸ್ತೆ ಸಂಚಾರ ಅಸ್ತವ್ಯಸ್ತವಾಯಿತು.

ಪನ್ನಾ ಹುಲಿ ಅಭಯಾರಣ್ಯದಲ್ಲಿ ಅಂತ್ಯಕ್ರಿಯೆ

ಏಷ್ಯಾ ಖಂಡದ ಹಿರಿಯಾನೆ ವತ್ಸಲಾ ಮ.ಪ್ರ.ದಲ್ಲಿ ನಿಧನ



ಭೋಪಾಲ್: ಏಷ್ಯಾ ಖಂಡದಲ್ಲೇ ಅತಿ ಹಿರಿಯ ಆನೆ ಎನಿಸಿಕೊಂಡಿರುವ ಶತಾಯುಷಿ 'ವತ್ಸಲಾ' ಮಧ್ಯಪ್ರದೇಶದ ಪನ್ನಾ ಹುಲಿ ಅಭಯಾರಣ್ಯದ ಹಿನೌಟಾ ಶ್ರೇಣಿಯಲ್ಲಿರುವ ಆನೆ ಶಿಬಿರದಲ್ಲಿ ಮಂಗಳವಾರ ಮಧ್ಯಾಹ್ನ ಸಾವನ್ನಪ್ಪಿದೆ.

ವತ್ಸಲಾಗೆ 100 ವರ್ಷಗಳಿಗಿಂತಲೂ ಹೆಚ್ಚು ವಯಸ್ಸಾಗಿದೆ. ಪನ್ನಾ ಕಾಡಿನಲ್ಲೇ ದೀರ್ಘ ಕಾಲದಿಂದ ನೆಲೆಸಿತ್ತು. ವಯೋಸಹಜ ಅನಾರೋಗ್ಯ, ಬಹು ಅಂಗಾಂಗ ವೈಫಲ್ಯದಿಂದ ಬಳಲುತ್ತಿತ್ತು. ಇತ್ತೀಚೆಗೆ ವತ್ಸಲಾ ಮುಂದಿನ ಕಾಲಿನಲ್ಲಿ ಉಗುರುಗಳ ಗಾಯವಾಗಿತ್ತು. ಹಿನೌಟಾ ಪ್ರದೇಶದ ಖೈರೈಯಾನ್ ನಾಲಾ ಬಳಿ ಮಲಗಿದ್ದ ವತ್ಸಾಳಾಗೆ ಬುಧವಾರ ಮೇಲೇಳಲು ಸಾಧ್ಯವಾಗಲಿಲ್ಲ. ಮಲಗಿದ್ದಲ್ಲೇ ಮಧ್ಯಾಹ್ನ 1.30ರ ವೇಳೆ ಕೊನೆಯುಸಿರೆಳೆಯಿತು ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ. ವತ್ಸಲಾ ಪ್ರವಾಸಿಗರ ಆಕರ್ಷಣೆಯ ಕೇಂದ್ರವಾಗಿದ್ದಳು. ಅಭಯಾರಣ್ಯದಲ್ಲಿ ಆನೆಗಳ ಗುಂಪನ್ನು ಮುನ್ನಡೆಸುತ್ತಿದ್ದಳು. ಅರಣ್ಯ ಸಿಬ್ಬಂದಿ ಮತ್ತು ವನ್ಯಜೀವಿ ಪ್ರಿಯರು ಪ್ರೀತಿಯಿಂದ 'ದಾದಿ' ಮತ್ತು 'ದಾಯಿ ಮಾ' ಎಂದು ಕರೆಯುತ್ತಿದ್ದ ವತ್ಸಲಾಳ ಅಂತ್ಯಕ್ರಿಯೆಯನ್ನು ಶಿಬಿರದಲ್ಲಿಯೇ ಬಹಳ ಗೌರವ ಪೂರ್ವಕವಾಗಿ ನಡೆಸಲಾಗಿದೆ ಎಂದು ಅಧಿಕಾರಿಗಳು ವಿವರಿಸಿದ್ದಾರೆ. ಮೊದಲು ಕೇರಳದ ನೀಲಂಬೂರು ಕಾಡಿನಲ್ಲಿದ್ದ ವತ್ಸಲಾಳನ್ನು 1971ರಲ್ಲಿ ಮಧ್ಯಪ್ರದೇಶಕ್ಕೆ ಕರೆತಂದು ನರ್ಮದಾಪುರಂನಲ್ಲಿ ಇರಿಸಲಾಗಿತ್ತು. ನಂತರ ಪನ್ನಾ ಹುಲಿ ಅಭಯಾರಣ್ಯಕ್ಕೆ ಸ್ಥಳಾಂತರಿಸಲಾಗಿತ್ತು. ಖೈರೈಯಾನ್ ನಾಲಾದಲ್ಲಿ ನಿತ್ಯ ಸ್ನಾನ ಮಾಡಿಸಿ ಗಂಜಿ, ಮೃದು ಆಹಾರಗಳನ್ನು ಕೊಡಲಾಗುತ್ತಿತ್ತು. ಕಡೆಯ ದಿನಗಳಲ್ಲಿ ವತ್ಸಲಾಗೆ ತುಂಬಾ ದೂರ ನಡೆಯಲು ಸಾಧ್ಯವಾಗುತ್ತಿರಲಿಲ್ಲ ಎಂದಿದ್ದಾರೆ.

ರನ್ಯಾ ರಾವ್ ಮಾದರಿಯಲ್ಲಿ ಚಿನ್ನ ಸಾಗಾಟ ಮಾಡಿದ ಮೋನಿಕಾ

ಚಿನ್ನ ಕಳ್ಳಸಾಗಣೆ: ಮೋನಿಕಾ ಕಪೂರ್ ಸಿಬಿಐಗೆ ಹಸ್ತಾಂತರ

ದೆಹಲಿ: 'ಘೋಷಿತ ಆರ್ಥಿಕ ಅಪರಾಧಿ' ಮೋನಿಕಾ ಕಪೂರ್ 25 ವರ್ಷಗಳ ಬಳಿಕ ಅಮೆರಿಕದಲ್ಲಿ ಸೆರೆ ಸಿಕ್ಕಿದ್ದಾಳೆ.

ಅಮೆರಿಕದ ಪೊಲೀಸರು ಚಿನ್ನ ಕಳ್ಳಸಾಗಣೆ ಪ್ರಕರಣದ ಆರೋಪಿಯನ್ನು ಭಾರತಕ್ಕೆ ಬುಧವಾರ ಹಸ್ತಾಂತರಿಸಿದ್ದಾರೆ. ಅಮೆರಿಕಕ್ಕೆ ತೆರಳಿದ್ದ ಸಿಬಿಐ ಅಧಿಕಾರಿಗಳ ತಂಡ 25 ವರ್ಷಗಳ ಹಿಂದಿನ ಚಿನ್ನ ಕಳ್ಳಸಾಗಣೆದಾರಳನ್ನು ಬುಧವಾರ ಅಮೆರಿಕದಲ್ಲಿ ವಶಕ್ಕೆ ತೆಗೆದುಕೊಂಡಿದೆ. 'ಮೋನಿಕಾ ಓವರ್‌ಸೀಸ್ ಕಂಪನಿ' ಮಾಲೀಕಳಾಗಿದ್ದ ಮೋನಿಕಾ ಕಪೂರ್, ಸೋದರರಾದ ರಾಜನ್ ಖನ್ನಾ ಮತ್ತು ರಾಜೀವ್ ಖನ್ನಾ ಜತೆಗೂಡಿ ಕಳ್ಳ ಮಾರ್ಗದಲ್ಲಿ ಅಪಾರ ಪ್ರಮಾಣದ ಚಿನ್ನವನ್ನು ಭಾರತಕ್ಕೆ ತರುತ್ತಿದ್ದಳು. ಚಿನ್ನ ಆಮದು-ರಫ್ತು ವಹಿವಾಟು ದಾಖಲೆಗಳು, ಶಿಪ್ಪಿಂಗ್ ಬಿಲ್‌ಗಳು, ಇನ್‌ವಾಯ್ಸ್‌ಗಳನ್ನು ನಕಲಿ ಮಾಡಿದ್ದಳು. ಇದರಿಂದ 1998ರಲ್ಲಿ ಸರಕಾರದ ಖಜಾನೆಗೆ 1.44 ಕೋಟಿ ರು. ನಷ್ಟವಾಗಿತ್ತು ಎಂದು ಸಿಬಿಐ ಅಧಿಕಾರಿಗಳು ಆರೋಪಿಸಿದ್ದಾರೆ. ಮೋನಿಕಾ ಕಪೂರ್ ಮತ್ತು ಆಕೆಯ ಸೋದರರ ವಿರುದ್ಧ ಕ್ರಿಮಿನಲ್ ಪಿತೂರಿ, ವಂಚನೆ ಮತ್ತು ನಕಲಿ ದಾಖಲೆ ಸೃಷ್ಟಿ ಆರೋಪದಡಿ ದೆಹಲಿಯ ಸಾಕೇತ್ ಜಿಲ್ಲಾ ನ್ಯಾಯಾಲಯಕ್ಕೆ 2004ರ ಮಾ.31ರಂದೇ ದೋಷಾರೋಪಪಟ್ಟಿ ಸಲ್ಲಿಸಲಾಗಿದೆ. ಈ ವೇಳೆ ಮೋನಿಕಾ ಪರಾರಿಯಾದಳು. 2006ರ ಫೆ.13ರಂದು ನ್ಯಾಯಾಲಯ ಮೋನಿಕಾಳನ್ನು ಘೋಷಿತ ಅಪರಾಧಿ ಎಂದು ಘೋಷಿಸಿತು.

ಅಮೆರಿಕ ಅಧಿಕಾರಿಗಳ ಜತೆ ಭಾರತದ ತನಿಖಾ ಸಂಸ್ಥೆಗಳು ಇತ್ತೀಚೆಗೆ ಉತ್ತಮ ಸಂಬಂಧ ಸಾಧಿಸಿರುವುದರಿಂದ 25 ವರ್ಷಗಳ ಬಳಿಕವಾದರೂ ಮೋನಿಕಾ ಸೆರೆ- ಹಸ್ತಾಂತರ ಸಾಧ್ಯವಾಗಿದೆ. ಇತ್ತೀಚೆಗೆ ನೀರವ್ ಮೋದಿ ಸಂಬಂಧ ನೇಹಲ್ ಮೋದಿಯನ್ನು ಅಮೆರಿಕ ಪೊಲೀಸರು ಬಂಧಿಸಿ ಭಾರತಕ್ಕೆ ಹಸ್ತಾಂತರಿಸಲು ಸಿದ್ಧತೆ ನಡೆಸಿರುವುದು ಉಲ್ಲೇಖಾರ್ಹ.

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ ವಿಜಯಪುರ

No.EE/MID/VJP/AE-1,2,4/SCP-TSP/TND/2025-26/ 940 Date: 08.07.2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಅರ್ಹ ಗುತ್ತಿಗೆದಾರರಿಂದ ಐಟಂ ದರದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ-2000 ಮತ್ತು ಇತ್ತೀಚಿನ ತಿದ್ದುಪಡಿಗಳಂತೆ ಈ ಕೆಳಗಿನ ಕಾಮಗಾರಿಗಳಿಗಾಗಿ "ಇ-ಪ್ರೋಕ್ಯುರಮೆಂಟ್" ಮುಖಾಂತರ ಟೆಂಡರ ಕರೆಯಲಾಗಿದೆ.

4702-ಎಸ್.ಸಿ.ಪಿ. ಕಾಮಗಾರಿಗಳು :- ಒಟ್ಟು 21 ಕಾಮಗಾರಿಗಳು/ಪ್ಯಾಕೇಜ ಕಾಮಗಾರಿಗಳು, ಅಂದಾಜು ಮೊತ್ತ **ರೂ.118.80ಲಕ್ಷಗಳು, ಕಾಮಗಾರಿಗಳನ್ನು ಪೂರ್ಣಗೊಳಿಸುವ ಕಾಲಾವಧಿ ಮಳೆಗಾಲ ಸಹಿತ ಮೂರು(3) ತಿಂಗಳುಗಳು.**

4702-ಟಿ.ಎಸ್.ಪಿ. ಕಾಮಗಾರಿಗಳು :- ಒಟ್ಟು 16 ಕಾಮಗಾರಿಗಳು/ಪ್ಯಾಕೇಜ ಕಾಮಗಾರಿಗಳು, ಅಂದಾಜು ಮೊತ್ತ **ರೂ.206.07ಲಕ್ಷಗಳು, ಕಾಮಗಾರಿಗಳನ್ನು ಪೂರ್ಣಗೊಳಿಸುವ ಕಾಲಾವಧಿ ಮಳೆಗಾಲ ಸಹಿತ ಮೂರು(3) ತಿಂಗಳುಗಳಿಂದ ಆರು(6) ತಿಂಗಳುಗಳು.**

ಗುತ್ತಿಗೆದಾರರು ಕರ್ನಾಟಕ ಸರಕಾರದ "ಇ-ಪ್ರೋಕ್ಯುರಮೆಂಟ್" ವೆಬ್ಸೈಟ https://kppp.karnataka.gov.in/#/portal/portal-home ನಲ್ಲಿ ಲಾಗಿನ್ ಆಗಿ ದಿನಾಂಕ:**10.07.2025**ರಿಂದ Download ಮಾಡಿಕೊಳ್ಳಬಹುದು. ಟೆಂಡರಗಳನ್ನು ಇ.ಎಂ.ಡಿ ಹಾಗೂ ಟೆಂಡರ ಶುಲ್ಕದೊಂದಿಗೆ(ವೆಬ್‌ಸೈಟನಲ್ಲಿ ನಿಗದಿತ ಮಾಡಿರುವ ಯಾವುದಾದರೂ ಒಂದು ಮಾದರಿಯಲ್ಲಿ ಆನ್‌ಲೈನ್ ಪೇಮೆಂಟ ಮಾತ್ರ) "ಇ-ಪ್ರೋಕ್ಯುರಮೆಂಟ್" ವೆಬ್ಸೈಟ https://kppp.karnataka.gov.in/#/portal/portal-home ನಲ್ಲಿ ಲಾಗಿನ್ ಆಗಿ ದಿನಾಂಕ:**17.07.2025** ರ 17-30ಘಂಟೆವರೆಗೆ ಸ್ವೀಕರಿಸಲಾಗುವದು. ಕಾಮಗಾರಿ ಪಡೆಯಲು ಅರ್ಹತೆ, ಶರತ್ತುಗಳು, ಕಾಮಗಾರಿಗಳ ವಿವರ ಇತ್ಯಾದಿಗಳನ್ನು ದಿನಾಂಕ:**16.07.2025**ರ 17-30ಘಂಟೆವರೆಗೆ ವಿಭಾಗ ಕಛೇರಿಯಲ್ಲಿ ಅಥವಾ "ಇ-ಪ್ರೋಕ್ಯುರಮೆಂಟ್" ಹೆಲ್ಪ ಡೆಸ್ಕನಿಂದ(ಫೋನಃ-080-25501216 ಮತ್ತು 080-25501227) ಪಡೆಯಬಹುದು ಹಾಗೂ ಟೆಂಡರಗಳನ್ನು ಜಿ.ಎಸ್.ಟಿ. ಹೊರತುಪಡಿಸಿ ಸಲ್ಲಿಸುವುದು.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ ವಿಜಯಪುರ

ವಾಸಾಸಂಇ/ವಿಜಯಪುರ/171/ಕೆಎಸ್‌ಎಂಸಿಎ/2025-26

ನಗರಸಭಾ ಕಾರ್ಯಾಲಯ, ಮಾದನಾಯಕನಹಳ್ಳಿ
ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರಜಿಲ್ಲೆ - 562162
ದೂರವಾಣಿ: 08023718487, E-mail: itstaff_ulb_mnhalli@yahoo.com

ಸಂಖ್ಯೆ:ಮಾ.ನ.ಕಾ/ಆ.ಶಾ./ಸಿ.ಆರ್/03/2025-26 ದಿನಾಂಕ: 09.07.2025

"ಅಲ್ಪಾವಧಿ/ಪೂರ್ಣಾವಧಿ ಟೆಂಡರ್ ಪ್ರಕಟಣೆ"

2025-26ನೇ ಸಾಲಿನ ನಗರಸಭಾ ನಿಧಿ, ಎಸ್.ಎಫ್.ಸಿ ಮತ್ತು ಶೇಕಡ 24.10 ಎಸ್.ಬಿ.ಎಂ 2.0 ಅಡಿಯಲ್ಲಿ ಮಾದನಾಯಕನಹಳ್ಳಿ ನಗರಸಭಾ ವ್ಯಾಪ್ತಿಯಲ್ಲಿ ಈ ಕೆಳಕಂಡ ಕಾಮಗಾರಿ, ಸೇವೆ ಮತ್ತು ಸರಬರಾಜುಗಳನ್ನು ಒದಗಿಸಲು https://kppp.karnataka.gov.in ನಲ್ಲಿ ಟೆಂಡರ್ ಆಹ್ವಾನಿಸಲಾಗಿದ್ದು, ಅರ್ಹ ಹಾಗೂ ಅನುಭವವುಳ್ಳ ಗುತ್ತಿಗೆದಾರರು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನಂತೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ.

1	DMA/2025-26/IND4737/CALL-2, DMA/2025-26/IND4744/CALL-2, DMA/2025-26/IND4741/CALL-2, DMA/2025-26/IND4740/CALL-2, DMA/2025-26/SE5120/CALL-2, DMA/2025-26/IND5045, DMA/2025-26/IND5046
2	DMA/2025-26/OW/WORK_INDENT42098/CALL-3, DMA/2025-26/OW/WORK_INDENT42031/CALL-3,

ಕ್ರಮ ಸಂಖ್ಯೆ 1ಕ್ಕೆ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 25.07.2025ರಂದು ಸಂಜೆ 16:00 ಘಂಟೆಯವರೆಗೆ** ಹಾಗೂ ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 28.07.2025ರಂದು ಬೆಳಿಗ್ಗೆ 11.00 ಗಂಟೆಗೆ.** ಕ್ರಮ ಸಂಖ್ಯೆ 2ಕ್ಕೆ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 18.07.2025 ರಂದು ಸಂಜೆ 16:00 ಘಂಟೆಯವರೆಗೆ** ಹಾಗೂ ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 19.07.2025 ರಂದು ಸಂಜೆ 16:30 ಗಂಟೆಗೆ.** ಹೆಚ್ಚಿನ ವಿವರಗಳನ್ನು ಕಛೇರಿಯಿಂದ ಅಥವಾ **https://kppp.karnataka.gov.in** ವೆಬ್‌ಸೈಟ್‌ನಲ್ಲಿ ಪಡೆದುಕೊಳ್ಳಬಹುದಾಗಿದೆ. ಯಾವುದೇ ತಿದ್ದುಪಡಿ ಮತ್ತು ಬದಲಾವಣೆಯಿದ್ದಲ್ಲಿ ಕೆಪಿಪಿ ಪೋರ್ಟ್‌ಲ್ ಮುಖಾಂತರ ಮಾತ್ರ ತಿಳಿಸಲಾಗುವುದು.

ಸಹಿ/-
ಪೌರಾಯುಕ್ತರು,
ನಗರಸಭೆ, ಮಾದನಾಯಕನಹಳ್ಳಿ

ವಾಸಾಸಂಇ/ವಾ.ಪ್ರ/1728/ಶಿರಡಿ ಸಾಯಿ/2025-26

ಮುರಿದು ಬಿದ್ದ ಸೇತುವೆ 11 ಬಲಿ

ವಡೋದರಾ: ಬುಧವಾರ ಬೆಳಗ್ಗೆ 10 ಜೀವಗಳನ್ನು ಬಲಿ ತೆಗೆದುಕೊಂಡ ಗುಜರಾತ್ ರಾಜ್ಯದ 'ಗಂಭೀರಾ ಸೇತುವೆ' 4 ದಶಕಗಳಷ್ಟು ಹಳೆಯದಾಗಿತ್ತು. ಅಲ್ಲದೇ, ಬಹಳ ಶಿಥಿಲವಾಗಿತ್ತು. ಈ ವಿಚಾರವನ್ನು 3 ತಿಂಗಳು ಮೊದಲೇ ಮಾಧ್ಯಮ ವರದಿ ಮಾಡಿ ಎಚ್ಚರಿಸಿತ್ತು. ಆದರೆ ರಾಜ್ಯ ಸರಕಾರದ ಲೋಕೋಪಯೋಗಿ ಇಲಾಖೆ ವರದಿಯನ್ನು ನಿರ್ಲಕ್ಷಿಸಿದ್ದರಿಂದ 10 ಜೀವಗಳು ಬಲಿಯಾಗಿ, ಹಲವರು ಗಾಯಗೊಂಡು ನರಳಾಡುವಂತಾಯಿತು.

ರಾಜ್ಯದ ವಡೋದರಾ ಜಿಲ್ಲೆಯ ಮುಜಪುರ ಬಳಿ ಮಹಿಸಾಗರ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿದ್ದ ದೊಡ್ಡ ಗಾತ್ರದ ಸೇತುವೆ ಮಧ್ಯ ಭಾಗದಲ್ಲಿ ಕ್ರಾಂಕ್ರೀಟ್ ಕಿತ್ತುಬಂದು, ಕಬ್ಬಿಣದ ಸಲಾಕೆಗಳು ತುಂಡಾಗಿ ಶಿಥಿಲವಾಗಿದ್ದ ಬೃಹತ್ ಸ್ಲ್ಯಾಬ್ ಬುಧವಾರ ಬೆಳಗ್ಗೆ ಕುಸಿದುಬಿದ್ದಿದೆ. ಚಾಲಕರಿಗೆ ಸೇತುವೆ ಕುಸಿದಿರುವುದು ಕಾಣಿಸದೇ ವಾಹನವನ್ನು ವೇಗವಾಗಿಯೇ ಚಲಾಯಿಸಿಕೊಂಡು ಬಂದಿದ್ದರಿಂದ 4 ವಾಹನಗಳು ಒಂದಾದ ಮೇಲೊಂದರಂತೆ ಆಳವಾದ ನದಿಗೆ ಬಿದ್ದು ಜಖಂಗೊಂಡಿವೆ. ಪರಿಣಾಮ 10 ಮಂದಿ ಜೀವ ಕಳೆದುಕೊಂಡಿದ್ದಾರೆ. ಎರಡು ಟ್ರಕ್‌ಗಳು, ಒಂದು ಪಿಕಪ್ ವ್ಯಾನ್ ಮತ್ತು ಮತ್ತೊಂದು 4 ಚಕ್ರದ ವಾಹನ ನದಿಗೆ ಬಿದ್ದಿವೆ. ಸಮೀಪದ ಗ್ರಾಮದ ಜನತೆ ಓಡೋಡಿ ಬಂದು ಐವರನ್ನು ರಕ್ಷಿಸಿದ್ದಾರೆ. ಅವಘಡದ ಸುದ್ದಿ ತಿಳಿದ ಬಳಿಕ ಪೊಲೀಸರು ಮತ್ತು ರಕ್ಷಣಾ ತಂಡ ಸ್ಥಳಕ್ಕೆ ಧಾವಿಸಿ ಮೃತದೇಹಗಳು ಮತ್ತು ವಾಹನಗಳನ್ನು ಮೇಲಕ್ಕೆತ್ತಲು ಶ್ರಮಿಸಿವೆ. ಲೋಕೋಪಯೋಗಿ ಇಲಾಖೆಯ ತಜ್ಞರಿಗೆ ಸ್ಥಳಕ್ಕೆ ತೆರಳಿ ಸೇತುವೆ ಕುಸಿತಕ್ಕೇನು ಕಾರಣ ಎಂಬ ಬಗ್ಗೆ ತನಿಖೆ ನಡೆಸಿ ವರದಿ ನೀಡುವಂತೆ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಆದೇಶಿಸಿದ್ದಾರೆ.

ಸಚಿವರು ಹೇಳುವುದೇ ಬೇರೆ!

ಸೇತುವೆ 1985ರಲ್ಲಿ ನಿರ್ಮಿಸಲಾಗಿತ್ತು. ನಿಯಮಿತವಾಗಿ ನಿರ್ವಹಣೆ ಮಾಡಲಾಗಿತ್ತು. ಹಾಗಿದ್ದೂ ಸೇತುವೆ ಕುಸಿದಿದೆ ಎಂದು ಗುಜರಾತ್ ಆರೋಗ್ಯ ಸಚಿವ ರುಷಿಕೇಶ್ ಪಟೇಲ್ ತಿಳಿಸಿದ್ದಾರೆ. ಆದರೆ ಸ್ಥಳೀಯರು, 'ಗಂಭೀರಾ ಸೇತುವೆ' ಬಹಳ ಹಿಂದೆಯೇ ಬಹಳ ಶಿಥಿಗೊಂಡು 'ಗಂಭೀರ ಸ್ವರೂಪ'ಕ್ಕೆ ತಿರುಗಿತ್ತು. ಆ ಬಗ್ಗೆ ಪದೇ ಪದೇ ಎಚ್ಚರಿಸಿದರೂ ದುರಸ್ತಿ ಮಾಡಿರಲಿಲ್ಲ ಎಂದಿದ್ದಾರೆ. ಸೇತುವೆ ಕುಸಿತದಿಂದ ಆನಂದ್, ವಡೋದರಾ, ಭರೂಚ್ ಮತ್ತು ಅಂಕಲೇಶ್ವರ ಪ್ರದೇಶಗಳನ್ನು ಸೌರಾಷ್ಟ್ರ ಭಾಗಕ್ಕೆ ಸಂಪರ್ಕಗೊಳಿಸುವ ಪ್ರಮುಖ ಕೊಂಡಿ ಕಡಿದುಹೋದಂತಾಗಿದೆ.

ಸಮಾಚಾರ ಸಣ್ಣದಲ್ಲ

ನೊಬೆಲ್ ಪ್ರಶಸ್ತಿಗೆ ಆಯ್ಕೆ ಜೈರಾಮ್ ರಮೇಶ್ ಟೀಕೆ

ದೆಹಲಿ: ಶತಮಾನದಿಂದೀಚೆಗೆ ನೊಬೆಲ್ ಪ್ರಶಸ್ತಿಗೆ ವಿಲಕ್ಷಣ ಆಯ್ಕೆಗಳನ್ನು ಮಾಡಲಾಗುತ್ತಿದ್ದು, ಈ ಸಂಬಂಧಿಸಿದ ಲೋಪ ದೋಷಗಳು ಸ್ಪಷ್ಟವಾಗಿ ಕಾಣಿಸುತ್ತಿವೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಟೀಕಿಸಿದ್ದಾರೆ. 2025ನೇ ಸಾಲಿನ ನೊಬೆಲ್ ಪ್ರಶಸ್ತಿಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಪಾಕಿಸ್ತಾನ ಮತ್ತು ಇಸ್ರೇಲ್ ನಾಮನಿರ್ದೇಶನ ಮಾಡಿರುವುದನ್ನು ಉಲ್ಲೇಖಿಸಿ ಜೈರಾಮ್ ರಮೇಶ್ ಈ ಹೇಳಿಕೆ ನೀಡಿದ್ದಾರೆ. ಸಾಮಾನ್ಯವಾಗಿ ನೊಬೆಲ್ ಪ್ರಶಸ್ತಿಗೆ ನಾಮನಿರ್ದೇಶನಗೊಂಡವರನ್ನು ಯಾರು ನಾಮನಿರ್ದೇಶನ ಮಾಡಿದ್ದಾರೆ ಎಂಬುದು 50 ವರ್ಷಗಳ ನಂತರ ತಿಳಿಯುತ್ತದೆ. ನಾಮನಿರ್ದೇಶನ ಮಾಡಿದವರು ತಮ್ಮ ಆಯ್ಕೆಗಳನ್ನು ಸಾರ್ವಜನಿಕವಾಗಿ ಯಾವಾಗ ಬೇಕಾದರೂ ಘೋಷಿಸಿಕೊಳ್ಳುವ ಅವಕಾಶವೂ ಇದೆ. 1937ರಿಂದ 1948ರ ಅವಧಿಯಲ್ಲಿ ಮಹಾತ್ಮ ಗಾಂಧಿ ಅವರ ಹೆಸರನ್ನು 12 ಬಾರಿ ನೊಬೆಲ್ ಪ್ರಶಸ್ತಿಗೆ ನಾಮನಿರ್ದೇಶನ ಮಾಡಲಾಗಿತ್ತು. ಈ ಪೈಕಿ 9 ನಾಮನಿರ್ದೇಶನಗಳನ್ನು ಭಾರತೀಯರಲ್ಲದವರು ಮಾಡಿದ್ದರು. 1950ರಿಂದ 1961ರ ಅವಧಿಯಲ್ಲಿ ಜವಾಹರಲಾಲ್ ನೆಹರೂ ಅವರ ಹೆಸರನ್ನು 13 ಬಾರಿ ನಾಮನಿರ್ದೇಶನ ಮಾಡಲಾಗಿತ್ತು, ಈ ಪೈಕಿ 10 ಬಾರಿ ಭಾರತೀಯರಲ್ಲದವರು ನಾಮನಿರ್ದೇಶನ ಮಾಡಿದ್ದರು ಎಂದು ರಮೇಶ್ ಹೇಳಿದ್ದಾರೆ.

ಎಕ್ಸ್ ಸಿಇಒ ಹುದ್ದೆಗೆ ಲಿಂಡಾ ರಾಜೀನಾಮೆ

ದೆಹಲಿ: ಸಾಮಾಜಿಕ ಜಾಲತಾಣ ಎಕ್ಸ್‌ನ (ಟ್ವಿಟರ್) ಸಿಇಒ ಹುದ್ದೆಗೆ ಲಿಂಡಾ ಯಾಕಾರಿನೊ ರಾಜೀನಾಮೆ ಸಲ್ಲಿಸಿದ್ದಾರೆ. ಅವರು ಇಲಾನ್ ಮಸ್ಕ್ ಒಡೆತನದ ಸಾಮಾಜಿಕ ಮಾಧ್ಯಮ ವೇದಿಕೆಯಾದ ಎಕ್ಸ್ ಕಂಪನಿಯ ಸಿಇಒ ಆಗಿ ಎರಡು ವರ್ಷ ಸೇವೆ ಸಲ್ಲಿಸಿದ್ದಾರೆ. ರಾಜೀನಾಮೆ ಕುರಿತು ಎಕ್ಸ್‌ನಲ್ಲಿ ಪೋಸ್ಟ್ ಹಂಚಿಕೊಂಡಿರುವ ಅವರು, ಇದೊಂದು ಜೀವಮಾನದ ಅವಕಾಶ. ವಾಕ್ ಸ್ವಾತಂತ್ರ್ಯವನ್ನು ರಕ್ಷಿಸುವ, ಕಂಪನಿಯನ್ನು ಪುನರುಜ್ಜೀವನಗೊಳಿಸುವ ಮತ್ತು ಎಕ್ಸ್ ಅನ್ನು ಎವರಿಥಿಂಗ್ ಅಪ್ಲಿಕೇಶನ್ ಆಗಿ ಅಭಿವೃದ್ಧಿಪಡಿಸಲು ಅವಕಾಶ ನೀಡಿದಕ್ಕಾಗಿ ಇಲಾನ್ ಮಸ್ ಅವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದಿದ್ದಾರೆ. 2023ರ ಜೂನ್‌ನಲ್ಲಿ ಟ್ವಿಟರ್‌ನ ಸಿಇಒ ಆಗಿ ಲಿಂಡಾ ಯಾಕಾರಿನೊ ನೇಮಕಗೊಂಡಿದ್ದರು. ಇದಕ್ಕೂ ಮುನ್ನ ಲಿಂಡಾ ಅವರು 2011ರಿಂದಲೂ ಎನ್‌ಬಿಸಿ ಯೂನಿವರ್ಸಲ್‌ನ ಜಾಹೀರಾತು ಮತ್ತು ಪಾಲುದಾರಿಕೆ ವಿಭಾಗದ ಕಾರ್ಯ ನಿರ್ವಾಹಕಿಯಾಗಿ ಕೆಲಸ ಮಾಡುತ್ತಿದ್ದರು. 2022ರಲ್ಲಿ ಟ್ವಿಟರ್ ಖರೀದಿಸಿದ್ದ ಮಸ್ಕ್, ಸಿಇಒ ಆಗಿದ್ದ ಭಾರತದ ಪರಾಗ್ ಅಗರ್‌ವಾಲ್ ಅವರನ್ನು ವಜಾಗೊಳಿಸಿ ತಾವೇ ಅಧಿಕಾರ ವಹಿಸಿಕೊಂಡಿದ್ದರು, ಅದಾದ ಆರು ವಾರಗಳ ಬಳಿಕ ಲಿಂಡಾ ಅಧಿಕಾರ ಸ್ವೀಕರಿದ್ದರು.

ಮಾದಕ ವಸ್ತು ಸಾಗಣೆ: ಬೆಂಗಳೂರು ನಂಟು ಪತ್ತೆ

ಹೈದರಾಬಾದ್: ಮಾದಕ ವಸ್ತುಗಳ ಸಾಗಣೆ ಮತ್ತು ಸೇವನೆಯ ದೊಡ್ಡ ಜಾಲವೊಂದನ್ನು ಭೇದಿಸಿರುವ ಹೈದರಾಬಾದ್ ಪೊಲೀಸರು ಬೆಂಗಳೂರಿನ ನಂಟರುವ ಹೋಟೆಲ್ ಮಾಲೀಕ ಸೇರಿದಂತೆ ಹಲವರನ್ನು ಬಂಧಿಸಿದ್ದಾರೆ. ಗುಪ್ತಚರ ಮಾಹಿತಿ ಆಧರಿಸಿ ಮಾದಕ ವಸ್ತುಗಳ ನಿಗ್ರಹ ಠಾಣೆ ಪೊಲೀಸರು ಜುಲೈ 7ರಂದು ಕೋಂಪಲ್ಲಿ ರೆಸ್ಟೋರೆಂಟ್ ಬಳಿ ಕಾರಿನಲ್ಲಿ ತೆರಳುತ್ತಿದ್ದ 34 ವರ್ಷದ ಸೂರ್ಯ ಅಣ್ಣಾಮನೇನಿ ಎಂಬುವರನ್ನು ಬಂಧಿಸಿ ವಿಚಾರಣೆ ನಡೆಸಿದ್ದರು. ಎಂಬಿಎ ಪದವೀಧರನೂ ಆಗಿರುವ ಕೋಂಪಲ್ಲಿಯ ಈತ ಮಲ್ನಾಡ್ ಕಿಚನ್ ಎಂಬ ರೆಸ್ಟೋರೆಂಟ್ ನಡೆಸುತ್ತಿರುವುದು ಬೆಳಕಿಗೆ ಬಂದಿದೆ. ಅಣ್ಣಾಮನೇನಿ ಈ ಹಿಂದೆ ಬೆಂಗಳೂರಿನಲ್ಲಿ ಮಾರಾಟ ಪ್ರತಿನಿಧಿಯಾಗಿ ಕೆಲಸ ಮಾಡುತ್ತಿದ್ದ, ಅನಂತರ ಹೈದರಾಬಾದ್‌ಗೆ ಬಂದಿದ್ದರು ಎನ್ನಲಾಗಿದೆ. ದೆಹಲಿಯಿಂದ ಫಾತಿಮಾ ಎಂಬ ಹೆಸರಿನಲ್ಲಿ ಕಳಿಸಲಾಗಿದ್ದ ರಟ್ಟಿನ ಬಾಕ್ಸ್‌ನಲ್ಲಿದ್ದ ಮಹಿಳೆಯರ ಹೀಲ್ಡ್ ಚಪ್ಪಲಿಯ ಒಳಗೆ ಮಾದಕ ವಸ್ತು ದೊರೆತಿತ್ತು. ಶೋಧದ ವೇಳೆ 10 ಗ್ರಾಂ ಕೊಕೇನ್, 3.2 ಗ್ರಾಂ ಗಾಂಜಾ, 1.6 ಗ್ರಾಂ ಎಕ್‌ಟಾಸಿ ಮಾತ್ರೆಯನ್ನು ವಶಕ್ಕೆ ಪಡೆಯಲಾಗಿದೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

{ನರೇಂದ್ರ ಮೋದಿ} ಪ್ರಧಾನಮಂತ್ರಿ

ಭಾರತವು ತನ್ನ ಸ್ವಾತಂತ್ರ್ಯ ಪಡೆಯುವ ಮೊದಲೇ ನಮೀಬಿಯಾದ ಸ್ವಾತಂತ್ರ್ಯ ಚಳವಳಿಯನ್ನು ಬೆಂಬಲಿಸಿತ್ತು, ವಿಶ್ವಸಂಸ್ಥೆಯಲ್ಲಿ ನೈಋತ್ಯ ಆಫ್ರಿಕಾದ ವಿಷಯವನ್ನು ಪ್ರಸ್ತಾಪಿಸಿ, ನೈಋತ್ಯ ಆಫ್ರಿಕಾ ಪೀಪಲ್ಸ್ ಆರ್ಗನೈಸೇಶನ್ ಅನ್ನು ಬೆಂಬಲಿಸಿತು. ಸಂವಿಧಾನದಿಂದಾಗಿ ನನ್ನಂತಹ ಬಡ ಕುಟುಂಬದಲ್ಲಿ ಜನಿಸಿದ ವ್ಯಕ್ತಿಗೆ ಸತತ ಮೂರನೇ ಬಾರಿಗೆ ಪ್ರಧಾನಿಯಾಗುವ ಅವಕಾಶ ಸಿಕ್ಕಿದೆ.

ಸ್ತ್ರೀ ಸಮುದಾಯ, ತೃತೀಯ ಲಿಂಗಿ ಸಮುದಾಯಗಳ ಕ್ಷಮೆಯಾಚಿಸಲು ಒತ್ತಾಯ | ಕಾಂಗ್ರೆಸ್‌ನದ್ದು ದುಶ್ಯಾಸನ, ಧೃತರಾಷ್ಟ್ರನ ಸಂಸ್ಕೃತಿ

ಹರಿಪ್ರಸಾದ್ ಅರ್ಧನಾರೀಶ್ವರ ಹೇಳಿಕೆ: ಬಿಜೆಪಿ ಕಿಡಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾಗಿ ಅರ್ಧನಾರೀಶ್ವರರನ್ನು ಹುಡುಕಿಕೊಳ್ಳಲಿ ಎಂದು ಲೇವಡಿ ಮಾಡಿದ್ದ ಕಾಂಗ್ರೆಸ್ ನಾಯಕ ಬಿ.ಕೆ. ಹರಿಪ್ರಸಾದ್ ಹೇಳಿಕೆಗೆ ಕಿಡಿಕಿಡಿಯಾಗಿರುವ ರಾಜ್ಯ ಬಿಜೆಪಿ, ಕೂಡಲೇ ಸ್ತ್ರೀ ಸಮುದಾಯ ಹಾಗೂ ತೃತೀಯ ಲಿಂಗಿ ಸಮುದಾಯದ ಕ್ಷಮೆ ಯಾಚಿಸುವಂತೆ ಒತ್ತಾಯಿಸಿದೆ.

ನಮ್ಮ ಸ್ಥಾನಮಾನಗಳ ಬಗ್ಗೆ ನೀವು ತಲೆಕೆಡಿಸಿಕೊಳ್ಳುವುದು ಬೇಡ. ಭಾರತೀಯ ಜನತಾ ಪಾರ್ಟಿಯಲ್ಲಿ ಕಾರ್ಯಕರ್ತ ಎಂಬುದೇ ಬಹುದೊಡ್ಡ ಹುದ್ದೆ, ಅದಕ್ಕಿಂತ ದೊಡ್ಡ ಸ್ಥಾನಮಾನ ಮತ್ತೊಂದು ಇಲ್ಲ ಎಂದು ಭಾವಿಸುವುದೇ ನಮ್ಮ ಪಕ್ಷ ನಮಗೆ ಕಲಿಸಿಕೊಟ್ಟಿರುವ ಶಿಸ್ತು ಹಾಗೂ ಸಂಸ್ಕಾರ, ಈ ಕಾರಣಕ್ಕಾಗಿಯೇ ನಮಗೆ ದೊರೆಯುವ ಪ್ರತಿಯೊಂದು ಅವಕಾಶಗಳನ್ನು ಜವಾಬ್ದಾರಿ ಎಂದು ಪರಿಗಣಿಸಿ ನಮ್ಮನ್ನು ಆ ನಿಟ್ಟಿನಲ್ಲಿ ಸಮರ್ಪಿಸಿಕೊಳ್ಳುತ್ತೇವೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಕಾಂಗ್ರೆಸ್‌ನಲ್ಲಿನ ರಾಜಕಾರಣದ ಬಗ್ಗೆ ತಿರುಗೇಟು ನೀಡಿದ್ದಾರೆ.

ಈ ಸಂಬಂಧ ಸಾಮಾಜಿಕ ಜಾಲತಾಣದಲ್ಲಿ ಉತ್ತರ ನೀಡಿರುವ ವಿಜಯೇಂದ್ರ, ಪ್ರಧಾನಮಂತ್ರಿ ಸ್ಥಾನವನ್ನು ಪ್ರಧಾನ ಸೇವಕ ಎಂದು ಪರಿಗಣಿಸಿ ತಮನ್ನು ದೇಶಕ್ಕಾಗಿ ಸಮರ್ಪಿಸಿಕೊಂಡವರು ಹೆಮ್ಮೆಯ ಪ್ರಧಾನಿ. ಅದು ನಮ್ಮ ಭಾರತೀಯ ಜನತಾ ಪಾರ್ಟಿಯ ಪರಮ ಧ್ಯೇಯ. ದಯೆ ಇಲ್ಲದ ಧರ್ಮ ಯಾವುದಯ್ಯಾ? ದಯವೇ ಧರ್ಮದ ಮೂಲವಯ್ಯಾ...ಎಂಬ ಬಸವಣ್ಣನವರ ತತ್ವ ಆಧರಿಸಿ ಸಕಲ ಜೀವರಾಶಿಗಳಿಗೆಲ್ಲ ನೆರಳು ನೀಡುವ ಸಂಕಲ್ಪ ಹೊತ್ತ ಬೃಹತ್ ರಾಜಕೀಯ ವೃಕ್ಷ ನಮ್ಮ ಭಾರತೀಯ ಜನತಾ ಪಾರ್ಟಿ ಎಂದಿದ್ದಾರೆ.

ಬಿ.ಕೆ.ಹರಿಪ್ರಸಾದ್ ತುಳಿತಕ್ಕೊಳಗಾದ ಜನಾಂಗಕ್ಕೆ ಅಪಮಾನ ಮಾಡಿದ್ದಾರೆ. ಬಿಜೆಪಿಯಲ್ಲಿ ವಂಶಪಾರಂಪರ್ಯವಾಗಿ ಅಧ್ಯಕ್ಷರನ್ನು ಘೋಷಣೆ ಮಾಡುವ ಕ್ರಮವಿಲ್ಲ. ಕಾಂಗ್ರೆಸ್‌ನಲ್ಲಿ ಚುನಾವಣೆ ನಡೆಯುವುದಿಲ್ಲ, ಆದರೆ ಬಿಜೆಪಿಯಲ್ಲಿ ಪ್ರಜಾಪ್ರಭುತ್ವವಿದೆ.

-ಆರ್.ಅಶೋಕ, ಪ್ರತಿಪಕ್ಷ ನಾಯಕ

ದೇಶದ ನಾರಿಯರಿಗೆ ಮಾಡಿರುವಂತಹ ಅಪಮಾನ. ರಾಷ್ಟ್ರ ಮಟ್ಟದಲ್ಲಿ ಪ್ರಧಾನಿ ಆಯ್ಕೆ, ಸಂಸದರ ಆಯ್ಕೆ ರಾಜ್ಯಸಭಾ ಸದಸ್ಯರ ಆಯ್ಕೆ ಇಂತಹ ಚಟುವಟಿಕೆಗಳಲ್ಲಿ ಭಾಗವಹಿ ಸುತ್ತಿದ್ದ ಒಬ್ಬ ವ್ಯಕ್ತಿಯನ್ನು ಕಾಂಗ್ರೆಸ್ ಈಗ ಶೆಡ್‌ನಲ್ಲಿಟ್ಟಿದೆ.

-ಛಲವಾದಿ ನಾರಾಯಣಸ್ವಾಮಿ, ವಿಧಾನಪರಿಷತ್ ವಿಪಕ್ಷ ನಾಯಕ

ದಶಕಗಳ ಕಾಲ ಎಐಸಿಸಿ ಅಖಾಡದಲ್ಲಿ ಅಲೆದಾಡಿದವರಿಗೆ ಪ್ರತಿಸ್ಪರ್ಧಿ ರಾಜಕೀಯ ಪಕ್ಷವೊಂದರ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆ ಹೇಗೆ ನಡೆಯುತ್ತದೆ ಎಂಬ ಬಗ್ಗೆ ಸಾಮಾನ್ಯ ಜ್ಞಾನದ ಕೊರತೆ ಇರುವುದಕ್ಕೆ ಅಭಿನಂದನೆ ಸಲ್ಲಿಸುವೆ. ತತ್ವಶಾಸ್ತ್ರದ ಮಹೋನ್ನತ ಚಿಂತನೆಯೊಂದನ್ನು ಅಣಕ ಮಾಡಲಾಗಿದೆ.

-ಸುನೀಲ್ ಕುಮಾರ್, ಶಾಸಕ

ಮಂಜಮ್ಮ ಜೋಗತಿ ಅವರನ್ನು ಗುರುತಿಸಿ ಕರ್ನಾಟಕದ ಸಾಂಸ್ಕೃತಿಕ ಹಿರಿಮೆ ಪ್ರತಿನಿಧಿಸುವ ಜಾನಪದ ಅಕಾಡೆಮಿಯ ಅಧ್ಯಕ್ಷರನ್ನಾಗಿಸಿ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಿ ಲಿಂಗತಾರತಮ್ಯ ಮೆಟ್ಟಿನಿಂತು ಒಟ್ಟು ಸಮಾಜದ ಕಲ್ಪನೆಯ ದೇಶ ಕಟ್ಟುವ ಸಂಕಲ್ಪ ಸಾಕ್ಷೀಕರಿಸಿದ ಪಕ್ಷ ನಮ್ಮದು. ಅರ್ಹತೆ ಇರುವ ಪ್ರತಿಯೊಬ್ಬರನ್ನು ಗುರುತಿಸಿ, ಗೌರವಿಸಿ ಜವಾಬ್ದಾರಿ ಸ್ಥಾನಗಳನ್ನು ನೀಡುವ ಆದರ್ಶ ನಾವು ಅಳವಡಿಸಿಕೊಂಡಿದ್ದೇವೆ. ಆದಿವಾಸಿ ಬುಡಕಟ್ಟು ಮೂಲದ ದ್ರೌಪದಿ ಮುರ್ಮು ಅವರನ್ನು ರಾಷ್ಟ್ರಾಧ್ಯಕ್ಷ ಹುದ್ದೆಯಲ್ಲಿ ಕೂರಿಸಿ ಸಂವಿಧಾನದ ಆಶಯ ಪ್ರಜಾಪ್ರಭುತ್ವದ ಸುಂದರತೆಯನ್ನು ವಿಶ್ವಕ್ಕೆ ಪಸರಿಸಿದ ಹೆಗ್ಗಳಿಕೆ ನಮ್ಮದು. ನಿರ್ಮಲ ಸೀತಾರಾಮನ್‌ರವರಂತಹ ಸಮರ್ಥ ವಿತ್ತ ಸಚಿವೆ ದೇಶಕ್ಕೆ ಕೊಟ್ಟ ಹೆಮ್ಮೆ ನಮ್ಮದು, ಇಂತಹ ಉದಾಹರಣೆಗಳು ಸಾಲು, ಸಾಲು ನಮ್ಮ ಮುಂದಿದೆ, ಭವಿಷ್ಯತ್ತಿನಲ್ಲಿ ನಾರಿಯರು, ಅರ್ಧನಾರಿಯರು ಯಾರೇ ಇರಲಿ ಅವರಿಗಾಗಿ ಅವಕಾಶದ ಬಾಗಿಲು ಭಾರತೀಯ ಜನತಾ ಪಾರ್ಟಿಯಲ್ಲಿ ಸದಾ ತೆರೆದಿರುತ್ತದೆ ಎಂದಿದ್ದಾರೆ.

ಇದಲ್ಲದೆ ಹಿಂಬಾಗಿಲಿನಿಂದ ತಲೆ ತೂರಿಸಿ ಬರುವ ನಾಮಿನೇಷನ್ ರಾಜಕಾರಣಿ ಎಂದು ನಿಮ್ಮ ಪಕ್ಷದವರಿಂದಲೇ ಕುಹಕವಾಡಿಸಿಕೊಳ್ಳುವ ಬಿ.ಕೆ. ಹರಿಪ್ರಸಾದ್, ನೀವು ಎಂದೂ ಜನರಿಂದ ಆಯ್ಕೆಯಾದವರಲ್ಲ, ನಿಮ್ಮಿಂದ ಸಮುದಾಯದ ಬಗೆಗಿನ ಕಾಳಜಿಯ ಮಾತುಗಳನ್ನು ನಿರೀಕ್ಷಿಸುವುದು ಮೂರ್ಖತನ. ನಾರಿಯರು, ಅರ್ಧ ನಾರಿಯರ ಸಾಮರ್ಥ್ಯದ ಬಗ್ಗೆ ವ್ಯಂಗ್ಯವಾಡಿರುವ ನಿಮ್ಮ ನಡೆ ದುಶ್ಯಾಸನ ಸಂಸ್ಕೃತಿ ನೆನಪಿಸುತ್ತದೆ. ಕಾಂಗ್ರೆಸ್ ಪಕ್ಷ ಎಂದೂ ಧರ್ಮರಾಯನಂತೆ ನಡೆದುಕೊಂಡಿಲ್ಲ, ಅದೇನಿದ್ದರೂ ದುರ್ಯೋಧನ, ದುಶ್ಯಾಸನರನ್ನು ಪೋಷಿಸುವ ಧೃತರಾಷ್ಟ್ರನ ಸಂಸ್ಕೃತಿ ಎಂಬುದು ದೇಶಕ್ಕೆ ತಿಳಿದ ವಿಷಯವಾಗಿದೆ. ನೀವು ವ್ಯಂಗ್ಯವಾಡಿ ಅಪಮಾನಿಸಿದ ನಾರಿಯರು, ಅರ್ಧ ನಾರಿಯರು ಭವಿಷ್ಯತ್ತಿನಲ್ಲಿ ಅತ್ಯುನ್ನತ ಸ್ಥಾನಗಳನ್ನು ಅಲಂಕರಿಸುವ ಅವಕಾಶಗಳು ಇರುವುದು ಭಾರತೀಯ ಜನತಾ ಪಾರ್ಟಿಯಲ್ಲಿ ಮಾತ್ರ. ನಿಮ್ಮ ನಾಲಿಗೆಯಿಂದ ಹೊರ ಬಿದ್ದಿರುವ ಮಾತುಗಳು ಮಹಿಳೆಯರು ಹಾಗೂ ಮಂಗಳಮುಖಿಯರಿಗಷ್ಟೇ ಅಪಮಾನಿಸಿಲ್ಲ ಅದು ಭಾರತದ ಸಂಸ್ಕೃತಿಯನ್ನೂ ಅವಹೇಳನ ಮಾಡಿದಂತಾಗಿದೆ. ಹೀಗಾಗಿ ಕೂಡಲೇ ಸ್ತ್ರೀ ಸಮುದಾಯ ಹಾಗೂ ತೃತೀಯ ಲಿಂಗಿ ಸಮುದಾಯಗಳ ಕ್ಷಮೆ ಯಾಚಿಸಿ ಎಂದು ಆಗ್ರಹಿಸಿದ್ದಾರೆ.

ಒಟ್ಟು 84 ಪಿಲ್ಲರ್‌ಗಳ ನಿರ್ಮಾಣದ ಪೈಕಿ 70 ಪಿಲ್ಲರ್‌ಗಳ ಕಾಮಗಾರಿ ಪೂರ್ಣ | ಮೂಲ ವೆಚ್ಚಕ್ಕಿಂತ 48.02 ಕೋಟಿ ರು. ಹೆಚ್ಚು

ವರ್ಷಾಂತ್ಯಕ್ಕೆ ಈಜಿಪುರ ಮೇಲ್ಸೆತುವೆ ವಾಹನ ಸಂಚಾರ ಮುಕ್ತ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ನಗರದ ಈಜಿಪುರ ಮೇಲ್ಸೇತುವೆ ಕಾಮಗಾರಿಯು ಈ ವರ್ಷಾಂತ್ಯಕ್ಕೆ ಪೂರ್ಣಗೊಂಡು ವಾಹನ ಸಂಚಾರ ಆರಂಭವಾಗುವ ಸಾಧ್ಯತೆಯಿದೆ.

2.3 ಕಿ.ಮೀ ಉದ್ದ ದ ಈ ಮೇಲ್ಸೇತುವೆಯು ಕೋರಮಂಗಲದ ಸಂಚಾರ ದಟ್ಟಣೆಗೆ ಅಂತ್ಯ ಹಾಡಲಿದ್ದು, ಈಗಾಗಲೇ ಶೇ.60ರಷ್ಟು ಕಾಮಗಾರಿಯು ಪೂರ್ಣಗೊಂಡಿದೆ. ಬಾಕಿ ಉಳಿದಿರುವ ಕಾಮಗಾರಿಯನ್ನು ಶೀಘ್ರವೇ ಪೂರ್ಣಗೊಳಿಸಿ ಮೇಲ್ಸೇತುವೆಯನ್ನು ಸಂಚಾರಕ್ಕೆ ಮುಕ್ತಗೊಳಿಸುವಂತೆ ಸೂಚನೆ ನೀಡಲಾಗಿದೆ. ಮೇಲ್ಸೇತುವೆಯ ಬಾಕಿ ಕಾಮಗಾರಿ ಗುತ್ತಿಗೆಯನ್ನು ಹೈದರಾಬಾದ್ ಮೂಲದ ಬಿಎಸ್‌ಸಿಪಿಎಲ್ ಪ್ರೈವೇಟ್ ಲಿಮಿಟೆಡ್‌ಗೆ ನೀಡಲಾಗಿದ್ದು, 2023ರ ನ.15ರಂದು ಕಾರ್ಯಾದೇಶ ನೀಡಿ, 15 ತಿಂಗಳಲ್ಲಿ ಕೆಲಸ ಪೂರ್ಣಗೊಳಿಸಬೇಕೆಂಬ ಷರತ್ತು ವಿಧಿಸಲಾಗಿತ್ತು.

ಆದರೆ ಈ ಕಂಪನಿಯು ಕಾಮಗಾರಿಯನ್ನು ಪೂರ್ಣಗೊಳಿಸುವಲ್ಲಿ ವಿಳಂಬ ಧೋರಣೆಯನ್ನು ತೋರಿತ್ತು. ಬಿಬಿಎಂಪಿ ಹಾಗೂ ಹೊಸ ಗುತ್ತಿಗೆದಾರರ ನಡುವಿನ ಸಮನ್ವಯ ಕೊರತೆಯಿಂದ ಕಾಮಗಾರಿ ಕುಂಟುತ್ತಾ ಸಾಗಿತ್ತು. ಕಾಮಗಾರಿ ವಿಳಂಬ ಸಂಬಂಧ ಪಾಲಿಕೆ ಅಧಿಕಾರಿಗಳು ಗುತ್ತಿಗೆ ಕಂಪನಿಗೆ ಎರಡು ಸಲ ನೋಟಿಸ್ ನೀಡಿದ್ದರು. ಅಲ್ಲದೆ, ಗುತ್ತಿಗೆ ರದ್ದುಪಡಿಸುವುದಾಗಿ ಸಿಎಂ ಸಿದ್ದರಾಮಯ್ಯ ಕೂಡ ಎಚ್ಚರಿಕೆ

ನೀಡಿದ್ದರು. ಈ ಎಲ್ಲದರ ಬೆನ್ನಲ್ಲೇ ಕಾಮಗಾರಿ ಚುರುಕುಗೊಂಡಿದೆ. ಪಿಲ್ಲರ್ ನಿರ್ಮಾಣ ಮತ್ತು ಸೆಗ್‌ಮೆಂಟ್ ಅಳವಡಿಸಿರುವ ಕಡೆ ಬ್ಯಾರಿಕೇಡ್‌ಗಳನ್ನು ತೆರವುಗೊಳಿಸಿ, ಸುಗಮ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಗುತ್ತಿದೆ.

ಶೇ. 60ರಷ್ಟು ಕಾಮಗಾರಿ ಪೂರ್ಣ: ಈ ಮೊದಲು ಮೇಲ್ಸೇತುವೆ ನಿರ್ಮಾಣ ಕಾಮಗಾರಿ ಗುತ್ತಿಗೆಯನ್ನು ಸಿಂಪ್ಲೆಕ್ಸ್ ಇನ್ಫ್ರಾ ಸ್ಟ್ರಕ್ಚರ್ ಕಂಪನಿಗೆ ನೀಡಲಾಗಿತ್ತು. ಗುತ್ತಿಗೆ ಷರತ್ತಿನಂತೆ 2017ರ ಮೇ 4ರಂದು ಆರಂಭವಾದ ಕಾಮಗಾರಿ 2019ರ ನ.4ಕ್ಕೆ ಪೂರ್ಣಗೊಳ್ಳಬೇಕಿತ್ತು. ಆದರೆ ಕಾಮಗಾರಿ ಶುರುವಾಗಿ ಐದು ವರ್ಷ ಕಳೆದರೂ ಅರ್ಧದಷ್ಟು ಸಹ ಕೆಲಸ ಪೂರ್ಣಗೊಳಿಸಿರಲಿಲ್ಲ. ಕಾಮಗಾರಿ ಪೂರ್ಣಕ್ಕೆ ಹಲವು ಸಲ ಗಡುವು ವಿಸ್ತರಿಸಿದರೂ ಪ್ರಯೋಜನವಾಗಲಿಲ್ಲ. ಕಾಮಗಾರಿ ವಿಳಂಬದ ಹಿನ್ನೆಲೆಯಲ್ಲಿ 2.50 ಕೋಟಿ ರು. ದಂಡ ವಿಧಿಸಿ ಹೆಚ್ಚುವರಿಯಾಗಿ 25 ತಿಂಗಳು ವಿಸ್ತರಿಸಿದರೂ ಕೇವಲ ಶೇ 42.80ರಷ್ಟು ಮಾತ್ರ ಪ್ರಗತಿಯಾಗಿದೆ.

ನಗರಾಭಿವೃದ್ಧಿ ಇಲಾಖೆಯು 2022ರ ಮಾ. 3ರಂದು 10.16 ಕೋಟಿ ರು. ಭದ್ರತಾ ಠೇವಣಿ ಮುಟ್ಟುಗೋಲು ಹಾಕಿಕೊಂಡು ಸಿಂಪ್ಲೆಕ್ಸ್ ಕಂಪನಿಗೆ ನೀಡಿದ್ದ ಟೆಂಡರ್ ರದ್ದುಪಡಿಸಿ ಆದೇಶಿಸಿತ್ತು. ಇನ್ನೂ ಶೇ 57.17ರಷ್ಟು ಬಾಕಿ ಇದ್ದ ಕಾಮಗಾರಿ ಪೂರ್ಣಕ್ಕೆ ಟೆಂಡರ್ ಆಹ್ವಾನಿಸಿ, ಬಿಎಸ್‌ಸಿಪಿಎಲ್ ಕಂಪನಿಗೆ ಗುತ್ತಿಗೆ ನೀಡಲಾಗಿದೆ. ಒಟ್ಟು 84 ಪಿಲ್ಲರ್‌ಗಳ ನಿರ್ಮಾಣದ ಪೈಕಿ 70 ಪಿಲ್ಲರ್‌ಗಳ ಕಾಮಗಾರಿ ಪೂರ್ಣಗೊಂಡಿದೆ. 762 ಸೆಗ್‌ಮೆಂಟ್‌ಗಳನ್ನು ಅಳವಡಿಸಬೇಕಿದ್ದು, ಈವರೆಗೆ 325 ಸೆಗ್‌ಮೆಂಟ್‌ಗಳ ಅಳವಡಿಕೆ ಕೆಲಸ ಮುಗಿಸಲಾಗಿದೆ.

ಸಿಂಪ್ಲೆಕ್ಸ್ ಕಂಪನಿಗೆ ನೀಡಿದ್ದ ಗುತ್ತಿಗೆ ರದ್ದುಪಡಿಸಿದ ಬಳಿಕ ಕಾಮಗಾರಿ ಪೂರ್ಣಕ್ಕೆ ಮೂರು ಬಾರಿ ಟೆಂಡರ್ ಕರೆದರೂ ಯಾವುದೇ ಗುತ್ತಿಗೆ ಕಂಪನಿ ಆಸಕ್ತಿ ತೋರಲಿಲ್ಲ. 4ನೇ ಸಲ ಕರೆದ ಟೆಂಡರ್‌ನಲ್ಲಿ ಬಿಎಸ್‌ಸಿಪಿಎಲ್ ಕಂಪನಿ ಮಾತ್ರ ಬಿಡ್ ಸಲ್ಲಿಸಿತ್ತು. ಹೀಗಾಗಿ ಅದೇ ಕಂಪನಿಗೆ ಗುತ್ತಿಗೆ ನೀಡಲು ಸಚಿವ ಸಂಪುಟವು ಅನುಮೋದನೆ ನೀಡಿತು. ಮೇಲ್ಸೇತುವೆಯ ಬಾಕಿ ಕಾಮಗಾರಿ ಪೂರ್ಣಕ್ಕೆ ಜಿಎಸ್‌ಟಿ ಹೊರತುಪಡಿಸಿ 176.11 ಕೋಟಿ ರು. ವೆಚ್ಚವಾಗುತ್ತಿದ್ದು, ಮೂಲ ವೆಚ್ಚಕ್ಕಿಂತ 48.02 ಕೋಟಿ ರು. ಹೆಚ್ಚಾಗಿದೆ. ಬಾಕಿ ಕಾಮಗಾರಿಯ ಗುತ್ತಿಗೆ ಪಡೆದಿರುವ ಬಿಎಸ್‌ಸಿಪಿಎಲ್ ಕಂಪನಿಗೆ ಹಂತ- ಹಂತವಾಗಿ ಬಿಲ್ ಬಿಡುಗಡೆ ಮಾಡಲಾಗುತ್ತಿದೆ. ಈವರೆಗೆ 52.08 ಕೋಟಿ ರು. ಪಾವತಿ ಮಾಡಲಾಗಿದೆ.

8 ವರ್ಷದ ಬಳಿಕ ಕಾಮಗಾರಿಗೆ ವೇಗ

ಈಜಿಪುರ ಮೇಲ್ಸೇತುವೆ ನಿರ್ಮಾಣ ಕಾಮಗಾರಿ ಶುರುವಾಗಿ 8 ವರ್ಷ ಸಮೀಪಿಸುತ್ತಿದ್ದು, ಇದೀಗ ಶೇ.60ರಷ್ಟು ಕೆಲಸ ಪೂರ್ಣಗೊಂಡಿದೆ. ಶೇ 40ರಷ್ಟು ಕೆಲಸ ಬಾಕಿ ಇದ್ದು, ಈ ವರ್ಷಾಂತ್ಯದೊಳಗೆ ಪೂರ್ಣಗೊಳಿಸುವ ಗುರಿ ಹಾಕಿಕೊಳ್ಳಲಾಗಿದೆ. ಮಡಿವಾಳ-ಈಜಿಪುರ ಕಡೆಗೆ ಡೌನ್ ಮತ್ತು ಅಪ್ ರ್‍ಯಾಂಪ್‌ಗಳನ್ನು ನಿರ್ಮಿಸಲಾಗುತ್ತಿದೆ. ಹಾಗೆಯೇ ಸರ್ಜಾಪುರ ಕಡೆಗೆ ಲೂಪ್‌ಗಳ ನಿರ್ಮಾಣ ಕಾರ್ಯವೂ ಭರದಿಂದ ಸಾಗಿದೆ.

ವಿಸ್ತೃತ ಶ್ರೇಣಿ ರಾಕೆಟ್: ಪರೀಕ್ಷೆ ಯಶಸ್ವಿ

ದೆಹಲಿ: ಜಲಾಂತರ್ಗಾಮಿಗಳ ಮೇಲಿನ ದಾಳಿಗೆ ಬಳಸುವ ಕ್ಷಿಪಣಿಗಳನ್ನು ಹೊಡೆದುರುಳಿಸಲು ಸ್ಥಳೀಯವಾಗಿ ಅಭಿವೃದ್ಧಿಪಡಿಸಿರುವ ವಿಸ್ತೃತ ಶ್ರೇಣಿಯ ರಾಕೆಟ್‌ಗಳ ವ್ಯವಸ್ಥೆಯ (ಇಆರ್‌ಎಎಸ್‌ಆರ್) ಪರೀಕ್ಷೆ ಯಶಸ್ವಿಯಾಗಿದೆ. ಜೂನ್ 23ರಿಂದ ಜುಲೈ 7ರ ವರೆಗೆ ಯುದ್ಧನೌಕೆ ಐಎನ್‌ಎಸ್ ಕವರತ್ತಿ ಮೂಲಕ ಭಾರತೀಯ ನೌಕಾಪಡೆಯು ಈ ಪರೀಕ್ಷೆ ನಡೆಸಿದೆ. ಈ ರಾಕೆಟ್ ವ್ಯವಸ್ಥೆಯು ಭಾರತೀಯ ನೌಕಾಪಡೆಯ ಬಲ ಹೆಚ್ಚಿಸುವಲ್ಲಿ ಮಹತ್ತರ ಪಾತ್ರ ವಹಿಸಲಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮಾಹಿತಿ ನೀಡಿದ್ದಾರೆ.

ಗೋಲ್ಡನ್ ವೀಸಾ: ವರದಿ ತಳ್ಳಿಹಾಕಿದ ಯುಎಇ

ದುಬೈ: ಗೋಲ್ಡನ್ ವೀಸಾ ವಿತರಣೆಗೆ ಸಂಬಂಧಿಸಿ ಅರ್ಜಿಗಳ ಪರಿಶೀಲನೆ ಹಾಗೂ ವಿಲೇವಾರಿ ಪ್ರಕ್ರಿಯೆಗೆ ಯುಎಇ ಅಧಿಕಾರಿಗಳು ಚಾಲನೆ ನೀಡಿದ್ದಾರೆ ಎಂಬುದಾಗಿ ಕೆಲ ಮಾಧ್ಯಮಗಳು ವರದಿ ಮಾಡಿವೆ. ಆದರೆ ಇಂತಹ ಯಾವ ಪ್ರಕ್ರಿಯೆಯೂ ನಡೆಯುತ್ತಿಲ್ಲ. ಈ ಪ್ರಕ್ರಿಯೆ ಮೂಲಕ ಗೋಲ್ಡನ್ ವೀಸಾ ಪಡೆಯಬಹುದು ಎಂದು ತಪ್ಪಾಗಿ ಅರ್ಥೈಸಲಾಗಿದೆ ಎಂದು ಯುಎಇ ಫೆಡರಲ್ ಪೌರತ್ವ, ಕಸ್ಟಮ್ಸ್ ಮತ್ತು ಬಂದರು ಭದ್ರತಾ ಪ್ರಾಧಿಕಾರ (ಐಸಿಪಿ) ತಿಳಿಸಿದೆ.

ಖಾಸಗಿ ಮೆಡಿಕಲ್ ಲಾಬಿಗೆ ಮಣಿದಿದ್ದ ಸರಕಾರ: ಅಶೋಕ

ಬೆಂಗಳೂರು: ಜನೌಷಧಿ ಕೇಂದ್ರಗಳ ಸ್ಥಗಿತ ಕುರಿತು ಹೈಕೋರ್ಟ್ ನೀಡಿದ ಮಧ್ಯಂತರ ತಡೆ ಆದೇಶವನ್ನು ಸ್ವಾಗತಿಸುತ್ತೇನೆ, ಖಾಸಗಿ ಲಾಬಿಗೆ ಮಣಿದ ಸರಕಾರಕ್ಕೆ ಹಿನ್ನಡೆಯಾಗಿದೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಜನೌಷಧಿ ಕೇಂದ್ರಗಳ ಸ್ಥಗಿತದ ಬಗ್ಗೆ ಹೈಕೋರ್ಟ್ ಮಧ್ಯಂತರ ತಡೆ ಆದೇಶ ನೀಡಿದೆ. ಖಾಸಗಿ ಮೆಡಿಕಲ್ ಫಾರ್ಮಾಗಳಿಗೆ ಅನುಕೂಲ ಮಾಡಿಕೊಡಲು ಸರಕಾರ ಜನೌಷಧಿ ಕೇಂದ್ರಗಳನ್ನು ಮುಚ್ಚಿತ್ತು. ಖಾಸಗಿ ಲಾಬಿಗೆ ಮಣಿದ ರಾಜ್ಯ ಸರಕಾರಕ್ಕೆ ಈಗ ಹಿನ್ನಡೆಯಾಗಿದೆ. ಇನ್ನಾದರೂ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವರು ಜನರಿಗೆ ಏನು ಬೇಕೆಂದು ಅರಿತು ಕೆಲಸ ಮಾಡಬೇಕಿದೆ ಎಂದರು.

ಸರಕಾರಿ ಆಸ್ಪತ್ರೆಗಳಲ್ಲಿ 260-270 ಔಷಧಿಗಳನ್ನು ನೀಡಬೇಕಾಗುತ್ತದೆ. ಆದರೆ ಅಷ್ಟೊಂದು ಔಷಧಿ ಇಲ್ಲ. ಔಷಧಿಗಳು ಜನೌಷಧಿ ಕೇಂದ್ರಗಳಲ್ಲಿ ರಿಯಾಯಿತಿ ದರದಲ್ಲಿ ಲಭ್ಯವಿದೆ. ಇತ್ತೀಚೆಗೆ ಹಾಸನ ಆಸ್ಪತ್ರೆಗೆ ಹೋದಾಗ ಒಬ್ಬರೇ ಹೃದ್ರೋಗ ತಜ್ಞ ವೈದ್ಯರು ಇರುವುದು ಕಂಡುಬಂತು. ಹೃದಯ ಸಂಬಂಧಿ ರೋಗದ ತುರ್ತು ಪರಿಸ್ಥಿತಿಯಲ್ಲಿ ಅವರು ಇಂಜೆಕ್ಷನ್ ಕೊಟ್ಟು ಬೆಂಗಳೂರಿಗೆ ಕಳಿಸುತ್ತಾರೆ. ಇಂತಹ ಸ್ಥಿತಿಯಲ್ಲಿ ಜನೌಷಧಿ ಕೇಂದ್ರಗಳನ್ನು ಮುಚ್ಚಿದರೆ ಬಹಳ ಸಮಸ್ಯೆಯಾಗುತ್ತದೆ ಎಂದರು.

ಜೈಲಿನಲ್ಲೇ ಭಯೋತ್ಪಾದಕರಿಗೆ ಅನುಕೂಲ ಮಾಡಿಕೊಡಲಾಗಿದೆ. ಗೃಹ ಇಲಾಖೆ ಸತ್ತೇ ಹೋಗಿದೆ. ರಾಜ್ಯ ಸರಕಾರ ಕೂಡಲೇ ಬಾಂಗ್ಲಾ ಹಾಗೂ ಪಾಕ್ ಪ್ರಜೆಗಳನ್ನು ಹೊರಕ್ಕೆ ಕಳಿಸಬೇಕು. ಇದಕ್ಕಾಗಿ ವಿಶೇಷ ಪಡೆ ರಚಿಸಬೇಕು. ಇಲ್ಲೂ ವೋಟ್ ಬ್ಯಾಂಕ್ ರಾಜಕೀಯ ಮಾಡಬಾರದು, ಕೈದಿಗಳ ಚಲನವಲನಗಳ ಬಗ್ಗೆ ನಿಗಾ ಇರಿಸಲು ಕ್ರಮ ವಹಿಸಬೇಕು. ಜೈಲಿನಲ್ಲಿ ಮೊಬೈಲ್ ಬಳಕೆ ತಡೆಗಟ್ಟಬೇಕು ಎಂದು ಆಗ್ರಹಿಸಿದರು.

ಬಿಜೆಪಿಯಿಂದ ಆಧಾರ್ ಕಾರ್ಡ್, ಮತದಾನದ ಗುರುತಿನ ಚೀಟಿ ದಾಖಲೆಗಳ ಪರಿಶೀಲನೆ

ಬಾಂಗ್ಲಾ ಪ್ರಜೆಗಳನ್ನು ಪತ್ತೆ ಹಚ್ಚಲು ಅಭಿಯಾನ

ವಿಶ್ವವಾಣಿ ಸುದ್ದಿಮನೆ ಮಹದೇವಪುರ

ಮಹದೇವಪುರ ಕ್ಷೇತ್ರದ ವ್ಯಾಪ್ತಿಯಲ್ಲಿ ಅಕ್ರಮವಾಗಿ ನೆಲೆಸಿರುವ ಬಾಂಗ್ಲಾದೇಶದ ಪ್ರಜೆಗಳನ್ನು ಪತ್ತೆಹಚ್ಚುವ ಉದ್ದೇಶದಿಂದ ಮಾಜಿ ಸಚಿವ ಅರವಿಂದ ಲಿಂಬಾವಳಿ ನೇತೃತ್ವದಲ್ಲಿ ಮಹದೇವಪುರ ಬಿಜೆಪಿ ಕಾರ್ಯಕರ್ತರು ವಿವಿಧ ಸ್ಥಳಗಳಲ್ಲಿ ಅಭಿಯಾನ ಕೈಗೊಂಡರು.

ಕ್ಷೇತ್ರದ ಬಳಗೆರೆ, ಗುಂಜೂರುಪಾಳ್ಯ, ಪಣತ್ತೂರು, ತೂಬರಹಳ್ಳಿ, ಸಿದ್ದಾಪುರ ಸೋರಹುಣಸೆ, ಮಾರತ್ತಹಳ್ಳಿ, ಬೆಳ್ಳಂದೂರು ಹಾಗೂ ವಿವಿಧ ಭಾಗಗಳ ಖಾಲಿ ಸ್ಥಳಗಳಲ್ಲಿ ಅಕ್ರಮವಾಗಿ ಶೇಡ್ ಗಳನ್ನು ನಿರ್ಮಿಸಿಕೊಂಡು ವಾಸಿಸುತ್ತಿರುವ ಸ್ಥಳಗಳಿಗೆ ಭೇಟಿ ನೀಡಿ ಆಧಾರ್ ಕಾರ್ಡ್, ಮತದಾನದ ಗುರುತಿನ ಚೀಟಿ ಸೇರಿದಂತೆ ಕೆಲವು ದಾಖಲೆಗಳನ್ನು ಪರಿಶೀಲನೆ ನಡೆಸಿದರು.

ನಂತರ ಮಾತನಾಡಿದ ಬಿಜೆಪಿ ರಾಜ್ಯ ಪರಿಷತ್ ಸದಸ್ಯ ಎಲ್.ರಾಜೇಶ್, ಮಹದೇವಪುರ ಕ್ಷೇತ್ರದಲ್ಲಿ ಅಕ್ರಮವಾಗಿ ನೆಲೆಸಿರುವ ಬಾಂಗ್ಲಾ ಪ್ರಜೆಗಳನ್ನು ಗುರುತಿಸಿ ಅವರ ದೇಶಕ್ಕೆ ವಾಪಾಸು ಕಳಿಸಲು ಮಾಜಿ ಸಚಿವ ಅರವಿಂದ ಲಿಂಬಾವಳಿ ನೇತೃತ್ವದಲ್ಲಿ ಆಂದೋಲನ ಕೈಗೊಂಡಿದ್ದೇವೆ. ಕ್ಷೇತ್ರದಲ್ಲಿ ಬಾಂಗ್ಲಾ ಪ್ರಜೆಗಳನ್ನು ಪತ್ತೆಹಚ್ಚುವ ಉದ್ದೇಶದಿಂದ ಪ್ರತ್ಯೇಕವಾಗಿ ನಾಲ್ಕು ತಂಡಗಳನ್ನು ರಚನೆ ಮಾಡಲಾಗಿದೆ. ನಮ್ಮ ದೇಶದ ಸುರಕ್ಷತೆಯ ಭದ್ರತೆ ದೃಷ್ಟಿಯಿಂದ ಅಕ್ರಮವಾಗಿ ನೆಲೆಸಿರುವ ಬಾಂಗ್ಲಾ ಪ್ರಜೆಗಳನ್ನು ಪತ್ತೆ ಹಚ್ಚಿ ಅವರ ದೇಶಕ್ಕೆ ವಾಪಸ್ ಕಳಿಸಲಾಗುವುದು ಮೂಲ ಉದ್ದೇಶವಾಗಿದೆ ಎಂದು ಹೇಳಿದರು. ಭಾರತದಲ್ಲಿ ಎರಡು ಕೋಟಿ ಗೂ ಹೆಚ್ಚು ಮಂದಿ ಬಾಂಗ್ಲಾದೇಶದವರು ಅಕ್ರಮವಾಗಿ ವಾಸವಾಗಿದ್ದು ಅವರನ್ನು ವಾಪಸ್ ಕಳಿಸುವ ಕೆಲಸ ಎಲ್ಲರೂ ಸೇರಿ ಮಾಡಬೇಕಿದೆ ಎಂದರು. ಬಿಜೆಪಿ ಬೆಂಗಳೂರು ಕೇಂದ್ರ ಪ್ರಧಾನ ಕಾರ್ಯದರ್ಶಿ ಮಹೇಂದ್ರ ಮೋದಿ ಮಾತ ನಾಡಿ, ಕಡಿಮೆ ಸಂಬಳ ನೀಡುವ ಮೂಲಕ ಕೆಲವರು ಬಾಂಗ್ಲಾ ಪ್ರಜೆಗಳಿಗೆ ಆಶ್ರಯ ನೀಡಿ ದ್ದಾರೆ. ಹಲವಾರು ಭಾಗಗಳಲ್ಲಿ ಖಾಲಿ ಜಾಗ ಗಳಲ್ಲಿ ಶೆಡ್ ನಿರ್ಮಿಸಿಕೊಂಡಿದ್ದು ಯಾವುದೇ ಸ್ಥಳಗಳಿಗೆ ಭೇಟಿ ನೀಡಿ ದಾಖಲೆ ಪರಿಶೀಲನೆ ನಡೆಸಿದ ವೇಳೆ ನಕಲಿ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುವುದು ಕಂಡು ಬಂರುತ್ತಿದೆ. ಕೇಂದ್ರ ಸರಕಾರ ಅಕ್ರಮ ಬಾಂಗ್ಲಾ ವಲಸಿಗರ ಬಗ್ಗೆ ಮಾಹಿತಿ ಕಲೆ ಹಾಕಿ ವಾಪಸು ಕಳುಹಿ ಸಲು ಮುಂದಾಗಿದೆ.

ಈ ಸಂದರ್ಭದಲ್ಲಿ ಬಿಜೆಪಿ ಬೆಂಳೂರು ಕೇಂದ್ರ ಪ್ರಧಾನ ಕಾರ್ಯದರ್ಶಿ ಮಹೇಂದ್ರ ಮೋದಿ, ಮಾಜಿ ನಗರ ಮಂಡಲ ಅಧ್ಯಕ್ಷ ಮನೋಹರರೆಡ್ಡಿ ಮತ್ತಿತರರಿದ್ದರು.

ಬಾಂಗ್ಲಾದೇಶದ ಪ್ರಜೆಗಳನ್ನು ಪತ್ತೆಹಚ್ಚುವ ಉದ್ದೇಶದಿಂದ ಮಾಜಿ ಸಚಿವ ಅರವಿಂದ ಲಿಂಬಾವಳಿ ನೇತೃತ್ವದಲ್ಲಿ ಬಿಜೆಪಿ ಬೆಂಗಳೂರು ಕೇಂದ್ರ ಪ್ರಧಾನ ಕಾರ್ಯದರ್ಶಿ ಮಹೇಂದ್ರ ಮೋದಿ, ಬಿಜೆಪಿ ರಾಜ್ಯ ಪರಿಷತ್ ಸದಸ್ಯ ಎಲ್.ರಾಜೇಶ್, ಮಾಜಿ ನಗರ ಮಂಡಲ ಅಧ್ಯಕ್ಷ ಮನೋಹರರೆಡ್ಡಿ ಹಾಗೂ ಬಿಜೆಪಿ ಕಾರ್ಯಕರ್ತರು ವಿವಿಧ ಸ್ಥಳಗಳಲ್ಲಿ ದಾಖಲೆಗಳ ಪರಿಶೀಲನೆ ನಡೆಸಿದರು.

ಕೇಂದ್ರ ಸರಕಾರದ ಕಾರ್ಯಕ್ಕೆ ಕೈಜೋಡಿಸಿ ಅಕ್ರಮವಾಗಿ ನೆಲೆಸಿರುವ ಬಾಂಗ್ಲಾ ವಲಸಿಗರನ್ನು ಕಳಿಸುವ ಹೋರಾಟವನ್ನು ಮಾಜಿ ಸಚಿವ ಅರವಿಂದ ಲಿಂಬಾವಳಿರವರು ಕೈಗೊಂಡಿದ್ದು ಜು.13ರಂದು ರಾಮಗೊಂಡನಹಳ್ಳಿಯ ಸರಕಾರಿ ಶಾಲಾ ಮೈದಾನದಲ್ಲಿ ಜನಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ಹಲವಾರು ರಾಜ್ಯ ನಾಯಕರು ಭಾಗವಹಿಸಲಿದ್ದಾರೆ.

-ಮಹೇಂದ್ರ ಮೋದಿ, ಬೆಂಗಳೂರು ಕೇಂದ್ರ ಪ್ರಧಾನ ಕಾರ್ಯದರ್ಶಿ

ವಾಹನದ ಮೇಲಿನ ವ್ಯಾಮೋಹ | ನಗರದ ರಸ್ತೆಗಳ ಸಾಮರ್ಥ್ಯಕ್ಕಿಂತಲೂ ವಾಹನಗಳ ಸಂಖ್ಯೆ ಹೆಚ್ಚು

ಬೆಂಗಳೂರಿನ ರಸ್ತೆಗಿಳಿದ 3 ಲಕ್ಷ ಹೊಸ ವಾಹನಗಳು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ನಗರದಲ್ಲಿ ಸ್ವಂತ ವಾಹನಗಳ ಬಳಕೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಕಳೆದ ಆರು ತಿಂಗಳಲ್ಲಿ 3 ಲಕ್ಷ ಹೊಸ ವಾಹನಗಳು ರಸ್ತೆಗಿಳಿದಿವೆ. ನಗರದಲ್ಲಿ ಸಾರ್ವಜನಿಕ ವಾಹನಗಳ ಬಳಕೆಗಿಂತ ಸ್ವಂತ ವಾಹನಗಳನ್ನು ಬಳಸುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಕಳೆದ ಆರು ತಿಂಗಳಿನಲ್ಲಿ ಮೂರು ಲಕ್ಷ ಹೊಸ ಖಾಸಗಿ ವಾಹನಗಳು ರಸ್ತೆಗಿಳಿದಿದೆ. ಇದಕ್ಕೆ ಪೂರಕವಾಗಿ ಬ್ಯಾಂಕ್‌ಗಳಲ್ಲಿ ಸಾಲಗಳು ಸರಳವಾಗಿ ದೊರೆಯುತ್ತಿರುವುದರಿಂದ ಜನರಿಗೆ ಸ್ವಂತ ವಾಹನ ಖರೀದಿಯು ಮತ್ತಷ್ಟು ಸುಲಭವಾಗಿದೆ, ಜತೆಗೆ ಆದಾಯ ಹೆಚ್ಚಿ ದಂತೆ ಹೊಸ ಕಾರು, ಬೈಕ್ ಖರೀದಿಗೆ ಜನರು ಒಲವು ತೋರುತ್ತಿದ್ದು, ಮತ್ತೊಂದಷ್ಟು ಜನರು ವಾಹನದ ಮೇಲಿನ ವ್ಯಾಮೋಹದಿಂದ ಒಂದರ ಜತೆಗೆ ಮತ್ತೊಂದು ಇರಲಿ, ಸ್ಥಳೀಯವಾಗಿ ಒಂದು ವಾಹನವಾದರೆ, ದೂರದ ಸುಖಕರ ಪ್ರಯಾಣಕ್ಕೆ ಸುಸಜ್ಜಿತ ವಾಹನವಿರಲಿ ಎಂದು ಖರೀದಿ ಮಾಡುತ್ತಿರುವುದ ರಿಂದ ನಗರದಲ್ಲಿ ವಾರ್ಷಿಕವಾಗಿ ರಸ್ತೆಗಿಳಿಯುವ ವಾಹನಗಳ ಸಂಖ್ಯೆಯೂ ದಿನದಿಂದ ದಿನಕ್ಕೆ ಹೆಚ್ಚಾಗು ತ್ತಿದೆ. ಸಾರಿಗೆ ಇಲಾಖೆ ಮಾಹಿತಿ ಪ್ರಕಾರ, ಜೂನ್ ಒಂದೇ ತಿಂಗಳಲ್ಲೇ ಹೊಸದಾಗಿ 49,620 ಖಾಸಗಿ ವಾಹನಗಳು ನೋಂದಣಿಯಾಗಿದ್ದು, ಇದು ನಗರ ದಲ್ಲಿ ಹೆಚ್ಚುತ್ತಿರುವ ಮೂಲ ಸೌಕರ್ಯವನ್ನು ಎತ್ತಿ ತೋರಿಸುತ್ತದೆ. ಆದರೆ ರಾಜ್ಯದ ಬೇರೆ ಜಿಲ್ಲೆಹಾಗೂ ನಗರಗಳ ಚಿತ್ರಣವೇ ಬೇರೆ ಇದೆ. ಹೊರ ಜಿಲ್ಲೆ ಮತ್ತು ನಗರಗಳಲ್ಲಿ ವಾಹನಗಳ ಖರೀದಿ ಮತ್ತು ನೋಂದಣಿ ಪ್ರಮಾಣವು ಇಷ್ಟು ದೊಡ್ಡ ಪ್ರಮಾಣದಲ್ಲಿಲ್ಲ, ನಗರದ ರಸ್ತೆಗಳ ಸಾಮರ್ಥ್ಯಕ್ಕಿಂತಲೂ ವಾಹನಗಳ ಸಂಖ್ಯೆ ಹೆಚ್ಚಾಗಿದ್ದು, ಜನಸಂಖ್ಯೆಯ ಹೆಚ್ಚಳಕ್ಕೆ ಪೂರಕವಾಗಿ ವಾಹನಗಳ ಸಂಖ್ಯೆಯಲ್ಲಿಯೂ ಏರಿಕೆ ಯಾಗುತ್ತಿದೆ, ಇದರಿಂದ ಸಂಚಾರ ವ್ಯವಸ್ಥೆಯು ಹಲವು ಸಮಸ್ಯೆಗಳನ್ನು ಎದುರಿಸುವಂತಾಗಿದೆ. ನಗರದಲ್ಲಿ ಸಾರ್ವಜನಿಕ ಸಾರಿಗೆ ಮೆಟ್ರೋವು 76.9ಕಿ.ಮೀನಷ್ಟು ಬೃಹತ್ ಜಾಲವನ್ನು ಹೊಂದಿದೆ, 6,835 ಬಸ್‌ಗಳನ್ನು ಹೊಂದಿರುವ ಬಿಎಂಟಿಸಿ, ಸಾರಿಗೆಯ ಬೇಡಿಕೆಯನ್ನು ಪೂರೈಸುವ ಒತ್ತಡ ದಲ್ಲಿದ್ದರೂ ನಗರದಲ್ಲಿ ವಾಹನದಟ್ಟಣೆ ಇದೆ, ಇದರಿಂದಾಗಿ ಸಂಚಾರ ವ್ಯವಸ್ಥೆಯು ಸಂಪೂರ್ಣ ಹದಗೆಟ್ಟಿದೆ.

ವರದಿ ಪ್ರಕಾರ, ಜೂನ್ ತಿಂಗಳಲ್ಲಿ ಅತಿ ಹೆಚ್ಚು ವಾಹನ ದಟ್ಟಣೆ ಉಂಟಾಗಿದೆ. ಸರಾಸರಿ ದೈನಂದಿನ ವಾಹನ ದಟ್ಟಣೆಯ ಉದ್ದ 189.6 ಕಿ.ಮೀ. ಆಗಿದ್ದು, ಜೂನ್ 11ರಂದು ತಿಂಗಳ ಅತಿ ಹೆಚ್ಚು ಟ್ರಾಫಿಕ್ ಜಾಮ್ (2,377 ಕಿ.ಮೀ.) ಕಂಡುಬಂದಿದೆ. ಹೆಬ್ಬಾಳ, ಬೆಳ್ಳಂದೂರು, ವರ್ತೂರು ಮುಖ್ಯ ರಸ್ತೆ ಮತ್ತು ಹೊರ ವರ್ತುಲ ರಸ್ತೆಯಲ್ಲಿ ಭಾರಿ ಸಂಚಾರ ದಟ್ಟಣೆಯುಂಟಾಗಿದೆ.

2026: 5 ಲಕ್ಷ ಹೊಸ ವಾಹನ

ವಾಹನಗಳ ನೋಂದಣಿ ಇದೇ ರೀತಿ ಮುಂದುವರಿದರೆ 2026ರ ಮಧ್ಯ ಭಾಗದ ವೇಳೆಗೆ 5 ಲಕ್ಷಕ್ಕೂ ಅಧಿಕ ವಾಹನ ನಗರದ ರಸ್ತೆಗಿಳಿಯಲಿದೆ. ಸಮೂಹ ಸಾರಿಗೆಯನ್ನು ಸುಧಾರಿಸಲು ಮತ್ತು ಖಾಸಗಿ ವಾಹನಗಳ ಬೆಳವಣಿಗೆಯನ್ನು ನಿಯಂತ್ರಿಸಲು ಮತ್ತಷ್ಟು ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕಿದೆ.

ಮೋದಿಗೆ ನಮೀಬಿಯಾದ ಅತ್ಯುನ್ನತ ನಾಗರಿಕ ಪ್ರಶಸ್ತಿ

ವಿಂಡ್‌ಹೋಕ್: ನಮೀಬಿಯಾಕ್ಕೆ ಬಂದಿಳಿದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಬುಧವಾರ ಆ ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ ಆರ್ಡರ್ ಆಫ್ ದಿ ಮೋಸ್ಟ್ ಏನ್ಷೆಂಟ್ ವೆಲ್ವಿಟ್ಚಿಯಾ ಮಿರಾಬಿಲಿಸ್ ಅನ್ನು ನೀಡಲಾಯಿತು. ನಮೀಬಿಯಾ ಅಧ್ಯಕ್ಷರಾದ ನೆಟುಂಬೊ ನಂದಿ-ನದೈಟ್ವ್ ಈ ಗೌರವ ಪ್ರದಾನ ಮಾಡಿದರು. 5 ದೇಶಗಳ ಪ್ರವಾಸದ ಅಂಗವಾಗಿ ಮೋದಿ ನಮೀಬಿಯಾಕ್ಕೆ ತೆರಳಿದ್ದಾರೆ. ಮಂಗಳವಾರವಷ್ಟೇ ಮೋದಿ ಅವರಿಗೆ ಬ್ರೆಜಿಲ್‌ನ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ ಗ್ರ್ಯಾಂಡ್ ಕಾಲರ್ ಆಫ್ ದಿ ನ್ಯಾಷನಲ್ ಆರ್ಡರ್ ಆಫ್ ದಿ ಸದರ್ನ್ ಕ್ರಾಸ್ ಅನ್ನು ಪ್ರದಾನ ಮಾಡಲಾಗಿತ್ತು.

ಮೋದಿ ಅವರ ಮೊದಲ ನಮೀಬಿಯಾ ಭೇಟಿ ಇದಾಗಿದೆ, ಈ ಮೂಲಕ ನಮೀಬಿಯಾಕ್ಕೆ ಒಟ್ಟು ಮೂವರು ಭಾರತದ ಪ್ರಧಾನಿಗಳು ಭೇಟಿ ನೀಡಿದಂತಾಗಿದೆ. 2014ರಿಂದ ಪ್ರಧಾನಿಯಾಗಿರುವ ಮೋದಿ ಈ 11 ವರ್ಷಗಳಲ್ಲಿ ಇದುವರೆಗೆ ಒಟ್ಟು 27 ಅಂತಾರಾಷ್ಟ್ರೀಯ ಪ್ರಶಸ್ತಿಗೆ ಭಾಜನರಾಗಿದ್ದಾರೆ. ನಮೀಬಿಯಾ ಅಧ್ಯಕ್ಷರಾದ ನೆಟುಂಬೊ ನಂದಿ ನದೈಟ್ವ್ ಅವರ ವಿಶೇಷ ಆಹ್ವಾನದ ಮೇರೆಗೆ ಭೇಟಿ ನೀಡಿರುವ ಮೋದಿ ಎರಡೂ ದೇಶಗಳ ಸಂಬಂಧ ವೃದ್ಧಿಗೆ ಕ್ರಮ ಕೈಗೊಂಡಿದ್ದಾರೆ. ಇಬ್ಬರು ನಾಯಕರು ಎರಡೂ ದೇಶಗಳ ನಡುವಿನ ಆರ್ಥಿಕ, ಆರೋಗ್ಯ, ಕಾರ್ಯತಂತ್ರ, ರಕ್ಷಣಾ ಮತ್ತು ಸಾಂಸ್ಕೃತಿಕ ಸಹಕಾರದ ಬಗ್ಗೆ ದ್ವಿಪಕ್ಷೀಯ ಮಾತುಕತೆ ನಡೆಸಿದ್ದಾರೆ. ವಿಶಿಷ್ಟ ಸೇವೆ ಮತ್ತು ನಾಯಕತ್ವವನ್ನು ಗುರುತಿಸಿ ನೀಡುವ ಈ ಪ್ರಶಸ್ತಿಯನ್ನು ನಮೀಬಿಯಾ ಸರಕಾರ 1995ರಲ್ಲಿ ಸ್ಥಾಪಿಸಿತು. ನಮೀಬಿಯಾದ ವಿಶಿಷ್ಟ ಮತ್ತು ಪ್ರಾಚೀನ ಮರುಭೂಮಿ ಸಸ್ಯ ವೆಲ್ವಿಟ್ಚಿಯಾ ಮಿರಾಬಿಲಿಸ್‌ನ ಹೆಸರನ್ನು ಈ ಪ್ರಶಸ್ತಿಗೆ ಸ್ಥಾಪಿಸಲಾಗಿದೆ.

ಸಮಾಚಾರ ಸಣ್ಣದಲ್ಲ

ರಾಜ್ಯದಲ್ಲಿ ಸಿಎಂ ಬದಲಾವಣೆ ಸನಿಹವಿದೆ

ಬಳ್ಳಾರಿ: ರಾಜ್ಯದಲ್ಲಿ ಕಾಂಗ್ರೆಸ್ ಆಡಳಿತ 2 ವರ್ಷ ಪೂರೈಸುತ್ತಿದೆ. ಒಪ್ಪಂದದ ಪ್ರಕಾರ ಸಿಎಂ ಬದಲಾವಣೆಯಾಗಬೇಕು ಎಂಬ ಪ್ರಯತ್ನ ಸಿಎಂ ಹಾಗೂ ಡಿಸಿಎಂ ಅವರಿಂದ ನಡೆದಿದೆ ಎಂದು ಮಾಜಿ ಸಚಿವ

ಬಿ.ಶ್ರೀರಾಮುಲು ಹೇಳಿದರು. ಸುದ್ದಿಗಾ ರರೊಂದಿಗೆ ಮಾತನಾಡಿದ ಅವರು, ಒಪ್ಪಂದದಂತೆ ಸಿದ್ದರಾಮಯ್ಯ ಅವರ ಸಿಎಂ ಹುದ್ದೆ ಪೂರ್ಣ ಗೊಂಡಿದೆ. ರಾಜ್ಯದ ಉಸ್ತುವಾರಿ ರಣದೀಪ ಸಿಂಗ್ ಸುರ್ಜೆವಾಲ ಶಾಸಕ ರನ್ನು ಭೇಟಿಯಾಗಿ ವೈಯಕ್ತಿಕ ಚರ್ಚೆ ಆರಂಭಿಸಿದ್ದಾರೆ ರಾಜ್ಯದಲ್ಲಿ ಸಿಎಂ ಬದಲಾವಣೆ ಚರ್ಚೆ ಆರಂಭವಾಗಿದ್ದು, ಬದಲಾವಣೆ ಸನಿಹವಿದೆ ಎಂದರು.

ಕೆರೆಗೆ ಹಾರಿದ್ದ ಮಹಿಳೆಯ ರಕ್ಷಣೆ

ಚಿಕ್ಕಮಗಳೂರು: ಕೆರೆಗೆ ಹಾರಿ ಬದುಕಿಸುವಂತೆ ಆಂಜನೇಯನನ್ನ ಬೇಡುತ್ತಿದ್ದ ಮಹಿಳೆಯನ್ನು ರಕ್ಷಿಸಿದ ಘಟನೆ ಚಿಕ್ಕಮಗಳೂರು ತಾಲೂಕಿನ ಅಲ್ಲಂಪುರದಲ್ಲಿ ನಡೆದಿದೆ. ಗಂಡನ ಜತೆ ಜಗಳವಾಡಿ ಚಿಕ್ಕಮಗಳೂರು ನಗರದ ರಾಮನಹಳ್ಳಿ ನಿವಾಸಿ ರಂಜಿತಾ ಕೆರೆಗೆ ಹಾರಿದ್ದರು. ಸಾಯಬೇಕು ಎಂದು ಕೆರೆಗೆ ಹಾರಿದ ಬಳಿಕ ಆಂಜನೇಯನ ನೆನೆದು ಪ್ರಾರ್ಥನೆ ಮಾಡಿದ್ದಾರೆ. ಕೆರೆಯಲ್ಲಿ ಯಾರೋ ಇರುವುದನ್ನು ನೋಡಿ ಪಕ್ಕದ ಹೋಂ ಸ್ಟೇ ಮಾಲೀಕ ರಮೇಶ್ ಸ್ಥಳಕ್ಕೆ ಬಂದು ಹುಡುಗರ ಕರೆಸಿದ್ದಾರೆ. ಬಳಿಕ ಕೆರೆಯಲ್ಲಿ ಮುಳುಗುತ್ತಿದ್ದ ರಂಜಿತಾಳನ್ನು ಸುಮಂತ್, ಪ್ರಸನ್ನ ರಕ್ಷಿಸಿದ್ದಾರೆ.

ವಿಶ್ವವಾಣಿ ಕ್ಲಬ್ ಹೌಸ್
10.07.2025

ಗುರುವಾರದ ಅತಿಥಿ

ಪ್ರಿಯಾಂಕ ಎನ್.
ವಿಷಯ
ಮಕ್ಕಳ ಆಹಾರ ಸೇವನೆ ಸಮಸ್ಯೆಗಳು

vishwavani.news

ರಾಜ್ಯದ ಆರು ನೀರಾವರಿ ಯೋಜನೆಗಳಿಗೆ ಈ ಅನುದಾನ | ಭದ್ರಾ ಮೇಲ್ದಂಡೆ ಯೋಜನೆಗೆ ಪರಿಷ್ಕೃತ ಅನುದಾನಕ್ಕೆ ಮನವಿ

11ಸಾವಿರ ಕೋಟಿ ಅನುದಾನಕ್ಕೆ ಮನವಿ ಮಾಡಿದ ಡಿಸಿಎಂ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ದೆಹಲಿ ಪ್ರವಾಸದಲ್ಲಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ನೀರಾವರಿ ಇಲಾಖೆಯ ವಿವಿಧ ಯೋಜನೆಗಳಿಗೆ ಸುಮಾರು 11,122 ಕೋಟಿ ರು.ಅನುದಾನ ಒದಗಿಸುವಂತೆ ಕೇಂದ್ರ ಸರಕಾರಕ್ಕೆ ಮನವಿ ಮಾಡಿದ್ದಾರೆ.

ಮಂಗಳವಾರ ಕೇಂದ್ರ ಸಚಿವ ಸಿ.ಆರ್. ಪಾಟೀಲ್ ಹಾಗೂ ಭೂಪೇಂದ್ರ ಯಾದವ್ ಅವರನ್ನು ಭೇಟಿಯಾಗಿದ್ದ ಡಿ.ಕೆ.ಶಿವಕುಮಾರ್ ಅವರು, ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಜ್ಯದ ಆರು ನೀರಾವರಿ ಯೋಜನೆಗಳಿಗೆ ಒಟ್ಟು 11,122.76 ಕೋಟಿ ರು. ಅನುದಾನಕ್ಕಾಗಿ ಮನವಿ ಸಲ್ಲಿಸಿದ್ದೇವೆ. ಕುಡಿಯುವ ನೀರಿನ ಉದ್ದೇಶದ ಎತ್ತಿನಹೊಳೆ ಯೋಜನೆಗೆ ಶೇ.25ರಷ್ಟು ಆರ್ಥಿಕ ಸಹಾಯ, ಕಳಸಾ ಬಂಡೂರಿ ಯೋಜನೆ, ಕೃಷ್ಣಾ ನದಿ ನೀರಿನ ವಿಚಾರವಾಗಿ ಕೇಂದ್ರ ಜಲಶಕ್ತಿ ಹಾಗೂ ಪರಿಸರ ಸಚಿವರನ್ನು ಭೇಟಿ ಮಾಡಿ ಚರ್ಚೆ ನಡೆಸಲಾಗಿದೆ ಎಂದು ತಿಳಿಸಿದರು.

ಎತ್ತಿನಹೊಳೆ ಯೋಜನೆಯನ್ನು ಕುಡಿಯುವ ನೀರಿನ ಉದ್ದೇಶಕ್ಕೆ ಎಂದು ಅನುಮೋದಿಸಿ ಆರ್ಥಿಕ ಸಹಾಯ ನೀಡಬೇಕೆಂದು ಮನವಿ ಮಾಡಿದ್ದೇನೆ. ಈ ಯೋಜನೆಯ ಕಾಮಗಾರಿಯನ್ನು ತುಮಕೂರು ಹಾಗೂ ಹಾಸನ ಭಾಗದಲ್ಲಿ ನಿಲ್ಲಿಸಲಾಗಿತ್ತು. ಯೋಜನೆ ಹಾದು ಹೋಗುವ ಕಡೆ ಕಂದಾಯ ಭೂಮಿ ಹೊಂದಿದ್ದ ರೈತರಿಗೆ ಪೋಡಿ ವಿತರಣೆ ಮಾಡಿ ಪರಿಹಾರವನ್ನೂ ನೀಡಲಾಗಿತ್ತು ಎಂದರು. ಆದರೆ ಬಳಿಕ ಅರಣ್ಯ ಇಲಾಖೆಯವರು ಇದು ನಮ್ಮ ಭೂಮಿ ಎಂದು ತಕರಾರು ತೆಗೆದರು. ಅವರ ಬಳಿ ಸಂಘರ್ಷ ಬೇಡ ಎಂದು ಬದಲಿ ಭೂಮಿ ನೀಡಿದ್ದೇವೆ. ಇದಕ್ಕೆ ಅರಣ್ಯ ಇಲಾಖೆಯವರು ಕ್ಲಿಯರೆನ್ಸ್ ಪ್ರಮಾಣ ಪತ್ರ ನೀಡಬೇಕಿತ್ತು, ಆದರೆ ಮಾಡಿಲ್ಲ. ಕೆಲವು ತಕರಾರುಗಳನ್ನು ಹಾಕಿದ್ದಾರೆ. ಶೀಘ್ರವೇ ಈ ಸಮಸ್ಯೆ ಬಗೆಹರಿಸುವುದಾಗಿ ತಿಳಿಸಿದ್ದಾರೆ ಎಂದರು.

ಖಾತೆಗೆ ಹಣ ಬರುವವರೆಗೂ ಖಾತರಿ ಇಲ್ಲ: ಭದ್ರಾ ಮೇಲ್ದಂಡೆ ವಿಷಯಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿ, ಈ ಬಗ್ಗೆಯೂ ಅನುದಾನ ಕೇಳಿದ್ದೇವೆ. ಕೇಂದ್ರ ಸರಕಾರದಿಂದ ಪರಿಷ್ಕೃತ ಅಂದಾಜು ಪಟ್ಟಿ ಕೇಳಿದ್ದರು ಅದನ್ನು ಕೂಡ ಸಲ್ಲಿಸಿದ್ದೇವೆ. ಈ ಹಿಂದೆ ಹೇಳಿದ್ದ ,300 ಕೋಟಿಗಿಂತಲೂ ಹೆಚ್ಚು ಅನುದಾನದ ಪರಿಷ್ಕೃತ ಪಟ್ಟಿ ಕಳುಹಿಸಿದ್ದೇವೆ. ಈಗಾಗಲೇ 10,604 ಕೋಟಿ ಖರ್ಚು ಮಾಡಿದ್ದೇವೆ ಎಂದು ಹೇಳಿದ್ದೇವೆ. ಹಣ ನೀಡುತ್ತೇವೆ ಎಂದು ಹೇಳಿದ್ದಾರೆ. ಹಣ ಸರಕಾರದ ಖಾತೆಗೆ ಬರುವವರೆಗೂ ನಂಬಿಕೆಯಿಲ್ಲ. ಎರಡು ವರ್ಷದಿಂದ ಅನುದಾನದ ಬಗ್ಗೆ ಹೇಳಿದ್ದನ್ನೇ ಕೇಂದ್ರ ಸರಕಾರ ಹೇಳುತ್ತಿದೆ. ಈ ಏಕಾಗುತ್ತಿದೆ ಎಂದು ಕೇಂದ್ರ ಸರಕಾರವನ್ನೇ ಕೇಳಬೇಕು. ಇದು ರಾಜಕೀಯವೇ? ಕೇಂದ್ರ ಸರಕಾರದ ಬಳಿ ದುಡ್ಡಿಲ್ಲವೇ? ಎಂದು ಕೇಳಬೇಕು. ಯೋಜನೆಗೆ ಎಷ್ಟು ಖರ್ಚಾಗಿದೆ ಎಂದು ಮಾಹಿತಿ ಕೇಳಿದ್ದರು. ಅದನ್ನೂ ಸಹ ನೀಡಲಾಗಿದೆ. ಒಮ್ಮೆ ಮಾತ್ರ ಕ್ಯಾಬಿನೆಟ್ ಬಳಿ ಇದೆ ಎಂದು ಹೇಳಿದ್ದರು ಎಂದು ತಿಳಿಸಿದರು.

ಯಾವ ಯೋಜನೆಗೆ ಎಷ್ಟು ಅನುದಾನ?

ಯೋಜನೆ	ಅನುದಾನ
ಸೊನ್ನತಿ ಏತ ನೀರಾವರಿ ಯೋಜನೆಗೆ	804.66 ಕೋಟಿ ರು.
ಯುಕೆಪಿಯ ಇಂಡಿ ಶಾಖಾ ಕಾಲುವೆ	2,666.70 ಕೋಟಿ ರು.
ಮಲಪ್ರಭಾ ಕಾಲುವೆಯ ಮೂರನೇ ಹಂತ	3000 ಕೋಟಿ ರು.
ಘಟಪ್ರಭಾ ಬಲದಂಡೆ ಕಾಲುವೆ, ಚಿಕ್ಕೋಡಿ ಶಾಖಾ ನಾಲೆ	1,444.42 ಕೋಟಿ ರು.
ಬೆಣ್ಣೆಹಳ್ಳದ ಪ್ರವಾಹ ನಿಯಂತ್ರಣ ಹಾಗೂ ನಿರ್ವಹಣೆ	1,610 ಕೋಟಿ ರು.
ಒಟ್ಟು	11,122.76 ಕೋಟಿ ರು.

ಖಾಲಿ ಮಾತಿನ ಬದಲು ದುಡ್ಡು ಕೊಡಿಸಲಿ

ಬೆಂಗಳೂರಿನಲ್ಲಿ ಆರಂಭಿಸಲು ಉದ್ದೇಶಿಸಿರುವ ಟನೆಲ್ ರಸ್ತೆಯ ಕ್ರೆಡಿಟ್ ವಾರ್‌ಗೆ ಸಂಬಂಧಿಸಿದಂತೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರತಿಕ್ರಿಯಿಸಿ, ಮೊದಲು ದುಡ್ಡು ಕೊಡಿಸಲಿ, ಕೇವಲ ಖಾಲಿ ಮಾತನಾಡುವುದು ಬೇಡ ವ್ಯಂಗ್ಯವಾಡಿದರು. ಟನಲ್ ರಸ್ತೆ ವಿಚಾರವಾಗಿ ನಿತಿನ್ ಗಡ್ಕರಿ ಅವರನ್ನು ಕುಮಾರಸ್ವಾಮಿ ಅವರು ಭೇಟಿಯಾಗಿ ಚರ್ಚೆ ನಡೆಸಿದ್ದಾರೆ. ಕುಮಾರಸ್ವಾಮಿ ಅವರ ಸಲಹೆ ಮತ್ತು ನಿಮ್ಮ ಸಲಹೆಯನ್ನೂ ನಾನು ಸ್ವೀಕಾರ ಮಾಡುತ್ತೇನೆ. ಆದರೆ ಮೊದಲು ದುಡ್ಡು ಕೊಡಿಸಲಿ ಎಂದರು. ಸದ್ಯಕ್ಕೆ ಸಂಪುಟ ಬದಲಾವಣೆ ಕುರಿತು ಯಾವುದೇ ಚರ್ಚೆಯಿಲ್ಲ. ನಾವು ಬಂದಿರುವುದು ಅಭಿವೃದ್ಧಿ ವಿಚಾರಗಳನ್ನು ಚರ್ಚೆ ನಡೆಸಲು. ಬೆಂಗಳೂರಿನಲ್ಲಿ ಒಂದಷ್ಟು ರಸ್ತೆಗಳನ್ನು ಅಗಲೀಕರಣ ಮಾಡಬೇಕಿದೆ. ಇದಕ್ಕೆ ರಕ್ಷಣಾ ಇಲಾಖೆ ಭೂಮಿಗಳ ಅವಶ್ಯಕತೆಯಿದೆ. ಈ ಕಾರಣಕ್ಕೆ ಹಾಗೂ ದಸರಾ ವೇಳೆ ಚುಟುಕು ಏರ್ ಶೋ ನಡೆಸಲು ರಕ್ಷಣಾ ಸಚಿವರನ್ನು ಭೇಟಿ ಮಾಡುವುದಕ್ಕಾಗಿ ಬಂದಿದ್ದೇವೆ ಎಂದು ಹೇಳಿದರು. ಟನಲ್ ರಸ್ತೆಗೆ ಸಂಬಂಧಿಸಿದಂತೆ ಎರಡು- ಮೂರು ದಿನದಲ್ಲಿ ಗ್ಲೋಬಲ್ ಟೆಂಡರ್ ಕರೆಯಲಾಗುವುದು. ಟೋಲ್ ಇಲ್ಲದೇ ರಸ್ತೆ ಮಾಡಲು ಸಾಧ್ಯವಿಲ್ಲ, ಏರ್ ಪೋರ್ಟ್, ಮೈಸೂರು ರಸ್ತೆ, ನೈಸ್ ರಸ್ತೆಗಳಲ್ಲಿ ಟೋಲ್ ಇದೆಯಲ್ಲಾ ಎಂದರು.

ನಮಗೆ ಸಹಕಾರ ನೀಡಿದರೆ ಗೋವಾದವರಿಗೂ ಸಹಕಾರ

ಗೋವಾದವರು ನಮ್ಮ ಭಾಗದಲ್ಲಿ ವಿದ್ಯುತ್ ಮಾರ್ಗ ಹಾಕಲು ನಾವು ತಕರಾರು ತೆಗೆದಿದ್ದೇವೆ ಎಂದು ಹೇಳಿದ್ದಾರೆ. ನೀವು ನಮಗೆ ಸಹಕಾರ ನೀಡುವುದಾದರೆ ನಾವು ನಿಮಗೆ ನೀಡುತ್ತೇವೆ ಎಂದು ಹೇಳಿದ್ದೇವೆ. ಒಂದು ವಾರದಲ್ಲಿ ಇದರ ಬಗ್ಗೆ ಕೇಂದ್ರ ಪರಿಸರ ಸಚಿವರು ಅಭಿಪ್ರಾಯ ತಿಳಿಸುವುದಾಗಿ ಹೇಳಿದ್ದಾರೆ. ಮುಂದಿನ ಸಂಸತ್ ಅಧಿವೇಶನ ನಡೆಯುವುದರ ಒಳಗಾಗಿ ಮತ್ತೆ ಭೇಟಿ ಮಾಡುತ್ತೇನೆ ಎಂದು ತಿಳಿಸಿದ್ದೇನೆ ಎಂದರು. ಕಳಸಾ ಬಂಡೂರಿ ಕಾಮಗಾರಿ ಸಂಬಂಧವಾಗಿ ಬಿಜೆಪಿ ಸರಕಾರವಿದ್ದ ವೇಳೆ ಕೆಲಸ ಮಾಡಬಹುದು ಎಂದು ಹೇಳಿದರು. ಈ ಪ್ರಕಾರವಾಗಿ ನಾವು ಟೆಂಡರ್ ಕರೆಯಲಾಯಿತು. ಆದರೆ ಗೋವಾ ಸರಕಾರ 09.01.2023 ರಲ್ಲಿ ಶೋಕಾಸ್ ನೋಟಿಸ್ ಜಾರಿ ಮಾಡಿದೆ. ಇದಕ್ಕೆ ನಮ್ಮ ಅಧಿಕಾರಿಗಳು ತಕ್ಷಣ ಉತ್ತರ ನೀಡಿ 'ನೀವು ಶೋಕಾಸ್ ನೋಟಿಸ್ ನೀಡಲು ಬರುವುದಿಲ್ಲ' ಎಂದು ಹೇಳಿದ್ದಾರೆ. ಈ ವ್ಯಾಜ್ಯ ನ್ಯಾಯಾಲಯದಲ್ಲಿದೆ ಎಂದರು. ಇನ್ನು ಕೃಷ್ಣಾ ನದಿ ನೀರಿನ ವಿಚಾರವಾಗಿ ಸಭೆಯ ದಿನಾಂಕ ನಿಗದಿಯಾಗಿತ್ತು. ಆದರೆ ಇದ್ದಕ್ಕಿದ್ದಂತೆ ಸಭೆ ರದ್ದಾಯಿತು. ಜುಲೈ ತಿಂಗಳಿನಲ್ಲಿಯೇ ಮತ್ತೊಮ್ಮೆ ಸಭೆ ಕರೆಯುವುದಾಗಿ ಜಲಶಕ್ತಿ ಸಚಿವರು ತಿಳಿಸಿದ್ದಾರೆ. ಏಕೆಂದರೆ ಆಲಮಟ್ಟಿ ಅಣೆಕಟ್ಟಿನ ಎತ್ತರ ಹೆಚ್ಚಳದ ಬಗ್ಗೆ ತೀರ್ಮಾನವಾಗಿದ್ದರೂ 10 ವರ್ಷದಿಂದ ನಮ್ಮ ಪಾಲಿನ ನೀರು ಸಿಗದೇ ಕಾಯುತ್ತಿದ್ದೇವೆ. 1.40 ಲಕ್ಷ ಎಕರೆಗೆ ನೀರಾವರಿ ನೀಡಲು ನಾವು ತಯಾರಿ ಮಾಡಿಕೊಂಡಿದ್ದೇವೆ. ಇದರ ಬಗ್ಗೆ ಒಪ್ಪಂದವೂ ಆಗಿದೆ. ಕೇಂದ್ರದಿಂದ ಗೆಜೆಟ್ ನೋಟಿಫಿಕೇಷನ್ ಮಾತ್ರ ಆಗಬೇಕು. ನಮ್ಮ ನೀರನ್ನು ಬಳಸಿಕೊಳ್ಳುವುದಕ್ಕೆ ಮಹಾರಾಷ್ಟ್ರ ಏಕೆ ತಕರಾರು ಹಾಕಬೇಕು. ಮಹಾರಾಷ್ಟ್ರ, ಆಂಧ್ರ, ತೆಲಂಗಾಣವನ್ನು ಕರೆದು ಮಾತನಾಡಬೇಕು ಎಂದು ಹೇಳಿದ್ದೇನೆ. ಇದರ ಬಗ್ಗೆ ಸಭೆಯನ್ನು ಸಂಸತ್ ಅಧಿವೇಶನದ ಒಳಗಾಗಿ ಕರೆಯುತ್ತೇವೆ ಎಂದು ಸಚಿವರು ತಿಳಿಸಿದ್ದಾರೆ. ಕೇಂದ್ರ ಸಚಿವರು, ಸಂಸದರಿಗೆ ಈ ವಿಚಾರವಾಗಿ ಒತ್ತಡ ಏರಬೇಕು ಎಂದು ಮತ್ತೊಮ್ಮೆ ಮನವಿ ಮಾಡುತ್ತೇನೆ ಎಂದರು.

ನದಿಗೆ ಹಾರಿದ ಪದವೀಧರೆ

ಮಂಡ್ಯ: ಯುವತಿಯೋರ್ವಳು ಕಾವೇರಿ ನದಿಗೆ ಬಿದ್ದು ಆತ್ಮಹತ್ಯೆಗೆ ಮುಂದಾಗಿರುವ ಘಟನೆ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದ ಉತ್ತರ ಕಾವೇರಿ ಸೇತುವೆ ಬಳಿ ಜರುಗಿದೆ. ಹಾಸನ ಜಿಲ್ಲೆ ಬೇಲೂರು ತಾಲೂಕಿನ ಪ್ರಸಾದಹಳ್ಳಿ ಗ್ರಾಮದ ಮಂಜುನಾಥ್ ಅವರ ಪುತ್ರಿ ಸಿಂಚನಾ (24) ಕಾವೇರಿ ನದಿಗೆ



ಹಾರಿರುವ ಯುವತಿ ಆಗಿದ್ದಾಳೆ. ಯುವತಿ ಸಿಂಚನಾ ಎಂಸಿಎ ಪದವೀಧರೆಯಾಗಿದ್ದು, ಕೆಲ ವರ್ಷಗಳಿಂದೀಚೆಗೆ ಪಿಸಿಒಡಿ ಸಮಸ್ಯೆಯಿಂದ ಬಳಲುತ್ತಿದ್ದರು. ಇದೇ ಕಾರಣಕ್ಕೆ ಮಾನಸಿಕ ಖಿನ್ನತೆಗೆ ಒಳಗಾಗಿದ್ದರು ಎನ್ನಲಾಗಿದೆ. ಮಂಗಳವಾರ ಸಂಜೆ ವೇಳೆಗೆ ಏಕಾ ಏಕಿ ಮನೆಯಿಂದ ಹೊರಟು ಹಾಸನ ಮೂಲಕ ಚನ್ನರಾಯಪಟ್ಟಣ ಮಾರ್ಗವಾಗಿ ಶ್ರೀರಂಗಪ ಟ್ಟಣಕ್ಕೆ ಬಸ್ಸಿನಲ್ಲಿ ಆಗಮಿಸಿದ್ದಾರೆ. ನಂತರ ಬಸ್ ನಿಲ್ದಾಣದಿಂದ ಬೆಂಗಳೂರು ದಿಕ್ಕಿಗೆ ನಡೆದು ಹೋದ ಈಕೆ ಉತ್ತರ ಕಾವೇರಿಯ ಸೇತುವೆ ಮೇಲಿಂದ ರಾತ್ರಿ 8ರ ಸಮಯದಲ್ಲಿ ಉಕ್ಕಿ ಹರಿಯುತ್ತಿರುವ ಕಾವೇರಿ ನದಿಗೆ ಹಾರಿದ್ದಾರೆ. ಇದನ್ನು ಗಮನಿಸಿದ ಸ್ಥಳಿಯ ದಾರಿಹೋಕ ವಾಹನ ಸವಾರರು ತಕ್ಷಣ ಶ್ರೀರಂಗಪಟ್ಟಣ ಟೌನ್ ಠಾಣೆ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ವಿಷಯ ತಿಳಿದು ಅಗ್ನಿಶಾಮಕ ದಳ ಸಿಬ್ಬಂದಿ, ಪೊಲೀಸರು ಸ್ಥಳಕ್ಕೆ ದೌಡಾಯಿಸಿದ್ದಾರೆ.

2 ಲಕ್ಷಕ್ಕೂ ಹೆಚ್ಚು ಭಕ್ತರಿಗೆ ಅನ್ನ ಪ್ರಸಾದ ವ್ಯವಸ್ಥೆ | ಧಾನ್ಯಲಕ್ಷ್ಮೀ ಪೂಜೆ, ಮೃತ್ತಿಕೆ ಸಂಗ್ರಹ ಸಂಪನ್ನ

ಇಂದಿನಿಂದ ಗೋಕರ್ಣದಲ್ಲಿ 32ನೇ ಚಾತುರ್ಮಾಸ್ಯ ಆರಂಭ

ಗೋಕರ್ಣ: ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ರಾಘವೇಶ್ವರಭಾರತೀ ಮಹಾಸ್ವಾಮೀಜಿಯವರ 32ನೇ ಚಾತುರ್ಮಾಸ್ಯ ಅಶೋಕೆಯ ಸೇವಾಸೌಧ ಗುರುದೃಷ್ಟಿ ಆವರಣದಲ್ಲಿ ಗುರುವಾರ ಆರಂಭವಾಗಲಿದ್ದು, ಪೂರ್ವಭಾವಿಯಾಗಿ ಬುಧವಾರ ಮೃತ್ತಿಕಾ ಸಂಗ್ರಹ, ಧಾನ್ಯಲಕ್ಷ್ಮಿ ಪೂಜೆ ಶ್ರೀಗಳ ಸ್ವಾಗತ ಕಾರ್ಯಕ್ರಮ ನೆರವೇರಿತು.

ವಿಶ್ವಾವಸು ಸಂವತ್ಸರದ ಚಾತುರ್ಮಾಸ್ಯವನ್ನು ಶ್ರೀಗಳು ಸ್ವಭಾಷಾ ಚಾತುರ್ಮಾಸ್ಯವನ್ನಾಗಿ ಆಚರಿಸಲಾಗುತ್ತಿದ್ದು, ಶ್ರೀಗಳ ವ್ರತಾರಂಭದ ಮುನ್ನಾ ದಿನ ಪುರಾತನ ಶ್ರೀ ಮಲ್ಲಿಕಾರ್ಜುನ ದೇವಾಲಯಕ್ಕೆ ಭೇಟಿ ನೀಡಿ ದರ್ಶನ ಪಡೆದರು. ಚಾತುರ್ಮಾಸ್ಯ ನಿರ್ವಿಘ್ನವಾಗಿ ಮತ್ತು ಪರಿಪೂರ್ಣವಾಗಿ ನಡೆಯುವಂತೆ ವಿಶೇಷ ಪ್ರಾರ್ಥನೆ ಸಲ್ಲಿಸಲಾಯಿತು. ನಂತರ ವಿದ್ಯಾನಂದ ಆವರಣದಲ್ಲಿ ಧಾನ್ಯಲಕ್ಷ್ಮಿ ಪೂಜೆ ನೆರವೇರಿತು. ಚಾತುರ್ಮಾಸ್ಯಕ್ಕಾಗಿ ರಾಜ್ಯದ ವಿವಿಧೆಡೆಗಳಿಂದ ಭಕ್ತರು ಕಳುಹಿಸಿಕೊಟ್ಟಿರುವ ಸುವಸ್ತುಗಳನ್ನು ಪೂಜಿಸಿ ಚಾತುರ್ಮಾಸ್ಯದ ಎಲ್ಲ ದಿನ ನಡೆಯುವ ಅನ್ನ ಸಂತರ್ಪಣೆಗೆ ಚಾಲನೆ ನೀಡಲಾಯಿತು. ಚಾತುರ್ಮಾಸ್ಯ ಅವಧಿಯಲ್ಲಿ 2 ಲಕ್ಷಕ್ಕೂ ಹೆಚ್ಚು ಶಿಷ್ಯಭಕ್ತರಿಗೆ ಅನ್ನ ಪ್ರಸಾದ ವ್ಯವಸ್ಥೆ ಮಾಡಲಾಗಿದೆ. ಧಾನ್ಯಲಕ್ಷ್ಮಿ ಪೂಜೆಯ ಬಳಿಕ ಶ್ರೀಗಳು ಮೂಲಮಠ ಪರಿಸರಕ್ಕೆ ತೆರಳಿ ಸಾಂಪ್ರದಾಯಿಕ ಮೃತ್ತಿಕೆ ಸಂಗ್ರಹಿಸಿದರು. ಮೃತ್ತಿಕೆಯೊಂದಿಗೆ ಆಗಮಿಸಿದ ಪರಮಪೂಜ್ಯ ರನ್ನು ಅಶೋಕೆಯ ಯಾನಶಾಲೆ ಆವರಣದಲ್ಲಿ ಭವ್ಯವಾಗಿ ಸ್ವಾಗತಿಸಲಾಯಿತು. ಈ ವೇಳೆ ಡಿ.ಡಿ.ಶರ್ಮಾ, ಸತ್ಯನಾರಾಯಣ ಶರ್ಮಾ, ಹವ್ಯಕ ಮಹಾಮಂಡಲದ ಅಧ್ಯಕ್ಷ ಮೋಹನ ಭಾಸ್ಕರ ಹೆಗಡೆ, ನಿಯೋಜಿತ ಅಧ್ಯಕ್ಷ ಹರಿಪ್ರಸಾದ್ ಪೆರಿಯಾಪ್ಪು, ಪ್ರಧಾನ ಕಾರ್ಯ ದರ್ಶಿ ಉದಯಶಂಕರ ಭಟ್ ಮಿತ್ತೂರು, ಚಾತುರ್ಮಾಸ್ಯ ಪ್ರಧಾನ ಸಂಯೋಜಕ ಮಂಜುನಾಥ ಸುವರ್ಣಗದ್ದೆ, ಸೇವಾಬಿಂದುಗಳಾದ ಶ್ರೀಕಾಂತ್ ಪಂಡಿತ್, ಜಿ.ಕೆ.ಹೆಗಡೆ ಗೋಳಗೋಡು, ಅರವಿಂದ ಧರ್ಬೆ, ಸುಬ್ರಾಯ ಭಟ್, ಆರ್.ಜಿ.ಹೆಗಡೆ, ಗಣೇಶ್ ಭಟ್, ಸ್ವಾತಿ ಭಾಗ್ವತ್, ಜಿ.ವಿ.ಹೆಗಡೆ, ಲಲಿತಾ ಹೆಬ್ಬಾರ್, ರಾಜೀವ್ ಹೆಗಡೆ ಶ್ರೀಕಾರ್ಯದರ್ಶಿ ಮಧು ಜಿ.ಕೆ, ಶ್ರೀಮಠದ ಶಾಸ್ತ್ರಿಗಳಾದ ಸುಬ್ರಾಯ ಅಗ್ನಿಹೋತ್ರಿ ಮತ್ತಿತರರು ಉಪಸ್ಥಿತರಿದ್ದರು.

ಗೋಕರ್ಣದಲ್ಲಿ ಆರಂಭ ಆಗಲಿರುವ ಶ್ರೀ ರಾಘವೇಶ್ವರಭಾರತೀ ಮಹಾಸ್ವಾಮೀಜಿಯವರ 32ನೇ ಚಾತುರ್ಮಾಸ್ಯ ಹಿನ್ನೆಲೆ ವಿಶೇಷ ಪೂಜೆ ಮಾಡಲಾಯಿತು.

> ದೇಶದಲ್ಲಿ ಸ್ವಭಾಷಾಭಿಮಾನ ಹಾಗೂ ರಾಷ್ಟ್ರಪ್ರಜ್ಞೆ ಉದ್ದೀಪಿಸಲು ಮತ್ತು ದೇಶದ ಸಂಸ್ಕೃತಿ-ಪರಂಪರೆಯನ್ನು ಉಳಿಸುವ ಉದ್ದೇಶದಲ್ಲಿ ಸ್ವಭಾಷೆಯನ್ನು ಉಳಿಸಿ ಬೆಳೆಸುವ ಉದ್ದೇಶದಿಂದ ಚಾತುರ್ಮಾಸ್ಯವನ್ನು ಆಚರಿಸಲಾಗುತ್ತಿದೆ.
> -ಶ್ರೀ ರಾಘವೇಶ್ವರಭಾರತೀ ಮಹಾಸ್ವಾಮೀಜಿ

ಉದ್ಯೋಗ ಮಾಹಿತಿ

ಬ್ಯಾಂಕ್ ಆಫ್ ಬರೋಡಾದಲ್ಲಿ ಉದ್ಯೋಗಾವಕಾಶ: ಲೋಕಲ್ ಬ್ಯಾಂಕ್ ಆಫೀಸರ್ ಹುದ್ದೆಗಳಿಗೆ ಅಧಿಸೂಚನೆ

ಬ್ಯಾಂಕಿಂಗ್ ವೃತ್ತಿಯನ್ನು ಆರಿಸಿಕೊಳ್ಳಲು ಇಚ್ಛಿಸುತ್ತಿರುವವರಿಗೆ ಸಾರ್ವಜನಿಕ ವಲಯದ ಪ್ರಮುಖ ಬ್ಯಾಂಕ್ ಆಗಿರುವ 'ಬ್ಯಾಂಕ್ ಆಫ್ ಬರೋಡಾ' ಲೋಕಲ್ ಬ್ಯಾಂಕ್ ಆಫೀಸರ್ (ಎಲ್‌ಬಿಒ) ಹುದ್ದೆಗಳಿಗೆ ಅರ್ಜಿ ಆಹ್ವಾನಿಸಿದೆ. ಒಟ್ಟು 2,500 ಹುದ್ದೆಗಳು ಖಾಲಿ ಇದ್ದು, ಇವುಗಳಲ್ಲಿ 450 ಹುದ್ದೆಗಳನ್ನು ಕರ್ನಾಟಕಕ್ಕೆ ಮೀಸಲಿಡಲಾಗಿದೆ.

ಹುದ್ದೆಗಳ ಸಂಖ್ಯೆ: ರಾಜ್ಯಕ್ಕೆ ಮೀಸಲಿಟ್ಟ ಒಟ್ಟು 450 ಹುದ್ದೆಗಳಲ್ಲಿ ಸಾಮಾನ್ಯ ವರ್ಗದವರಿಗೆ 184, ಆರ್ಥಿಕ ದುರ್ಬಲ ವರ್ಗದವರಿಗೆ 45, ಇತರೆ ಹಿಂದುಳಿದ ವರ್ಗದವರಿಗೆ 121, ಎಸ್.ಟಿ 33 ಹಾಗೂ ಎಸ್.ಸಿ ಅಭ್ಯರ್ಥಿಗಳಿಗೆ 67 ಹುದ್ದೆಗಳನು ಮೀಸಲಿಡಲಾಗಿದೆ. ಅಧಿಕಾರಿಗಳ ವೃಂದದಲ್ಲಿ ಮಾಜಿ ಸೈನಿಕರಿಗೆ ಯಾವುದೇ ಮೀಸಲಾತಿ ಇಲ್ಲ.

ಹುದ್ದೆಯ ಹೆಸರು: ಜೂನಿಯರ್ ಮ್ಯಾನೇಜ್‌ಮೆಂಟ್ ಗ್ರೇಡ್ ಸ್ಕೇಲ್-1

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಆನ್‌ಲೈನ್ ಅರ್ಜಿ ಸಲ್ಲಿಕೆಯ ಪ್ರಕ್ರಿಯೆ ಶುರುವಾಗಿದ್ದು, ಅಭ್ಯರ್ಥಿಗಳು ಜುಲೈ 24ರೊಳಗೆ ಅರ್ಜಿ ಸಲ್ಲಿಸಬಹುದಾಗಿದೆ.

ವೇತನಶ್ರೇಣಿ: 48,480-85,920 ರು.

ವಾಣಿಜ್ಯ ಬ್ಯಾಂಕ್ ಅಥವಾ ಯಾವುದೇ ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನಲ್ಲಿ ಅಧಿಕಾರಿಯಾಗಿ ಒಂದು ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ಕೆಲಸದ ಅನುಭವ ಇರುವ ಅಭ್ಯರ್ಥಿಗಳು ಆಯ್ಕೆಯಾದರೆ, ಅಭ್ಯರ್ಥಿಗಳಿಗೆ ಒಂದು ಮುಂಗಡ ವೇತನ ಬಡ್ತಿ ನೀಡಲಾಗುತ್ತದೆ.

ಆದಾಗ್ಯೂ, ಯಾವುದೇ ಸೇವಾ ಹಿರಿತನಕ್ಕೆ ಪೂರ್ವ ಅನುಭವವನ್ನು ಪರಿಗಣಿಸಲಾ ಗುವುದಿಲ್ಲ. ಇದಲ್ಲದೆ ಬ್ಯಾಂಕ್ ಹೆಚ್ಚುವರಿಯಾಗಿ, ವಿಶೇಷ ಭತ್ಯೆ, ತುಟ್ಟಿ ಭತ್ಯೆ, ಮನೆ ಬಾಡಿಗೆ ಭತ್ಯೆ, ವಸತಿ ಕ್ವಾರ್ಟರ್ಸ್/ಲೀಸ್ ಬಾಡಿಗೆ, ಬ್ಯಾಂಕಿನ ನೀತಿಯ ಪ್ರಕಾರ ವೈದ್ಯಕೀಯ ವೆಚ್ಚ ಮರುಪಾವತಿ ಹಾಗೂ ಎಲ್‌ಎಫ್‌ಸಿ ಮರುಪಾವತಿಯಂತಹ ಇತರ ಸೌಲಭ್ಯಗಳಿಗೆ ಅರ್ಹರಾಗಿರುತ್ತಾರೆ ಮತ್ತು ಇತರ ಭತ್ಯೆಗಳನ್ನು ಚಾಲ್ತಿಯಲ್ಲಿರುವ ನಿಯಮಗಳು ಮತ್ತು ನಿಬಂಧನೆಗಳ ಪ್ರಕಾರ ಪಾವತಿಸಲಾಗುವುದು.

ಅರ್ಜಿ ಶುಲ್ಕ : ಸಾಮಾನ್ಯ, ಒಬಿಸಿ ಹಾಗೂ ಆರ್ಥಿಕ ದುರ್ಬಲ ಅಭ್ಯರ್ಥಿಗಳಿಗೆ: ರು. 850. ಪ.ಜಾ, ಪ.ಪಂ, ಮಹಿಳೆಯರು, ಮಾಜಿ ಸೈನಿಕರಿಗೆ ಮತ್ತು ವಿಶೇಷ ಚೇತನ ಅಭ್ಯರ್ಥಿಗಳಿಗೆ ರು. 175. ಅಭ್ಯರ್ಥಿಗಳು ಆನ್‌ಲೈನ್ ಮೂಲಕವೇ ಅರ್ಜಿ ಶುಲ್ಕ ಪಾವತಿಸಬೇಕು.

ವಯೋಮಿತಿ: ಕನಿಷ್ಠ 21 ವರ್ಷ ಹಾಗೂ ಗರಿಷ್ಠ 30 ವರ್ಷಗಳಿಗಿಂತ ಹೆಚ್ಚಿರಬಾರದು. ಸರಕಾರದ ನಿಯಮಾನುಸಾರ ಎಸ್.ಸಿ/ಎಸ್.ಟಿ. ಅಭ್ಯರ್ಥಿಗಳಿಗೆ 5 ವರ್ಷಗಳು, ಒಬಿಸಿ ಅಭ್ಯರ್ಥಿಗಳಿಗೆ 3 ವರ್ಷಗಳು, ಅಂಗವಿಕಲ ಅಭ್ಯರ್ಥಿಗಳಿಗೆ 10 ವರ್ಷಗಳಷ್ಟು ವಯೋಮಿತಿ ಸಡಿಲಿಕೆ ಮಾಡಲಾಗಿದೆ.

ಶೈಕ್ಷಣಿಕ ಅರ್ಹತೆ: 1) ಯಾವುದೇ ವಿಷಯಗಳಲ್ಲಿ ಪದವಿ ಪಡೆದಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ವೈದ್ಯಕೀಯ, ಇಂಜಿನಿಯರಿಂಗ್, ಸಿ.ಎ. ಮಾಡಿದವರು ಕೂಡ ಅರ್ಜಿ ಸಲ್ಲಿಸಬಹುದು. ಪದವಿಯ ಜತೆಯಲ್ಲಿ ಸ್ಥಳೀಯ ಭಾಷಾ ಜ್ಞಾನವನ್ನು (ಬರೆಯುವ, ಓದುವ ಮತ್ತು ಅರ್ಥಮಾಡಿಕೊಳ್ಳುವ) ಅಭ್ಯರ್ಥಿಯು ಹೊಂದಿರಬೇಕು.

2) ಒಂದು ವರ್ಷ ಯಾವುದೇ ವಾಣಿಜ್ಯ ಬ್ಯಾಂಕ್, ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ಅಥವಾ ಆರ್‌ಬಿಐನಿಂದ ಅಂಗೀಕೃತವಾಗಿರುವ ಯಾವುದೇ ಬ್ಯಾಂಕ್‌ನಲ್ಲಿ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ ಅನುಭವ ಹೊಂದಿರಬೇಕಿರುತ್ತದೆ.

ಪರೀಕ್ಷಾ ಕೇಂದ್ರಗಳು: ಬೆಂಗಳೂರು, ಧಾರವಾಡ/ಹುಬ್ಬಳ್ಳಿ, ಕಲಬುರಗಿ, ಉಡುಪಿ, ಶಿವಮೊಗ್ಗ, ಮಂಗಳೂರುಹಾಗೂ ಮೈಸೂರು. ಅಭ್ಯರ್ಥಿಗಳು ಅರ್ಜಿ ಸಲ್ಲಿಸುವಾಗಲೇ ತಮ್ಮ ಹತ್ತಿರದ ಪರೀಕ್ಷಾ ಕೇಂದ್ರವನ್ನು ಆಯ್ಕೆ ಮಾಡಿಕೊಳ್ಳಬಹುದು.

ಅಪ್ಲೋಡ್ ಮಾಡಬೇಕಾದ ದಾಖಲೆಗಳ ಪಟ್ಟಿ: ರೆಸ್ಯೂಮ್ (ಸ್ವ-ವಿವರ) ಜನ್ಮ ದಿನಾಂಕದ ಪುರಾವೆ , ಶೈಕ್ಷಣಿಕ ಪ್ರಮಾಣಪತ್ರಗಳು, ಸಂಬಂಧಿತ ಅಂಕಗಳ ಪಟ್ಟಿ/ ಪದವಿ/ಪ್ರಮಾಣಪತ್ರ, ಉದ್ಯೋಗ (ವೃತ್ತಿ) ಪ್ರೊಫೈಲ್ (ಅನುಭವ ಪ್ರಮಾಣಪತ್ರ/ನೇಮಕಾತಿ ಪತ್ರ/ಹಿಂದಿನ ಉದ್ಯೋಗದಾತರು ಪ್ರಮಾಣೀಕರಿಸಿದ್ದು), ಐ.ಡಿ ಪುರಾವೆ, ಎಡ ಹೆಬ್ಬೆರಳಿನ ಗುರುತು, ಕೈಬರಹದ ಘೋಷಣೆ (ಎಲ್ಲವೂ ಪಿಡಿಎಫ್ ರೂಪದಲ್ಲಿ)

ನೇಮಕಾತಿ ಪ್ರಕ್ರಿಯೆ ಹೇಗೆ?: ಮೊದಲಿಗೆ ಆನ್‌ಲೈನ್ ಪರೀಕ್ಷೆ ನಡೆಸಲಾಗುತ್ತದೆ. ಆಯ್ಕೆ ಪ್ರಕ್ರಿಯೆಯ ಭಾಗವಾಗಿ ಅಭ್ಯರ್ಥಿಗಳು ಸೈಕೋಮೆಟ್ರಿಕ್ ಮೌಲ್ಯಮಾಪನಕ್ಕೆ ಒಳಗಾಗಬೇಕಾಗುತ್ತದೆ. ವಿವರಣಾತ್ಮಕ ಪರೀಕ್ಷೆ/ಕೇಸ್‌ಸ್ಟಡಿ ಮೂಲಕ ಸ್ಕ್ರೀನಿಂಗ್/ಬದಲಿ ಸೇರಿದಂತೆ ಪರೀಕ್ಷೆಯ ರಚನೆಯನ್ನು ಮಾರ್ಪಡಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿದೆ.

ನೆನಪಿಡಿ: ಎಸ್ಸೆಸ್ಸೆಲ್ಸಿ ಅಥವಾ ಪಿಯುಸಿಯಲ್ಲಿ ಕನ್ನಡ ಭಾಷೆಯನ್ನು ಒಂದು ವಿಷಯವಾಗಿ ಓದಿ, ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಭಾಷಾ ಪರೀಕ್ಷೆಯಿಂದ ವಿನಾಯಿತಿ ನೀಡಲಾಗಿರುತ್ತದೆ.

ಪರೀಕ್ಷೆಯ ಸ್ವರೂಪ: ಆನ್‌ಲೈನ್ ಪರೀಕ್ಷೆಯಲ್ಲಿ 120 ಅಂಕದ 120 ಪ್ರಶ್ನೆಗಳಿಗೆ ಎರಡು ತಾಸಿನಲ್ಲಿ ಉತ್ತರಿಸಬೇಕಿರುತ್ತದೆ. ಇಂಗ್ಲಿಷ್, ಬ್ಯಾಂಕಿಂಗ್ ಜ್ಞಾನ, ಸಾಮಾನ್ಯ/ಆರ್ಥಿಕ ತಿಳಿವು, ರೀಸನಿಂಗ್ ಎಬಿಲಿಟಿ ಮತ್ತು ಕ್ವಾಂಟಿಟೇಟಿವ್ ಆಪ್ಟಿಟ್ಯೂಡ್ ಕುರಿತಾದ ಪ್ರಶ್ನೆಗಳಿದ್ದು, ಹಿಂದಿ ಅಥವಾ ಇಂಗ್ಲಿಷ್‌ನಲ್ಲಿ ಇರುತ್ತವೆ.

ನಿಯೋಜನೆ ಹೇಗೆ?

ಅಭ್ಯರ್ಥಿಗಳನ್ನು ಅರ್ಜಿ ಸಲ್ಲಿಸಿರುವ ರಾಜ್ಯಕ್ಕೆ ನೇಮಿಸಲಾಗುತ್ತದೆ. 12 ವರ್ಷದ ಬಳಿಕ ಅಥವಾ ಎಸ್‌ಎಂಜಿಎಸ್-4ನೇ ಗ್ರೇಡ್‌ಗೆ ಪದೋನ್ನತಿ ಪಡೆದ ಬಳಿಕ ಬೇರೆ ರಾಜ್ಯಕ್ಕೆ ವರ್ಗಾಯಿ ಸಬಹುದು.

ಪ್ರೊಬೇಷನ್ ಅವಧಿ: ಆಯ್ಕೆಯಾದವರು ಒಂದು ವರ್ಷದ ಪ್ರೊಬೇಷನರಿ ಅವಧಿ ಪೂರ್ಣಗೊಳಿಸಬೇಕಿದೆ. ಜತೆಗೆ ಕನಿಷ್ಠ ಮೂರು ವರ್ಷಗಳವರೆಗೆ ಸೇವೆ ಸಲ್ಲಿಸುವುದಾಗಿ ತಪ್ಪಿದಲ್ಲಿ ಬ್ಯಾಂಕ್ಗೆ 5 ಲಕ್ಷ ರು. ಪಾವತಿಸುವುದಾಗಿ ಸೇವಾ ಬಾಂಡ್ ಸಲ್ಲಿಸುವುದು ಕಡ್ಡಾಯವಾಗಿದೆ.

ಅರ್ಜಿ ಸಲ್ಲಿಸಲು ವೆಬ್ ಲಿಂಕ್ ಹಾಗೂ ಅಧಿಸೂಚನೆ:
www.bankofbaroda.co.in
www.Bankofbaroda.In/Career.Htm

बैंक ऑफ़ बड़ौदा
Bank of Baroda

ಆನ್‌ಲೈನ್ ಪರೀಕ್ಷೆಯು 120 (30X4) ಅಂಕಗಳಿಗೆ ನಡೆಯಲಿದ್ದು, ನಾಲ್ಕು ವಿಭಾಗಗಳನ್ನು ಹೊಂದಿರುತ್ತದೆ. ಅವುಗಳೆಂದರೆ;
1. ಇಂಗ್ಲಿಷ್ ಭಾಷೆ
2. ಬ್ಯಾಂಕಿಂಗ್ ಕ್ಷೇತ್ರದ ಜ್ಞಾನ
3. ಸಾಮಾನ್ಯಜ್ಞಾನ/ಆರ್ಥಿಕತೆ
4. ತಾರ್ಕಿಕ ಸಾಮರ್ಥ್ಯ ಮತ್ತು ಕ್ವಾಂಟಿಟೇಟಿವ್ ಆಪ್ಟಿಟ್ಯೂಡ್

ಒಟ್ಟು 120 ಪ್ರಶ್ನೆಗಳನ್ನು ಕೇಳಲಾಗುತ್ತದೆ, ಪರೀಕ್ಷೆ ಬರೆಯಲು 2 ಗಂಟೆ ಕಾಲಾವಕಾಶ ಇರಲಿದೆ.ಇದರಲ್ಲಿ ಬ್ಯಾಂಕ್ ನಿಗದಿಪಡಿಸಿರು ವಷ್ಟು ಕನಿಷ್ಠ ಅಂಕ ಪಡೆದ ಅಭ್ಯರ್ಥಿಗಳನ್ನು ಮಾತ್ರ ನೇಮಕಕ್ಕೆ ಪರಿಗಣಿಸಲಾಗುತ್ತದೆ.

ಋಣಾತ್ಮಕ ಮೌಲ್ಯಮಾಪನ : ಆನ್‌ಲೈನ್ ಪರೀಕ್ಷೆಯ ವಸ್ತುನಿಷ್ಠ ಮಾದರಿಯಲ್ಲಿ ನಡೆಯುವ ಈ ಪರೀಕ್ಷೆಯ ಪ್ರತಿ ವಿಭಾಗದಲ್ಲಿಯೇ ಇಂತಿಷ್ಟೇ ಅಂಕ ಪಡೆದಿರಲೇಬೇಕೆಂಬ ನಿಯಮ ಇದ್ದು ಕನಿಷ್ಠ ಅರ್ಹತಾ ಅಂಕಗಳು/ಪ್ರತಿ ವಿಭಾಗದಲ್ಲಿ ಅಂಕಗಳ ಶೇಕಡಾವಾರು ಸಾಮಾನ್ಯ ಮತ್ತು ಇಡಬ್ಲ್ಯೂಎಸ್ ವರ್ಗಕ್ಕೆ 40% ಮತ್ತು ಮೀಸಲು ವರ್ಗಗಳಿಗೆ 35% ಆಗಿರುತದೆ. ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಮತ್ತು ರ‍್ಯಾಂಕ್ ಪಟ್ಟಿಯನ್ನು ರಚಿಸಲು ವಿಭಾಗ 1,2,3 ಮತ್ತು 4ರ ಸಂಚಿತ ಅಂಕಗಳನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ, ಅಂತೆಯೇ 0.25 ಋಣಾತ್ಮಕ ಮೌಲ್ಯಮಾಪನ ಇದೆ. ಕನ್ನಡದಲ್ಲಿ ಪರೀಕ್ಷೆ ಇರುವುದಿಲ್ಲ.

ಸೂಚನೆ: ಬ್ಯಾಂಕ್‌ನ ಅಧಿಕೃತ ವೆಬ್‌ಸೈಟ್‌ನ್ನೇ ಬಳಸಿ ಅರ್ಜಿ ಸಲ್ಲಿಸಿ, ಸೈಬರ್ ವಂಚಕರಿಂದ ದೂರವಿರಿ. ಅರ್ಜಿ ಸಲ್ಲಿಸುವ ಮೊದಲು ಅಧಿಸೂಚನೆ ಗಮನಿಸಿ.

1340 ಜೂನಿಯರ್ ಇಂಜಿನಿಯರ್ ನೇಮಕಾತಿ ಎಸ್‌ಎಸ್‌ಸಿಯಿಂದ ಅರ್ಜಿ ಆಹ್ವಾನ

ಸಿಬ್ಬಂದಿ ನೇಮಕಾತಿ ಆಯೋಗವು ಎಸ್‌ಎಸ್‌ಸಿ 2025ನೇ ಸಾಲಿನ ಜೂನಿಯರ್ ಇಂಜಿನಿಯರ್ ಪರೀಕ್ಷೆಯ ಅಧಿಸೂಚನೆ ಪ್ರಕಟಿಸಿದ್ದು, ಪರೀಕ್ಷೆಯ ಮೂಲಕ ಕೇಂದ್ರ ಸರಕಾರದ ವಿವಿಧ ಇಲಾಖೆ ಮತ್ತು ಅಧೀನ ಸಂಸ್ಥೆಗಳಲ್ಲಿ ಖಾಲಿ ಇರುವ ಜೂನಿಯರ್ ಇಂಜಿನಿಯರ್ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳಲಾಗುತ್ತದೆ.

ಸಿವಿಲ್, ಮೆಕಾನಿಕಲ್, ಎಲೆಕ್ಟ್ರಿಕಲ್, ಕ್ವಾಲಿಟಿ ಸರ್ವೇಯಿಂಗ್ ಮತ್ತು ಕಾಂಟ್ರಾಕ್ಟ್ ವಿಭಾಗದ ಜೂನಿಯರ್ ಇಂಜಿನಿಯರ್ ಹುದ್ದೆಗಳನ್ನು ಪರೀಕ್ಷೆ ಮೂಲಕ ಭರ್ತಿ ಮಾಡಲಾಗುತ್ತದೆ. ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಜುಲೈ-21 ಕೊನೆಯ ದಿನವಾಗಿದೆ. ಅಂದು ಸಂಜೆ 5 ಗಂಟೆಯವರೆಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಈ ವರ್ಷ ಒಟ್ಟು 1,340 ಹುದ್ದೆಗಳಿಗೆ ನೇಮಕ ಮಾಡಿಕೊಳ್ಳಲಾಗುತ್ತಿದೆ ಎಂದು ಎಸ್‌ಎಸ್‌ಸಿ ಪ್ರಕಟಣೆಯಲ್ಲಿ ತಿಳಿಸಿದೆ.

ಅರ್ಜಿ ತಿದ್ದುಪಡಿಗೆ ಅವಕಾಶ: ಅರ್ಜಿ ತಿದ್ದುಪಡಿಗೆ ಅಭ್ಯರ್ಥಿಗಳಿಗೆ ಆ.1ರಿಂದ ಆ.2ರ ತನಕ ಸಮಯವಿದೆ. ಒಂದು ಬಾರಿ ಅರ್ಜಿ ತಿದ್ದುಪಡಿ ಮಾಡುವುದಾದರೆ ಶುಲ್ಕವಾಗಿ 200 ರು. ಪಾವತಿಸಬೇಕು ಹಾಗೂ ಎರಡು ಬಾರಿಯ ನಂತರವೂ ಅರ್ಜಿ ತಿದ್ದುಪಡಿ ಬಯಸಿದಲ್ಲಿ 500 ರೂ. ಶುಲ್ಕ ಪಾವತಿಸಬೇಕಾಗುತ್ತದೆ. ಈ ಬಗ್ಗೆ ಅಧಿಸೂಚನೆಯಲ್ಲಿ ಸಂಪೂರ್ಣ ಮಾಹಿತಿ ಲಭ್ಯವಿದೆ.

ಅರ್ಹತೆಗಳೇನು?: ಸಿವಿಲ್, ಎಲೆಕ್ಟ್ರಿಕಲ್ ಅಥವಾ ಮೆಕಾನಿಕಲ್ ಇಂಜಿನಿಯರಿಂಗ್‌ನಲ್ಲಿ ಮೂರು ವರ್ಷಗಳ ಡಿಪ್ಲೊಮಾ ಅಥವಾ ಸಿವಿಲ್, ಎಲೆಕ್ಟ್ರಿಕಲ್ ಅಥವಾ ಮೆಕ್ಯಾನಿಕಲ್ ಇಂಜಿನಿಯರಿಂಗ್ ಪದವಿ ಪೂರ್ಣಗೊಳಿಸಿರುವ ಅಭ್ಯರ್ಥಿಗಳು ಈ ಸ್ಪರ್ಧಾತ್ಮಕ ಪರೀಕ್ಷೆ ಬರೆಯಬಹುದು. ಕೆಲವೊಂದು ವಿಭಾಗಗಳ ಹುದ್ದೆಗಳಿಗೆ ನಿರ್ದಿಷ್ಟ ಪದವಿ ಅಥವಾ ಡಿಪ್ಲೊಮಾ ವಿದ್ಯಾರ್ಹತೆಯನ್ನೇ ಬಯಸಲಾಗಿದೆ. ಈ ಕುರಿತು ಪೂರ್ಣ ವಿವರವನ್ನು ಅಧಿಸೂಚನೆಯಿಂದ ಪಡೆದುಕೊಳ್ಳಬಹುದು. ಮಿಲಿಟರಿ ಸರ್ವಿಸ್ ಇಂಜಿನಿಯರಿಂಗ್, ಗಡಿರಸ್ತೆ ಸಂಸ್ಥೆ ಮತ್ತು ನೌಕಾಪಡೆಯ ಕ್ವಾಲಿಟಿ ನಿರ್ದೇಶನಾಲಯದಲ್ಲಿರುವ ಹುದ್ದೆಗಳಿಗೆ ಸಂಬಂಧಪಟ್ಟ ವಿಭಾಗಗಳಲ್ಲಿ 2 ವರ್ಷಗಳ ಅನುಭವವನ್ನೂ ನಿರೀಕ್ಷಿಸಲಾಗಿದೆ.

ವಯೋಮಿತಿ ಎಷ್ಟು?: ಕೇಂದ್ರ ಜಲ ಆಯೋಗ, ಕೇಂದ್ರ ಲೋಕೋಪಯೋಗಿ ಇಲಾಖೆಯ ಹುದ್ದೆಗೆ ಗರಿಷ್ಠ 32 ವರ್ಷ ಮತ್ತು ಉಳಿದ ಎಲ್ಲಾ ಇಲಾಖೆಗಳು/ಸಂಸ್ಥೆಗಳಲ್ಲಿರುವ ಜೆ.ಇ ಹುದ್ದೆಗೆ ಗರಿಷ್ಠ ವಯೋಮಿತಿ 30 ವರ್ಷ ನಿಗದಿಪಡಿಸಲಾಗಿದೆ. ನಿಯಮಾನುಸಾರ ವಯೋಮಿತಿಯಲ್ಲಿ 3 ಎಸ್.ಸಿ/ಎಸ್.ಟಿ. ಅಭ್ಯರ್ಥಿಗಳಿಗೆ 5 ವರ್ಷ, ಒಬಿಸಿ ಅಭ್ಯರ್ಥಿಗಳಿಗೆ 3 ವರ್ಷ ಸಡಿಲಿಕೆ ನೀಡಲಾಗುತ್ತದೆ.

ಅರ್ಜಿ ಶುಲ್ಕವೆಷ್ಟು?: ಸಾಮಾನ್ಯ ಮತ್ತು ಇತರೆ ಹಿಂದುಳಿದ ವರ್ಗದ ಅಭ್ಯರ್ಥಿಗಳು 100 ರು. ಅರ್ಜಿ ಶುಲ್ಕ ಪಾವತಿಸಬೇಕು. ಮಹಿಳಾ ಅಭ್ಯರ್ಥಿಗಳು, ಎಸ್.ಸಿ/ಎಸ್.ಟಿ ಮತ್ತು ವಿಶೇಷಚೇತನ ಅಭ್ಯರ್ಥಿಗಳಿಗೆ ಶುಲ್ಕ ವಿನಾಯ್ತಿ ಇರುತ್ತದೆ.

ಆಯ್ಕೆ ವಿಧಾನ ಹೇಗೆ?

ಅರ್ಜಿ ಸಲ್ಲಿಸಿದ ಎಲ್ಲ ಅಭ್ಯರ್ಥಿಗಳಿಗೆ ಮೊದಲು ಕಂಪ್ಯೂಟರ್ ಆಧಾರಿತ ಪರೀಕ್ಷೆ (ಪತ್ರಿಕೆ-1, ಸಾಮಾನ್ಯ ಜ್ಞಾನ 50 ಪ್ರಶ್ನೆಗಳು/ಅಂಕಗಳು,ಸಾಮಾನ್ಯ ಬುದ್ಧಿಮತ್ತೆ ,ರೀಸನಿಂಗ್‌ನ 50 ಪ್ರಶ್ನೆಗಳು/50 ಅಂಕಗಳು ಹಾಗೂ ಆಯಾ ಇಂಜಿನಿಯರಿಂಗ್ ವಿಭಾಗಗಳಿಗೆ ಸಂಬಂಧಿಸಿದಂತೆ 100 ಪ್ರಶ್ನೆಗಳು/100 ಅಂಕಗಳಿದ್ದು ಒಟ್ಟಾರೆ 200 ಅಂಕಗಳಿಗೆ ಎರಡು ತಾಸಿನ ಅವಧಿ) ನಡೆಸಿ, ಇದರಲ್ಲಿ ಅರ್ಹತೆ ಪಡೆದ ಅಭ್ಯರ್ಥಿಗಳು ಮಾತ್ರ ಎರಡನೇ ಪರೀಕ್ಷೆ (ಪತ್ರಿಕೆ-2 ಇಲ್ಲಿ 300 ಅಂಕಗಳಿಗೆ 100 ಪ್ರಶ್ನೆಗಳಿವೆ.ತಪ್ಪು ಉತ್ತರಗಳಿಗೆ 0.25 ಅಂಕ ಕಳೆಯಲಾಗುತ್ತದೆ) ಬರೆಯಲು ಅರ್ಹರಾಗುತ್ತಾರೆ. ಪತ್ರಿಕೆ-1 ಮತ್ತು ಪತ್ರಿಕೆ-2ರಲ್ಲಿ ಅಭ್ಯರ್ಥಿಗಳು ಪಡೆದ ಅಂಕಗಳನ್ನು ಪರಿಗಣಿಸಿ ಅಭ್ಯರ್ಥಿಗಳ ಆಯ್ಕೆ ಪಟ್ಟಿ ಸಿದ್ಧಪಡಿಸಿ ದಾಖಲೆ ಪರಿಶೀಲನೆ ನಡೆಸಿ ನೇಮಕ ಮಾಡಿಕೊಳ್ಳಲಾಗುತ್ತದೆ.

ಪರೀಕ್ಷಾ ಕೇಂದ್ರ: ರಾಜ್ಯದ ಅಭ್ಯರ್ಥಿಗಳು ಬೆಂಗಳೂರು, ಬೆಳಗಾವಿ, ಹುಬ್ಬಳ್ಳಿ, ಕಲಬುರಗಿ, ಮಂಗಳೂರು, ಮೈಸೂರು, ಶಿವಮೊಗ್ಗ ಮತ್ತು ಉಡುಪಿ ಪರೀಕ್ಷಾ ಕೇಂದ್ರಗಳಲ್ಲಿ ತಮಗೆ ಸೂಕ್ತವಾದ ಮೂರು ಕೇಂದ್ರಗಳನ್ನು ಆಯ್ಕೆ ಮಾಡಬಹುದು. ಅರ್ಜಿ ಸಲ್ಲಿಸಿದ ಬಳಿಕ ಪರೀಕ್ಷಾ ಕೇಂದ್ರ ಬದಲಾವಣೆ ಮಾಡುವಂತೆ ವಿನಂತಿಸುವ ಯಾವುದೇ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ. ಹೀಗಾಗಿ, ಅಭ್ಯರ್ಥಿಗಳು ಪರೀಕ್ಷಾ ಕೇಂದ್ರಗಳನ್ನು ಎಚ್ಚರಿಕೆಯಿಂದ ಆಯ್ಕೆ ಮಾಡಿಕೊಳ್ಳಬೇಕು ಮತ್ತು ಅದನ್ನು ಸರಿಯಾಗಿ ಅರ್ಜಿಯಲ್ಲಿ ನಮೂದಿಸಬೇಕು ಎಂದು ಅಧಿಸೂಚನೆಯಲ್ಲಿ ಸೂಚನೆ ನೀಡಲಾಗಿದೆ.

ಹೆಚ್ಚಿನ ಮಾಹಿತಿಗೆ: https://ssc.gov.in

ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ: 156 ಹುದ್ದೆಗಳಿಗೆ ಅರ್ಜಿ ಆಹ್ವಾನ

ದೇಶದ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ ಸೈಂಟಿಸ್ಟ್ ಮತ್ತು ಎಂಜಿನಿಯರ್ ಸೇರಿ ಒಟ್ಟು 156 ಹುದ್ದೆಗಳ ನೇಮಕಾತಿಗೆ ಅಧಿ ಸೂಚನೆ ಪ್ರಕಟಿಸಿದೆ.

ಅರ್ಜಿ ಸಲ್ಲಿಸಲು ಕೊನೆಯ ದಿನ: ಜುಲೈ 18

ನೇಮಕ ಯಾವ್ಯಾವ **ವಿಭಾಗಗಳಲ್ಲಿ?:** ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ಇಂಜಿನಿ ಯರಿಂಗ್, ಮೆಕಾನಿಕಲ್, ಕಂಪ್ಯೂಟರ್ ಸೈನ್ಸ್ ಮತ್ತು ಇಂಜಿನಿಯರಿಂಗ್, ಎಲೆಕ್ಟ್ರಿಕಲ್, ಮೆಟೀರಿಯಲ್ ಸೈನ್ಸ್/ ಮೆಟಲರ್ಜಿಕಲ್ ಇಂಜಿನಿಯರಿಂಗ್, ಫಿಸಿಕ್ಸ್, ಕೆಮಿಸ್ಟ್ರಿ, ಏರೋನಾಟಿಕಲ್ ಮತ್ತು ಏರೋಸ್ಪೇಸ್ ಇಂಜಿನಿಯರಿಂಗ್, ಸಿವಿಲ್, ಮ್ಯಾಥ ಮೆಟಿಕ್ಸ್, ಬಯೋ ಮೆಡಿಕಲ್ ಇಂಜಿನಿ ಯರಿಂಗ್, ಎಂಟಮಾಲಜಿ, ಸೈಕಾಲಜಿ ವಿಭಾಗದಲ್ಲಿ ನೇಮಕಾತಿ ನಡೆಯಲಿದೆ.

ಅರ್ಹತೆಗಳೇನು?: ಇಂಜಿನಿಯರಿಂಗ್ ವಿಭಾಗದವರು ಅದೇ ವಿಭಾಗಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಅಥವಾ ಪೂರಕ ವಿಷಯಗಳಲ್ಲಿ ಇಂಜಿನಿಯರಿಂಗ್ ಪದವಿ ಪಡೆದಿರಬೇಕು, ಅದರೊಂದಿಗೆ ಗೇಟ್ ಅರ್ಹತೆಯನ್ನೂ ಪರಿಗಣಿಸಲಾಗುತ್ತದೆ. ಇಂಜಿನಿಯರಿಂಗೇತರ ವಿಭಾಗದಲ್ಲಿಯೂ ಆಯಾ ವಿಭಾಗಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಪಡೆದವರಿಂದ ಅರ್ಜಿಗಳನ್ನು ನಿರೀಕ್ಷಿಸಲಾಗಿದೆ. ಆದರೆ ಯಾವುದೇ ವಿಭಾಗಕ್ಕೆ ಅರ್ಜಿ ಸಲ್ಲಿಸುವುದಾದರೂ ನಿಗದಿತ ವಿದ್ಯಾರ್ಹತೆಯಲ್ಲಿ ಮೊದಲ ದರ್ಜೆಯಲ್ಲಿ ತೇರ್ಗಡೆಯಾಗಿದ್ದರೆ ಮಾತ್ರ ಅವಕಾಶ ನೀಡಲಾಗುತ್ತದೆ. ಅಭ್ಯರ್ಥಿಗಳು ಅಂತಿಮ ಪದವಿ/ಸೆಮಿಸ್ಟರ್ ಓದುತ್ತಿದ್ದು ಅಥವಾ ಪರೀಕ್ಷೆ ಬರೆದು ಫಲಿತಾಂಶದ ನಿರೀಕ್ಷೆಯಲ್ಲಿದ್ದರೂ ಅರ್ಜಿ ಸಲ್ಲಿಸಬಹು ದಾಗಿದೆ. ಆದರೆ ಮೊದಲ ದರ್ಜೆಯಲ್ಲಿ ತೇರ್ಗಡೆಯಾಗುವುದು ಕಡ್ಡಾಯ ಮಾತ್ರವಲ್ಲ, ಅಭ್ಯರ್ಥಿಗಳು 2025ರ ಜುಲೈ 31ರೊಳಗೆ ತೇರ್ಗಡೆಯಾಗಿರುವ ಕುರಿತಾದ ಪ್ರಮಾಣಪತ್ರವನ್ನು ಹೊಂದಿರಬೇಕಾ ಗುತ್ತದೆ.

ವಯೋಮಿತಿ ಎಷ್ಟು?: ಅರ್ಜಿ ಸಲ್ಲಿಸುವವರು 35 ವರ್ಷದೊಳಗಿನವರಾಗಿರಬೇಕು. ಒಬಿಸಿ ಅಭ್ಯರ್ಥಿಗಳಾಗಿದ್ದಲ್ಲಿ ಗರಿಷ್ಠ 38 ವರ್ಷ ಹಾಗೂ ಎಸ್.ಸಿ/ಎಸ್.ಟಿ. ಅಭ್ಯರ್ಥಿಗಳಾ ಗಿದ್ದಲ್ಲಿ ಗರಿಷ್ಠ 40 ವರ್ಷ ನಿಗದಿಪಡಿಸ ಲಾಗಿದೆ.

ಅರ್ಜಿ ಶುಲ್ಕ: ಎಸ್.ಸಿ/ಎಸ್.ಟಿ/ವಿಶೇಷ ಚೇತನರು ಮತ್ತು ಮಹಿಳಾ ಅಭ್ಯರ್ಥಿಗಳು ಹೊರತುಪಡಿಸಿ ಉಳಿದ ಅಭ್ಯರ್ಥಿಗಳು 100 ರೂ. ಶುಲ್ಕ ಪಾವತಿಸಬೇಕು.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: :https://rac.gov.in

ಸಿ-ಡಾಕ್‌ನಲ್ಲಿ 280 ಹುದ್ದೆಗಳಿಗೆ ನೇಮಕಾತಿ

ಸೆಂಟರ್ ಫಾರ್ ಡೆವಲಪ್‌ಮೆಂಟ್ ಅಡ್ವಾನ್ಸ್ ಕಂಪ್ಯೂಟಿಂಗ್‌ನಲ್ಲಿ (ಸಿ-ಡಿಎಸಿ) ಟೆಕ್ನಿಕಲ್ ಮ್ಯಾನೇಜರ್ ಮತ್ತು ಡಿಸೈನ್ ಇಂಜಿನಿಯರಿಂಗ್ ಹುದ್ದೆಗಳ ನೇಮಕಾತಿಗೆ ಅರ್ಜಿ ಆಹ್ವಾನಿಸಿದೆ.

ಯಾವ್ಯಾವ ಹುದ್ದೆಗಳು: ಚಿಪ್ ಡಿಸೈನ್-180, ಎಲೆಕ್ಟ್ರಾನಿಕ್ ಹಾರ್ಡ್‌ವೇರ್ ಡಿಸೈನ್, 25, ಸಾಫ್ಟ್‌ವೇರ್ ಎಕೋಸಿಸ್ಟಮ್ ಡೆವಲಪ್ಮೆಂಟ್ -65, ಫೋಟೋನಿಕ್ಸ್-10 ಹುದ್ದೆಗಳು ಸೇರಿ ಒಟ್ಟು 280 ಹುದ್ದೆಗಳಿಗೆ ನೇಮಕಾತಿ ನಡೆಯಲಿದೆ.

ಅರ್ಜಿ ಸಲ್ಲಿಸಲು ಕೊನೆಯ ದಿನ: ಜುಲೈ 31.

ಅರ್ಹತೆಗಳೇನು?: ಅಭ್ಯರ್ಥಿಗಳು ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಸಂಬಂಧಿತ ವಿಷಯಗಳಲ್ಲಿ ಬಿ.ಸಿ.ಎ, ಬಿ.ಎಸ್ಸಿ, ಬಿ.ಟೆಕ್, ಎಂ.ಸಿ.ಎ, ಎಂ.ಎಸ್ಸಿ, ಎಂ.ಇ ಅಥವಾ ಎಂ. ಟೆಕ್, ಪಿ.ಎಚ್.ಡಿ ವಿದ್ಯಾರ್ಹತೆ ಹೊಂದಿರ ಬೇಕು. ಎಲ್ಲಾ ಹುದ್ದೆಗಳಿಗೂ ನಿಗದಿತ ಸೇವಾನು ಭವ ನಿರೀಕ್ಷಿಸಲಾಗಿದೆ.

ವಯೋಮಿತಿ ಎಷ್ಟು?: ವಿವಿಧ ಹುದ್ದೆಗಳಿಗೆ ವಿವಿಧ ವಯೋಮಿತಿ ನಿಗದಿಪಡಿಸಲಾಗಿದೆ. ಡಿಸೈನರ್ ಎಂಜಿನಿಯರ್‌ಗಳಿಗೆ 30, ಸೀನಿಯರ್ ಡಿಸೈನರ್ ಎಂಜಿನಿಯರ್‌ಗಳಿಗೆ 33, ಪ್ರಿನ್ಸಿಪಲ್ ಡಿಸೈನರ್ ಎಂಜಿನಿಯರಿಂಗ್‌ಗಳಿಗೆ 37. ಟೆಕ್ನಿಕಲ್ ಮ್ಯಾನೇ ಜರ್‌ಗಳಿಗೆ 41 ವರ್ಷ ವಯೋಮಿತಿ ನಿಗದಿಪಡಿಸ ಲಾಗಿದೆ. ಮೀಸಲಾತಿ ವ್ಯಾಪ್ತಿಗೆ ಒಳಪಡುವ ಅಭ್ಯರ್ಥಿಗಳಿಗೆ ಗರಿಷ್ಠ ವಯೋಮಿತಿಯಲ್ಲಿ ಸಡಿಲಿಕೆ ನೀಡಲಾಗುತ್ತದೆ.

ಆಯ್ಕೆ ವಿಧಾನ ಹೇಗೆ?: ಲಿಖಿತ ಪರೀಕ್ಷೆ ಮತ್ತು ಸಂದರ್ಶನದ ಮೂಲಕ ಅಭ್ಯರ್ಥಿಗಳ ಆಯ್ಕೆ ನಡೆಯಲಿದೆ.

ಅರ್ಜಿ ಶುಲ್ಕ: ಎಲ್ಲ ವರ್ಗದ ಅಭ್ಯರ್ಥಿಗಳಿಗೂ ಶುಲ್ಕದಿಂದ ಸಂಪೂರ್ಣ ವಿನಾಯಿತಿ ನೀಡಲಾಗಿದೆ.

ವೇತನ: ವಾರ್ಷಿಕ 18 ಲಕ್ಷ ರೂ.ನಿಂದ 42 ಲಕ್ಷ ರೂ.ಗಳವರೆಗೆ ಇರಲಿದೆ.

ಹೆಚ್ಚಿನ ಮಾಹಿತಿಗೆ: https://www.cdac.in

ಆರ್. ಕೆ. ಬಾಲಚಂದ್ರ
ಲೇಖಕರು, ಬ್ಯಾಂಕಿಂಗ್ ತರಬೇತುದಾರರು ಹಾಗೂ ವೃತ್ತಿ ಮಾರ್ಗದರ್ಶಕರು, ಬೆಂಗಳೂರು.

ವಿಶ್ವವಾಣಿ @vishwavaninews
ಆರಾಮ
ಅನುದಿನವೂ ವಿರಾಮಕ್ಕೆ ಒಂದು ನೆಪ
ಬೆಂಗಳೂರು 10-07-2025 ಗುರುವಾರ

ಚಿತ್ತವಿಹಾರ

ಸಾಧನೆಗೆ ವಯಸ್ಸು ಮುಖ್ಯವಲ್ಲ!

● ಮುತ್ತು ಯ.ವಡ್ಡರ

ಸಾಧನೆಗೆ ವಯಸ್ಸಿನ ಮಿತಿಯಿಲ್ಲ; ಮನಸ್ಸು, ಏಕಾಗ್ರತೆ, ನಿಷ್ಠೆ ಮತ್ತು ಶಿಸ್ತು ಮುಖ್ಯ. ಕಿರಿಯರಾಗಲಿ, ಹಿರಿಯ ರಾಗಲಿ ಸಾಧನೆ ಮಾಡಲು ಸಾಧ್ಯ; ನಿರಂತರವಾಗಿ ಕೆಲಸ ಮಾಡುತ್ತಾ ಹೋದರೆ, ಹೊರಟ ದಾರಿ ಸರಿ ಇದ್ದರೆ, ಯಶಸ್ಸು ದೊರಕಿಯೇ ದೊರಕುತ್ತದೆ. ನಿತ್ಯ ಸಾಧನೆಯ ಕನಸು ಕಾಣುವ ನಿದ್ರೆ ನಮ್ಮದಾಗಬೇಕು ವಿನಃ ರಾತ್ರಿ ಆಯಿತು ಎಂಬ ವಿಚಾರಕ್ಕೆ ಬರುವ ನಿದ್ದೆ ನಮ್ಮದಾಗ ಬಾರದು. ಸಾಧನೆಯನ್ನು, ಕೆಲಸವನ್ನು ಸೋಮಾರಿತನ ದಿಂದ ಮುಂದೂಡಬಾರದು. ಇರುವ ಅಲ್ಪ ದಿನಗಳ ಲ್ಲಿಯೇ ನಾವು ಸಾಧಕರಾ ಗೋಣ. ಸಾಧಕರಾಗಲು ಯಾವುದೇ ವಯಸ್ಸಿನ ಮಿತಿ ಇಲ್ಲ. ದಿನಗಳು ಬರಲಿ ಮುಂದೆ ನೋ ಡೋಣ ಎಂದು ಕಾಲಹರಣ ಮಾಡುತ್ತಾ ಹೋದರೆ ಆ ದಿನ ಬೇರೆಯವರ ಪಾಲಾಗುವುದು. ಯಾವ ಕ್ಷೇತ್ರದಲ್ಲಿಯೇ ಆಗಲಿ ಸಾಧನೆ ಮಾಡಬೇಕೆಂದರೆ ಪರಿಶ್ರಮದ ಪ್ರಯತ್ನಗಳು ಬೇಕೇ ಬೇಕು. ರಾತ್ರೋ ರಾತ್ರಿ ಸಾಧಕರಾದ ಇತಿಹಾಸ ಎಲ್ಲೂ ಇಲ್ಲ! ಸಾಧನೆಯ ಹಿಂದೆ ಎಷ್ಟೋ ದಿನಗಳ, ಗಂಟೆಗಳ ತಮ್ಮದೇ ಆದ ಶ್ರಮವಿದೆ.

ಬ್ರಿಟಿಷರ ವಿರುದ್ಧ ಹೋರಾಡಿದ ಭಗತ್‌ಸಿಂಗ್, ಕೇವಲ 23 ವರ್ಷ ಬದುಕಿ ತನ್ನ ಪ್ರಾಣವನ್ನೇ ಪಣಕಿಟ್ಟ ಧೀರ. 24 ವರ್ಷ ಬದುಕಿದರೂ, ಸ್ವಾತಂತ್ರ್ಯಕ್ಕಾಗಿಯೇ ಹೋರಾಡಿ ಹುತಾತ್ಮರಾದ ಚಂದ್ರಶೇಖರ ಅಜಾದ್. 23ನೆಯ ವರ್ಷಕ್ಕೆ ಭಾರತ ಮಾತೆಯ ಸ್ವಾತಂತ್ರ್ಯಕ್ಕಾಗಿ ತನ್ನ ಪ್ರಾಣ ವನ್ನೇ ಅರ್ಪಿಸಿದ ಸುಖದೇವ್. 22 ವರ್ಷದಲ್ಲಿ ಸ್ವಾತಂತ್ರ್ಯಕ್ಕಾಗಿ ನೇಣು ಗಂಬಕ್ಕೆ ಮುತ್ತು ಕೊಟ್ಟ ರಾಜ್ ಗುರು. ಏಳನೇ ತರಗತಿಯಲ್ಲಿ ಓದುತ್ತಿರು ವಾಗಲೇ ಸಿನಿಮಾ ನಿರ್ದೇಶಕನಾದ ಮಾಸ್ಟರ್ ಕಿಶನ್! 39 ವರ್ಷ ಬದುಕಿದರೂ ಕೂಡ ಇಡೀ ವಿಶ್ವವೇ ಭಾರತದ ಕಡೆಗೆ ತಿರುಗಿ ನೋಡುವಂತೆ ಮಾಡಿದ ಸ್ವಾಮಿ ವಿವೇಕಾ ನಂದರು. 29 ವರ್ಷದ ಕೆಚ್ಚೆದೆಯ ಯುವ ಬ್ರಿಟಿಷರ ವಿರುದ್ಧ ಸಿಡಿದೆದ್ದು, ಮೊದಲ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿಯಾಗಿ, ಕೊನೆಗೆ ಗುಂಡಿಗೆ ಬಲಿಯಾದ ಮಂಗಲ್ ಪಾಂಡೆ. ಇಂತಹ ಹಲವಾರು ಸಾಧಕರ ಕುರಿತು ಓದಿ ದ್ದೇವೆ; ಇವರ ಈ ಸಾಧನೆಗೆ ಮುಖ್ಯವಾದದ್ದು ಪ್ರಾಮಾ ಣಿಕ ಪ್ರಯತ್ನ.

ಮೇಲಿನ ಸಾಧಕರನ್ನು ನೋಡಿದರೆ ಸಾಧನೆಗೆ ವಯಸ್ಸು ಮುಖ್ಯವಲ್ಲ, ಮನಸ್ಸು ಮುಖ್ಯ ಎಂಬುದು ಅರಿವಾ ಗುತ್ತದೆ. ನಾವು ಸಾಧಕರು ಆಗಬೇಕೆಂಬ ಹಠ ಇರಬೇಕು. ಆ ಹಠಕ್ಕೆ ತಕ್ಕ ಹಾಗೆ ಪರಿಶ್ರಮವಿರಬೇಕು. ನಿಮ್ಮವರಿಗೆ ನೀವು ಯಾರೆಂಬುದು ಗೊತ್ತಾಗಬೇಕಾದರೆ ನಿಮ್ಮಲ್ಲಿರುವ ಸಾಧನೆ ಇಡೀ ಜಗತ್ತಿಗೆ ಗೊತ್ತಾಗಬೇಕು. ಇವರು ಯಾರು ನಮಗೆ ಗೊತ್ತಿಲ್ಲ ಅಂದವರು ಇವನು ನಮ್ಮವನು ಅನ್ನುವ ಮಟ್ಟಕ್ಕೆ ನಾವು ಬೆಳೆಯಲೇಬೇಕು. ಸಾಧಿಸುವ ಹಂಬಲ ಈ ಕ್ಷಣದಿಂದಲೇ ಪ್ರಾರಂಭವಾಗಲಿ; ಸೂಕ್ತ ಗುರುವನ್ನು ಆರಿಸಿಕೊಳ್ಳಿ; ಗುರು ಹೇಳಿದ ಮಾರ್ಗದಲ್ಲಿ ನಡೆಯಿರಿ. ಆ ಗುರು ಯಾರು ಬೇಕಾದರೂ ಆಗಬಹುದು: ನಿಮ್ಮ ತಂದೆ, ತಾಯಿ, ಉಪಾಧ್ಯಾಯರು, ಗುರೂಜಿ ಅಥವಾ ಒಂದು ಉತ್ತಮ ಪುಸ್ತಕವೂ ಆಗಬಹುದು! ಗುರು ಹಾಕಿಕೊಟ್ಟ ಮಾರ್ಗ ದಲ್ಲಿ ನಡೆಯಿರಿ, ನಿಷ್ಠೆಯಿಂದ ದುಡಿಯಿರಿ, ಯಶಸ್ಸು ನಿಮ್ಮದಾಗುತ್ತದೆ.

● ಬೇಲೂರು ರಾಮಮೂರ್ತಿ

ಗುರು ಮತ್ತು ದೇವರು ಇಬ್ಬರೂ ಇದ್ದರೆ ನಾನು ಮೊದಲು ಗುರುವಿಗೇ ನಮಸ್ಕರಿಸುತ್ತೇನೆ. ಏಕೆಂದರೆ ಗುರು ತಾನೇ ನನಗೆ ದೇವರನ್ನು ಸೇರುವ ಮಾರ್ಗವನ್ನು ತೋರಿಸಿದ್ದು. ಹೀಗಾಗಿ ನನ್ನ ಮೊದಲ ಪ್ರಣಾಮ ಗುರುವಿಗೆ ಪ್ರಣಾಮ.

-ಸಂತ ಕಬೀರ

ಗುರು ಎನ್ನುವ ದಿವ್ಯ ಶಕ್ತಿ

ಸದಾಶಿವ ಸಮಾರಂಭಾಂ
ಶಂಕರಾಚಾರ್ಯ ಮಧ್ಯಮಾಂ
ಅಸ್ಮದಾಚಾರ್ಯ ಪರ್ಯಂತಾಂ
ವಂದೇ ಗುರುಪರಂಪರಾಂ

ಇದರ ಅರ್ಥ ಗುರು ಪರಂಪರೆ ಸಾಕ್ಷಾತ್ ಈಶ್ವರನಿಂದ ಆರಂಭವಾಗಿದೆ. ಶಾಲೆಯಲ್ಲಿ ವಿದ್ಯೆ ಕಲಿಸುವ ಗುರುಗಳು ಹೊರಗಿನ ಗುರುಗಳಾದರೆ ಮನೆಯಲ್ಲಿ ತಂದೆ ತಾಯಿಯರು ಮೊದಲ ಗುರುಗಳು. ಮನೆಯ ಮೊದಲ ಪಾಠಶಾಲೆ ಜನನಿ ತಾನೇ ಮೊದಲ ಗುರು ಎನ್ನುವ ಮಾತು ನಮಗೆ ತಿಳಿದಿದೆ. ಗುರು ಇಲ್ಲದ ಲೋಕವಿಲ್ಲ.

ಏಕಾಕ್ಷರ ಸ್ಯಾಹಿ ಗುರು: ಪ್ರದಾತಾ
ಶಾಸ್ತ್ರೋಪದೇಷ್ಟಾ ಕಿಮಂ ಭಾಷಣೀಯಮ್

ಒಂದು ಅಕ್ಷರವನ್ನು ಕಲಿಸಿದ ಮಾತ್ರದಿಂದಲೇ ಗುರುವಾಗುವ ಸಂಭವ ಇರುವಾಗ ಇನ್ನು ಶಾಸ್ತ್ರಗಳನ್ನೆಲ್ಲಾ ಪಾಠ ಮಾಡಿದ ಮಹನೀಯರ ವಿಚಾರದಲ್ಲಿ ಹೇಳತಕ್ಕದ್ದೇನು! ಹೇಗೆ ಗಾಳಿಯಿಲ್ಲದ ಪ್ರಪಂಚವನ್ನು ಊಹಿಸಿಕೊಳ್ಳುವುದು ಅಸಾಧ್ಯವೋ ಹಾಗೆ ಗುರುವಿಲ್ಲದ ಲೋಕವನ್ನು ಊಹಿಸಿಕೊಳ್ಳುವುದೂ ಕಷ್ಟ. ಅದಕ್ಕೇ ಈ ಶ್ಲೋಕ ಇರುವುದು :

ಗುರುವೇ ಸರ್ವಲೋಕಾನಾಂ
ಭಿಷಜೇ ಭವರೋಗಿನಾಂ
ನಿಧಯೇ ಸರ್ವಲೋಕಾನಾಮ
ದಕ್ಷಿಣಾಮೂರ್ತಿಯೇ ನಮ:

ಗುರವೇ - ಇದು ಗುರು ಎಂಬ ಪದದ ಸಂಬೋಧನಾ ರೂಪ. ಅಂದರೆ ಶಿಕ್ಷಕ ಅಥವಾ ಮಾರ್ಗದರ್ಶಕ ಎಂದು ಅರ್ಥ ಸರ್ವಲೋಕಾನಾಂ - ಇದು ಎಲ್ಲ ಲೋಕಗಳ ಅಥವಾ ಎಲ್ಲ ಜಗತ್ತಿನ ಎನ್ನುವ ಅರ್ಥ ಕೊಡುತ್ತದೆ

ಭಿಷಜೇ ಭವರೋಗಿಣಾಂ
-ಎಲ್ಲ ಜೀವಿಗಳ ಭವರೋಗಗಳನ್ನು ದೂರ ಮಾಡುವ ವೈದ್ಯ, ಸಂಸಾರವೆಂಬ ರೋಗಕ್ಕೆ ಚಿಕಿತ್ಸಕ
ನಿಧಯೇ ಸರ್ವಲೋಕಾನಾಂ
-ಎಲ್ಲ ಲೋಕಗಳಲ್ಲೂ ಇರುವಂಥವನು
ದಕ್ಷಿಣಾಮೂರ್ತಯೇ ನಮ;
-ಜ್ಞಾನಭಂಡಾರವಾದ ಇಂಥಾ ದಕ್ಷಿಣಾಮೂರ್ತಿಗೆ ನನ್ನ ನಮನ
ಗುರು ಬ್ರಹ್ಮ, ಗುರು ವಿಷ್ಣು, ಗುರುದೇವೋ ಮಹೇಶ್ವರ:
ಗುರು ಸಾಕ್ಷಾತ್ ಪರಬ್ರಹ್ಮ ತಸ್ಮೈ ಗುರವೇ ನಮ:

ಗುರು ಬ್ರಹ್ಮನೂ ಹೌದು, ವಿಷ್ಣುವೂ ಹೌದು, ಮತ್ತು ಮಹೇಶ್ವರನೂ ಹೌದು; ಅಷ್ಟೇ ಏಕೆ ಗುರು ಸಾಕ್ಷಾತ್ ಪರಬ್ರಹ್ಮನೇ ಆಗಿದ್ದಾನೆ.

ಕಬೀರರ ಗುರುದೃಷ್ಟಿ

ಮಹಾತ್ಮಾ ಕಬೀರರನ್ನು ಒಮ್ಮೆ ಒಬ್ಬರು ಕೇಳಿದರಂತೆ. ನಿಮಗೆ ಯಾರು ಹೆಚ್ಚು ಪ್ರಿಯ ಗುರುವೋ ಇಲ್ಲವೇ ದೇವರೋ ಎಂದು. ಅದಕ್ಕೆ ಕಬೀರರು ನನಗೆ ಮೊದಲು ಗುರು ಪ್ರಿಯ. ನನ್ನ ಮುಂದೆ ಅಕಸ್ಮತ್ತಾಗಿ ಗುರು ಮತ್ತು ದೇವರು ಇಬ್ಬರೂ ಇದ್ದರೆ ನಾನು ಮೊದಲು ಗುರುವಿಗೇ ನಮಸ್ಕರಿಸುತ್ತೇನೆ. ಏಕೆಂದರೆ ಗುರು ತಾನೇ ನನಗೆ ದೇವರನ್ನು ಸೇರುವ ಮಾರ್ಗವನ್ನು ತೋರಿಸಿದ್ದು. ಹೀಗಾಗಿ ನನ್ನ ಮೊದಲ ಪ್ರಣಾಮ ಗುರುವಿಗೆ ಎಂದರು.

ಸಾಕ್ಷಾತ್ ವಾಸುದೇವನನ್ನೂ ನಾವು ಗುರುವೆಂದು ಪರಿಗಣಿಸುತ್ತೇವೆ. ಅದಕ್ಕೇ ಅವನನ್ನು, ವಸುದೇವ ಸುತಂ ದೇವಂ ಕಂಸ ಚಾಣೂರ ಮರ್ದನಂ,

ದೇವಕೀ ಪರಮಾನಂದಂ ಕೃಷ್ಣಂ ವಂದೇ ಜಗದ್ಗುರುಂ

ಎಂದಿದ್ದಾರೆ. ಲೋಕದಲ್ಲಿ ಯಾರಾದರೂ ಜಗದ್ಗುರುಗಳು ಅಂತ ಇದ್ದರೆ ಅವನು ಶ್ರೀಕೃಷ್ಣ ಪರಮಾತ್ಮ ಮಾತ್ರ.

ಗು ಕಾರಶ್ಚಾಂ ಧ ಕಾರ: ಸ್ಯಾತ್
ರು ಕಾರಸ್ತನ್ನಿರೋಧಕ:
ಅಂಧಕಾರ ನಿರೋಧಿತ್ವಾತ್
ಗುರುರಿತ್ಯಾಭಿದೀಯತೇ

ಅಂದರೆ, ಶಿಷ್ಯರ ಅಂಧಕಾರವನ್ನು ದೂರ ಮಾಡುವ ಜ್ಞಾನಮೂರ್ತಿ ಸಾಕ್ಷಾತ್ ಗುರು. ಅಜ್ಞಾನವೇ ಶತೃ, ಮೃತ್ಯು ಮತ್ತು ಸರ್ವ ಅನರ್ಥಗಳಿಗೂ ಕಾರಣವಾಗುವುದು. ಗುರು ಲೌಕಿಕ ಅಜ್ಞಾನವನ್ನು ದೂರ ಮಾಡಿದರೆ ಸದ್ಗುರು ಆತ್ಮದ ಅಜ್ಞಾನವನ್ನು ದೂರಮಾಡುತ್ತಾರೆ. ಹೀಗಾಗಿ ನಮ್ಮ ಅಧ್ಯಾತ್ಮಿಕ ಪರಂಪರೆಯಲ್ಲಿ ವ್ಯಾಸರು ಸದ್ಗುರುಗಳು.

ಜೀವಾತ್ಮನಿಗೆ ಗೌರವ ಕೊಡು

ನಯದಿಂದ ಸೋಕು, ನೀಂ ದಯೆಯಿಂದ ನೋಡದನು
ಭಯದಿನೋಲಗಿಸು, ನೀಂ ಪೂಜೆಗೈಯದನು
ಸ್ವಯಮಂಕುರಿತ ಸಕಲ ವಿಶ್ವಸತ್ತ್ವವೊ; ಜೀವ
ಪ್ರಿಯತಮವೊ ಸೃಷ್ಟಿಯಲಿ - ಮಂಕುತಿಮ್ಮ॥

ಈ ಜಗತ್ತಿನಲ್ಲಿ ಜೀವ ಎಂಬುದು ಬಹಳವೇ ಅಪ್ರತಿಮವಾಗಿರುವಂತದ್ದು. ಈ ಜಗತ್ತಿನಲ್ಲಿ ಜೀವವು ಪ್ರಿಯತಮನಂತಹುದು. ಜೀವವೇ ಎಲ್ಲಕ್ಕೂ ಮೂಲವೇ ಆಗಿದೆ. ಆದುದರಿಂದ ಈ ಶ್ರೇಷ್ಠವಾದ ಜೀವಾತ್ಮವನ್ನು ನೀ ನಯದಿಂದ ಮುಟ್ಟುವಂತವನಾಗು, ದಯೆಯಿಂದ, ಪ್ರೀತಿ, ಕರುಣೆಗಳಿಂದ, ವಿಶ್ವಾಸದಿಂದ ನೋಡುವಂತನಾಗು. ಆ ಜೀವಾತ್ಮವನು ಭಯ ಭಕ್ತಿಯಿಂದ ಒಲೈಸುವಂತವನಾಗು ಹಾಗೆಯೇ ಆ ಆತ್ಮವನ್ನು ಪೂಜೆಗೈಯ್ಯುತ್ತಾ ಆರಾಧಿಸು. ಈ ಎಲ್ಲಾ ಕ್ರಿಯೆಗೂ ಆತ್ಮ, ಜೀವವೇ ಮುಖ್ಯವಾಗಿರುವುದನ್ನು ನೀನು ಅರಿಯಬೇಕು ಎಂದು ಹೇಳಿದ್ದಾರೆ.

ಪರಮಾತ್ಮ ಎಂಬ ಮಹಾನ್ ಶಕ್ತಿಯೆಂಬುದು ತಾನೇ ತಾನಾಗಿ ಇರುವಂತದು. ಅದಕ್ಕೆ ಹುಟ್ಟು ಹಾಗೂ ಸಾವುಗಳೆಂಬುದೇ ಇರುವುದಿಲ್ಲ. ಪರಮಾತ್ಮ ಅಂದರೆ ಮಿತಿ ಇಲ್ಲದ್ದ,

ಶುಭೋದಯಕ್ಕೊಂದು ಕಗ್ಗ

ರವೀ ಚಿಕ್ಕನಾಯಕನಹಳ್ಳಿ

ಅಗಣಿತವಾದ ಆತ್ಮ ಎಂಬರ್ಥ. ಇಂಥಹ ಪರಮಾತ್ಮವು ಈ ಜಗತ್ತಿನಲ್ಲಿರುವ ಎಲ್ಲಾ ಜೀವಾತ್ಮದಲ್ಲಿಯೂ ಆ ಪರಮಾತ್ಮವೇ ತುಂಬಿಕೊಂಡಿದೆ. ಆ ಪರಮಾತ್ಮನ ಅಂಶಗಳೇ ಈ ಜಗತ್ತಿನ ಎಲ್ಲಾ ಚರಾಚರ ವಸ್ತುಗಳಲ್ಲೀಯೂ ತುಂಬಿಕೊಂಡು ಜೀವಗಳ ಜೀವಾತ್ಮಗಳಿಗೂ ಅಲೌಖಿಕವಾದ ಅಂಶವನ್ನೇ ತುಂಬಿಕೊಂಡಿದೆ. ಆದುದರಿಂದ ಪರಮಾತ್ಮನ ಆತ್ಮವನ್ನಾಗಲಿ, ಜೀವಾತ್ಮದ ಆತ್ಮವನ್ನೇ ಆಗಲಿ ನಾವು ಮೊದಲಿಗೆ ನಯದಿಂದ, ಪ್ರೀತಿಯಿಂದ ಮುಟ್ಟುವಂಥಹ ಕರಲಸ ಮಾಡಬೇಕು. ಹಾಗೆಯೇ ದಯೆ, ಪ್ರೀತಿ, ಕರುಣೆಯಿಂದ ನೋಡುವಂತಹವನಾಗಿರಬೇಕು. ಹಾಗೆಯೇ ಭಯದಿಂದ ಆರಾಧಿಸುವಂತವನಾಗಬೇಕು, ಭಕ್ತಿಯಿಂದ ಅದನ್ನು ಪೂಜಿಸುವಂತಾಗಬೇಕು. ಮನುಷ್ಯನ ಜೀವಾತ್ಮವು ಯಾವಾಗಲೂ ತನ್ನ ನಡಿಗೆಯನ್ನು ಕಾಮ, ಕ್ರೋಧ, ಮಧ, ಲೋಭ, ಮೋಹ, ಮಾತ್ಸರ್ಯ ಎಂಬ ಆರು ಕುದುರೆಗಳನ್ನು ಹೊಂದಿರುವ ರಥದಲ್ಲಿಯೇ ಪಯಣ ಮಾಡುತ್ತಲಿರುತ್ತದೆ. ನಮ್ಮ ಮನಸ್ಸು ನಮಗೆ ಎಲ್ಲಿವರೆಗೂ ಸ್ಥಿಮಿತವಾಗಿ ಆ ಆರು ಕುದುರೆಗಳನ್ನು ಹತ್ತೋಟಿ ಯಲ್ಲಿಟ್ಟುಕೊಂಡು ಯಾನವನ್ನು ಮಾಡುತ್ತಿರುತ್ತಾರೋ ಅವರೆಗೆ ಯಾವುದೇ ಅವಘಢಗಳು ಸಂಭವಿಸುವುದಿಲ್ಲ. ಒಮ್ಮೆ ಆ ಆರು ಕುದುರೆಗಳನ್ನು ಮತಿಯಲ್ಲಿಟ್ಟು ಕೊಳ್ಳದೆ ಸ್ಮೃತಿ ತಪ್ಪಿದರೆ ಅವಘಡ ತಪ್ಪಿದ್ದಲ್ಲ. ಹಾಗಾಗಿ ಜೀವನದ ಎಲ್ಲಾ ಏಳು ಬೀಳುಗಳಿಗೂ ಈ ಮನಸ್ಸೇ ಬಲು ಮುಖ್ಯವಾಗಿರುವುದಾಗಿದೆ.

ಆದುದರಿಂದ ಈ ಮನಸ್ಸನ್ನು ನಯದಿಂದ ಸೊಕುತ್ತಾ, ಭಯದಿಂದ ಅನುಗ್ರಹ ಬೇಡುತ್ತಾ, ಭಕ್ತಿಯಿಂದ ಪೂಜಿಸುತ್ತಾ, ದಯೆಯಿಂದ ನೋಡುತ್ತಾ ಬದುಕುವ ಜೀವನ ಕಲೆಯನ್ನು ನಾವು ಕಲಿಯಲೇ ಬೇಕು. ಆಗಲೇ ಆತ್ಮೋದ್ಧಾರವಾಗುವುದು. ಆದುದರಿಂದ ಮನಸ್ಸು ಎಂಬ ಯಜಮಾನನನ್ನು ನಾವು ಯಾವಾಗಲೂ ಸ್ವಚ್ಚವಾಗಿ ಇಟ್ಟುಕೊಂಡು ಜೀವನದ ಯಾತ್ರೆ ಮುಗಿಸುವುದು ಸೂಕ್ತ ಎಂಬ ಭಾವ ಈ ಕಗ್ಗದಲ್ಲಿ ಹೊರ ಹೊಮ್ಮಿದೆ.

ಸದ್ವಿಚಾರಗಳನ್ನ ಮೆಲಕು ಹಾಕುವುದು, ಸ್ವಾರ್ಥ ನಡೆಯನ್ನು ಸಾರಾಸಗಟಾಗಿ ಬಿಡುವುದು, ಗುರು ಹಿರಿಯರ ಉಪದೇಶ ಪಾಲಿಸುವುದು, ಸತ್ಯವಾಗಿ, ಧರ್ಮವಾಗಿ ಜೀವನವನ್ನು ನಡೆಸುವುದು, ಭಾವ ಭಕುತಿಯಲಿ ಜೀವನ ಮಾಡುವುದೇ ನಮ್ಮ ಆತ್ಮೋದ್ಧಾರಕ್ಕೆ ದಾರಿ ಎಂಬ ಸತ್ಯವನ್ನು ಅರಿತುಕೊಂಡು, ನಾನು, ನನ್ನದು, ನನಗಾಗಿ ಎಂಬ ಸ್ವಾರ್ಥವನ್ನು ತ್ಯಜಿಸಿ, ಎಲ್ಲರಿಗಾಗಿ ನಾನು ಎಂಬ ಸದ್ವಿಚಾರವನ್ನು ನಾವು ತಿಳಿದರೆ ಮಾತ್ರವೇ ನಮ್ಮ ಜೀವನದಲ್ಲಿ ಏಳಿಗೆಯನ್ನು ಕಾಣಲು ಸಾಧ್ಯ. ಇಂಥಹ ಎಲ್ಲಾ ವಿಚಾರಗಳಿಗೂ ನಮ್ಮ ಮನಸ್ಸೇ ಮುಖ್ಯವಾಗಿರುವುದರಿಂದ ಆ ಮನಸ್ಸಿನ ಮೇಲೆ ನಮಗೆ ದಯೆ, ಭಕ್ತಿ, ನಯ, ವಿನಯಗಳು ಬೇಕು ಎಂಬುದು ಈ ಪದ್ಯದ ಅರ್ಥವಾಗಿದೆ.

ಮಳೆರಾಯನ ಪೂಜೆ

● ಎಂ. ಪರಮೇಶ್ವರ ಮದ್ದಿಹಳ್ಳಿ

ಮಳೆರಾಯನ ಪೂಜೆ ಅಥವಾ ಮೆರವಣಿಗೆಯು ಒಂದು ಹಳೆಯ ಸಂಪ್ರದಾಯ. ಮಳೆಗಾಗಿ ಪ್ರಾರ್ಥಿಸಲು ಹುಡುಗಿಯರು ಮಣ್ಣಿ ನಿಂದ ಮಳೆರಾಯನ ವಿಗ್ರಹವನ್ನು ಮಾಡಿ, ಅದನ್ನು ಅಲಂಕರಿಸಿ ಪೂಜೆ ಮಾಡುತ್ತಾರೆ. ನಂತರ, ಒಂದು ಬಾಲಕಿಯು ಆ ವಿಗ್ರಹವನ್ನು ಹೊತ್ತುಕೊಂಡು ಮನೆ ಮನೆಗೆ ಹೋಗುತ್ತಾಳೆ. ಮನೆಯವರು ನೀರು ಹಾಕಿ, ಅರಿಶಿನ, ಕುಂಕುಮ ಹಚ್ಚಿ, ಹೂವು ಹಾಕಿ, ಧವಸ ಧಾನ್ಯ ಅಥವಾ ಹಣವನ್ನು ಕಾಣಿಕೆಯಾಗಿ ನೀಡಿ ಪ್ರಾರ್ಥನೆ ಸಲ್ಲಿಸುತ್ತಾರೆ.

ಇಂತಹದೊಂದು ಸಂಪ್ರದಾಯವನ್ನು ಚಿತ್ರದುರ್ಗ ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ಕಾಣಬಹುದು. ಹಿರಿಯೂರು ತಾಲ್ಲೂಕಿನ ಮದ್ದಿಹಳ್ಳಿಯಲ್ಲಿ ಈ ಹಿಂದೆ ಮಹಿಳೆಯರು ಮಳೆರಾಯನ ಪೂಜೆಯನ್ನು ಮಾಡುತ್ತಾ ಇದ್ದರು. ಹೊಲದಲ್ಲಿ ಗಿಡಗಳು ದೊಡ್ಡವಾಗುತ್ತಿರುವಾಗ ಆಷಾಢ ಮಾಸದಲ್ಲಿ ಮಳೆ ಬಾರದೇ ಇದ್ದಾಗ, ಮಳೆರಾಯನಿಗೆ ಪೂಜೆ ಮಾಡಿ, ಮಳೆಗಾಗಿ ಪ್ರಾರ್ಥಿಸುತ್ತಿದ್ದರು.

ಒಂದು ಮರದ ಹಲಗೆಯನ್ನು ಸಿದ್ಧಪಡಿಸಿಕೊಂಡು, ಅದರ ಮೇಲೆ ಜೇಡಿ ಮಣ್ಣಿನಿಂದ ತಯಾರಿಸಿದ ಮಳೆರಾಯನ ಪ್ರತಿಮೆಯನ್ನು ಇಟ್ಟು, ವಿವಿಧ ಬಗೆಯ ಹೂಗಳು ಹಾಗೂ ಸೊಪ್ಪುಗಳಿಂದ ಅಲಂಕಾರ ಮಾಡುತ್ತಾರೆ. ಇದನ್ನು ಸಾಮಾನ್ಯವಾಗಿ ಬಾಲಕಿಯ ತಲೆಯ ಮೇಲೆ ಇದನ್ನಿಟ್ಟು ಊರೆಲ್ಲಾ ಮೆರವಣಿಗೆ ಮಾಡುತ್ತಾರೆ; ಕೆಲವು ಬಾರಿ ಪುರುಷರ ತಲೆಯ ಮೇಲಿಟ್ಟು ಮೆರವಣಿಗೆ ಮಾಡುವುದುಂಟು. ಮಳೆರಾಯನ ಪ್ರತಿಮೆಯನ್ನು ಮನೆಗಳ ಬಳಿಗೆ ತೆಗೆದುಕೊಂಡುಹೋದಾಗ,

ಹುಯ್ಯೊ ಹುಯ್ಯೊ ಮಳೆರಾಯ
ಹೂವಿನ ಗಿಡಕೆ ನೀರಿಲ್ಲ,
ಬಾರೋ ಬಾರೋ. ಮಳೆರಾಯ
ಬಾಳೇಗಿಡಕ್ಕೆ ನೀರಿಲ್ಲ

ಬಾರಪ್ಪೋ ಮಳೆರಾಯ
ನೀ ಬರದಿದ್ರೆ ಬದುಕಿಲ್ಲ..

ಎನ್ನುವ ಜಾನಪದ ಹಾಡುಗಳನ್ನು ಹಾಡುತ್ತಾ ತೆರಳುತ್ತಾರೆ.

ಕೊನೆಯಲ್ಲಿ, ಖಂಡೇನಹಳ್ಳಿ ಕಟ್ಟೆ ಅಥವಾ ಕಿವುಡಯ್ಯನ ಕಟ್ಟೆ, ಭೂತರಾಯನ ಗುಡಿ ಹತ್ತಿರ, ಮನೆಗಳವರು ನೀಡಿದ ಬೇಳೆ ಎಣ್ಣೆ ರಾಗಿ ಹಿಟ್ಟು ತಂದು ಅಡುಗೆ ಮಾಡಿ ಮಳೆರಾಯನಿಗೆ ನೈವೇದ್ಯ ಮಾಡಿ ಊರಿನ ಜನಕ್ಕೆ ಹಾಗೂ ಕೃಷಿ ಕೆಲಸ ಮಾಡುವವರು, ಎಮ್ಮೆ ಕಾಯುವವರು, ಕುರಿ ಮೇಕೆ ಕಾಯುವವರಿಗೆ ಬಡಿಸುತ್ತಾರೆ. ಒಮ್ಮೊಮ್ಮೆ ಇದೇ ಸಮಯದಲ್ಲಿ ಮಳೆ ಬರುವುದುಂಟು!

ಗುರುವೇ ನಿನಗೆ ನಮಿಸುವೆ!

ಗುರುಪೂರ್ಣಿಮೆಯ ಉತ್ಸವವು ಜ್ಞಾನ, ಶ್ರದ್ಧೆ ಮತ್ತು ಸಂಸ್ಕೃತಿಯ ಶ್ರೇಷ್ಠತೆಯ ಪರಿಪೂರ್ಣತೆಯ ಪ್ರತೀಕವಾಗಿದೆ.

● ಸುಜಯ ಶೆಟ್ಟಿ, ಹಳ್ನಾಡು

ಗುರುಪೂರ್ಣಿಮೆ ಎಂದರೆ ನಮಗೆ ವಿದ್ಯೆಯನ್ನು ಕಲಿಸಿದ ಗುರುಗಳಿಗೆ ಗೌರವ ಸಲ್ಲಿಸುವ ದಿನ. ಗುರು ಪೂರ್ಣಿಮೆಯನ್ನು ಆಚರಿಸುವಾಗ, ನಮ್ಮೆಲ್ಲಾ ಗುರುಗಳನ್ನು ನಾವು ವಿನಯದಿಂದ ನೆನಪಿಸಿಕೊಳ್ಳಬೇಕು; ತಾಯಿಯೂ ಗುರು, ತಂದೆಯೂ ಗುರು! ಹಿರಿಯರೂ ಗುರು! ಅಕ್ಷರ ಕಲಿಸಿದ ಅಧ್ಯಾಪಕರೂ ಗುರು! ಯೋಗಾಭ್ಯಾಸ ಮಾಡಿಸಿದವರೂ ಗುರು. ಎಲ್ಲಾ ಗುರುಗಳಿಗೆ ಇಂದು ನಮ್ಮ ಗೌರವಪೂರ್ವಕ ಪ್ರಣಾಮಗಳು ಸಲ್ಲಲಿ.

ಗುರುಪೂರ್ಣಿಮೆ ಎಂದರೆ ಕೇವಲ ಹಬ್ಬವಲ್ಲ,



ಅದು ನಮ್ಮ ಜೀವನದ ಜ್ಞಾನಯಾನಕ್ಕೆ ದೀಪವನ್ನು ಹಚ್ಚುವ ದಿನ. ನಾವು ನಮ್ಮಲ್ಲಿರುವ ಅಜ್ಞಾನದ ಅಂಧಕಾರವನ್ನು ಗುರುಗಳ ಕರುಣೆಯಿಂದ ದೂರ ಮಾಡಬೇಕು. ಅದು ಜ್ಞಾನಪಥದ ಬೆಳಕುಗಳ ಹಬ್ಬ. ಗುರುಗಳ ಮಾರ್ಗದರ್ಶನದಿಂದ ಮಾತ್ರವಷ್ಟೇ ಒಂದು ಶ್ರೇಷ್ಠ ವ್ಯಕ್ತಿತ್ವವನ್ನು ನಿರ್ಮಾಣ ಮಾಡಲು ಸಾಧ್ಯ. ವೇದವ್ಯಾಸರಿಂದ ಕೃಷ್ಣನ ತನಕ, ಗುರುಗಳು ಶಿಷ್ಯರಿಗೆ ಆತ್ಮವಿಶ್ವಾಸ, ಸತ್ಯ, ಧೈರ್ಯ ಮತ್ತು ಮಾರ್ಗದರ್ಶನ ನೀಡಿದವರು. ಅಂತಹ ಗುರುಗಳಿಗೆ ಗೌರವ ಸಲ್ಲಿಸುವ, ತಾವು ಶಿಷ್ಯನಾಗಿ ಗುರುಮಾರ್ಗದಲ್ಲಿ ನಡೆಯುವುದಾಗಿ ಪ್ರತಿಜ್ಞೆ ಮಾಡುವ, ಶ್ರದ್ಧಾ ಭಕ್ತಿಯಿಂದ ಅವರ ಪಾದದೊಳಗೆ ಶರಣಾಗಿಸುವ ಈ ದಿನವು ನಮ್ಮೆಲ್ಲರ ಬದುಕಿನಲ್ಲಿ ಪ್ರಮುಖ ಸ್ಥಾನವನ್ನು ಪಡೆಯಬೇಕು.

ಗುರುಗಳು ಎಂದರೆ ನಮಗೆ ಪ್ರತಿದಿನವೂ ಗೌರವವಿರಬೇಕು; ಜತೆಗೆ, ಅವರು ನಮ್ಮ ಬದುಕನ್ನು ರೂಪಿಸಿದ್ದಕ್ಕೆ ಕೃತಜ್ಞಾರೂಪವಾಗಿ, ಗುರು ಪೂರ್ಣಿಮೆಯನ್ನು ಆಚರಿಸುವ ಪದ್ಧತಿ ನಿಜಕ್ಕೂ ಉತ್ತಮ. ಅದರಲ್ಲೂ ಇಂದಿನ ಆಧುನಿಕ ಯುಗದಲ್ಲಿ, ಹೊಸ ಹೊಸ ವಿದ್ಯಗಳನ್ನು, ತಂತ್ರಜ್ಞಾನದ ಆವಿಷ್ಕಾರಗಳನ್ನು ಕಲಿಸಿ, ಮಾರ್ಗದರ್ಶನ ನೀಡಿದ ಗುರುಗಳನ್ನು ಎಷ್ಟು ಗೌರವಿಸಿದರೂ ಸಾಲದು. ಕುಟುಂಬದಲ್ಲೂ ನಮಗೆ ಮಾರ್ಗದರ್ಶನ ನೀಡಿದ ಪೋಷಕರು, ಹಿರಿಯರು ಸಹಿತವಾಗಿ, ನಮ್ಮೆಲ್ಲಾ ಗುರುಗಳಿಗೆ ಇಂದು ನಮಿಸೋಣ, ಅವರು ನಮ್ಮ ಬದುಕನ್ನು ರೂಪಿಸಿದ ಪರಿಯನ್ನು ನೆನೆದು, ಕೃತಜ್ಞತಾಪೂರ್ವಕವಾಗಿ ಪೊಡಮಡೋಣ.

ಹನಿ ಮಳೆ

ಗುರುವಿಗೆ ನಮನ

ಮೆದುವಾಗಿ ಮಾತು ನಡೆಯ ತಿಳಿಸಿದರು
ಕೈಹಿಡಿದು ಬದುಕಿನ ದಾರಿಯ ಕಲಿಸಿದರು
ಪಾಠ ಕಲಿಸಿದ ಆ ಗುರುವಿಗೆ ನಮೋನಮಃ
ನೆನಪಿಡಿ ಇಂದು ಗುರುಪೂರ್ಣಿಮಾ

● ಸಿಂಚನಾ ಪಾಟೀಲ್

ದೇವರ ಅನುಗ್ರಹಕ್ಕೆ ಕೃತಜ್ಞತೆ ಹೇಳಲು ಮರೆಯುವ ಮನುಷ್ಯರು

ಮನುಷ್ಯನೊಬ್ಬ ಆಯಸ್ಸು ತೀರಿ ಮರಣ ಹೊಂದಿದ. ಅವನು ಮಾಡಿದ ಪುಣ್ಯ ಕಾರ್ಯಗಳಿಂದ ನೇರವಾಗಿ ಸ್ವರ್ಗಕ್ಕೆ ಬಂದನು. ಸ್ವರ್ಗದಲ್ಲಿ ಒಬ್ಬ ದೇವತೆಯು ಬಂದು ಅವನನ್ನು ಒಳಗೆ ಕರೆದುಕೊಂಡು ಹೋದಳು. ಹೀಗೆ ಸಾಗುತ್ತಿರುವಾಗ ಅಲ್ಲೊಂದು ಕೊಠಡಿ ಕಾಣುತ್ತದೆ. ಅಲ್ಲಿ ದೇವತೆಗಳು ಬಹಳ ಗಡಿಬಿಡಿಯಿಂದ ಕೆಲಸ ಮಾಡುತ್ತಾ, ಅಲ್ಲಿಂದಿಲ್ಲಿಗೆ ಅವಸರವಸರವಾಗಿ ಓಡಾಡುತ್ತಿದ್ದರು ಹಾಗೂ ಅಲ್ಲೊಂದಷ್ಟು ದೊಡ್ಡ ದೊಡ್ಡ ಪುಸ್ತಕಗಳಿದ್ದು ಅದರೊಳಗೆ ಏನೇನೋ ಬರೆಯುತ್ತಿದ್ದರು. ಇದನ್ನು ನೋಡಿದ ಮನುಷ್ಯ ದೇವತೆಯನ್ನು ಕೇಳಿದ ಅವರೆಲ್ಲ ಏನು ಮಾಡುತ್ತಿದ್ದಾರೆ ? ಎಂದು. ದೇವತೆ ಹೇಳಿದಳು ಇದು 'ಸ್ವೀಕೃತಿ' ವಿಭಾಗ. ಇದು ಭೂಮಿಯ ಮೇಲಿನ ಜನರು ದೇವರಲ್ಲಿ ಅನೇಕ ಬೇಡಿಕೆಗಳನ್ನು ಬೇಡಿರುತ್ತಾರೆ ಅದನ್ನೆಲ್ಲ 'ಸ್ವೀಕೃತಿ' ವಿಭಾಗದಲ್ಲಿ ದಾಖಲಿಸುತ್ತಾರೆ ಎಂದಳು.

ಅವರು ಮತ್ತಷ್ಟು ಮುಂದೆ ಸಾಗಿದರು. ಅಲ್ಲಂತೂ ಬಹಳ ವಿಸ್ತಾರವಾದ ಕೊಠಡಿಯಿತ್ತು. ಕೆಲಸಗಳು ಸರಸರ ನಿಮಿಷವೂ ಬಿಡುವಿಲ್ಲದಂತೆ ನಡೆಯುತ್ತಲೇ ಇತ್ತು. ಇದನ್ನು ಕಂಡ ಮನುಷ್ಯ ಮತ್ತೆ ದೇವತೆಯನ್ನು ಕೇಳಿದ, ಅದಕ್ಕೆ ದೇವತೆ ಇದು 'ವಿತರಣಾ' ವಿಭಾಗ. ಪ್ರಾರ್ಥನೆ ಹಾಗೂ ಪೂಜೆಯ ಮೂಲಕ ಸಂದಾಯವಾದ ಜನರ ಬೇಡಿಕೆಗಳನ್ನೆಲ್ಲಾ ಪರಿಶೀಲಿಸಿ ಅಗತ್ಯಕ್ಕೆ ತಕ್ಕಂತೆ ಭಗವಂತನು ಅನುಗ್ರಹಿಸುತ್ತಾನೆ. ಅವುಗಳನ್ನೆಲ್ಲಾ ಸರಿ ಮಾಡಿ ಆ ಅನುಗ್ರಹಗಳನ್ನು ಅದಕ್ಕೆ ಸಂಬಂಧಪಟ್ಟವರಿಗೆ ತಲುಪಿಸುವ ಕೆಲಸ ಈ ವಿಭಾಗದ್ದು.

ಮನುಷ್ಯನಿಗೆ ಬಹಳ ಸಂತೋಷವಾಯಿತು. ಅಂತೂ ಭಗವಂತ ನಮ್ಮ ಒಂದು ಬೇಡಿಕೆಯನ್ನು ಕಡೆಗಣಿಸದೆ, ಎಲ್ಲವನ್ನೂ ನಮಗೆ ಅನುಗ್ರಹಿಸುತ್ತಾನೆ ಎನ್ನುವ ಸಂತೃಪ್ತಿ. ಸ್ವಲ್ಪ ದೂರ ನಡೆದಾಗ ಅಲ್ಲಿ ಬಹಳ ದೊಡ್ಡ ಚೌಕಿ. ದಾಟಿ ಮುಂದೆ ಬಂದಾಗ ಅಲ್ಲೊಂದು ಸಣ್ಣ ಕೊಠಡಿ ಕಾಣುತ್ತದೆ. ಅಲ್ಲೊಬ್ಬ ದೇವತೆ ಏಕಾಂತದಲ್ಲಿ ಕುಳಿತಿದ್ದಳು. ಅವಳಿಗೆ ಮಾಡಲು ಏನೂ ಕೆಲಸವಿಲ್ಲ. ಯಾವುದೋ ನಿರೀಕ್ಷೆಯಲ್ಲಿದ್ದಂತೆ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು
Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಕಾಣುತ್ತಿತ್ತು. ಮನುಷ್ಯನಿಗೆ ಆಶ್ಚರ್ಯವಾಯಿತು, ಮತ್ತೆ ದೇವತೆಯನ್ನು ಇದೇನು? ಮೊದಲು ನೋಡಿದ ಎರಡು ಕೊಠಡಿಗಳಲ್ಲಿ ಒಬ್ಬರ ಮುಖ ಒಬ್ಬರು ನೋಡಿಕೊಳ್ಳಲು ಆಗದಷ್ಟು ಕೆಲಸ ಮಾಡುತ್ತಿದ್ದರು. ಆದರೆ ಇಲ್ಲಿ ಈ ದೇವತೆ ಏನೂ ಕೆಲಸವಿಲ್ಲದೆ ಸುಮ್ಮನೆ ಕುಳಿತಿದ್ದಾಳೆ ಏಕೆ? ಈ ಕೊಠಡಿಯ ಅಗತ್ಯವಾದರೂ ಏನು ಎಂದು ಕೇಳಿದ. ಆಗ ದೇವತೆ ಬಹಳ ಬೇಸರದಿಂದ ಹೇಳಿದಳು. ಇದು ಕೃತಜ್ಞತೆ ಅರ್ಪಿಸಿದವರ ಹೆಸರನ್ನು ಬರೆದುಕೊಳ್ಳುವ ವಿಭಾಗ. ಭಗವಂತನನ್ನು ಅರ್ಚಿಸಿ ಜನರು ಬೇಡಿಕೆಗಳನ್ನು ಬೇಡುತ್ತಾರೆ. ಭಗವಂತ ಅವುಗಳನ್ನು ಅನುಗ್ರಹಿಸುತ್ತಾನೆ. ದೇವರ 'ಅನುಗ್ರಹವನ್ನು' ನಾವುಗಳು ಭಕ್ತರಿಗೆ ಮರೆಯದಂತೆ ವಿತರಣೆ ಮಾಡುತ್ತೇವೆ. ನಮಗೆ ತಲುಪಿದೆ ಎಂದು ಜನರು ದೇವರಿಗೊಂದು ಕೃತಜ್ಞತೆಯನ್ನು ನಮಸ್ಕಾರವನ್ನು, ಅರ್ಪಿಸಿದರೆ ಮಾತ್ರ ಇಲ್ಲಿ ದಾಖಲಾಗುತ್ತದೆ. ಆದರೆ ಅಂಥ ಕೃತಜ್ಞತೆಯನ್ನು ಅರ್ಪಿಸುವವರು ಬಹಳ ಕಡಿಮೆ. ಆದುದರಿಂದ ಇಲ್ಲಿ ಈ ದೇವತೆಗೆ ಕೆಲಸವಿಲ್ಲ ಎಂದಳು.

ಕಥೆ ಕಾಲ್ಪನಿಕ ವಿರಬಹುದು. ಆದರೆ ಅದರಲ್ಲಿ ಚರ್ಚಿಸಿರುವ ವಿಷಯ ಮಾತ್ರ ನಿಜವೇ ಅಲ್ಲವೇ? ನಾವು ಬುದ್ಧಿ ಬಂದಾಗಿನಿಂದ, ಸಾಯುವವರೆಗೆ ಒಂದಲ್ಲ ಒಂದು ವಿಷಯಕ್ಕೆ ಅನುಗ್ರಹಿಸು ಎಂದು ಭಗವಂತನನ್ನು ನಿರಂತರವಾಗಿ ಬೇಡುತ್ತಿರುತ್ತೇವೆ. ಆದರೆ ಅದೇ ಕೈಗೂಡಿದಾಗ, ಇದು ನನ್ನ ಪರಿಶ್ರಮದಿಂದ ದೊರೆತದ್ದು ಎಂದು ಪ್ರಪಂಚವೆಲ್ಲ ಡಂಗುರ ಸಾರುತ್ತೇವೆ. ಭಗವಂತನ ಕೃಪಾಕಟಾಕ್ಷ ನಮಗೆ ಮರೆತೇ ಹೋಗುತ್ತದೆ. ನಾವು ಅದನ್ನು ಎಷ್ಟು ಕಷ್ಟಪಟ್ಟು ಗಳಿಸಿದೆವು ಎಂದು, ಸ್ನೇಹಿತರಿಗೆ ಆಪ್ತರಿಗೆ ಎಳೆ ಎಳೆಯಾಗಿ ಬಿಡಿಸಿ ಹೇಳುತ್ತಾ ಅದರ ಶ್ರೇಯವನ್ನೆಲ್ಲ ನಾವೇ ತೆಗೆದುಕೊಳ್ಳುತ್ತೇವೆ.

ಒಮ್ಮೆ ಯೋಚಿಸಿ ನೋಡಿ ಭಗವಂತನ ಅನುಗ್ರಹವಿಲ್ಲದೆ ಹೋದರೆ ಏನನ್ನಾದರೂ ಸಾಧಿಸುವ ಮನಸ್ಥಿತಿ ನಮಗಿರುತ್ತದೆಯೇ? ದೀನರಾಗಿ ಭಗವಂತನನ್ನು ಕೇಳಿಕೊಳ್ಳುವಾಗ ಇರುವ ವಿನಯ, ಆ ಕೆಲಸವಾದ ಮೇಲೂ ಏನನ್ನಾದರೂ ಸಾಧಿಸಿದ ಮೇಲೂ ಇರಬೇಕು. ಬದುಕಿನಲ್ಲಿ ಏನೇ ಒಳ್ಳೆಯದು ನಡೆದರು ಅದರಲ್ಲಿ ಭಗವಂತನ ಆಶೀರ್ವಾದ ಇದ್ದೇ ಇದೆ ಎನ್ನುವ ಅರಿವು ನಮಗಿದ್ದಾಗ, ನಾನು, ನನ್ನಿಂದ ಎನ್ನುವ ಅಹಂಕಾರ ಕಳೆದು ಬದುಕಿಗೆ ಹೆಚ್ಚು ಕೃತಜ್ಞರಾಗಿ ಬದುಕುತ್ತೇವೆ.

ಯುರೇಷಿಯಾದ ಪುಟಾಣಿ!

● ಶಶಿಧರಸ್ವಾಮಿ ಆರ್. ಹಿರೇಮಠ

ಕಾಕೋಳ ಗ್ರಾಮದ ವೆಂಕಟಾಪುರ ಹಾಡಿಯ ಹೊರ ವಲಯದ ಕುರುಚಲು ಕಾಡಂಚಿನ ಹಾದಿಯಲ್ಲಿ ಹಕ್ಕಿಗಳ ಫೊಟೋಗ್ರಫಿಗೆಂದು ನಡೆದುಕೊಂಡು ಹೋಗುತ್ತಿದ್ದೆವು. ಜತೆಗಾರ ಚಂದ್ರು ಕಲ್ಲು ಬಂಡೆಯ ಮೇಲೆ ಉಲಿಹಕ್ಕಿ ಕುಳಿತಿದೆ ಸರ್ ಅಂದ; ತಕ್ಷಣವೇ ಅದರ ಫೊಟೋಗ್ರಫಿ ಮಾಡಲು ಪ್ರಾರಂಭಿಸಿದೆವು. ಅದು ಬಲು ಚಟುವಟಿಕೆಯಿಂದ ಕೂಡಿದ್ದು ಎರಡು ಫೊಟೋ ಕ್ಲಿಕ್ಕಿಸುವಷ್ಟರಲ್ಲಿ ಅಲ್ಲಿಂದ ಪುರ್ರೆಂದು ಹಾರಿ ಇನ್ನೊಂದು ಕಲ್ಲಿನ ಮೇಲೆ ಕುಳಿತು ಕೊಂಡಿತು; ಮತ್ತೆ ಹಾರಿ ಹತ್ತಿರದಲ್ಲಿದ್ದ ಗಿಡದ ಟೊಂಗೆಯ ಮೇಲೆ ಕುಳಿತು ಅತ್ತ ಇತ್ತ ನೋಟ ಬೀರುತ್ತಿತ್ತು.

ಈ ಹಕ್ಕಿಯನ್ನು ಬೂದು ಉಲಿಯಕ್ಕಿ ಎಂದು ಕರೆಯುತ್ತಾರೆ. ಇಂಗ್ಲೀಷನಲ್ಲಿ ಬ್ಲೈತ್ಸ್ ರೀಡ್ -ವಾರ್ಬ್ಲರ್ ಎಂದಿದ್ದಾರೆ. ಗುಬ್ಬಚ್ಚಿಗಿಂತ ಸ್ವಲ್ಪ ಸಣ್ಣದಾದ ಸುಮಾರು 12-13 ಸೆಂ.ಮಿ ಗಾತ್ರ; ಕಂದು ಬಣ್ಣದ ಹಕ್ಕಿ, ಕುತ್ತಿಗೆ, ಎದೆ, ಹೊಟ್ಟೆ ಭಾಗವು ಬಿಳಿ ಬಣ್ಣ; ಕಪ್ಪಾದ ಕಣ್ಣಿನ ಮೇಲೆ ಬಿಳಿ ಬಣ್ಣದ ಹುಬ್ಬಿದೆ, ಕಪ್ಪಾದ ಸಣ್ಣ ಕೊಕ್ಕು, ಕಪ್ಪನೆಯ ಕಾಲಗಳನ್ನು ಹೊಂದಿದೆ. ಕೃಷಿ ಭೂಮಿ, ಕುರುಚಲು ಕಾಡುಗಳ ಪೊದೆಗಳಲ್ಲಿ, ಬೇಲಿ ಹಾಗೂ ಭತ್ತದ ಗದ್ದೆಗಳ ಆವಾಸ ತಾಣಗಳಲ್ಲಿ ಹೆಚ್ಚಾಗಿ ಒಂಟೆಯಾಗಿ ಕಂಡು ಬರುತ್ತವೆ. ಜೇಡಗಳನ್ನು ಕಬಳಿಸಿ ಭಕ್ಷಿಸುತ್ತವೆ. ಚಿಕ್, ಚಿಕ್, ಚಿಕ್ ಎಂದು ಕೂಗುತ್ತಾ ಚುರುಕಾಗಿರುತ್ತವೆ. ವೈವಿಧ್ಯಮಯ ಕೂಗನ್ನು ಹೊಂದಿದ್ದು, ಅದರಲ್ಲಿ ಟಿಕ್, ಚಕ್ಸ್ ಮತ್ತು ಚುರ್‌ಗಳಂತಹ ಶಿಳ್ಳೆಗಳು ಮತ್ತು ಅನುಕರಣೆಗಳು ಇವೆ.

ವಿಶೇಷವೆಂದರೆ, ಚಳಿಗಾಲದ ಸಮಯದಲ್ಲಿ ಯುರೇಷಿಯಾದಿಂದ ನಮ್ಮ ರಾಜ್ಯಕ್ಕೆ ವಲಸೆ ಬರುತ್ತವೆ. ಇಷ್ಟು ಪುಟ್ಟ ಹಕ್ಕಿಯು, ದೂರದ ಯುರೇಷಿಯಾದಿಂದ ವಲಸೆ ಬರುವುದೇ ಒಂದು ಸೋಜಿಗ!

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

1. ದೊಡ್ಡದಾದ ಕಟ್ಟಡ (4)
4. ಸಾರಾಂಶ ಇಲ್ಲಿ ತಿರುಗಿ ಬಂದಿದೆ (3)
7. ಹೆಣೆದುಕೊಂಡು ಕ್ಲಿಷ್ಟವಾಗಿರುವುದು (3)
8. ಹಕ್ಕಿಯ ಪುಕ್ಕ (2)
10. ಸಾಲು ಅಥವಾ ರೇಖೆ (2)
12. ಸಾಮಾನ್ಯವಾಗಿ ರಜ ಇರುವ ವಾರ (4)
14. ಸಾಕಷ್ಟು ಧನವಿರುವಾತ (4)
16. ಎಸೆಯಬೇಕಾದ, ಬೇಡವಾದ ವಸ್ತು (2)
17. ಬಾಗಿಲಿ ಬೀಗ (2)
19. ಕೊನೆಗೆ ದೀರ್ಘವಾಗಿರುವ ಮೊಸಳೆ (3)
20. ಒಣ ಹೆಮ್ಮೆ (3)
21. ಕೈಯನ್ನು ಕಟ್ಟಿಕೊಂಡಿರುವ ಮರುಕ (4)

ಮೇಲಿಂದ ಕೆಳಕ್ಕೆ

2. ಸೋದರ ಮಾವನಿಗೆ ಮತ್ತೊಂದು ಹೆಸರು (3)
3. ಕುದುರೆ (3)
5. ಕಮಲದ ಹೂವು (3)
6. ಒತ್ತು ಕಳೆದುಕೊಂಡ ತಾತನೊಂದಿಗೆ ಹೆಬ್ಬಾವು (4)
9. ಬರಿದಾಗಿರುವ ಕೈ (4)
10. ತಿರುಗಿ ಬಂದಿರುವ ಚಂದಾ (3)
11. ಗ್ರಾಮದಲ್ಲಿರುವ ಶಾನುಭೋಗ (4)
13. ಪರಸ್ಪರ ಇರಬೇಕಾದ ನಂಬಿಕೆ (3)
15. ಅಡ್ಡಿ, ಆಕ್ಷೇಪ (4)
16. ಬನವಾಸಿಯಿಂದ ಆಡಳಿತ ನಡೆಸಿದ ರಾಜವಂಶ (3)
18. ಹತ್ತು ವರ್ಷಗಳ ಅವಧಿ (3)
19. ಅನ್ಯರ ಮೇಲೆ ತೋರಿದ ದಯೆ (3)

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ಏಷ್ಯನ್ ವೆಯ್ಟ್‌ಲಿಫ್ಟಿಂಗ್: ಸಾಯಿರಾಜ್‌ಗೆ ಕಂಚು



ಆಸ್ತಾನ (ಕಜಕಸ್ತಾನ): ಭಾರತದ ಸಾಯಿರಾಜ್ ಪರ್ದೇಶಿ ಅವರು ಇಲ್ಲಿ ನಡೆದ ಏಷ್ಯನ್ ಜೂನಿಯರ್ ವೆಯ್ಟ್‌ಲಿಫ್ಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಕಂಚಿನ ಪದಕ ಗೆದ್ದರು. ಮಹಾರಾಷ್ಟ್ರದ 18 ವರ್ಷ ವಯಸ್ಸಿನ ಸಾಯಿರಾಜ್ ಅವರು ಪುರುಷರ 86 ಕೆ.ಜಿ ವಿಭಾಗದಲ್ಲಿ ಈ ಸಾಧನೆ ಮಾಡಿದರು. ಸ್ನಾಚ್‌ನಲ್ಲಿ 152 ಕೆ.ಜಿ ಮತ್ತು ಕ್ಲೀನ್ ಹಾಗೂ ಜರ್ಕ್‌ನಲ್ಲಿ 186 ಕೆ.ಜಿ ಸೇರಿದಂತೆ ಒಟ್ಟು 338 ಕೆಜಿ ಭಾರ ಎತ್ತಿದರು. ಕಳೆದ ವರ್ಷ ಖೇಲೊ ಇಂಡಿಯಾ ಯೂತ್ ಗೇಮ್ಸ್‌ನಲ್ಲಿ 81 ಕೆ.ಜಿ ವಿಭಾಗದಲ್ಲಿ ಚಿನ್ನ ಗೆಲ್ಲುವ ಹಾದಿಯಲ್ಲಿ ಅವರು ಮೂರು ಯುವ ರಾಷ್ಟ್ರೀಯ ದಾಖಲೆ ನಿರ್ಮಿಸಿದ್ದರು. ದೋಹಾದಲ್ಲಿ ನಡೆದ 2024ರ ಏಷ್ಯನ್ ಯೂತ್ ಮತ್ತು ಜೂನಿಯರ್ ವೈಟ್‌ಲಿಫ್ಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಸಾಯಿರಾಜ್ ಅವರು ಚಿನ್ನದ ಪದಕ ಗೆದ್ದಿದ್ದರು. ಕಳೆದ ವರ್ಷ ಮೇ ತಿಂಗಳಲ್ಲಿ ನಡೆದ ಐಡಬ್ಲ್ಯುಎಫ್ ವಿಶ್ವ ಯೂತ್ ಚಾಂಪಿಯನ್‌ಶಿಪ್‌ನಲ್ಲಿ ನಾಲ್ಕನೇ ಸ್ಥಾನ ಗಳಿಸಿದ್ದರು.

ಡುರಾಂಡ್ ಫುಟ್ಬಾಲ್ ಕಪ್ ಸೌತ್ ಯುನೈಟೆಡ್ ಎಫ್.ಸಿ

ಬೆಂಗಳೂರು: ಏಷ್ಯಾದ ಅತ್ಯಂತ ಹಳೆಯ ಫುಟ್ಬಾಲ್ ಟೂರ್ನಮೆಂಟ್ ಆಗಿ ರುವ 134ನೇ ಡುರಾಂಡ್ ಕಪ್‌ನಲ್ಲಿ ಭಾಗವಹಿಸಲು ಸೌತ್ ಯುನೈಟೆಡ್ ಫುಟ್ಬಾಲ್ ಕ್ಲಬ್ (ಎಸ್‌ಯು ಎಫ್‌ಸಿ) ಆಯ್ಕೆಯಾಗಿದೆ. ಈ ಟೂರ್ನಿಯು ಜುಲೈ 23ರಿಂದ ಆಗಸ್ಟ್ 27ರ ವರೆಗೆ ಭಾರತದ ಐದು ರಾಜ್ಯಗಳಲ್ಲಿ ನಡೆಯಲಿದೆ. ಈ ವರ್ಷದ ಸ್ಪರ್ಧೆಯಲ್ಲಿ ಎಸ್‌ಯುಎಫ್‌ಸಿ ಕರ್ನಾಟಕದಿಂದ ಸ್ಪರ್ಧಿಸುವ ಏಕೈಕ ಕ್ಲಬ್ ಆಗಿದೆ. ಎಸ್‌ಯುಎಫ್‌ಸಿನ ಶರಣ್ ಪಾರಿಖ್ ಈ ಕುರಿತು ಮಾತನಾಡಿ, 'ಡ್ಯುರಾಂಡ್ ಕಪ್ ಒಂದು ಟೂರ್ನಮೆಂಟ್ ಮಾತ್ರವಲ್ಲ, ಅದು ಒಂದು ಪರಂಪರೆ. ಕರ್ನಾಟಕವನ್ನು ಪ್ರತಿನಿಧಿಸುವ ಏಕೈಕ ಕ್ಲಬ್ ಆಗಿ ಈ ಐತಿಹಾಸಿಕ ಟೂರ್ನಮೆಂಟ್‌ನಲ್ಲಿ ಪಾಲ್ಗೊಳ್ಳುತ್ತಿರುವುದು ದೊಡ್ಡ ಗೌರವವಾಗಿದೆ. ಯುವ ಭಾರತೀಯ ಪ್ರತಿಭೆಗಳನ್ನು ಬೆಳೆಸಲು ಮತ್ತು ರಾಜ್ಯದ ಫುಟ್ಬಾಲ್ ಕನಸುಗಳನ್ನು ನೆರವೇರಿಸಲು ನಿರಂತರವಾಗಿ ಬದ್ಧರಾಗಿದ್ದೇವೆ. ಡ್ಯುರಾಂಡ್ ಕಪ್, ಪರಂಪರೆ ಮತ್ತು ಸವಾಲುಗಳ ಒಗ್ಗಟ್ಟನ್ನು ಕಾಯುವ ಟೂರ್ನಮೆಂಟ್ ಆಗಿದ್ದು, ತಂಡ ಸ್ಪರ್ಧಾತ್ಮಕ ಮನೋಭಾವದಿಂದ, ನಿಷ್ಠೆಯಿಂದ ಹಾಗೂ ಸಂಪೂರ್ಣ ಸಿದ್ಧತೆಯಿಂದ ಇದ್ದು, ಶ್ರೇಷ್ಠ ತಂಡಗಳ ವಿರುದ್ಧ ಪಂದ್ಯ ಆಡಲು ಉತ್ಸುಕವಾಗಿದೆ' ಎಂದರು.

ಇಂದಿನಿಂದ ಟೀಮ್ ಇಂಡಿಯಾ–ಇಂಗ್ಲೆಂಡ್ 3ನೇ ಟೆಸ್ಟ್ | ಬೌಲಿಂಗ್‌ನಲ್ಲಿ ಗಿಲ್ ಪಡೆಗೆ ಬುಮ್ರಾ ಬಲ

ಲಾರ್ಡ್ಸ್‌ನಲ್ಲಿ ಭಾರತಕ್ಕೆ ಅಧಿಪತಿಯಾಗುವಾಸೆ

ಲಾರ್ಡ್ಸ್: ನಾಟಿಂಗ್‌ಹ್ಯಾಮ್ ಟೆಸ್ಟ್‌ನಲ್ಲಿ ಸೋತಿದ್ದ ಭಾರತ ಟೆಸ್ಟ್ ತಂಡವು ಬರ್ಮಿಂಗ್‌ಹ್ಯಾಮ್‌ನ ಎಜ್‌ಬಾಸ್ಟನ್‌ನಲ್ಲಿ ಜಯಗಳಿಸಿ ತನ್ನ ಆತ್ಮವಿಶ್ವಾಸವನ್ನು ಮರಳಿ ಪಡೆದಿದೆ. ಗುರುವಾರದಿಂದ ಇಲ್ಲಿ ಆರಂಭವಾಗುವ ಮೂರನೇ ಟೆಸ್ಟ್ ಪಂದ್ಯದಲ್ಲಿಯೂ ಗೆದ್ದು 5 ಪಂದ್ಯಗಳ ಸರಣಿಯಲ್ಲಿ 2–1 ಮುನ್ನಡೆ ಸಾಧಿಸುವ ನಿರೀಕ್ಷೆಯಲ್ಲಿದೆ.

ಆದರೆ ಎದುರಾಳಿ ಇಂಗ್ಲೆಂಡ್ ತಂಡದ ಬೌಲರ್‌ಗಳಿಂದ ಭಾರತದ ಬ್ಯಾಟರ್‌ಗಳಿಗೆ ಈ ಟೆಸ್ಟ್‌ನಲ್ಲಿ ಕಠಿಣ ಸವಾಲು ಎದುರಾಗುವ ಸಾಧ್ಯತೆಯೂ ಇದೆ, ಇದಕ್ಕೆ ಕಾರಣ ಇಲ್ಲಿನ ಸ್ಪೀಡ್ ಮತ್ತು ಬೌನ್ಸಿ ಪಿಚ್. ಈ ಪಂದ್ಯದ ಬ್ಯಾಟಿಂಗ್ ವಿಭಾಗದಲ್ಲಿ ಭಾರತವು ಒಂದು ವೇಳೆ ಕರುಣ್ ನಾಯರ್ ಕೈಬಿಟ್ಟು ಬೇರೊಬ್ಬರಿಗೆ ಅವಕಾಶ ನೀಡುವ ಸಾಧ್ಯತೆ ಇದೆ. ಆದರೆ ಬೌಲಿಂಗ್ ವಿಭಾಗದಲ್ಲಿ ಬದಲಾವಣೆ ನಿರೀಕ್ಷೆ ಹೆಚ್ಚಿದೆ.

2ನೇ ಟೆಸ್ಟ್‌ನಲ್ಲಿ ವಿಶ್ರಾಂತಿ ಪಡೆದಿದ್ದ ವೇಗಿ ಜಸ್‌ಪ್ರೀತ್ ಬುಮ್ರಾ 3ನೇ ಟೆಸ್ಟ್‌ನಲ್ಲಿ ಆಡುವುದು ಬಹುತೇಕ ಖಚಿತವಾಗಿದೆ. ಅವರು ಈಗಾಗಲೇ ನೆಟ್ಸ್‌ನಲ್ಲಿ ಕಠಿಣ ಅಭ್ಯಾಸ ಕೂಡ ನಡೆಸಿದ್ದಾರೆ. ಬುಮ್ರಾ ಆಗಮನದಿಂದ ಭಾರತದ ಬೌಲಿಂಗ್ ಮತ್ತಷ್ಟು ಬಲಿಷ್ಠಗೊಳ್ಳಲಿದೆ. ಬುಮ್ರಾ ಆಡಲಿಳಿದರೆ ಆಗ ಕನ್ನಡಿಗ ಪ್ರಸಿದ್ಧ ಕೃಷ್ಣರನ್ನು ಕೈಬಿಡುವ ಸಾಧ್ಯತೆ ಹೆಚ್ಚು. ಇನ್ನೊಂದೆಡೆ ಮೊಹಮ್ಮದ್ ಸಿರಾಜ್‌ಗೆ ಈ ಪಂದ್ಯಕ್ಕೆ ವಿಶ್ರಾಂತಿ ನೀಡಲು ಟೀಮ್ ಮ್ಯಾನೇಜ್‌ಮೆಂಟ್ ಚಿಂತನೆ ನಡೆಸಿದ್ದು, ಎಡಗೈ ವೇಗಿ ಅರ್ಶ್‌ದೀಪ್ ಸಿಂಗ್‌ಗೆ ಟೆಸ್ಟ್ ಪದಾರ್ಪಣೆಯ ಅವಕಾಶ ಕಲ್ಪಿಸುವ ಸಾಧ್ಯತೆಯೂ ಇದೆ.

ಸ್ಪಿನ್ ವಿಭಾಗದಲ್ಲಿ ರವೀಂದ್ರ ಜಡೇಜಾ ಮತ್ತು ವಾಷಿಂಗ್ಟನ್ ಸುಂದರ್ 3ನೇ ಟೆಸ್ಟ್‌ನಲ್ಲೂ ಕಣಕ್ಕಿಳಿಯಲಿದ್ದಾರೆ ಎನ್ನಲಾಗಿದೆ. ಉಳಿದಂತೆ ದ್ವಿತೀಯ ಟೆಸ್ಟ್‌ನ ಎರಡೂ ಇನಿಂಗ್ಸ್‌ನಲ್ಲಿ ತಲಾ ಒಂದು ರನ್ ಗಳಿಸಿದ್ದ ಆಲ್‌ರೌಂಡರ್ ನಿತೀಶ್ ಕುಮಾರ್ ರೆಡ್ಡಿ ಸ್ಥಾನಕ್ಕೂ ಕುತ್ತು ಬರುವ ಸಾಧ್ಯತೆ ಇದೆ.

ಆರ್ಚರ್ ಕಮ್‌ಬ್ಯಾಕ್: ಮೊದಲ ಎರಡು ಪಂದ್ಯಗಳಿಗೆ ಆಡುವ ಬಳಗದಲ್ಲಿ ಯಾವುದೇ ಬದಲಾವಣೆ ಮಾಡಿಕೊಳ್ಳದ ಇಂಗ್ಲೆಂಡ್ ಮೂರನೇ ಪಂದ್ಯಕ್ಕೆ ತನ್ನ ಆಡುವ ಬಳಗದಲ್ಲಿ ಅಚ್ಚರಿಯ ಬದಲಾವಣೆ ಮಾಡಿದ್ದು, ನಿರೀಕ್ಷೆಯಂತೆ ಜೋಫ್ರಾ ಆರ್ಚರ್‌ಗೆ ಸ್ಥಾನ ನೀಡಲಾಗಿದೆ. ಆದರೆ ಸರಣಿಯ ಮೊದಲ ಎರಡು ಟೆಸ್ಟ್ ಪಂದ್ಯಗಳನ್ನು ಆಡಿದ್ದ ಜೋಶ್ ಜೋಶ್‌ಟಂಗ್ ಅವರನ್ನು ಆಡುವ ಹನ್ನೊಂದರ ಬಳಗದಿಂದ ಇಂಗ್ಲೆಂಡ್ ಕೈಬಿಡಲಾಗಿದೆ. ಜೋಶ್ ಟಂಗ್ ಎರಡು ಟೆಸ್ಟ್‌ಗಳಲ್ಲಿ 11 ವಿಕೆಟ್‌ಗಳನ್ನು ಪಡೆದಿದ್ದರು. ನಾಲ್ಕು ವರ್ಷಗಳ ನಂತರ ಜೋಫ್ರಾ ಆರ್ಚರ್ ಟೆಸ್ಟ್ ಕ್ರಿಕೆಟ್‌ಗೆ ಮರಳಲಿದ್ದಾರೆ.

ಭಾರತದ ಆಟಗಾರರು ಲಾರ್ಡ್ಸ್‌ನಲ್ಲಿ ಬುಧವಾರ ಕಠಿಣ ಅಭ್ಯಾಸದಲ್ಲಿ ನಿರತರಾಗಿದ್ದರು.

ದಾಖಲೆಗಳತ್ತ ಗಿಲ್ ಗಮನ

ಪ್ರಚಂಡ ಬ್ಯಾಟಿಂಗ್ ಫಾರ್ಮ್‌ನಲ್ಲಿರುವ ಭಾರತ ಟೆಸ್ಟ್ ತಂಡದ ನಾಯಕ ಶುಭ್‌ಮನ್ ಗಿಲ್ ಕಳೆದ ಎಜ್‌ಬಾಸ್ಟನ್ ಟೆಸ್ಟ್‌ವೊಂದರಲ್ಲೇ ಬರೋಬ್ಬರಿ 34 ದಾಖಲೆಗಳನ್ನು ಅಳಿಸಿ ಹಾಕಿದ್ದರು. ಇದೀಗ ಅವರು ಉಳಿದ ಮೂರು ಟೆಸ್ಟ್ ಪಂದ್ಯಗಳಲ್ಲಿ ಕ್ರಿಕೆಟ್ ದಂತಕಥೆ ಡಾನ್ ಬ್ರಾಡ್ಮನ್ ಸೇರಿದಂತೆ ರಾಹುಲ್ ದ್ರಾವಿಡ್, ಸುನೀಲ್ ಗಾವಸ್ಕರ್ ಮುಂತಾದವರ ದಾಖಲೆ ಯನ್ನು ಮುರಿಯುವ ಸನಿಹದಲ್ಲಿದ್ದಾರೆ.

ಬೌಲಿಂಗ್ ಪಿಚ್

ಕಳೆದ ತಿಂಗಳು ಇದೇ ಮೈದಾನದಲ್ಲಿ ನಡೆದಿದ್ದ ಆಸ್ಟ್ರೇಲಿಯಾ ಮತ್ತು ದಕ್ಷಿಣ ಆಫ್ರಿಕಾ ನಡುವಣ ಐಸಿಸಿ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್ ಪಂದ್ಯದಲ್ಲಿ ಬೌಲರ್‌ಗಳು ಮೇಲುಗೈ ಸಾಧಿಸಿದ್ದರು. ಮೊದಲ ಎರಡು ದಿನ ತಲಾ 14 ವಿಕೆಟ್‌ಗಳು ಉರುಳಿದ್ದವು. ಆಸೀಸ್ ನಾಯಕ ಪ್ಯಾಟ್ ಕಮಿನ್ಸ್ 5 ವಿಕೆಟ್ ಗೊಂಚಲು ಪಡೆದಿದ್ದರು. ಪಿಚ್ ಕ್ಯುರೇಟರ್‌ಗಳು ಕೂಡ ಹಸಿರು ಉಳಿಸಿದಲ್ಲಿ ಎರಡೂ ತಂಡಗಳ ಬ್ಯಾಟರ್‌ಗಳಿಗೆ ಸವಾಲು ಎದುರಾಗಲಿದೆ. ಹೀಗಾಗಿ ಟಾಸ್ ಗೆದ್ದ ತಂಡ ಮೊದಲು ಬೌಲಿಂಗ್ ಆಯ್ದುಕೊಂಡರೆ ಉತ್ತಮ ಎನ್ನುವುದು ಸಾರ್ವತ್ರಿಕ ಅನಿಸಿಕೆ.

ಕ್ರಿಕೆಟ್‌ಗಿಂತ ಟೆನಿಸ್‌ನಲ್ಲಿ ಹೆಚ್ಚಿನ ಒತ್ತಡ ಸಹಜ

ಲಂಡನ್: ಗರಿಷ್ಠ ಮಟ್ಟದ ಫಿಟ್‌ನೆಸ್ ಹಾಗೂ ಮಾನಸಿಕ ದೃಢತೆಯನ್ನು ಕಾಯ್ದುಕೊಂಡು ತಾಳ್ಮೆಯಿಂದ ಆಡುವ ಟೆನಿಸ್ ಆಟಗಾರರ ಬಗ್ಗೆ ನನಗೆ ಅತೀವ ಗೌರವವಿದೆ. ಭಾರತ ಹಾಗೂ ಪಾಕಿಸ್ತಾನ ನಡುವಿನ ವಿಶ್ವಕಪ್ ಪಂದ್ಯಗಳಿಗೆ ಸಮಾನವಾದ ಒತ್ತಡವನ್ನು ಟೆನಿಸ್ ಆಟಗಾರರು ನಿಯಮಿತವಾಗಿ ನಿಭಾಯಿಸುತ್ತಾರೆ ಎಂದು ಟೀಮ್ ಇಂಡಿಯಾದ ಮಾಜಿ ನಾಯಕ ವಿರಾಟ್ ಕೊಹ್ಲಿ ಗುಣಗಾನ ಮಾಡಿದ್ದಾರೆ. ಪ್ರಸ್ತುತ ಸಾಗುತ್ತಿರುವ ವಿಂಬಲ್ಡನ್ ಗ್ರ್ಯಾಂಡ್ ಸ್ಲಾಮ್ ಟೆನಿಸ್ ಟೂರ್ನಿಯಲ್ಲಿ ಚಾಂಪಿಯನ್ ಆಟಗಾರ ನೊವಾಕ್ ಜೊಕೊವಿಕ್ ಅವರ ಆಟವನ್ನು ಪತ್ನಿ ಅನುಷ್ಕಾ ಶರ್ಮಾ ಅವರೊಂದಿಗೆ ವಿರಾಟ್ ಕೊಹ್ಲಿ ವೀಕ್ಷಿಸಿದ್ದಾರೆ.

ಮಾಧ್ಯಮ ಸಂದರ್ಶನದಲ್ಲಿ ಕ್ರಿಕೆಟ್ ಹಾಗೂ ಟೆನಿಸ್ ಕುರಿತು ಮಾತನಾಡಿರುವ ವಿರಾಟ್, 'ಕ್ರೀಡೆಗಳಲ್ಲಿ ಒತ್ತಡದ ಸಂದರ್ಭಗಳು ಸಮಾನವಾಗಿವೇ ಇರುತ್ತವೆ. ಆದರೆ ಭಾರತ ಹಾಗೂ ಪಾಕಿಸ್ತಾನ ನಡುವಣ ವಿಶ್ವಕಪ್ ಪಂದ್ಯಗಳಲ್ಲಿ ಎದುರಾಗುವಂತಹ ಒತ್ತಡವನ್ನು ಟೆನಿಸ್ ಆಟಗಾರರು ನಿಯಮಿತವಾಗಿ ನಿಭಾಯಿಸುತ್ತಾರೆ. ಕ್ವಾರ್ಟರ್ ಫೈನಲ್‌ನಿಂದ ಫೈನಲ್‌ವರೆಗೂ ತುಂಬಾ ಒತ್ತಡ ಸೃಷ್ಟಿಯಾಗುತ್ತವೆ' ಎಂದು ಹೇಳಿದ್ದಾರೆ. 'ವಿಭಿನ್ನ ಕ್ರೀಡೆಗಳು ವಿಭಿನ್ನ ಸವಾಲುಗಳನ್ನು ಹೊಂದಿರುತ್ತವೆ. ಕ್ರಿಕೆಟ್‌ನಲ್ಲಿ ಎದುರಾಗುವ ಸವಾಲು ಎಂದರೆ ದೀರ್ಘ ಕಾಲ ಕಾಯಬೇಕು. ಏಕೆಂದರೆ ಬ್ಯಾಟಿಂಗ್ ಮಾಡಲು ಅವಕಾಶ ಯಾವಾಗ ಸಿಗುತ್ತದೆ ಎಂಬುದು ಗೊತ್ತಿರುವುದಿಲ್ಲ, ಅಲ್ಲಿಯವರೆಗೆ ಡ್ರೆಸ್ಸಿಂಗ್ ರೂಮ್‌ನಲ್ಲಿ ಕಾಯುತ್ತಿರಬೇಕು, ಅಲ್ಲಿ ಕುಳಿತು ಆಟವನ್ನು ಅವಲೋಕಿಸಬೇಕು' ಎಂದು ಕೊಹ್ಲಿ ಹೇಳಿದ್ದಾರೆ.

ಟೆಸ್ಟ್ ಬ್ಯಾಟಿಂಗ್ ಶ್ರೇಯಾಂಕ ಪಟ್ಟಿ ಪ್ರಕಟ

6ನೇ ಸ್ಥಾನಕ್ಕೆ ಜಿಗಿದ ಗಿಲ್

ದುಬೈ: ಇಂಗ್ಲೆಂಡ್ ವಿರುದ್ಧದ ಆ್ಯಂಡರ್‌ಸನ್–ತೆಂಡೂಲ್ಕರ್ ಟ್ರೋಫಿ ಸರಣಿಯ ಮೊದಲ 2 ಪಂದ್ಯಗಳಲ್ಲೇ 3 ಶತಕಗಳ ಸಹಿತ 585 ರನ್ ಸಿಡಿಸಿರುವ ಭಾರತ ಟೆಸ್ಟ್ ತಂಡದ ನಾಯಕ ಶುಭ್‌ಮನ್ ಗಿಲ್ ಐಸಿಸಿ ಟೆಸ್ಟ್ ಬ್ಯಾಟಿಂಗ್ ಶ್ರೇಯಾಂಕದಲ್ಲಿ 15 ಸ್ಥಾನಗಳ ಜಿಗಿತದೊಂದಿಗೆ ಜೀವನಶ್ರೇಷ್ಠ 6ನೇ ಸ್ಥಾನ ಪಡೆದಿದ್ದಾರೆ. ಈ ಮಧ್ಯೆ ಇಂಗ್ಲೆಂಡ್‌ನ ಹ್ಯಾರಿ ಬ್ರೂಕ್ ಅವರು ಜೋ ರೂಟ್ ಹಿಂದಿಕ್ಕಿ, ವಿಶ್ವದ ನಂ.1 ಬ್ಯಾಟರ್ ಆದರು. ಎಜ್‌ಬಾಸ್ಟನ್ ಟೆಸ್ಟ್ ಪಂದ್ಯದಲ್ಲಿ ದ್ವಿಶತಕ ಮತ್ತು 150ಕ್ಕೂ ಹೆಚ್ಚು ರನ್ ಗಳಿಸಿದ ಗಿಲ್, ಪಂದ್ಯವೊಂದ ರಲ್ಲೇ 34 ದಾಖಲೆಗಳನ್ನು ಅಳಿಸಿ ಹಾಕಿದ್ದರು. ಮೊದಲ ಇನ್ನಿಂಗ್ಸ್‌ನಲ್ಲಿ 269 ಮತ್ತು ಎರಡನೇ ಇನ್ನಿಂಗ್ಸ್‌ನಲ್ಲಿ 161 ರನ್ ಗಳಿಸಿದ್ದರು. ಅವರ ಆ ಪ್ರದರ್ಶನ ಅವರ ಶ್ರೇಯಾಂಕ ಪ್ರಗತಿಯಲ್ಲಿ ಪ್ರಮುಖ ಪಾತ್ರವಹಿಸಿತು. ಗಿಲ್ ಅವರ ಹಿಂದಿನ ಅತ್ಯುತ್ತಮ ಟೆಸ್ಟ್ ಶ್ರೇಯಾಂಕ 14 ಆಗಿತ್ತು, ಆದರೆ ಈಗ ಅವರು ವೃತ್ತಿಜೀವನದ ಅತ್ಯುತ್ತಮ 807 ರೇಟಿಂಗ್ ಅಂಕಗಳೊಂದಿಗೆ 6ನೇ ಸ್ಥಾನಕ್ಕೆ ಏರಿದ್ದಾರೆ. ಟೀಮ್ ಇಂಡಿಯಾದ ಮತ್ತೋರ್ವ ಯುವ ಬ್ಯಾಟರ್ ಯಶಸ್ವಿ ಜೈಸ್ವಾಲ್ ಬ್ಯಾಟಿಂಗ್ ಶ್ರೇಯಾಂಕದಲ್ಲಿ ತಮ್ಮ 4ನೇ ಸ್ಥಾನ ಉಳಿಸಿ ಕೊಂಡಿದ್ದಾರೆ.

ಐಸಿಸಿ ಟಿ20 ಬೌಲಿಂಗ್: 2ನೇ ಸ್ಥಾನಕ್ಕೇರಿದ ದೀಪ್ತಿ

ಭಾರತ ಮಹಿಳಾ ಕ್ರಿಕೆಟ್ ತಂಡದ ಸ್ಟಾರ್ ಆಲ್‌ರೌಂಡರ್ ದೀಪ್ತಿ ಶರ್ಮಾ ನೂತನ ಐಸಿಸಿ ಟಿ20 ಬೌಲಿಂಗ್ ರ‍್ಯಾಂಕಿಂಗ್‌ನಲ್ಲಿ ಒಂದು ಸ್ಥಾನದ ಜಿಗಿತದೊಂದಿಗೆ 2ನೇ ಸ್ಥಾನಕ್ಕೆ ಏರಿದ್ದಾರೆ. ಕಳೆದ 6 ವರ್ಷಗಳಿಂದ ಅವರು ಟಾಪ್–10 ಶ್ರೇಯಾಂಕದಲ್ಲೇ ಉಳಿದು ಕೊಂಡಿದ್ದಾರೆ. ಪಾಕಿಸ್ತಾನದ ಸದಿಯಾ ಇಕ್ಬಾಲ್ ಅಗ್ರಸ್ಥಾನ ಕಾಯ್ದು ಕೊಂಡರೆ, ಈ ಹಿಂದೆ 2ನೇ ಸ್ಥಾನದಲ್ಲಿದ್ದ ಆಸ್ಟ್ರೇಲಿಯಾದ ಅನ್ನಾಬೆಲ್ ಸದರ್ಲೆಂಡ್ ಮೂರನೇ ಸ್ಥಾನಕ್ಕಿಳಿದರು. ಇಂಗ್ಲೆಂಡ್ ಎದುರು ನಡೆಯುತ್ತಿರುವ ಟಿ20 ಸರಣಿಯ ಉಳಿದ 2 ಪಂದ್ಯಗಳಲ್ಲಿ ಉತ್ತಮ ವಿಕೆಟ್ ಕಿತ್ತರೆ ದೀಪ್ತಿ ಶರ್ಮಾ ಅಗ್ರಸ್ಥಾನ ತಲುಪಬಹುದು. ಸದ್ಯ ಅವರು ಆಡಿ ಮೂರು ಪಂದ್ಯಗಳಲ್ಲಿ ಆರು ವಿಕೆಟ್‌ಗಳನ್ನು ಕಬಳಿಸಿದ್ದಾರೆ. ಅಗ್ರಸ್ಥಾನಿಯಾಗಿರುವ ಸದಿಯಾ(746) ಅವರಿಗಿಂತ ಕೇವಲ 8 ಅಂಕಗಳ ಅಂತರದಲ್ಲಷ್ಟೇ ಹಿಂದಿದ್ದು, ದೀಪ್ತಿ 738 ಅಂಕ ಹೊಂದಿದ್ದಾರೆ.

12ನೇ ಆವೃತ್ತಿಯ ಪ್ರೊ.ಕಬಡ್ಡಿಯಲ್ಲಿ ಪಾಲ್ಗೊಳ್ಳುವ 6 ತಂಡಗಳ ನಾಯಕರು.

ಆಗಸ್ಟ್ 29ರಿಂದ ಆರಂಭವಾಗಲಿರುವ ಪಂದ್ಯಾವಳಿ | 12 ತಂಡಗಳ ಸೆಣಸಾಟ

12ನೇ ಆವೃತ್ತಿಯ ಪ್ರೊ.ಕಬಡ್ಡಿ ಟೂರ್ನಿ

ದೆಹಲಿ: 12ನೇ ಆವೃತ್ತಿಯ ಪ್ರೊ ಕಬಡ್ಡಿ ಲೀಗ್ ಟೂರ್ನಿಯ ವೇಳಾಪಟ್ಟಿ ಬುಧವಾರ ಪ್ರಕಟವಾಗಿದೆ. ಆಗಸ್ಟ್ 29ರಿಂದ ಈ ಟೂರ್ನಿಯು ಆರಂಭವಾಗಲಿದೆ. ಪ್ರಶಸ್ತಿಗಾಗಿ ಒಟ್ಟು 12 ತಂಡಗಳು ಕಾದಾಟ ನಡೆಸಲಿವೆ. ಹಾಲಿ ಚಾಂಪಿಯನ್ ಹರಿಯಾಣ ತಂಡ ತನ್ನ ಪ್ರಶಸ್ತಿಯನ್ನು ಉಳಿಸಿಕೊಳ್ಳಲು ಎದುರು ನೋಡುತ್ತಿದೆ. ಈ ಟೂರ್ನಿಯ ಹರಾಜು ಈಗಾಗಲೇ ಮುಗಿದಿದ್ದು, ಆಟಗಾರರು ದುಬಾರಿ ಮೊತ್ತ ಪಡೆಯುವ ಮೂಲಕ ಆಯಾ ತಂಡಗಳಿಗೆ ಸೇರ್ಪಡೆಯಾಗಿದ್ದಾರೆ. ಟೂರ್ನಿಯು ಇನ್ನಷ್ಟು ರೋಚಕತೆಯಿಂದ ಕೂಡಿರಲಿದೆ. 'ಪಿಕೆಎಲ್ ಸೀಸನ್ 12ರ ಆರಂಭದ ದಿನಾಂಕ ವನ್ನು ಅನಾವರಣಗೊಳಿಸಲು ನಾವು ರೋಮಾಂಚನ ಗೊಂಡಿದ್ದೇವೆ. 10 ಆಟಗಾರರು ಒಂದು ಕೋಟಿ ರು.ಗಡಿಯನ್ನು ದಾಟಿ ದಾಖಲೆಯನ್ನು ಬರೆದಿದ್ದಾರೆ. ನಮ್ಮ ಅತ್ಯಂತ ಸ್ಪರ್ಧಾತ್ಮಕ ಋತುವಿಗೆ ನಾವು ಅಡಿಪಾಯ ಹಾಕಿದ್ದೇವೆ ಎಂದು ಪ್ರೊ. ಕಬಡ್ಡಿಯ ಬಿಸಿನೆಸ್ ಹೆಡ್ ಅನುಪಮ್ ಗೋಸ್ವಾಮಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಟಾಕೀಸ್

ಈ ವಾರ ದೂರತೀರ ಯಾನ

ಸಾಮಾಜಿಕ ಕಳ ಕಳಿಯ ಸಿನಿಮಾಗಳ್ನು ನಿರ್ದೇಶಿಸಿ ಪ್ರಸಿದ್ಧಿ ಪಡೆದಿರುವ ಮಂಸೂರೆ ಈಗ ಪಯಣದಲ್ಲಿ ಸಾಗುವ ಪ್ರೇಮ ಕಥೆಯನ್ನು ಹೊತ್ತು ಬಂದಿದ್ದಾರೆ. ವಿಜಯ್ ಕೃಷ್ಣ ನಾಯಕನಾಗಿ ನಟಿಸಿರುವ ಈ ಚಿತ್ರದಲ್ಲಿ ಪ್ರಿಯಾಂಕಾ ಕುಮಾರ್ ನಾಯಕಿಯಾಗಿ ಬಣ್ಣ ಹಚ್ಚಿದ್ದಾರೆ. ಡಿ ಕ್ರಿಯೇಶನ್ಸ್ ನಿರ್ಮಾಣ ಸಂಸ್ಥೆ ಯಲ್ಲಿ, ಆರ್. ದೇವರಾಜ್ ಈ ಚಿತ್ರವನ್ನು ನಿರ್ಮಿಸಿದ್ದಾರೆ. ಆರಂಭದಿಂದಲೂ ಕುತೂಹಲ ಮೂಡಿಸಿರುವ ದೂರ ತೀರ ಯಾನ ಚಿತ್ರದ ಹಾಡುಗಳು ಕೇಳಲು ಮಧುರವಾಗಿದ್ದು, ಬಕ್ಕೇಶ್ ಹಾಗೂ ಕಾರ್ತಿಕ್ ಸಂಗೀತ ಸಂಯೋಜಿಸಿದ್ದಾರೆ. ದೂರ ತೀರ ಯಾನ ಈ ವಾರ ತೆರೆಗೆ ಬರಲಿದೆ. ಬಿಡುಗಡೆಗೂ ಮುನ್ನವೇ ಧಾರವಾಡದಲ್ಲಿ ಸಿನಿಮಾದ ಪ್ರೀಮಿಯರ್ ಆಗಿದೆ.

ಇದು ನಮ್ಮ ಡಿ.ಕ್ರಿಯೇಷನ್ಸ್ ನಿರ್ಮಾಣದ ಐದನೇ ಚಿತ್ರ. ಮಂಸೋರೆ ಅವರೊಂದಿಗೆ ಮೂರನೇ ಚಿತ್ರ ಇದಾಗಿದೆ. ಈ ಚಿತ್ರ ಖಂಡಿತ ವಾಗಿ ಪ್ರೇಕ್ಷಕರಿಗೆ ಇಷ್ಟವಾಗಲಿದೆ. ಇಷ್ಟವಾದ ಪ್ರೇಕ್ಷಕರು ಇನ್ನೊಬ್ಬರಿಗೂ ಸಿನಿಮಾ ನೋಡುವಂತೆ ಹೇಳುತ್ತಾರೆ. ದೂರ ತೀರಯಾನ ಯಶಸ್ಸು ಕಾಣುತ್ತದೆ ಎಂಬ ನಿರೀಕ್ಷೆ ನಮ್ಮ ಚಿತ್ರತಂಡಕ್ಕಿದೆ ಎಂದು ನಿರ್ಮಾಪಕ ಆರ್ ದೇವರಾಜ್ ತಿಳಿಸಿದರು.

ಟ್ರಾವೆಲಿಂಗ್ ಲವ್ ಸ್ಟೋರಿ ಕಥಾಹಂದರ ಹೊಂದಿರುವ ಈ ಚಿತ್ರಕ್ಕೆ ಮಂಸೋರೆ ಕಥೆ ಬರೆದಿದ್ದಾರೆ. ಚೇತನಾ ತೀರ್ಥಹಳ್ಳಿ ಸಂಭಾಷಣೆ ಬರೆದಿದ್ದು, ಗೌಸ್ ಪೀರ್, ಕವಿರಾಜ್, ಪ್ರಮೋದ್ ಮರವಂತೆ ಹಾಗೂ ಕಿರಣ್ ಕಾವೇರಪ್ಪ ಹಾಡು ಗಳಿಗೆ ಸಾಹಿತ್ಯ ರಚಿಸಿದ್ದಾರೆ. ಟಿ ಪಿ ಕೈಲಾಸಂ ವಿರಚಿತ ಕೋಳಿಕೆ ರಂಗ.. ಹಾಡನ್ನು ಹೊಸ ಮಾದರಿಯಲ್ಲಿ ಸಂಯೋಜನೆ ಮಾಡಿ ಚಿತ್ರಕ್ಕೆ ಅಳವಡಿಸಿಕೊಂಡಿದ್ದಾರೆ. ಶೇಖರ್ ಚಂದ್ರ ಛಾಯಾ ಗ್ರಹಣ, ನಾಗೇಂದ್ರ ಕೆ ಉಜ್ಜನಿ ಸಂಕಲನ ಹಾಗೂ ಸರವಣ ಕುಮಾರ್ ಕಲಾ ನಿರ್ದೇಶನ ವಿರುವ ದೂರ ತೀರ ಯಾನ ಚಿತ್ರಕ್ಕಿದೆ. ಬೆಂಗಳೂರು, ಉಡುಪಿ, ಕುಂದಾಪುರ, ಗೋಕರ್ಣ, ಮುರುಡೇಶ್ವರ, ಕಾರವಾರ, ಯಲ್ಲಾಪುರ, ದಾಂಡೇಲಿ, ಗೋವಾ ಮುಂತಾದ ಕಡೆ ಸುಮಾರು ನಲವತ್ತು ದಿನಗಳ ಕಾಲ ಚಿತ್ರೀಕರಣ ನಡೆಸಲಾಗಿದೆ.

ಲವ್‌ಮ್ಯಾಟ್ರು ಹಾಡಿಗೆ ಫುಲ್ ಖುಷ್

ಪ್ರೇಮಕಥೆಯ ಸಿನಿಮಾಗಳು ಯುವ ಸಮೂಹವನ್ನು ಸೆಳೆಯುತ್ತವೆ. ಮಧುರ ಪ್ರೇಮಕಥೆ ಪ್ರೇಕ್ಷಕರ ಮನಸನ್ನು ಕಾಡುತ್ತದೆ. ಈಗ ಲವ್ ಮ್ಯಾಟ್ರು ಶೀರ್ಷಿಕೆಯಲ್ಲಿ ಸಿನಿಮಾ ಮೂಡಿಬಂದಿದ್ದು ತೆರೆಗೆ ಬರಲು ಸಿದ್ಧವಾಗಿದೆ. ಶೀರ್ಷಿಕೆ ಕೇಳಿದಾಕ್ಷಣ ಇದು ಲವ್ ಕಂಟೆಂಟ್ ಇರುವ ಸಿನಿಮಾ ಅನ್ನೋದರಲ್ಲಿ ಅನುಮಾನವೇ ಇಲ್ಲ. ಈ ಚಿತ್ರದ ಹಾಡು ಬಿಡುಗಡೆಯಾಗಿದ್ದು, ಸಂಗೀತ ಪ್ರಿಯರ ಮನಗೆದ್ದಿವೆ. ಅದರಲ್ಲೂ ಯುವ ಪ್ರೇಮಿಗಳಿಗೆ ಈ ಹಾಡು ಮನಸಿಗೆ ನಾಟುತ್ತದೆ. ಏನೋ ಗೊತ್ತಿಲ್ಲ.. ಎಂಬ ಹಾಡು ಇದಾಗಿದ್ದು, ಈ ಹಾಡಿಗೆ ನಟ ವಿರಾಟ ಬಿಲ್ವ ಹಾಗೂ ಸೋನಲ್ ಹೆಜ್ಜೆ ಹಾಕಿದ್ದಾರೆ. ಈ ಹಾಡಿನಲ್ಲಿ ಸೊನಲ್ ಮುದ್ದಾಗಿ ಕಂಗೊಳಿಸಿದ್ದಾರೆ. ಶೇಡ್ರಾಕ್ ಸೋಲೋಮನ್ ಸಂಗೀತ ಹಾಡಿಗೆ ಹೊಸತನ ತುಂಬಿದೆ.

ವಿರಾಟ ಬಿಲ್ವ ಅವರೇ ಈ ಚಿತ್ರವನ್ನು ನಿರ್ದೇಶನ ಮಾಡಿದ್ದಾರೆ. ಕಡ್ಡಿಪುಡಿ ಚಿತ್ರದಲ್ಲಿ ನಟಿಸಿದ್ದ ವಿರಾಟ ಈ ಚಿತ್ರದ ಮೂಲಕ ನಾಯಕ ನಟನ ಜತೆಗೆ ನಿರ್ದೇಶಕರಾಗಿಯೂ ಗುರುತಿಸಿಕೊಳ್ಳುತ್ತಿದ್ದಾರೆ. ಸಿಲ್ವರ್‌ಥಮ್ ಮತ್ತು ಐಎನ್‌ಕೆ ಸಿನಿಮಾಸ್‌ನಲ್ಲಿ ಚಿತ್ರ ನಿರ್ಮಾಣವಾಗಿದೆ. ಸೋನಲ್ ಮಂತೆರೊ ನಾಯಕಿಯಾಗಿ ಬಣ್ಣಹಚ್ಚಿದ್ದು, ಸುಶ್ಮಿತಾ ಗೋಪಿನಾಥ್, ಅಚ್ಯುತ್ ಕುಮಾರ್, ಸುಮನ್ ರಂಗನಾಥ್, ಅನಿತಾ ಭಟ್ ಸೇರಿದಂತೆ ಹಲವರು ತಾರಾಬಳಗದಲ್ಲಿದ್ದಾರೆ. ದೇವೇಂದ್ರ.ಆರ್.ನಾಯ್ಡು ಮತ್ತು ಸಿ.ಎಂ. ಪರಮೇಶ್ ಛಾಯಾಗ್ರಹಣ, ಸುರೇಶ್ ಅರಸ್ ಸಂಕಲನ ಈ ಚಿತ್ರಕ್ಕಿದೆ. ಲವ್ ಮ್ಯಾಟ್ರು ಆಗಸ್ಟ್ ಅಥವಾ ಸೆಪ್ಟೆಂಬರ್‌ನಲ್ಲಿ ತೆರೆಗೆ ಬರಲಿದೆ.

ಜೋಗತಿ ಅವತಾರದಲ್ಲಿ ಕಿಟ್ಟಿ

ಸಂಜು ವೆಡ್ಸ್ ಗೀತಾ 2 ಚಿತ್ರದಲ್ಲಿ ನವಿರಾದ ಪ್ರೇಮಕಥೆಯ ಜತೆಗೆ ರೈತರ ಹೋರಾಟದ ಕಥೆ ಹೇಳಿದ ಶ್ರೀನಗರ ಕಿಟ್ಟಿ ಈಗ ಹೊಸ ಅವತಾರ ತಾಳಿದ್ದಾರೆ. ವೇಷಗಳು ಶೀರ್ಷಿಕೆಯಲ್ಲಿ ಸೆಟ್ಟೇರಿರುವ ಸಿನಿಮಾದಲ್ಲಿ ಕಿಟ್ಟಿ ಹೊಸ ಗೆಟಪ್‌ನಲ್ಲಿ ತೆರೆಗೆ ಬರಲಿದ್ದಾರೆ.



ಗ್ರೀನ್ ಟ್ರೀ ಸ್ಟುಡಿಯೋಸ್‌ನಲ್ಲಿ ನಿರ್ಮಾಣವಾಗುತ್ತಿರುವ ಈ ಚಿತ್ರಕ್ಕೆ ಕಿಶನ್‌ರಾವ್ ದಳವಿ ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಕಿಟ್ಟಿ ಹುಟ್ಟುಹಬ್ಬದ ಪ್ರಯುಕ್ತ ಚಿತ್ರತಂಡ ಚಿತ್ರದ ಟೈಟಲ್ ಪೋಸ್ಟರ್ ಬಿಡುಗಡೆ ಮಾಡಿದೆ. ಈ ಪೋಸ್ಟರ್‌ನಲ್ಲಿ ಕಿಟಿ ಡಬಲ್ ಶೇಡ್‌ನಲ್ಲಿ ಮಿಂಚಿದ್ದಾರೆ. ಈ ಚಿತ್ರದಲ್ಲಿ ನಮ್ಮ ಜೋಗತಿಯರ ಬಗ್ಗೆ ಹಾಗೂ ಅವರ ಜೀವನ ಶೈಲಿಯ ಬಗ್ಗೆ ಹೇಳಲಾಗುತ್ತಿದೆ. ಇಲ್ಲಿ ಶ್ರೀನಗರ ಕಿಟ್ಟಿ ಬಸಪ್ಪ ಹಾಗೂ ಬಸಮ್ಮ ಜೋಗತಿಯಾಗಿ ಎರಡು ಗೆಟಪ್‌ಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಜೋಗತಿ ಪಾತ್ರಕ್ಕಾಗಿ ಮಂಜಮ್ಮ ಜೋಗತಿ ಅವರನ್ನು ಭೇಟಿ ಮಾಡಿ ಜೋಗತಿಯರ ನಡೆ, ನುಡಿಯ ಬಗ್ಗೆ ಸಾಕಷ್ಟು ಮಾಹಿತಿ ಪಡೆದು ಕೊಂಡು ನಟಿಸಲು ಸಿದ್ದತೆ ಮಾಡಿಕೊಂಡಿದ್ದಾರೆ.

ಮುಂದಿನ ತಿಂಗಳಿಂದ ವೇಷಗಳು ಚಿತ್ರದ ಚಿತ್ರೀಕರಣ ಆರಂಭವಾಗ ಲಿದ್ದು, ಮಧ್ಯಪ್ರದೇಶದ ಮಹಾಕಾಲೇಶ್ವರ, ಉತ್ತರ ಕರ್ನಾಟಕ, ಬೆಂಗಳೂರು ಹಾಗೂ ಮೈಸೂರು ಸುತ್ತಮುತ್ತ ಚಿತ್ರದ ಚಿತ್ರೀಕರಣ ನಡೆಸಲು ಚಿತ್ರತಂಡ ಯೋಜನೆ ಹಾಕಿಕೊಂಡಿದೆ. ಕೌಶಿಕ್ ಹರ್ಷ ಅವರ ಸಂಗೀತ ನಿರ್ದೇಶನ, ರಾಜ್ ಗುರು ದತ್ತರಾಜ್ ಸಂಭಾಷಣೆ, ಅಕ್ಷಯ್ ಪಿ.ರಾವ್ ಸಂಕಲನ ಈ ಚಿತ್ರಕ್ಕಿದೆ.

ಹೊಸ ಲುಕ್‌ನಲ್ಲಿ ಮಿಂಚಿದ ಶಿವಣ್ಣ

ಹೇಮಂತ್ ರಾವ್ ನಿರ್ದೇಶನದಲ್ಲಿ ಮೂಡಿ ಬರುತ್ತಿರುವ 666 ಆಪರೇಷನ್ ಡ್ರೀಮ್ ಥಿಯೇಟರ್ ಕುತೂಹಲ ಮೂಡಿಸುತ್ತಿದೆ. ಈ ಹಿಂದೆ ಧನಂಜಯ್ ಅವರ ಎರಡು ಲುಕ್ ಬಿಡುಗಡೆ ಮಾಡಿ ಪ್ರೇಕ್ಷಕರನ್ನು ಸೆಳೆದಿದ್ದ ಚಿತ್ರತಂಡವೀಗ ಶಿವಣ್ಣ ಅವರ ಫಸ್ಟ್ ಲುಕ್ ಬಿಡಗಡೆ ಮಾಡಿದೆ. 666 ಆಪರೇಷನ್ ಡ್ರೀಮ್ ಥಿಯೇಟರ್‌ನಲ್ಲಿ ಶಿವಣ್ಣ ಹೊಸ ಗೆಟಪ್‌ನಲ್ಲಿ ಕಾಣಿಸಿಕೊಂಡಿ ದ್ದಾರೆ. ಸೂಟ್ ಧರಿಸಿ, ಕೈಯಲ್ಲಿ ವಿಂಟೇಜ್ ರಿವಾಲ್ವರ್ ಹಿಡಿದು ಹಿಡಿದು ತೀಕ್ಷ್ಣ ನೋಟ ದೊಂದಿಗೆ ಹೆಜ್ಜೆ ಹಾಕುತ್ತಿರುವ ಲುಕ್ ಸಿನಿ ಪ್ರಿಯರ ಮನಗೆದ್ದಿದೆ. ಶಿವಣ್ಣ ಲುಕ್ ನೋಡುತ್ತಿದ್ದರೆ ಡಾ.ರಾಜ್‌ಕುಮಾರ್ ಅವರ ಸ್ಪೈ ಚಿತ್ರಗಳು ನೆನಪಿಗೆ ಬರುತ್ತವೆ. 666 ಆಪರೇಷನ್ ಡ್ರೀಮ್ ಥಿಯೇಟರ್‌ನಲ್ಲಿ ಡಾ.ಶಿವರಾಜ್‌ಕುಮಾರ್ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದು, ಅವರ ಪಾತ್ರಕ್ಕೆ ಸಾಕಷ್ಟು ಮಹತ್ವವಿದೆ. ಶಿವಣ್ಣ ಪ್ರತಿ ಸಿನಿಮಾದಲ್ಲಿಯೂ, ಪ್ರತಿ ಪಾತ್ರದಲ್ಲಿಯೂ ಹೊಸತನದಿಂದ ಮಿಂಚುತ್ತಾರೆ ಅಂತೆಯೇ 666 ಆಪರೇಷನ್ ಡ್ರೀಮ್ ಥಿಯೇಟರ್‌ನಲ್ಲಿ ಅವರ ಪಾತ್ರ ಪ್ರೇಕ್ಷಕರಿಗೆ ಎಂದು ಮರೆಯಲಾಗದ ಅನುಭವ ನೀಡಲಿದೆ. 666 ಆಪರೇಷನ್ ಡ್ರೀಮ್ ಥಿಯೇಟರ್ ಸಿನಿಮಾ ರೆಟ್ರೋ ಕಥೆಯನ್ನು ಒಳಗೊಂಡಿದ್ದು, ಅದ್ದೂರಿಯಾಗಿ ನಿರ್ಮಾಣವಾಗುತ್ತಿದೆ. ವೈಶಾಕ್ ಜೆ ಫಿಲಂಸ್ ಬ್ಯಾನರ್ ಡಾ.ವೈಶಾಕ್ ಗೌಡ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡುತ್ತಿದ್ದಾರೆ. ಚರಣ್ ರಾಜ್ ಸಂಗೀತ ಸಂಯೋಜಿಸಿದ್ದಾರೆ. ಸದ್ಯ ಶಿವಣ್ಣ ಹಾಗೂ ಧನಂಜಯ್ ಅವರ ಫಸ್ಟ್ ಲುಕ್ ಬಿಡುಗಡೆ ಮಾಡಿ ಸಿನಿಪ್ರೇಮಿಗಳಲ್ಲಿ ನಿರೀಕ್ಷೆ ಹೆಚ್ಚಿಸಿರುವ ಚಿತ್ರತಂಡ, ಮುಂದಿನ ದಿನಗಳಲ್ಲಿ ಮತ್ತಷ್ಟು ತಾರಾಬಳಗದ ಬಗ್ಗೆ ಮಾಹಿತಿ ಕೊಡಲಿದೆ. ಈ ತಿಂಗಳಿನಲ್ಲಿ ಚಿತ್ರೀಕರಣ ಪ್ರಾರಂಭವಾಗಲಿದೆ. ಹೈಬಜೆಟ್‌ನಲ್ಲಿ ನಿರ್ಮಾಣವಾಗುತ್ತಿರುವ ಈ ಚಿತ್ರವನ್ನು ತೆಲುಗು ಮತ್ತು ಕನ್ನಡದಲ್ಲಿ ಏಕಕಾಲದಲ್ಲಿ ಬಿಡುಗಡೆ ಮಾಡಲು ಚಿತ್ರ ತಂಡ ಯೋಜನೆ ಹಾಕಿಕೊಂಡಿದೆ.